ಸಂವಾದ

ಜೂನ್ ೨೦೧೨ ರೂ. ೨೦

ಸೂಫಿ ಕಾವ್ಯದಲ್ಲಿ ಪ್ರೇಮ

•

ಬದುಕಿನ
ಒಳಗುಟ್ಟುಗಳು
ಹೀಗೂ ಇರುತ್ತವಲ್ಲ!



ಮಾಧ್ಯಮ ತನ್ನನ್ನು ಪುನರ್ ಸೃಷ್ಟಿಸಿಕೊಳ್ಳಬಲ್ಲದೆ?

IFB Products: At the core of Safety

ಸಂವಾದ

ಮಾಸ ಪತ್ರಿಕೆ

ಸಂಪುಟ 10 ಸಂಚಿಕೆ 8

ಜೂನ್ 2012

ಸಂಪಾದಕ:

ಇಂದೂಧರ ಹೊನ್ನಾಪುರ

ಉಪ ಸಂಪಾದಕ:

ಭೈರಸಂದ್ರ ಗಂಗರಾಜು

ಸಂಪಾದಕೀಯ ಬಳಗ:

ಡಾ॥ ನಟರಾಜ್ ಹುಳಿಯಾರ್

ಪ್ರೊ॥ ರಹಮತ್ ತರೀಕೆರೆ

ಡಾ॥ ಕೆ. ಪುಟ್ಟಸ್ವಾಮಿ

ಡಾ॥ ಡಿ. ಡೊಮಿನಿಕ್

ಡಾ॥ ಬಿ.ಯು. ಸುಮಾ

ವಿಳಾಸ: ಸ್ಫೂರ್ತಿಧಾಮ,
ಅಂಜನಾನಗರ, ಮಾಗಡಿ ರಸ್ತೆ,
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
✆ Editorial: 9448048306
✆ Circulation: 9945264687
080 - 23480278

e-mail :
Editorial: samvaada@hotmail.com
honnapura@yahoo.co.in

Circulation :
samvaadacirculation@gmail.com

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೦೪
- ಸಂಪಾದಕರೊಂದಿಗೆ ಸಂವಾದ:
  - ರಘೋತ್ತಮ ಹೊ.ಬ ೦೬
  - ಆನಂದ್.ಎಸ್ ಅಜ್ಜಿಹಳ್ಳಿ ೦೭
  - ನಗರಗೆರೆ ರಮೇಶ್ ೦೮
- ಮರೀಚಿಕೆಯಾಗಿಯೇ ಉಳಿದ ಮಹಿಳಾ ಸಬಲೀಕರಣ
  - ಅಬ್ದುಲ್ ಹಕೀಂ ೧೦

- ಸ್ವಾತಂತ್ರ್ಯ ಹೆಸರಿನಲ್ಲಿ ಸ್ವೇಚ್ಛಾಚಾರ
  - ಸುರೇಶ್‌ಭಟ್ ಬಾಕ್ರಬೈಲ್ ೧೨
- ಆತ್ಮಾಭಿಮಾನ ಮತ್ತು ಆತ್ಮಾವಲೋಕನ
  - ಬರಗೂರು ರಾಮಚಂದ್ರಪ್ಪ ೧೪
- ವ್ಯಂಗ್ಯವಿರುವುದು ಇಂದಿನ ಸಂದರ್ಭದಲ್ಲಿ
  - ಶಿವಸುಂದರ್ ೧೮
- ಧಾರ್ಮಿಕ ಸೌಹಾರ್ದತೆಯೇ ಮದ್ದು
  - ಡಾ॥ ಎಂ.ಡಿ ಒಕ್ಕುಂದ ೨೦
- ಮುಸ್ಲಿಂ ಮಹಿಳಾ ಸಂವೇದನೆ
  - ಫಕೀರ್ ಮುಹಮ್ಮದ್ ಕಟ್ಪಾಡಿ ೨೨
- ಪ್ರತಿಭಟನೆ ಕತ್ತು ಹಿಸುಕುವ ಪ್ರಭುತ್ವ
  - ಸನತ್‌ಕುಮಾರ ಬೆಳಗಲಿ ೨೪

- ಸೂಫಿ ಕಾವ್ಯದಲ್ಲಿ ಪ್ರೇಮ
  - ಮೂಲ: ಡಾ॥ ಅಸ್ಗರ್ ಅಲಿ ಎಂಜಿನಿಯರ್
    ಕನ್ನಡಕ್ಕೆ: ಹಸನ್ ನಯೀಂ ಸುರಕೋಡ ೨೬
- ಆದರ್ಶದೊಳಗಿನ ಹುಳಿ (ಕಥೆ)
  - ಹನುಮಂತ ಹಾಲಿಗೇರಿ ೩೦
- ನೋಯುವ ಹಲ್ಲಿಗೆ ಹೊರಳುವ ನಾಲಿಗೆ-೭
  - ಡಾ. ಎಚ್.ಎಸ್ ಅನುಪಮಾ ೩೪
- ಬತ್ತದ ಬಯಲು -೬
  - ಡಾ॥ ಬಿ.ಎಂ ಪುಟ್ಟಯ್ಯ ೩೮
- ದಲಿತ್ ಡೈರಿ
  - ಚಂದ್ರಭಾನ್ ಪ್ರಸಾದ್/
    ಎಸ್ ಮರಿಸ್ವಾಮಿ ೪೨
- ಮುಲ್ಲಾ ನಸ್ರುದ್ದೀನ್ ಕಥೆಗಳು ೪೮
- ಹೊಸ ಪುಸ್ತಕ ೪೭
- ಕವನ:
  - ಹುಳು ಜಗದ್ಗುರುವಿಗೆ ಹೇಳಿದ ಮಾತು ೦೫
  - ಈ ಜನ ೦೯
  - ನಮ್ಮ ಆಸೆ ನೀವು ನಗುತ್ತಾ ಇರಬೇಕು ೧೭



ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು)

ವಿದ್ಯಾರ್ಥಿ ಸುಳ್ಳು ಬರೆದು ಅಂಕ ಪಡೆಯಬೇಕೆ?

ಪ್ರಿಯ ಸಂಪಾದಕರೇ,

ಪಠ್ಯ ಪುಸ್ತಕ ರಚಿಸುವವರು ಸುಳ್ಳನ್ನು ಪುಸ್ತಕದಲ್ಲಿ ಬರೆದರೆ, ಅದನ್ನು ಓದಿದ ವಿದ್ಯಾರ್ಥಿ ಪರೀಕ್ಷೆಯಲ್ಲಿ ಬರೆದರೆ ಮೌಲ್ಯಮಾಪನ ಸಂದರ್ಭದಲ್ಲಿ ಅದಕ್ಕೆ ಶಿಕ್ಷಕ ಅಂಕ ನೀಡುತ್ತಾನೆ. ಒಂದುವೇಳೆ ಅದೇ ವಿದ್ಯಾರ್ಥಿಯು ವಿದ್ವಾಂಸರ, ಚಿಂತಕರ ಭಾಷಣಗಳನ್ನು ಕೇಳಿ, ಅವರು ದಾಖಲೆಗಳನ್ನು ವಿವರಿಸಿದ ಅದೇ ವಿಷಯದ ವಿವರಣೆಗಳಿಗೆ ಅಂಕಗಳು ದೊರೆಯುವುದಿಲ್ಲ. ಏಕೆಂದರೆ ಅದು ಪಠ್ಯಪುಸ್ತಕದಲ್ಲಿ ಇರುವುದಿಲ್ಲ. ಪಠ್ಯಪುಸ್ತಕದಲ್ಲಿ ಇಲ್ಲದಿದ್ದರೆ ಅದನ್ನು ಶಿಕ್ಷಕ ಓದಿರುವುದಿಲ್ಲ. ಅವನು ಓದದೆ, ಪುಸ್ತಕದಲ್ಲಿ ಇಲ್ಲದೆ ಇರುವ ವಿಷಯಕ್ಕೆ ಅಂಕಗಳು ಸಿಗುವುದುಂಟೆ? ಇಲ್ಲಿ ವಿದ್ಯಾರ್ಥಿ ವಿದ್ವಾಂಸರು ದಾಖಲೆಗಳ ಸಮೇತ ಹೇಳಿರುವುದನ್ನು ಒಪ್ಪಬೇಕೆ? ಅಥವಾ ಪಠ್ಯದಲ್ಲಿರುವುದನ್ನು ಒಪ್ಪಬೇಕೆ ಎಂಬ ಸಂದಿಗ್ಧ, ಸಂಘರ್ಷದ ಸ್ಥಿತಿಯನ್ನು ಅನುಭವಿಸುತ್ತಾನೆ ಮತ್ತು ಮಾನಸಿಕ ಒತ್ತಡಕ್ಕೆ ಒಳಗಾಗುತ್ತಾನೆ.

ಉದಾಹರಣೆಗೆ ದ್ವಿತೀಯ ಪಿ.ಯು.ಸಿ. 2009-10ನೇ ಸಾಲಿನ ರಾಜ್ಯಶಾಸ್ತ್ರದ ಮೌಲ್ಯಮಾಪನದ ಸಂದರ್ಭದಲ್ಲಿ ಒತ್ತಡದ ಗುಂಪು (Pressure group)ಗಳ ಬಗ್ಗೆ ಪ್ರಶ್ನೆ ಇದ್ದು, ವಿದ್ಯಾರ್ಥಿಯು ರೈತ ಸಂಘ, ದಲಿತ ಸಂಘರ್ಷ ಸಮಿತಿ ಎಂದು ಬರೆದಿದ್ದ. ಆದರೆ ಉಪನ್ಯಾಸಕ ಅಂಕ ನೀಡದೆ ಹೊಡೆದುಹಾಕಿದ್ದ. ಏಕೆಂದರೆ ಅದು ಪುಸ್ತಕದಲ್ಲಿ ಇರಲಿಲ್ಲ. ಆದರೆ ವಾಸ್ತವವಾಗಿ ಮೇಲ್ಕಂಡ 2 ಗುಂಪುಗಳೂ ಸಹ ಒತ್ತಡದ ಗುಂಪುಗಳಾಗಿವೆ.

ಮತ್ತೊಂದು ಉದಾಹರಣೆ ಹೀಗಿದೆ: ಗೌತಮ ಸಿದ್ಧಾರ್ಥ ಮನೆ ಬಿಡಲು ರೋಗಿ, ಹೆಣ, ಮುಪ್ಪಾದ ಮುದುಕ, ಸನ್ಯಾಸಿ ಕಾರಣಗಳೆಂದು ಪುಸ್ತಕದಲ್ಲಿದೆ. ಆದರೆ ಅವನು ಮನೆ ಬಿಡಲು ಕೋಲಿಯ ಮತ್ತು ಶಾಖ್ಯರ ನಡುವಿನ ರೋಹಿಣಿ ನದಿ ನೀರಿನ ಸಂಘರ್ಷವೇ ಕಾರಣವೆಂದು ಸಂಶೋಧನೆಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅವರು ತಮ್ಮ ಬುದ್ಧ ಮತ್ತು ಆತನ ಧಮ್ಮ ಪುಸ್ತಕದಲ್ಲಿ ತಿಳಿಸಿದ್ದಾರೆ. ಇಲ್ಲಿ ಬುದ್ಧ ಮತ್ತು ಆತನ ಧಮ್ಮ ಪುಸ್ತಕವನ್ನು ಓದದ ಶಿಕ್ಷಕ ಸ್ವಾಭಾವಿಕವಾಗಿಯೇ ಮಾಹಿತಿ ಕೊರತೆಯಿಂದ ಇದನ್ನು ಒಪ್ಪುವುದಿಲ್ಲ. ಇದನ್ನು ಬರೆದ ವಿದ್ಯಾರ್ಥಿಗಳಿಗೆ ಅಂಕಗಳು ಸಿಗುವುದಿಲ್ಲ. ಇದು ಸುಳ್ಳನ್ನು ಬಲವಂತಕ್ಕೆ ಒಪ್ಪಿಸುವ ವಿಚಾರವಾಗಿದೆ.

ಸುಳ್ಳನ್ನು ಪಠ್ಯವಾಗಿಸಿದರೆ ಅದು ನಿಜವಾಗಿ ಪರಿವರ್ತಿತವಾಗುತ್ತದೆ ಎಂಬ ವಿಚಾರ ಸುಳ್ಳು ಹೇಳುವವರಿಗೆ ತಿಳಿದಿದೆ. ಅದಕ್ಕೆಂದೆ ವ್ಯವಸ್ಥಿತವಾಗಿ ಸುಳ್ಳನ್ನು ನಿಜಗೊಳಿಸುವ ಕ್ರಿಯೆಯಲ್ಲಿ ತೊಡಗಿದ್ದಾರೆ? ಪುರಾಣವನ್ನು ಇತಿಹಾಸಗೊಳಿಸುವ, ಇತಿಹಾಸವನ್ನು ವಿಕೃತಗೊಳಿಸುವ ನಡೆ ಅಶಾಂತಿಗೆ ಕಾರಣಗಳಾಗುವ ಘಟನೆಗಳಾಗುತ್ತವೆ. ಸಾಂಸ್ಕೃತಿಕ ಅತ್ಯಾಚಾರ ಕ್ಷಮಿಸುವಂತಹದ್ದಲ್ಲ. ಅದನ್ನೇ ಕರ್ಮವಾಗಿಸುವ ಜನರನ್ನು ಏನೆಂದು ಕರೆಯೋಣ.

ಕಾಗೇರಿಯಂಥ ಜನರಿಗೆ ಸುಳ್ಳನ್ನು ಸುಳ್ಳೆಂದು, ಸತ್ಯವನ್ನು ಸತ್ಯವೆಂದು ಹೇಳಬೇಕೆಂದು ಅನಿಸುವುದಿಲ್ಲವೆ? ಬುದ್ಧನಿಂದ ಇಂದಿನ ಸಂತ(?)ರವರೆವಿಗೂ ಸುಳ್ಳನ್ನು ಸುಳ್ಳೆಂದು ಹೇಳು ಎನ್ನುವುದು ಕೇಳಿಸುವುದಿಲ್ಲವೆ? ಜನರನ್ನು, ಜನಸಮುದಾಯವನ್ನು ಏಕೆ ನೆಮ್ಮದಿಯಿಂದ ಬದುಕಲು ಬಿಡುತ್ತಿಲ್ಲ. ಭಾರತೀಯ ವೈವಿಧ್ಯತೆಯನ್ನು ಏಕೆ ಒಪ್ಪುತ್ತಿಲ್ಲ. ಇಂದಿನ ಯುವಪೀಳಿಗೆಯನ್ನು ದಿಕ್ಕು ತಪ್ಪಿಸಿ ಜಾತಿ, ಮತೀಯ ಗಲಭೆಗಳನ್ನು ಏಕೆ ಸೃಷ್ಟಿಸುತ್ತಾರೆ. ತರಗತಿಗಳು ಭಾವೈಕ್ಯತೆಯ ಕೇಂದ್ರಗಳಾಗುವ ಬದಲು ಮತ್ಸರದ 'ಕಾವು'ಗಳಾಗಲು ಏಕೆ ಪ್ರೇರೇಪಿಸುತ್ತಾರೆ. ವೈಚಾರಿಕ, ವೈಜ್ಞಾನಿಕ ಚಿಂತನೆಗಳನ್ನು, ಸೋದರ ಸಹಬಾಳ್ವೆಯನ್ನು ಕಲಿಸಬೇಕಾದ ಜಾಗದಲ್ಲಿ ದ್ವೇಷಕ್ಕೆ ಕಾರಣರಾಗುತ್ತಿದ್ದಾರೆ. ಇದನ್ನು ಮನಗಂಡು ಮಾನ್ಯ ಶಿಕ್ಷಣ ಸಚಿವರಾದ ವಿಶ್ವೇಶ್ವರ ಹೆಗಡೆ ಕಾಗೇರಿ 5 ಮತ್ತು 8ನೇ ತರಗತಿಗೆ ಮುದ್ರಿಸಿರುವ ಪುಸ್ತಕಗಳಿಗೆ ಬೆಂಕಿ ಇಟ್ಟು ಮುಂದೆ ಸಮಾಜದಲ್ಲಿ, ದೇಶದಲ್ಲಿ ಉಂಟಾಗುವ ಬೆಂಕಿಯನ್ನು ನಂದಿಸಲು ಪ್ರಯತ್ನಿಸಲಿ.

ಆರ್. ಮಹಾದೇವಪ್ಪ, ದಾವಣಗೆರೆ



ಪತ್ರಾಗಾರ

ದಲಿತ ಹೋರಾಟದ ಸ್ವವಿಮರ್ಶೆ ಸ್ವಾಗತಾರ್ಹ

ಪ್ರಿಯ ಶ್ರೀ ಇಂದೂಧರ,

ಏಪ್ರಿಲ್ ತಿಂಗಳ 'ಸಂವಾದ'ವು 'ಅಂಬೇಡ್ಕರ್ ವಿಶೇಷಾಂಕ'ವಾಗಿ ಹೊರ ಬಂದಿದ್ದು, ಇಡೀ ಸಂಚಿಕೆಯನ್ನು ರೂಪಿಸುವಲ್ಲಿ ವಹಿಸಿರುವ ಶ್ರಮ ಹಾಗೂ ಶ್ರದ್ಧೆ, ಮೇಲ್ನೋಟಕ್ಕೇ ಗೋಚರಿಸುವಂತಿದೆ.

ಅಂಬೇಡ್ಕರ್ ವ್ಯಕ್ತಿತ್ವ ಹಾಗೂ ಬರೆಹಗಳ ಚಲನಶೀಲತೆಯನ್ನು ಶೋಧಿಸುವ ಲೇಖನಗಳೂ, ಅವರು ನಮಗೆ ರಚಿಸಿಕೊಟ್ಟಿರುವ ಸಂವಿಧಾನದ ಮೂಲ ಆಶಯಗಳ ಪರಿಚಯ, ಮೀಸಲಾತಿಯ ಅಗತ್ಯ ಹಾಗೂ ಪರಿಮಿತಿಗಳ ವಿಚಾರ, ಅಂಬೇಡ್ಕರ್ ಹಾಗೂ ಮಾರ್ಕ್ಸ್‌ವಾದಿಗಳ ಸಂಬಂಧಾಂತರಗಳು, ಅಂಬೇಡ್ಕರ್ ಪೂರ್ವದ ತಾತ್ವಿಕ ಸಿದ್ಧಾಂತಗಳು, ಕರ್ನಾಟಕದ ದಲಿತ ಚಳುವಳಿ ಅಂದು-ಇಂದು, ಎದುರಿಸಿದ-ಎದುರಿಸುತ್ತಿರುವ, ಬಿಕ್ಕಟ್ಟಿನ ಸ್ವರೂಪ ಹಾಗೂ ಪರಿಹಾರದ ಬಗೆಗೆ ಚರ್ಚೆ, ಮಹಿಳೆಯೊಂದಿಗೆ ಚಳುವಳಿಯ ಸಂಬಂಧ, -ಹೀಗೆ ಭಿನ್ನ ಭಿನ್ನ ನೆಲೆಯಿಂದ ಸಾಮಾಜಿಕ ಸಂದರ್ಭವೊಂದನ್ನು ಪ್ರಾಮಾಣಿಕವಾಗಿ ಅರಿವು ಮಾಡಿಕೊಳ್ಳುವ ತವಕವೊಂದನ್ನು ಇಡೀ ಸಂಚಿಕೆಯಲ್ಲಿ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಸಮಕಾಲೀನ ಸಂದರ್ಭದಲ್ಲಿ ಅಂಬೇಡ್ಕರ್ ಪ್ರಸ್ತುತತೆಯನ್ನು ಚರ್ಚಿಸುತ್ತಾ ಸಂಪಾದಕೀಯದಲ್ಲಿ ದಲಿತ ಹೋರಾಟದ ಸ್ವವಿಮರ್ಶೆಯೂ ನಡೆದಿರುವುದು ಗಮನಾರ್ಹವಾಗುತ್ತದೆ.

ಈ ಬಗೆಯ ಸಂಗ್ರಹ ಯೋಗ್ಯವಾದ ಅದ್ಭುತ 'ಅಂಬೇಡ್ಕರ್ ವಿಶೇಷಾಂಕ' ಸಂಚಿಕೆಯೊಂದನ್ನು ರೂಪಿಸಿದ ನಿಮಗೆ ಅಭಿನಂದನೆಗಳು.

ಪ್ರೊ|| ಕೆ. ಮರುಳಸಿದ್ದಪ್ಪ, ಬೆಂಗಳೂರು.

ಚಂದಾ ವಿವರ

ಬಿಡಿ ಪ್ರತಿ ರೂ. 20

ಚಂದಾ ಅವಧಿ:	1 ವರ್ಷಕ್ಕೆ	3 ವರ್ಷಕ್ಕೆ	5 ವರ್ಷಕ್ಕೆ
ವ್ಯಕ್ತಿಗಳು :	ರೂ. 200	ರೂ. 550	ರೂ. 900
ಸಂಸ್ಥೆಗಳು :	ರೂ. 240	ರೂ. 720	ರೂ. 1200
ಹಿತೈಷಿಗಳು :	ರೂ. 500	ರೂ. 1500	ರೂ. 2500

ಆಜೀವ ಚಂದಾ ರೂ.5,000/-
ಪೋಷಕ ಚಂದಾ ರೂ.10,000/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು. ಚೆಕ್ಕು-ಡಿಡಿಗಳು 'ಸಂವಾದ' ಹೆಸರಿನಲ್ಲಿರಲಿ

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಈ ಕೆಳಗಿನ ಖಾತೆಗೆ ಕಳುಹಿಸಬಹುದು:
A/C NAME: SAMVAADA MAGAZINE
BANK NAME: STATE BANK OF INDIA,
BRANCH: BHARATHNAGAR, BANGALURU
A/C No: 30140484351, IFS Code: SBIN0005198

ಪ್ರಕಟಣೆ: ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡಿದ್ದ 'ತತ್ವಜ್ಞಾನ ಮತ್ತು ವ್ಯವಹಾರ' ಲೇಖನದ ಮೂಲ ಲೇಖಕರು ಅಸ್ಗರ್ ಅಲಿ ಎಂಜಿನಿಯರ್. ಕಣ್ತಪ್ಪಿನಿಂದ ಅವರ ಹೆಸರು ಬಿಟ್ಟು ಹೋಗಿದೆ. ಅದಕ್ಕಾಗಿ ವಿಷಾದಿಸುತ್ತೇವೆ. - ಸಂ.

ತೆವಳುವ ಹುಳು ಜಗದ್ಗುರುವಿಗೆ ಹೇಳಿದ ಮಾತು

ಕೃಷ್ಣಮೂರ್ತಿ ಬಿಳಿಗೆರೆ

ತೆವಳುವ ಹುಳು ತನ್ನ ದೇಹವ ಬಿಲ್ಲು ಮಾಡಿ
ತನ್ನ ಜೊಲ್ಲ ತಂತಿ ಮಾಡಿ
ಮೀಟಿ ಹಾಡಲೆಳಸುತ್ತದೆ
ಮಹಾ ಜಗದ್ಗುರುವಿನ ಮುಂದೆ

ತೆವಳುವ ಹುಳು ಗುರುವಿನ ಗುಲಾಮನಲ್ಲ
ಚೇಲನಂತೂ ಅಲ್ಲವೇ ಅಲ್ಲ

ಅದು ಹೀಗೆ ಹಾಡುತ್ತದೆ ಮಹಾ ಗುರುವಿನ ಮುಂದೆ ಸ್ವತಂತ್ರವಾಗಿ
"ನಾನು ತೆವಳುವ ಹುಳ ತೆವಳಿ ತೆವಳಿ ಜಗತ್ತು ಸುತ್ತಬೇಕು
ಜಗದ್ಗುರು ನಿಂತಲ್ಲೇ ಜಗತ್ತು ಸುತ್ತುವನು
ಲೋಕದ ಹಲವು ಜನ ಲೋಕವ ತಿಳಿಯದೆ
ಜಗದ್ಗುರುವನ್ನು ಸುತ್ತುವರು

ನಾನು ತೆವಳುವ ಹುಳ ಮಣ್ಣು ಕಸ ತಿಂದು ಸಾಯುವೆ
ಜಗದ್ಗುರು ಕುಂತಲ್ಲೆ ಕಾಲವ ಕಾಲಲ್ಲಿ ಹೊಸಕುವನು
ಜಾತಿ ಮತಗಳ ರೋಸು ಅಲ್ಲೆಲ್ಲ ಹಬ್ಬಿ ಬೀಜ ಮಾಡಿಕೊಳ್ಳುವುದನ್ನ
ಸುಮ್ಮನೆ ನೋಡುವನು

ನಾನು ತೆವಳುವ ಹುಳ ಲಳೀವಾಗಿರಬೇಕು ಲೋಕದ ಇಂಚಿಂಚು ಅಳೆಯಬೇಕು
ಬಸಗತ್ತೆಯಂತೆ ತಿನ್ನುವಂತಿಲ್ಲ
ಜಗದ್ಗುರು ಕುಂತಲ್ಲೆ ಕಾಲ ಸತ್ಯಗಳ ತಿನ್ನುವನು
ಕಕ್ಕಸ್ಸು ಹೊರಡದೆ ನರಳುವನು
ಲೋಕದ ಹಲವು ಜನ ಲೋಕವ ತಿಳಿಯದೆ
ಜಗದ್ಗುರುವನ್ನು ಜಗದ್ಗುರು ಜಗದ್ಗುರು ಎನ್ನುವರು

ನಾನು ತೆವಳುವ ಹುಳ ಇಂದೋ ನಾಳೆಯೋ ಸಾಯುವೆನು
ನನಗೆ ಮುಕ್ತಿಯಿದೆ
ಮನೆ ಮಠವಿಲ್ಲ ಬಚ್ಚಿಡುವುದು ಗೊತ್ತಿಲ್ಲ
ಜಗದ್ಗುರುವಿಗೆ ಉತ್ತಮ ವೇಷ ಉದ್ದ ನಾಲಿಗೆ ಊದಿಕೊಂಡ ಮಠವಿದೆ
ಇವನು ಸಾಯುವುದಿಲ್ಲ ಅದಕ್ಕೆ ಮುಕ್ತಿಯಿಲ್ಲ"
ತೆವಳುವ ಹುಳುವಿನ ನಿಂದಾ ಸ್ತುತಿ ನಡೆಯುತ್ತಿತ್ತು

ಜಗದ್ಗುರು ಜಾಡಿಸಿ ಒದ್ದ ರಭಸಕ್ಕೆ
ದೇಹ ಮುರಿದು ತಂತಿ ಹರಿದು
ಗೊಣಗತೊಡಗಿತು ಹೀಗೆ ಜಗದ್ಗುರುವಿಗೆ ಕೇಳುವ ಹಾಗೆ



"ನಾನು ಮೊದಲೇ ತೆವಳುವ ಹುಳ
ಈಗ ಹೆಳವ
ಎಲ್ಲೂ ಹೋಗುವಂತಿಲ್ಲ ಇಲ್ಲೇ ಇದ್ದು ತಿನ್ನುತ್ತಾ ಉಣ್ಣುತ್ತಾ ನಾನೂ
ಜಗದ್ಗುರುವಾಗುತ್ತೇನೆ"
ಎಂದು ತಿನ್ನತೊಡಗಿತು.

■

ಸಂಪಾದಕರೊಡನೆ ಸಂವಾದ

ಕಮ್ಯುನಿಸ್ಟರು ಮತ್ತು ಅಂಬೇಡ್ಕರ್‌ವಾದ

ಅಂಬೇಡ್ಕರ್ ಮತ್ತು ಅವರ ವಾದ ದಲಿತರನ್ನು ಈ ದೇಶದ ರಾಜಕೀಯ ಅಧಿಕಾರದ ಗದ್ದುಗೆಯತ್ತ ಕೊಂಡೊಯ್ದರೆ ಅವರ ಹಿಂದೆ ಬಿದ್ದಿರುವ ಗಾಂಧಿವಾದ, ಕೋಮುವಾದ, ಕಮ್ಯುನಿಸ್ಟ್‌ವಾದ ಇತ್ಯಾದಿಗಳು ದಲಿತರನ್ನು ಅಂತಹ ಅಧಿಕಾರ ಗದ್ದುಗೆಯಿಂದ ದೂರ ಇಡುವ ಸಂಚನ್ನು ಹೊಂದಿದ್ದವು ಅಥವ ಹೊಂದಿವೆ, ಬದಲಿಗೆ ಆ ಓಟ್ ಬ್ಯಾಂಕನ್ನು ಯಾವ ರೀತಿಯಲ್ಲಾದರೂ ಕಿತ್ತುಕೊಂಡು ಅದರ ಮೂಲಕ ಮನುವಾದವನ್ನು ಜಾರಿಗೊಳಿಸುವ ದುಷ್ಟ ಹುನ್ನಾರವನ್ನು ಈ ಮೂರು ವಾದಗಳೂ ಹೊಂದಿವೆ. ಹೀಗಿರುವಾಗ ಗಾಂಧಿವಾದ, ಕೊಮುವಾದ, ಕಮ್ಯುನಿಸ್ಟ್‌ವಾದಗಳ ಸಂಚಿಗೆ ಅಂಬೇಡ್ಕರ್‌ವಾದ ಬಲಿಯಾಗಬೇಕೆ?

ರಘೋತ್ತಮ ಹೊ.ಬ

ಪ್ರಿಯ ಸಂಪಾದಕರೇ,

ಕಳೆದ ತಿಂಗಳು ಆಂಗ್ಲ ಪತ್ರಿಕೆಯೊಂದರಲ್ಲಿ ಸುದ್ದಿಯೊಂದು ಪ್ರಕಟವಾಗಿತ್ತು. ಭಾರತದ ಕಮ್ಯುನಿಸ್ಟ್ ಪಕ್ಷಗಳು (ಸಿ.ಪಿ.ಐ, ಮತ್ತು ಸಿ.ಪಿ.ಎಂ) ಭಾರತೀಕರಣಗೊಳ್ಳುತ್ತಿವೆ ಎಂಬುದೇ ಆ ಸುದ್ದಿ. ಭಾರತೀಕರಣವೆಂದರೆ ಅವುಗಳ Strategyಯಲ್ಲಿ ಏನಾದರು ಬದಲಾವಣೆ ಇರಲೇಬೇಕಲ್ಲವೇ? ಹೌದು, ಅವು ತಮ್ಮ ಸಿದ್ಧಾಂತ ಮತ್ತು ಕಾರ್ಯಕ್ರಮಗಳಲ್ಲಿ ಅಂಬೇಡ್ಕರರನ್ನು ಒಳಗೊಳ್ಳಲು ನಿರ್ಧರಿಸಿದ್ದವು. ಹಾಗಿದ್ದರೆ ಇದುವರೆಗೆ ಕಮ್ಯುನಿಸ್ಟ್ ಪಕ್ಷಗಳಲ್ಲಿ ಅಂಬೇಡ್ಕರ್ ಇರಲಿಲ್ಲವೇ? ಖಂಡಿತ ಇಲ್ಲ. ಕಮ್ಯುನಿಸ್ಟ್ ಪಕ್ಷಗಳು ಅವರ ಅಪ್ಪಟ ವಿರೋಧಿಗಳಾಗಿವೆ. ಅವು ಏನಿದ್ದರೂ ಮಾರ್ಕ್ಸ್, ಲೆನಿನ್, ಮತ್ತು ಚೆಗುವಾರ ಹೀಗೆ Foreign ಮುಖಗಳತ್ತ ಸುತ್ತುತ್ತಿರುತ್ತವೆ ಹೊರತು ಭಾರತದತ್ತ ಅವು ಗಮನ ಹರಿಸಿದ್ದೇ ಇಲ್ಲ. ಅದು ಅಂಬೇಡ್ಕರರತ್ತ?!. ಯಾಕೆಂದರೆ Basically ಕಮ್ಯುನಿಸ್ಟ್ ಪಕ್ಷಗಳಿಗೂ ಮತ್ತು ಅಂಬೇಡ್ಕರರ ಜಾತಿ, ಧರ್ಮ ಮತ್ತು ಆ ಹಿನ್ನೆಲೆಯಲ್ಲಿನ ಹೋರಾಟ ಇತ್ಯಾದಿಗಳಿಗೂ ಒಂದುರೀತಿಯ ಎಣ್ಣೆ ಸೀಗೆಕಾಯಿಯ ಸಂಬಂಧ. ಕಮ್ಯುನಿಸ್ಟರದ್ದು ಶ್ರೀಮಂತ–ಬಡವ, ಕಾರ್ಮಿಕ–ಮಾಲೀಕ ಎಂಬ ವರ್ಗಹೋರಾಟದ ಮಾದರಿ. ಹೀಗಿರುವಾಗ ಅಲ್ಲೆಲ್ಲಿ ಬರುತ್ತದೆ ಅಂಬೇಡ್ಕರ್ ಸಿದ್ಧಾಂತ?. ಅದರಲ್ಲೂ ಭಾರತದಲ್ಲಿ socialist ಬ್ರಾಹ್ಮಣರ ಕಪಿಮುಷ್ಟಿಯಲ್ಲಿ ಆ ಪಕ್ಷಗಳು ಸಿಕ್ಕಿ ನರಳುತ್ತಿರುವಾಗ?

ಅಂದಹಾಗೆ ಕಮ್ಯುನಿಸ್ಟರಿಗೇಕೆ ಈಗ ಅಂಬೇಡ್ಕರ್ ಬೇಕಾಗಿದ್ದಾರೆ? ಅಂತಹ urgent ಏನಿದೆ ಕಮ್ಯುನಿಸ್ಟರಿಗೆ? ಅಂಬೇಡ್ಕರ್ ಬಗ್ಗೆ ಅವರಿಗೆ ಈ ಪರಿಯ ದಿಢೀರ್ ವ್ಯಾಮೋಹ ಉಕ್ಕಲು ಕಾರಣವಾದರೂ ಏನು? ಉತ್ತರ ಸಿಂಪಲ್ಲು. ಕಮ್ಯುನಿಸ್ಟ್ ಪಕ್ಷಗಳು ಈಗ ಪತನದ ಅಂಚಿನಲ್ಲಿವೆ! ಪಶ್ಚಿಮ ಬಂಗಾಳದಲ್ಲಿ ಕಳೆದ ಚುನಾವಣೆಯಲ್ಲಿ ಅವು ಸೋತು ಸುಣ್ಣವಾಗಿವೆ. ಅವರ ಪ್ರಮುಖ, ಹಳೆಯ ತಲೆಮಾರಿನ ನಾಯಕರೂ ಕೂಡ ಈಗ ಅವರ ನಡುವೆ ಇಲ್ಲ. ಉದಾ: ಜ್ಯೋತಿಬಸು. ಹಾಗೆಯೇ ಇಡಿ ಭಾರತದಾದ್ಯಂತ ಅವರ ಪಕ್ಷವನ್ನು ಮೇಲೆತ್ತಬಲ್ಲ ಸಮುದಾಯವೊಂದು ಅಥವಾ ಸಿದ್ಧಾಂತವೊಂದು ಈಗ ಅವರ ಜೊತೆ ಇಲ್ಲ. ಅದರಲ್ಲೂ ಜಾಗತೀಕರಣದ ಈ ದಿನಗಳಲ್ಲಿ ಎಲ್ಲರೂ ಹಣದ ಹಿಂದೆ ಓಡುತ್ತಿರುವಾಗ ವರ್ಗ ಹೋರಾಟದ ಕಮ್ಯುನಿಸ್ಟರನ್ನು ಈಗ ಯಾರು care ಮಾಡುತ್ತಾರೆ?.

Actually ಕಮ್ಯುನಿಸಂ ಭಾರತದ ಅಸ್ಪೃಶ್ಯರ ಜೀವಾಳವಾಗಬೇಕಿತ್ತು. ಅವರ ಹೋರಾಟದ ದೀಪವಾಗಬೇಕಿತ್ತು. ಆದರೆ ಜಾತಿಯ ಪ್ರಶ್ನೆ ಬಂದಾಗ, ಮೀಸಲಾತಿಯ ಸಮಸ್ಯೆ ಬಂದಾಗ ಕಮ್ಯುನಿಸ್ಟರ ನಡವಳಿಕೆ ಆರ್.ಎಸ್.ಎಸ್ ನವರಿಗಿಂತೇನೂ ಭಿನ್ನವಾಗಿಲ್ಲ. ಆ ಕಾರಣಕ್ಕಾಗಿ ಅದು ಅಸ್ಪೃಶ್ಯರ ಜೀವಾಳವಿರಲಿ ಹೋರಾಟದ ಮಾರ್ಗವಾಗಿಯೂ ಕೂಡ ಕಂಡಿಲ್ಲ. ಏಕೆಂದರೆ ಜ್ಯೋತಿಬಸುರಂತಹ ಅವರ ಉನ್ನತ ನಾಯಕರೇ ಹಿಂದೆ ಮಂಡಲ್ ವರದಿಯ ವಿರುದ್ಧ ಮಾತನಾಡಿದ್ದಾರೆ!. ಪಶ್ಚಿಮ ಬಂಗಾಳದಲ್ಲಿ ಈಗಲೂ ದಲಿತರಿಗೆ ಆಡಳಿತದಲ್ಲಿ ಸರಿಯಾದ ಪಾಲುದಾರಿಕೆ ಇಲ್ಲ!. ಮೀಸಲಾತಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿಲ್ಲ. ಕಾರಣವೇನೆಂದರೆ ಕಮ್ಯುನಿಸ್ಟರಿಗೆ ದಲಿತರ ಜಾತಿಯ ಸಮಸ್ಯೆಗಳಿಗಿಂತ ಮಾರ್ಕ್ಸರ ವರ್ಗ ಹೋರಾಟವೇ ಮುಖ್ಯ. ಈ ನಿಟ್ಟಿನಲ್ಲಿ ದಲಿತರ ಸಮಸ್ಯೆ ಅವರಿಗೆ ನಗಣ್ಯ.

ಪ್ರಶ್ನೆ ಏನೆಂದರೆ ಜಾತಿಪೀಡಿತ ಭಾರತದಲ್ಲಿ ಎಲ್ಲಿಯವರೆಗೆ ಆ ಸವಕಲು ವರ್ಗ ಸಂಘರ್ಷದ ಮಾತು ನಡೆಯುತ್ತದೆ? ಕಳೆದಬಾರಿ ಪಶ್ಚಿಮ ಬಂಗಾಳದಲ್ಲಿ ಆಗಿರುವುದೇ ಅದು. ಕಮ್ಯುನಿಸ್ಟ್ ಪಕ್ಷಗಳು ಸೋತು ಸುಣ್ಣವಾಗಿವೆ. ರಾಷ್ಟ್ರದಾದ್ಯಂತ ಮೌಲ್ಯ ಕಳೆದುಕೊಳ್ಳುತ್ತಿವೆ. ಅದಕ್ಕೆ ಈಗ ಮುಳುಗುವವನಿಗೆ ಹುಲುಕಡ್ಡಿ ಆಸರೆ ಎಂಬಂತೆ ತಮ್ಮ ಸಿದ್ಧಾಂತದಲ್ಲಿ ಅಂಬೇಡ್ಕರರನ್ನು ಸೇರಿಸಿಕೊಳ್ಳುವ ಮಾತನಾಡುತ್ತಿವೆ!. ಅಂದಹಾಗೆ ತಮ್ಮ ಸಿದ್ಧಾಂತದಲ್ಲಿ ಅಂಬೇಡ್ಕರರನ್ನು ಸೇರಿಸಿಕೊಳ್ಳುವ ಕಮ್ಯುನಿಸ್ಟ್ ಪಕ್ಷಗಳ ಈ ನಡೆ ಅಂಬೇಡ್ಕರರಿಗೆ ಗೌರವ ನೀಡಿದಂತಾಗುತ್ತದೆಯೇ? ಖಂಡಿತಾ ಇಲ್ಲ. ಅದು ಅಂಬೇಡ್ಕರ್‌ವಾದದ ವಿರುದ್ಧ ಕಮ್ಯುನಿಸ್ಟರು ನಡೆಸುತ್ತಿರು ದಾಳಿ ಎನ್ನದೆ ವಿಧಿಯಿಲ್ಲ.

ಇನ್ನು ಆರ್.ಎಸ್.ಎಸ್‌ನವರದು ವಿಚಿತ್ರ ನಡೆ. ಕಳೆದವಾರ ಆರ್.ಎಸ್.ಎಸ್ ಪ್ರಮುಖರೊಬ್ಬರು "ಸಮಾಜ ಚಿಕಿತ್ಸಕ ಅಂಬೇಡ್ಕರ್" ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ. ಅಂಬೇಡ್ಕರ್ ಮೇಲಿನ ಪ್ರೀತಿಯಿಂದ ಆ ಆರ್.ಎಸ್.ಎಸ್ ಮುಖಂಡರು ಈ ಕೃತಿಯನ್ನು ಪ್ರಕಟಿಸಿದ್ದಾರೆಂದೆನಿಸಿದರೂ ಒಟ್ಟಾರೆ ಅದು ದಲಿತರನ್ನು ಹಿಂದೂ ಧರ್ಮದ ಒಳಗೆ ಎಳೆದುಕೊಳ್ಳುವ ನಿರಂತರ ಪ್ರಯತ್ನದ ಮತ್ತೊಂದು ಯತ್ನವಲ್ಲದೆ ಬೇರೇನಲ್ಲ. ಆಶ್ಚರ್ಯಕರವೆಂದರೆ ಆರ್.ಎಸ್.ಎಸ್ ತನ್ನ ತೆಕ್ಕೆಗೆ ಅಂಬೇಡ್ಕರರನ್ನು ಸೆಳೆದುಕೊಳ್ಳುವ ಈ ಯತ್ನವನ್ನು ಅಂಬೇಡ್ಕರ್ ಬುದುಕಿದ್ದಾಗಿನಿಂದಲೂ ಮಾಡುತ್ತಾ ಬಂದಿದೆ. ಅಂಬೇಡ್ಕರ್ ಜೀವನ ಚರಿತ್ರೆ ಬರೆದಿರುವ ಬ್ರಾಹ್ಮಣ ವರ್ಗದ ಧನಂಜಯ ಕೀರ್ ಎಂಬುವವರೇ ಅಂಬೇಡ್ಕರರನ್ನು ಸಾವರ್ಕರ್ ಜೊತೆ ಸಮೀಕರಿಸುತ್ತ ಆರ್.ಎಸ್.ಎಸ್ ನ ಇಂತಹ ಕ್ರೀಯೆಗೆ ಮುನ್ನುಡಿ ಬರೆದಿದ್ದಾರೆ. ಈ ನಿಟ್ಟಿನಲ್ಲಿ ಆರ್.ಎಸ್.ಎಸ್, ಎ.ಬಿ.ವಿ.ಪಿ ಇತ್ಯಾದಿ ಸಂಘಟನೆಗಳು ಅಂಬೇಡ್ಕರ್ ಫೋಟೋವನ್ನು ತಮ್ಮ ಕಾರ್ಯಕ್ರಮಗಳಲ್ಲಿ, ಪತ್ರಿಕೆಗಳಲ್ಲಿ ಹಾಕುವ ಮೂಲಕ ಅವರನ್ನು, ಆ ಮೂಲಕ ದಲಿತರನ್ನು ಹಿಂದೂ ತೆಕ್ಕೆಗೆ ಸೆಳೆದುಕೊಳ್ಳುವ ತನ್ನ ಕಾರ್ಯವನ್ನು ದಶಕಗಳಿಂದ ಮುಂದುವರೆಸಿದೆ. ಒಟ್ಟಾರೆ ಹೇಗೆ ಕಮ್ಯುನಿಸ್ಟರಿಗೆ ಅಂಬೇಡ್ಕರರು ಬೇಕೋ ಹಾಗೆ ಆರ್.ಎಸ್.ಎಸ್.ಗೂ ಕೂಡ ಅಂಬೇಡ್ಕರ್ ಬೇಕಾಗಿದ್ದಾರೆ. ಈ ನಿಟ್ಟಿನಲಿ ಆಗಾಗ ಅಂಬೇಡ್ಕರ್ ಹೆಸರಿನ ಕೃತಿ ಬರೆಯುವ ಇಂತಹ ದಾಳಿಯನ್ನು ಆರ್.ಎಸ್.ಎಸ್ ನಡೆಸುತ್ತಲೇ ಇರುತ್ತದೆ.

ಇನ್ನು ಅಂಬೇಡ್ಕರ್ ದಾಳಿಗೊಳಗಾಗುತ್ತಿರುವ ಮತ್ತೊಂದು ದಿಕ್ಕು ಗಾಂಧಿವಾದ. ಸ್ವತಃ ಗಾಂಧೀಜಿಯವರಿಂದ ಪೂನಾ ಒಪ್ಪಂದ ಸಂದರ್ಭದಲ್ಲಿ ಪ್ರಾರಂಭವಾದ ಈ ದಾಳಿ ನಿರಂತರ ಮುಂದುವರೆದಿದೆ. ಕಾಂಗ್ರೆಸ್‌ನ ಸಮಾಜವಾದಿಗಳು ಮತ್ತು ಗಾಂಧಿವಾದಿಗಳು ಇಂತಹ ದಾಳಿಯ ನೇತೃತ್ವವನ್ನು ವಹಿಸಿದ್ದಾರೆ. ಪೂನಾ ಒಪ್ಪಂದದ ಸಂದರ್ಭದಲ್ಲಿ ಅಸ್ಪೃಶ್ಯರಿಗೆ ನೀಡಲ್ಪಟ್ಟಿದ್ದ ಪ್ರತ್ಯೇಕ ಮತದಾನದ ಹಕ್ಕನ್ನು ಕಿತ್ತುಕೊಂಡು "ಹರಿಜನ ಸೇವಕ ಸಂಘ" ಗಳನ್ನು ಪ್ರಾರಂಭಿಸುವ ಮೂಲಕ ಈ ದಾಳಿಗೆ ಮುನ್ನುಡಿ ಬರೆಯಲಾಯಿತಾದರೂ ನಂತರದ ದಿನಗಳಲ್ಲಿ 'ಹರಿಜನ (ದೇವರ ಮಕ್ಕಳು)' ಎಂಬ ಮೂಗಿಗೆ ತುಪ್ಪ ಸವರುವ ಮೂಲಕ, ಮೀಸಲಾತಿಯ ನಿರಂತರ ವಂಚನೆಯ ಮೂಲಕ, ದಲಿತರನ್ನು ರಾಜಕೀಯ ಚಮಚಾಗಿರಿಗೆ ಒಳಪಡಿಸುವ ಮೂಲಕ ಗಾಂಧಿವಾದ ಅಂಬೇಡ್ಕರ್‌ವಾದದ ವಿರುದ್ಧ ಅಂತಹ ವ್ಯವಸ್ಥಿತ ದಾಳಿಯನ್ನು ಸಂಘಟಿಸುತ್ತಾ ಬಂದಿದೆ. ಆರ್.ಎಸ್.ಎಸ್ ನವರದಾದರೋ ಕಣ್ಣಿಗೆ ಕಾಣುತ್ತದೆ. ಆದರೆ ಗಾಂಧಿವಾದದ ದಾಳಿ ಕಣ್ಣಿಗೆ ಕಾಣುವುದಿಲ್ಲ. ಒಂದು ರೀತಿ

ಮಂಕುಬೂದಿ ಎರಚುತ್ತಾರಲ್ಲ! ಹಾಗೆ ಗಾಂಧಿವಾದ, ಮತ್ತದರ ಸುತ್ತಲಿನ ವಾದಗಳು.

ಒಂದಂತೂ ನಿಜ, ಗಾಂಧೀವಾದವಿರಲಿ, ಕೋಮುವಾದವಿರಲಿ, ಕಮ್ಯುನಿಸ್ಟರಿರಲಿ ಎಲ್ಲರಿಗೂ ಅಂಬೇಡ್ಕರ್ ಬೇಕು. ಹಾಗಿದ್ದರೆ ಇವರೆಲ್ಲರಿಗೂ ಅಂಬೇಡ್ಕರ್ ಕಂಡರೆ ಅಷ್ಟೊಂದು ಪ್ರೀತಿಯೆ? ಮೋಹವೇ? ಊಹ್ಞೂಂ! ಖಂಡಿತ ಇಲ್ಲ. ಅವರ ಮೋಹವೇನಿದ್ದರೂ ಅಂಬೇಡ್ಕರ್ ಸುತ್ತ ಇರುವ ಆ ಮತದಾರ ಸಮೂಹದ ಕಡೆಗೆ. ಶೇ 25 ರಿಂದ 30ರಷ್ಟಿರುವ ಆ ಗಟ್ಟಿ ಓಟ್ ಬ್ಯಾಂಕ್‌ಕಡೆಗೆ.

ಓಟ್ ಬ್ಯಾಂಕ್. ಹೌದು, ಇಂದು Reserve Bankಗಿಂತ ಓಟ್ ಬ್ಯಾಂಕ್ ಮುಖ್ಯ. ಓಟ್ ಬ್ಯಾಂಕ್ ಇದ್ದರೆ ರಿಸರ್ವ್ ಬ್ಯಾಂಕ್ ಕೀ ತಾನಾಗೇ ಸಿಕ್ಕುತ್ತದೆ. ಇದನ್ನೇ ಅಂಬೇಡ್ಕರ್ ಹೇಳಿರುವುದು Political power is the master key, through which you can unlock all doors of progress ಎಂದು. ಅಂದರೆ ಓಟ್ ಬ್ಯಾಂಕ್ ಮೂಲಕ ದೊರೆಯುವ ರಾಜಕೀಯ ಅಧಿಕಾರದ ಕೀ ಪ್ರಗತಿಯ ಎಲ್ಲಾ ರೀತಿಯ ಬಾಗಿಲುಗಳನ್ನು ತೆರೆಯುತ್ತದೆ ಎಂದರ್ಥ. ಈ ನಿಟ್ಟಿನಲ್ಲಿ ಅಂಬೇಡ್ಕರರ ಆಸೆಯೂ ಕೂಡ 'I wanted to see my people as governing class' ಎಂಬುದಾಗಿತ್ತು. ಅಂದರೆ ನನ್ನ ಜನರು ಈ ದೇಶದ ಆಳುವ ವರ್ಗವಾಗಬೇಕೆಂಬುದು ಅದರ ಸರಳ ಅರ್ಥ.

ಈ ನಿಟ್ಟಿನಲ್ಲಿ ಒಟ್ಟಾರೆ ಹೇಳುವುದಾದರೆ ಅಂಬೇಡ್ಕರ್ ಮತ್ತು ಅವರ ವಾದ ದಲಿತರನ್ನು ಈ ದೇಶದ ರಾಜಕೀಯ ಅಧಿಕಾರದ ಗದ್ದುಗೆಯತ್ತ ಕೊಂಡೊಯ್ದರೆ ಅವರ ಹಿಂದೆ ಬಿದ್ದಿರುವ ಗಾಂಧಿವಾದ, ಕೋಮುವಾದ, ಕಮ್ಯುನಿಸ್ಟ್‌ವಾದ ಇತ್ಯಾದಿಗಳು ದಲಿತರನ್ನು ಅಂತಹ ಅಧಿಕಾರ ಗದ್ದುಗೆಯಿಂದ ದೂರ ಇಡುವ ಸಂಚನ್ನು ಹೊಂದಿದ್ದವು ಅಥವ ಹೊಂದಿವೆ, ಬದಲಿಗೆ ಆ ಓಟ್ ಬ್ಯಾಂಕನ್ನು ಯಾವ ರೀತಿಯಲ್ಲಾದರೂ ಕಿತ್ತುಕೊಂಡು ಅದರ ಮೂಲಕ ಮನುವಾದವನ್ನು ಜಾರಿಗೊಳಿಸುವ ದುಷ್ಟ ಹುನ್ನಾರವನ್ನು ಈ ಮೂರು ವಾದಗಳೂ ಹೊಂದಿವೆ.

ಹೀಗಿರುವಾಗ ಗಾಂಧಿವಾದ, ಕೋಮುವಾದ, ಕಮ್ಯುನಿಸ್ಟ್‌ವಾದಗಳ ಸಂಚಿಗೆ ಅಂಬೇಡ್ಕರ್‌ವಾದ ಬಲಿಯಾಗಬೇಕೆ? ಅಥವಾ ಅಂತಹ ವಾದಗಳು ಎಸೆಯುವ ಎಂಜಲಿಗೆ ಅಂಬೇಡ್ಕರ್‌ವಾದದ ವಾರಸುದಾರರಾದ ದಲಿತರು ತಮ್ಮ ಓಟ್ ಬ್ಯಾಂಕನ್ನು, ಆ ಮೂಲಕ ರಾಜಕೀಯ ಅಧಿಕಾರ ಎಂಬ ಮಾಸ್ಟರ್ ಕೀ ಅನ್ನು ಕಳೆದುಕೊಳ್ಳಬೇಕೆ? ಅಥವಾ ಬೇರೆಯವರ ಕೈಗಿತ್ತು ನಮ್ಮನ್ನು ಅಭಿವೃದ್ಧಿ ಮಾಡಿ ಎಂದು ಗೋಗರೆಯಬೇಕೆ? ಖಂಡಿತ, ಹಾಗೇನಾದರೂ ಆದದ್ದೇ ಆದರೆ ಅದು ದಲಿತರ ಆ ಮೂಲಕ ಅಂಬೇಡ್ಕರ್‌ವಾದದ ಸಾಮೂಹಿಕ ಆತ್ಮಹತ್ಯೆಯಾಗುತ್ತದಷ್ಟೆ ■

ಸಂಪಾದಕರೊಡನೆ ಸಂವಾದ

ಗಣರಾಜ್ಯದೊಳಗಿನ ರಾಜಕೀಯ ಚಿಂತನೆಗಳ ಹಿನ್ನೋಟ

ಆನಂದ್. ಎಸ್ ಅಜ್ಜಿಹಳ್ಳಿ

ಪ್ರಿಯ ಸಂಪಾದಕರೇ,

ಭಾರತ ಬ್ರಿಟಿಷರಿಂದ ಆಳಿಸಿಕೊಂಡು ಸ್ವತಂತ್ರ ಪಡೆದಂತಹ ಸಂದರ್ಭ ಎಷ್ಟು ಮುಖ್ಯವೋ, ತಮ್ಮನ್ನು ತಾವು ಆಳಿಸಿಕೊಳ್ಳಲು ರಚಿಸಿಕೊಂಡ ಸಂವಿಧಾನದ ರಚನೆಯೂ ಅಷ್ಟೇ ಮುಖ್ಯ. ಸತತವಾಗಿ ಎರಡು ವರ್ಷ ಹನ್ನೊಂದು ತಿಂಗಳು ಹದಿನೇಳು ದಿವಸ ತೆಗೆದುಕೊಂಡ ಸಂವಿಧಾನದ ರಚನೆಯು ಭಾರತವನ್ನು ಒಂದು ಭಿನ್ನನೋಟದಲ್ಲಿಯೇ ವಿವರಿಸುತ್ತದೆ. ತನ್ನನ್ನು ತಾನು ಕಟ್ಟುಪಾಡುಗಳಿಂದ ಮನುಷ್ಯನು ತಾನೇ ನಿಯಮಗಳ ಬಲೆ ಹೆಣೆದುಕೊಂಡು ಬದುಕಲು ಸಿದ್ದನಾಗುತ್ತಾನೆ ಎಂಬ ರೂಸೋನ ಮಾತು ಅಕ್ಷರಶಃ ನಿಜ. ಸ್ವತಂತ್ರವಾದರೂ ಸಹ ಇಲ್ಲಿನ ಸಂಸ್ಥಾನ ದರ್ಬಾರುಗಳಲ್ಲಿನ ಆಡಳಿತ ಅಂತ್ಯಗೊಳ್ಳದೆ ಗಣರಾಜ್ಯಗಳನ್ನಾಗಿ ಮಾಡುವ ಒಂದು ಕಾರ್ಯ ಸ್ವತಂತ್ರ ಪಡೆದ ರಾಷ್ಟ್ರಕ್ಕೂ ಅನಿವಾರ್ಯವಾಗಿತ್ತು. ಇದಕ್ಕೆ ಒಂದು ಉದಾಹರಣೆಯೆಂದರೆ ಹೈದರಬಾದಿನ ನಿಜಾಮ, ಕಾಶ್ಮೀರ, ಜುನಾಗಡ್ ಮುಖ್ಯವಾದವು ಎಂದು ಹೇಳುವ ವಿದ್ಯಾರ್ಥಿಗಳಿಗೆ ಮೈಸೂರು ಸಂಸ್ಥಾನವು ಸಹ ತನ್ನ ಸರ್ವಾಧಿಕಾರಿ ನೀತಿಯನ್ನು ಬಿಡಲು ತಯಾರಿಲ್ಲದೆ ಇದ್ದದ್ದು ತಿಳಿಯದು. ಕ್ರಮೇಣ ಪ್ರಜಾಪ್ರತಿನಿಧಿ ಸಭೆಯ ಮುಂದಾಳತ್ವ ಹಾಗೂ ಕೆ.ಸಿ.ರೆಡ್ಡಿಯವರ ಧೋರಣೆಗಳು, ಮೈಸೂರು ಸಂಸ್ಥಾನವೆಂಬುದು ರಾಜ್ಯವಾಗಿ ಮಾರ್ಪಟ್ಟು ತ್ರಿವರ್ಣ ಧ್ವಜದ ಹಾರಟಕ್ಕೆ ನಾಂದಿಯಾಯಿತು.

ಹಲವು ರಾಜ್ಯಗಳ ಒಕ್ಕೂಟ ಕೊನೆಗೂ ಭಾರತವನ್ನು ಗಣರಾಜ್ಯವನ್ನಾಗಿಸಲು ಸಹಕರಿಸಿದವು. ಭಾರತ ಸಂವಿಧಾನ 1949 ನವೆಂಬರ್ 26 ರಲ್ಲಿಯೇ ಅಂಗೀಕರವಾದರೂ ಸಹ ತನ್ನ ಮೊದಲ ಸ್ವತಂತ್ರ ಕಹಳೆ ಹಾಗೂ ಪೂರ್ಣ ಸ್ವರಾಜ್ಯ ಘೋಷಿಸಿದ 1930 ಜನವರಿ 26 ರ ಸವಿನೆನಪಿಗಾಗಿ, 1950 ಜನವರಿ 26 ರಂದು ತನ್ನ ತನದ ಹೊಸ ಆವಿಷ್ಕಾರಗಳೊಂದಿಗೆ ದೇಶದಾದ್ಯಂತ ಜಾರಿಗೆ ಬಂತು. ಸತತವಾಗಿ ಹೋರಾಟಗಳ ಬೆನ್ನಲ್ಲಿ ಒಕ್ಕೂಟವನ್ನು ರಚಿಸಿದ ಭಾರತ ಇಂದಿಗೂ ಸಹ ತನ್ನ ಒಡಲಾಳದಲ್ಲಿಯೇ ಸಂಘರ್ಷಗಳನ್ನು ಹುಟ್ಟು ಹಾಕಿಕೊಳ್ಳುತ್ತಿರುವುದು ಒಂದು ರೀತಿಯ ದ್ವಂದ್ವಮಯ ನೀತಿಗಳನ್ನು ಬೆಳೆಸುವಂತಿದೆ. ಅದು ಏನಾದರೂ ಸರಿ ಇವತ್ತಿನ ದಿನಗಳಲ್ಲಿ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕಿಂತ ಸುಮ್ಮನಿರುವುದೇ ಹೆಚ್ಚು ಉತ್ತಮವೆನಿಸುತ್ತದೆ. ಪ್ರಸ್ತುತ ಯುವಜನತೆಗೆ ಯಾವ ಆದರ್ಶಗಳನ್ನು ಪಾಲಿಸಬೇಕು ಎಂಬುದೆ ತಿಳಿದಿಲ್ಲ ಅಂತಹುದರಲ್ಲಿ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಮಾತು ದೂರವೆನಿಸುತ್ತದೆ. ದಿನಬೆಳಗಾದರೆ ಪಾಶ್ಚಾತ್ಯ ಚಿಂತನೆಗಳ ಮಹಾಪೂರವೇ ನಮ್ಮ ತಲೆಯೊಳಗೆ ಇರುವಂತಹ ಸಂದರ್ಭ ಉಂಟಾಗಿದೆ. ಭಾರತದ ಬಗೆಗೆ ನಮ್ಮ ಸ್ವಂತಿಕೆಯ ಚಿತ್ರಣವನ್ನು ಕಟ್ಟಿಕೊಳ್ಳುವುದಾದರೂ ಏನೂ ಎಂಬುದು ತಿಳಿಯಬೇಕಾದ ಅಂಶವಾಗಿದೆ. ಬರೀ ಗೊಂದಲಮಯ ಚಿತ್ರಣಗಳನ್ನು ಸದಾ ವಿವರಿಸುತ್ತಾ ಬದಲಾವಣೆಗೊಳ್ಳುವ ನಮ್ಮ ಸಂವಿಧಾನಕ್ಕೆ ನಿಜವಾದ ನೆಲೆಯಾವುದು ಎಂಬುದು ಇಂದಿಗೂ ಸವಾಲಿನ ಪ್ರಶ್ನೆಯಾಗಿದೆ....?

ಪ್ರಗತಿಪರ ಚಿಂತನೆಗಳ ಮೂಲಕ ಸದಾ ಜನರ ಏಳಿಗೆಯನ್ನು ಬಯಸುವಂತ ಕಾರ್ಯ ಮಾಡುವ ಅಂಬೇಡ್ಕರ್‌ರವರ ಚಿಂತನೆಗಳು ಇಂದಿನ ಯುವಜನತೆಗೆ ಆದರ್ಶವೇ ಅಥವಾ ಸದಾ ಜನರೊಡನೆ ಬೆರೆತು ಮುಂದಿನ ಪೀಳಿಗೆಗಳಿಗೆ ಬದುಕಲು ಅವಕಾಶ ಕಲ್ಪಿಸುವತ್ತ ಹೋರಾಡಿದ ಗಾಂಧೀಯ ತತ್ವಗಳು ಯುವಕರಿಗೆ ಸ್ಫೂರ್ತಿಯೇ? ಇಂದಿನ ಮನುಷ್ಯ ಆಧುನಿಕತೆ, ನಾಗರೀಕತೆಯ ಸೋಗಿನಲ್ಲಿ ತನ್ನನ್ನು ತಾನು ಅವನತಿಯತ್ತ ಸಾಗಿಸಿಕೊಳ್ಳುವುದರಲ್ಲೇ ನಿರತನಾಗಿದ್ದಾನೆ. ತನಗೆ ತಾನೇ ಅರಿವಿಲ್ಲದಂತೆ ಅವನು ಇಡುವಂತಹ ಪ್ರತಿಯೊಂದು ಹೆಜ್ಜೆಗಳು ಅವನಿಗಷ್ಟೇ ಅಲ್ಲದೆ ಮುಂದಿನ ಪೀಳಿಗೆಗಳ ವಿನಾಶಕ್ಕೆ ಒಂದು ತೆರನಾಗಿ ಕಾರಣೀಭೂತವಾಗುತ್ತವೆ.

ಇಂದಿನ ಸರ್ಕಾರಗಳ ಕಣ್ಣಿಗೆ ಯಾವ ಸಮಸ್ಯೆ ಬಂದರೂ ಸಹ ಅದನ್ನು ಪರಿಹರಿಸುವ ಹಾಗೂ ಜನಮನ್ನಣೆ ಪಡೆಯಲು ಮೀಸಲಾತಿಯೇ ಸರಿಯಾದ ದಾರಿಯೆಂದು ನಿರ್ಧರಿಸಿಕೊಂಡಿರುತ್ತಾರೆ. ಆದರೆ, ವಾಸ್ತವವಾಗಿ ಜನರ ಹಾಗೂ ಜನಾಂಗಗಳ ನಡುವೆಯೇ ಅನೇಕ ಸಮಸ್ಯೆಗಳಿಗೆ ಬೇರೆಯೇ ಆದ ಮದ್ದು ಇರುತ್ತದೆ. ಅದನ್ನು ತಿಳಿಯುವ ಹಾಗೂ ಅರ್ಥೈಸುವ ಕ್ರಮವು ಅಷ್ಟೇ ಕಠಿಣಕರವಾದುದು.

ಮಾನವ ಸಂಬಂಧಗಳ ನೈಜತೆಯ ಸ್ವರೂಪ ತಿಳಿಯಬೇಕಾದರೆ, ಹಾಗೆಯೇ ಆಧುನಿಕತೆಯ ವೈದಾಟಗಳ ನಡುವೆ ಸರಳತೆಯ ಜೀವನ ನಡೆಸಲು ಗಾಂಧೀಯಲ್ಲಿನ ಚಿಂತನೆಗಳೇ ಉತ್ತಮ ನಿದರ್ಶನವೆಂದರೆ ತಪ್ಪಾಗಲಾರದು. ಪ್ರಗತಿಪರ ಚಿಂತನೆಗಳು ಮಾನವನ ಸಮಸ್ಯೆಗಳಿಗೆ ತಾತ್ಕಾಲಿಕ ಉತ್ತರ ನೀಡಿ ಮನ ಸಂತೋಷ ಪಡಿಸಿದರೂ, ಅದು ಬಂದು ಹೋಗುವ ಮಿಂಚಿನಂತೆ ತಾತ್ಕಾಲಿಕವಾದುದೇ. ಏನೇ ಆದರೂ ದೇಶದ ಪ್ರಗತಿಯ ಚಿಂತನೆಯ ನೆಲೆಯಲ್ಲಿ ಬೆಳೆದು ಬಂದ ನೀತಿಗಳು ಸರ್ವರಲ್ಲಿಯೂ ಪರಸ್ಪರ ಹೊಂದಾಣಿಕೆ, ಸಹಕಾರ ಮನೋಭಾವ ಮೂಡುವಂತೆ ಮಾಡಲಿ, ರಾಷ್ಟ್ರದ ಯುವಜನತೆಗೆ ಆಧುನಿಕತೆಯ ಹಂದರದೊಳಗೆ ಸರಳತೆಯ ಮನೋಭಾವನೆ ಮೂಡಲಿ ಎಂಬುದೇ ಇದರ ಮುಖ್ಯ ಆಶಯವಾಗಿದೆ. ■

ಸಂಪಾದಕರೊಡನೆ ಸಂವಾದ

ಮರಣದಂಡನೆ ಎಷ್ಟು ಸಮಂಜಸ?

ನಗರಗೆರೆ ರಮೇಶ್

ಪ್ರಿಯ ಸಂಪಾದಕರೇ,

ಒಂದು ಕಾಲವಿತ್ತು, ದೇಶದ ರಾಜನಿಗೆ ಯಾರ ಬಗ್ಗೆಯಾಗಲಿ ಕೋಪ ಬಂದರೆ, ಅಥವಾ ಅವನು ಅಪರಾಧಿಯಾಗಿದ್ದರೆ "ಈ ದ್ರೋಹಿಯ ತಲೆಯನ್ನು ಕಡಿದು ಕೋಟೆ ಬಾಗಿಲಿಗೆ ನೇತುಹಾಕಿ" ಎಂದು ಆಜ್ಞೆ ಮಾಡುತ್ತಿದ್ದ ಕಾಲವದು. ಮಾಡಿದನೆನ್ನಲಾದ ತಪ್ಪಿಗೆ ಶಿಕ್ಷೆ ಕೊಡುವುದೇ ಅಲ್ಲದೆ, ಇತರರಲ್ಲಿ ಭಯ ಹುಟ್ಟಿಸಲು ಕಡಿದ ತಲೆಯನ್ನು ಎಲ್ಲರಿಗೂ ಕಾಣುವ ಹಾಗೆ ಪ್ರದರ್ಶಿಸುವುದು ಆ ಶಿಕ್ಷೆಯ ಹಿಂದಿನ ಉದ್ದೇಶವಾಗಿರುತ್ತಿತ್ತು. ಆ ಕಾಲದಲ್ಲಿ ಇಂಥಾ ದಂಡನೆ ಮಾನವೀಯವೇ ಅಮಾನವೀಯವೇ ಎಂಬ ಪ್ರಶ್ನೆಯೇ ಉದ್ಭವವಾಗುತ್ತಿರಲಿಲ್ಲ. ರಾಜನ ಮಾತೇ ಕಾನೂನಾಗಿದ್ದಾಗ ಅವನು ಕೊಡುವ ಯಾವುದೇ ಶಿಕ್ಷೆಯು ಕಾನೂನುಬದ್ಧವಾಗಿಬಿಡುತ್ತಿತ್ತು. ಅಂದಿನಿಂದ ಇಂದಿನವರೆಗೆ ಮಾನವ ಸಮಾಜ ಹಲವು ಬದಲಾವಣೆಗಳನ್ನು, ಉತ್ತಮ ಬೆಳವಣಿಗೆಗಳನ್ನು ಕಂಡಿದೆ.

ಮುಖ್ಯವಾಗಿ ಜಗತ್ತಿನ ಬಹುಭಾಗಗಳಲ್ಲಿ ಪ್ರಜಾತಾಂತ್ರಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂದು ಮಾನವನ ಪ್ರಾಣಕ್ಕೆ ಬೆಲೆ ಎನ್ನುವುದು ಜನರ ಚಿಂತನಾ ಕ್ರಮದ ಭಾಗವೇ ಆಗಿದೆ. ಆದರೂ ಇಲ್ಲಿ ಹಲವಾರು ಯುದ್ಧಗಳು ನಡೆದಿವೆ. ಅದರಲ್ಲಿಯೂ ಮುಖ್ಯವಾಗಿ ಎರಡು ಪ್ರಪಂಚ ಸಂಗ್ರಾಮಗಳು ಹಾಗೂ ಜನಾಂಗೀಯ ದ್ವೇಷದಿಂದಾಗಿ ಲಕ್ಷಾಂತರ ಪ್ರಾಣಗಳು ಹೋಗಿವೆ. ಈ ರೀತಿಯ ಪ್ರಾಣಹಾನಿಯನ್ನು ಕಂಡ ದೇಶಗಳು ಮಾನವನ ಬದುಕಿನ ಘನತೆಯನ್ನು ಎತ್ತಿಹಿಡಿಯುವ ಪ್ರಯತ್ನಗಳನ್ನು ಕೈಗೆತ್ತಿಕೊಂಡವು. ಕನಿಷ್ಟಪಕ್ಷ ಕಾನೂನಿನಡಿಯಲ್ಲಿ ನಡೆಯುವ ಮನುಷ್ಯನ ಪ್ರಾಣಹಾನಿಯಾದರೂ ನಿಲ್ಲಲಿ ಎಂಬ ಯೋಚನೆಯ ಪರಿಣಾಮವಾಗಿಯೇ ಮರಣದಂಡನೆಯಂಥ ಅಮಾನವೀಯ ಶಿಕ್ಷೆಯನ್ನು ನಿಲ್ಲಿಸಬೇಕೆಂಬ ಪ್ರಯತ್ನಗಳು ನಡೆದಿವೆ. ಸಮಾಜವನ್ನು ಹೆಚ್ಚು ನಾಗರಿಕಗೊಳಿಸಬೇಕೆನ್ನುವ ಅಂಗವಾಗಿ ಈ ಕ್ರಮವನ್ನು ಹಲವಾರು ದೇಶಗಳು ಕೈಗೊಂಡಿದ್ದೂ ಆಗಿದೆ.

ನಾಗರಿಕ ಸಮಾಜ ಹಾಗೂ ಮಾನವಹಕ್ಕು ಸಂಘಟನೆಗಳ ಒತ್ತಾಯದ ಮೇರೆಗೆ ಇದುವರೆಗೂ 96 ದೇಶಗಳು ತಮ್ಮ ಕಾನೂನು ಪುಸ್ತಕಗಳಿಂದ ಮರಣದಂಡನೆಯನ್ನು ತೊಲಗಿಸಿವೆ. ಕೆಲವು ಇತರ ದೇಶಗಳಲ್ಲಿ "ಅಪರೂಪದಲ್ಲಿ ಅಪರೂಪದ" ಸಂದರ್ಭಗಳಲ್ಲಿ ಈ ಶಿಕ್ಷೆಯನ್ನು ನೀಡಲಾಗುತ್ತಿದೆ. ಭಾರತವು ಅಂಥ ದೇಶಗಳಲ್ಲಿ ಒಂದು. ಆದರೆ ಚೀನವು ಸೇರಿದಂತೆ ಹಲವು ದೇಶಗಳಲ್ಲಿ ಮರಣದಂಡನೆ ಎಂಬುದು ತುಂಬಾ ಮಾಮೂಲು ಸಂಗತಿಯಾಗಿದೆ. ಜಗತ್ತಿನ ಶೇ. 60ರಷ್ಟು ಜನರು ವಾಸಮಾಡುವ ನಾಲ್ಕು ದೇಶಗಳಲ್ಲಿ ಚೀನ, ಭಾರತ, ಅಮೇರಿಕ ಮತ್ತು ಇಂಡೋನೇಷ್ಯಾ ಮರಣ ದಂಡನೆ ಶಿಕ್ಷಾ ಸ್ಮೃತಿಯ ಭಾಗವಾಗಿದೆ. ಚೀನ ಮತ್ತು ಅಮೇರಿಕಗಳಿಗೆ ಹೋಲಿಸಿದರೆ ಭಾರತ ಹಾಗೂ ಇಂಡೋನೇಷ್ಯಾಗಳಲ್ಲಿ ಈ ಶಿಕ್ಷೆ ಅಪರೂಪದಲ್ಲಿ ಅಪರೂಪದ ಪ್ರಕರಣಗಳಲ್ಲಿ ಮಾತ್ರ ನೀಡಲಾಗುತ್ತಿದೆ.

ಪ್ರಸ್ತುತ ನಮ್ಮ ದೇಶದಲ್ಲಿ ಮರಣಶಿಕ್ಷೆಯ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. ಕಸಬ್, ಅಫಜಲ್ ಗುರು ಮುಂತಾದವರಿಗೆ ವಿಧಿಸಿರುವ ಮರಣದಂಡನೆ ಜಾರಿಯಾಗುವುದರಲ್ಲಿನ ವಿಳಂಬ ಬಹಳಷ್ಟು ಜನರ ಟೀಕೆಗೆ ಗುರಿಯಾಗಿದೆ. ಮತ್ತು ಮರಣದಂಡನೆಯ ಪರ ಹಾಗೂ ವಿರೋಧದ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಈ ಶಿಕ್ಷೆಯನ್ನು ಸಾರಾಸಗಟಾಗಿ ವಿರೋಧಿಸುವವರು ಅದರ ಜಾಗದಲ್ಲಿ ಜೀವಾವಧಿ ಶಿಕ್ಷೆಯನ್ನು ವಿಧಿಸಬಹುದೆಂದು ಅಭಿಪ್ರಾಯ ಪಡುತ್ತಾರೆ.

ಮರಣದಂಡನೆಯ ಪರ ವಾದಿಸುವವರ ಪ್ರಮುಖ ನಿಲುವು ಕೊಲೆಯಂಥ ಕ್ರೂರ ಅಪರಾಧಕ್ಕೆ ಅದೇ ಸರಿಯಾದ ಶಿಕ್ಷೆ ಎನ್ನುವುದು.. ಮತ್ತು ಈ ರೀತಿಯ ಶಿಕ್ಷೆಯನ್ನು ನೀಡುವುದರ ಮೂಲಕ ಕೊಲೆಗೀಡಾದ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂಬಂಧಪಟ್ಟವರಿಗೆ ಮತ್ತು ಅಂಥ ಕೃತ್ಯವನ್ನು ಗಂಭೀರವಾಗಿ ಪರಿಗಣಿಸುವವರಿಗೆ ಸ್ವಲ್ಪ ಸಮಾಧಾನವನ್ನು ಉಂಟುಮಾಡಬಹುದು ಎಂದೂ ಅವರು ವಾದಿಸುತ್ತಾರೆ. ಮಾತ್ರವಲ್ಲ ಒಬ್ಬ ಕೊಲೆಗಾರನಿಗೆ ಇಂಥ ಉಗ್ರಶಿಕ್ಷೆಯನ್ನು ವಿಧಿಸಿ ಅದನ್ನು ಜಾರಿಮಾಡಿದ್ದೇ ಆದಲ್ಲಿ ಅದು ಇತರರಲ್ಲಿ ಭಯ ಹುಟ್ಟಿಸಿ ಈ ರೀತಿಯ ಕುಕೃತ್ಯಗಳಿಗೆ ಕೈಹಾಕದಂತೆ ಮಾಡುತ್ತದೆಂದು ಅವರು ಭಾವಿಸುತ್ತಾರೆ. ಪ್ರಭುತ್ವವು ದೇಶದ ಕಾನೂನು ತನಗೆ ನೀಡಿರುವ ಅಧಿಕಾರವನ್ನು ಸ್ಥಾಪಿಸಿಕೊಂಡು ತನ್ನ ಶಕ್ತಿಯನ್ನು ಪ್ರದರ್ಶಿಸಬೇಕೆಂಬ ಉದ್ದೇಶವೂ ಇವರಲ್ಲಿದೆ. ಸರ್ಕಾರ ಬಲಿಷ್ಠವಾಗಿದ್ದಾಗ ಮಾತ್ರ ಜನರು ಕಾನೂನಿಗೆ ಬೆಲೆ ಕೊಡುತ್ತಾರೆ ಎಂಬುದು ಸಾಮಾನ್ಯ ತಿಳುವಳಿಕೆ. ಅದೇ ಕಾರಣಕ್ಕಾಗಿಯೇ ಭಾರತದಲ್ಲಿ ಮರಣದಂಡನೆ ವಿಧಿಸಿದ್ದರೂ ಇನ್ನೂ ಅದು ಜಾರಿಯಾಗದಿರುವುದರಿಂದ ಈ ದೇಶದ ಇಂದಿನ ಸರ್ಕಾರವೇ ದುರ್ಬಲವಾಗಿದೆ ಎಂಬ ಟೀಕೆಯೂ ಕೇಳಿಬರುತ್ತಿದೆ.

ಭಾರತದ ಉಚ್ಚ ನ್ಯಾಯಾಲಯವು ಕೆಲವು ಸಂದರ್ಭಗಳಲ್ಲಿ ಮರಣದಂಡನೆಯನ್ನು ಅಪರೂಪದಲ್ಲಿ ಅಪರೂಪದ ಪ್ರಕರಣಗಳಲ್ಲಿ ವಿಧಿಸಬಹುದೆಂದು ನಿರ್ದೇಶಿಸಿದೆ. ಕೊಲೆ, ದರೋಡೆಗಾಗಿ ಕೊಲೆ, ರಾಜದ್ರೋಹ, ಸೈನಿಕರು ದಂಗೆಯೇಳುವುದು. ಉಗ್ರವಾದಕ್ಕೆ ಸಂಬಂಧಪಟ್ಟ ಅಪರಾಧಗಳು ಕುಟುಂಬ ಗೌರವವನ್ನು ಕಾಪಾಡುವ ಹೆಸರಿನಲ್ಲಿ ಮಾಡುವ ಕೊಲೆಗಳು, ಎನ್ಕೌಂಟರಿನ ಹೆಸರಿನಲ್ಲಿ ಪೊಲೀಸರು ನಡೆಸುವ ಕೊಲೆಗಳು, ಇಂಥ ಕೆಲವು ಪ್ರಕರಣಗಳು ಪಶ್ಚಿಮ ಬಂಗಾಳದ ಧನಂಜಯ ಚಟರ್ಜಿಗೆ 2004ರಲ್ಲಿ ಗಲ್ಲುಶಿಕ್ಷೆ ಜಾರಿಮಾಡಿದ ನಂತರ ನಮ್ಮ ದೇಶದಲ್ಲಿ ಯಾರನ್ನೂ ಗಲ್ಲಿಗೇರಿಸಿಲ್ಲ. ಹಲವು ತೀರ್ಪುಗಳು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸಬೇಕೆಂಬ ಪ್ರಾರ್ಥನೆಯೊಂದಿಗೆ ರಾಷ್ಟ್ರಪತಿಗಳ ಮುಂದಿವೆ. ಆ ಪ್ರಾರ್ಥನೆ ತಿರಸ್ಕೃತವಾದರೂ ಆ ಶಿಕ್ಷೆಗಳು ಜಾರಿಯಾಗಬೇಕಾದರೆ ಇನ್ನೂ ಸಾಕಷ್ಟು ಕಾಲ ಕಾಯಬೇಕೆಂಬುದಂತೂ ವಾಸ್ತವ.

ಭಾರತವೂ ಸೇರಿದಂತೆ ಜಗತ್ತಿನ ಹಲವು ದೇಶಗಳಲ್ಲಿ ನಾಗರಿಕ ಸಮಾಜವು ಮರಣದಂಡನೆಯನ್ನು ರದ್ದುಮಾಡಬೇಕೆಂದು ಒತ್ತಾಯ ಮಾಡುತ್ತಿದೆ. ಈ ಒತ್ತಾಯವು ಈಗ ಒಂದು ಚಳವಳಿಯ ಸ್ವರೂಪವನ್ನೇ ಪಡೆದಿದೆ. ಈ ಚಳವಳಿಯಲ್ಲಿ ಮಾನವಹಕ್ಕು ಸಂಘಟನೆಗಳು ಮುಂಚೂಣಿಯಲ್ಲಿವೆ. ಕಾನೂನಿನನ್ವಯವೇ ಆಗಲಿ ಒಬ್ಬ ವ್ಯಕ್ತಿಯ ಪ್ರಾಣಹರಣ ಮಾಡುವುದು ಜೀವವಿರೋಧಿ ಕ್ರಮವೆಂಬುದು ಇವರ ಪ್ರಮುಖ ನಿಲುವು. ಮಾತ್ರವಲ್ಲ, ಹಲವು ಸಂದರ್ಭಗಳಲ್ಲಿ ದೋಷಿಗಳೆಂದು ಶಿಕ್ಷಿಸಲ್ಪಟ್ಟವರು ನಂತರದಲ್ಲಿ ನಿರ್ದೋಷಿಗಳೆಂದು ಸಾಬೀತಾದ ಪ್ರಕರಣಗಳು ಇವೆ. ಇಂಥವರಿಗೆ ಶಿಕ್ಷೆಯಾಗಿ ಮರಣದಂಡನೆಯನ್ನೇ ವಿಧಿಸಿ ಅದು ಜಾರಿಯಾಗಿದ್ದರೆ ಒಬ್ಬ ನಿರಪರಾಧಿಯನ್ನು ಕೊಂದ ಅಪರಾಧವನ್ನು ನ್ಯಾಯವ್ಯವಸ್ಥೆಯೇ ಮಾಡಿದಂತಾಗುವುದಿಲ್ಲವೇ? ಇನ್ನು ಧಾರ್ಮಿಕ ನೆಲೆಯಲ್ಲಿ ವಾದಿಸುವವರು ಮನುಷ್ಯನ ಪ್ರಾಣವನ್ನು ತೆಗೆಯುವ ಹಕ್ಕು ಮತ್ತೆ ಯಾವ ಮನುಷ್ಯನಿಗೂ ಇಲ್ಲವೆಂದು ವಾದಿಸುತ್ತಾರೆ. ಆದರೆ ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದರೆ ಯಾವ ಧರ್ಮದಡಿಯಲ್ಲಿನ ಕಾನೂನಿನಲ್ಲಿಯೂ ಮರಣದಂಡನೆಯ ವಿರುದ್ಧ ಸ್ಪಷ್ಟವಾದ ನಿಲುವು ತಳೆದಿರುವುದನ್ನು ಕಾಣಲಾಗಿವುದಿಲ್ಲ.

ಇಲ್ಲಿ ಮುಖ್ಯವಾದ ಪ್ರಶ್ನೆಯೆಂದರೆ ಅನೇಕ ಸಂದರ್ಭಗಳಲ್ಲಿ ಜನವಿರೋಧಿಯಾಗಿಯೇ ವರ್ತಿಸುವ ಪ್ರಭುತ್ವಕ್ಕೆ ಆ ಜನರ ಪ್ರಾಣವನ್ನು ಬಲಿತೆಗೆದುಕೊಳ್ಳುವ ಅಧಿಕಾರ ಹೇಗೆ ಬರುತ್ತದೆ ಎಂಬುದು. ಉದಾಹರಣೆಗೆ ಭಾರತ ಸರ್ಕಾರದ ಹೊಸ ಆರ್ಥಿಕ ನೀತಿಯಿಂದಾಗಿ ಸಮಾಜದ ಕೆಲವು ವರ್ಗಗಳು ಉನ್ನತಿಯನ್ನು ಸಾಧಿಸಿದರೂ ಹಲವು ಇತರ ವರ್ಗಗಳು ಕಷ್ಟಗಳನ್ನೆದುರಿಸಲಾಗದೆ ಆತ್ಮಹತ್ಯೆಗೆ ಶರಣಾದ ಪ್ರಕರಣಗಳು, ಹಲವು ರಾಜ್ಯಗಳಲ್ಲಿ ರೈತರು ನಿಸ್ಸಹಾಯಕ ಸ್ಥಿತಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವುದು ಜನಜನಿತ. ಒಬ್ಬ ವ್ಯಕ್ತಿ ವರದಕ್ಷಿಣೆ ಕಿರುಕುಳದಿಂದಾಗಿ ಅಥವಾ ಯಾವುದೋ ಕಾರಣಕ್ಕೆ ತನ್ನ ಪ್ರಾಣಹರಣ ಮಾಡಿಕೊಂಡರೆ ಅದಕ್ಕೆ ಕಾರಣವಾದವರನ್ನು ಶಿಕ್ಷಿಸುವ ಕ್ರಮ ಕಾನೂನಿನ ಭಾಗವಾಗಿದೆ. ಸರ್ಕಾರದ ನೀತಿಗಳ ಪರಿಣಾಮವಾಗಿ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅವುಗಳನ್ನೂ ಕೊಲೆಗಳೆಂದೇ ಪರಿಗಣಿಸಬೇಕಾಗುತ್ತದೆ. ಅವುಗಳಿಗೆ ಕಾರಣ ಯಾರು? ಅವರಿಗೆ ಯಾವ ಶಿಕ್ಷೆ? ಇವು ಉತ್ತರವಿಲ್ಲದ ಪ್ರಶ್ನೆಗಳು.

ಮರಣದಂಡನೆಯ ಭಯವನ್ನು ಹುಟ್ಟಿಸಿ ಆ ಮೂಲಕ ಅಪರಾಧಗಳನ್ನು ತಡೆಯಬಹುದು ಎಂಬ

ವಾದವಂತೂ ಪೂರ್ತಿ ನಿರಾಧಾರವಾದದ್ದು. ಅದೇ ನಿಜವಾದರೆ ಈ ಶಿಕ್ಷೆಯನ್ನು ಅತಿಹೆಚ್ಚಿನ ಸಂಖ್ಯೆಯಲ್ಲಿ ಜಾರಿಮಾಡುವ ಚೀನ, ಅಮೆರಿಕದಲ್ಲಿನ ಕೆಲವು ರಾಜ್ಯಗಳು ಮುಂತಾದ ಕಡೆಗಳಲ್ಲಿ ಈ ಹೊತ್ತಿಗೆ ಅಪರಾಧಗಳೇ ಇಲ್ಲವಾಗಬೇಕಾಗಿತ್ತು. ಅಥವಾ ಕಡಿಮೆಯಾಗಬೇಕಾಗಿತ್ತು. ಆದರೆ ಹಾಗಾಗಿಲ್ಲ. ಒಂದು ಅಧ್ಯಯನದ ಪ್ರಕಾರ ಅಮೆರಿಕಾದಲ್ಲಿ ಮರಣದಂಡನೆ ಜಾರಿಯಲ್ಲಿರುವ ರಾಜ್ಯಗಳಿಗೆ ಹೋಲಿಸಿದರೆ ಆ ಶಿಕ್ಷೆ ಜಾರಿಯಲ್ಲಿಲ್ಲದ ರಾಜ್ಯಗಳಲ್ಲಿ ಕೊಲೆಗಳು ಸೇರಿದಂತೆ ಅಪರಾಧಗಳ ಸಂಖ್ಯೆ ಕಡಿಮೆ ಇದೆ. ಇನ್ನು ಕೊಲೆಯಾದ ವ್ಯಕ್ತಿಯ ಆಪ್ತರಿಗೆ ಸಮಾಧಾನವನ್ನುಂಟು ಮಾಡುವದಕ್ಕಾಗಿಯಾದರೂ ಇಂಥಾ ಶಿಕ್ಷೆ ಜಾರಿಯಾಗಬೇಕೆನ್ನುವುದಾದರೆ ವ್ಯಕ್ತಿಗಳ ಆ ಸಮಯದ ಅಥವಾ ಆನಂತರದ ಸೇಡಿನ ಮನೋಭಾವಕ್ಕೆ ಉತ್ತೇಜನವನ್ನು ನೀಡಿದಂತಾಗುವುದಿಲ್ಲವೇ? ಮುಸ್ಲಿಂ ರಾಷ್ಟ್ರಗಳಲ್ಲಿ ಕೊಲೆಯಾದ ವ್ಯಕ್ತಿಯ ಕುಟುಂಬದವರು ಹಂತಕನನ್ನು ಕ್ಷಮಿಸಲು ತಯಾರಿದ್ದರೆ ಅಪರಾಧಿಗೆ ಶಿಕ್ಷೆಯಿಂದ ವಿನಾಯಿತಿ ನೀಡಬಹುದೆಂಬ ನಿಯಮವಿದೆ. ಆದರೆ ಅಂಥ ಪ್ರಕರಣಗಳು ತುಂಬಾ ಅಪರೂಪ.

ಯಾವುದೇ ದೃಷ್ಟಿಯಿಂದ ನೋಡಿದರೂ ಮರಣದಂಡನೆ ಅಪರಾಧಗಳನ್ನು ತಡೆಯುತ್ತದೆ ಎನ್ನುವುದಾಗಲಿ, ಅಪರಾಧಕ್ಕೆ ಸರಿಯಾದ ಶಿಕ್ಷೆಯನ್ನು ಕೊಟ್ಟ ಹಾಗೆ ಆಗುತ್ತದೆ ಎನ್ನುವುದಾಗಲಿ ಅಷ್ಟು ಸಮಂಜಸವಾದ ವಾದವಲ್ಲ. ಇನ್ನು 'ಉಗ್ರಗಾಮಿಕೃತ್ಯಗಳಲ್ಲಿ ತೊಡಗಿಕೊಂಡವರಿಗೆ ಮರಣಶಿಕ್ಷೆ ಒಂದು ಶಿಕ್ಷೆಯೇ ಅಲ್ಲ. ಏಕೆಂದರೆ ಅಂಥವರು ಯಾರ ಕೈಬಿಡಬೇಕೆಂಬ ಷರತ್ತನ್ನು ವಿಧಿಸಲಾಗಿದೆ. ನಾಗರಿಕತೆಯ ಕಡೆಗೆ ನಿಧಾನವಾಗಿಯಾದರೂ ಮುಂದೆ ಸಾಗಬೇಕೆನ್ನುವವರಿಗೆ ಇದು ಅತ್ಯಂತ ಪ್ರಮುಖ ಉದಾಹರಣೆ.

ನಾವು ನಮ್ಮ ದೇಶವನ್ನು ಇತರರಿಗೆ ಮಾದರಿಯೆಂದೂ ಆಧ್ಯಾತ್ಮಿಕವಾಗಿ ಮುಂದುವರೆದಿರುವ ದೇಶವೆಂದೂ ಪಾಶ್ಚಾತ್ಯರು ಹಲವು ಪ್ರಶ್ನೆಗಳಿಗೆ ಉತ್ತರಕ್ಕಾಗಿ ನಮ್ಮ ಕಡೆಗೇ ನೋಡುತ್ತಿರುತ್ತಾರೆ ಎಂದೂ ಹೇಳಿಕೊಳ್ಳುತ್ತೇವೆ. ಆದರೂ ಅಂಥ ದೇಶಗಳು ನಮಗಿಂತಲೂ ಹೆಚ್ಚು ನಾಗರಿಕವಾಗಿವೆ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾಗಿದೆ. ನಮ್ಮ ಪ್ರಕಾರ ಕೇವಲ ಸಂಪತ್ತಿನಿಂದ ಸಿಗುವ ಸುಖಕ್ಕೇ ಹೆಚ್ಚು ಪ್ರಾಧಾನ್ಯ ನೀಡುವ ಆ ದೇಶಗಳು ಮನುಷ್ಯನ ಪ್ರಾಣಕ್ಕೆ, ಮರಣದಂಡನೆಯನ್ನು ನಿಷೇಧಿಸುವ ಮೂಲಕ ಬೆಲೆ ನೀಡಿರುವುದು ಇದಕ್ಕೆ ನಿದರ್ಶನ. ಅದೇ ರೀತಿಯಲ್ಲಿ ನಾವೂ ನಾಗರಿಕಗೊಳ್ಳಬೇಕಾದರೆ ಮರಣ ದಂಡನೆಯನ್ನು ನಮ್ಮ ಕಾನೂನು ಪುಸ್ತಕದಿಂದ ತೆಗೆದುಹಾಕುವುದು ಒಂದು ಪ್ರಮುಖ ಹೆಜ್ಜೆ. ಈ ನಿಟ್ಟಿನಲ್ಲಿ ಸರ್ಕಾರ ಮತ್ತು ಮುಖ್ಯವಾಗಿ ಈ ದೇಶದ ಜನ, ಆವೇಶ ಉದ್ವೇಗಳನ್ನು ಬದಿಗೆ ಸರಿಸಿ ವಸ್ತುನಿಷ್ಠವಾಗಿ ಚಿಂತಿಸಿ ಕಾನೂನಿನ ಭಾಗವಾಗಿರುವ ಮರಣ ದಂಡನೆಯನ್ನು ನಿಷೇಧಿಸುವ ನಿರ್ಧಾರವನ್ನು ಕೈಗೊಳ್ಳಬೇಕಾದ ಸಂದರ್ಭ ಬಂದಿದೆ. ಹಲವರು ಅಪರಾಧಿಗಳಿಗೆ ವಿಧಿಸಲಾಗಿರುವ ಗಲ್ಲುಶಿಕ್ಷೆಯ ಜಾರಿಯ ಬಗ್ಗೆ ಚರ್ಚೆ ನಡೆಯುತ್ತಿರುವ ಈ ದಿನಗಳಲ್ಲಿ ಈ ವಿಷಯದ ಬಗ್ಗೆಯೂ ಗಂಭೀರ ಚರ್ಚೆ ನಡೆದು ಒಂದು ನ್ಯಾಯಸಮ್ಮತವಾದ ತೀರ್ಮಾನಕ್ಕೆ ಬರುವಷ್ಟು ಪರಿಪಕ್ವತೆಯನ್ನು ನಾವು ಪಡೆದುಕೊಂಡಿದ್ದೇವೆ ಎಂದು ತೋರಿಸಿ ಇತರ ದೇಶಗಳಿಗೆ ಮಾದರಿಯಾಗಬೇಕಾಗಿದೆ. ■

ಈ ಜನ

ಟಿ. ಎಸ್. ರಾಜೇಂದ್ರಪ್ರಸಾದ್

ಬರೆದೆ ನಿನ್ನ ಚಿತ್ರ ಮೃದು
ಮರಳ ಮೇಲೆ
ಅಳಿಸಲಿಲ್ಲ ಅಲೆಗಳು
ಆದರೆ ಈ ಜನ
ತುಳಿದು ಹಾಕಿದರು!

ಪ್ರಾರ್ಥಿಸಿದೆ
ಗುಲಾಬಿ ಮಲ್ಲಿಗೆ ಜಾಜಿ ಸಂಪಿಗೆ
ಹೂ ಗುಚ್ಛಗಳನಿಟ್ಟು
ನಿನ್ನ 'ಸಮಾಧಿ' ಮೇಲೆ!
ಗಾಳಿ ದೂಡಲಿಲ್ಲ ಹೂವುಗಳನ್ನೆಲ್ಲಾ
ಆದರೆ ಈ ಜನ
ತುಳಿದು ಹಾಕಿದರು!

ಬರಬಹುದೆಂದು ನೀಲಮೇಘಶ್ಯಾಮ
ಗೋಕುಲಾಷ್ಟಮಿ ದಿನ
ಬಿಡಿಸಿದೆ ರಂಗೋಲಿ
ಅವನು ಬರುವ ಮುನ್ನವೇ
ಈ ಜನ ರಂಗೋಲಿಯನು ಅಳಿಸಿ ಹಾಕಿದರು!

ನಿನ್ನ ಹೂಕೆನ್ನೆಯ ತುಟಿ ಸ್ಪರ್ಶಿಸಲು
ಬೆಳ್ಮುಗಿಲು ನಾಚಿ ನೀರಾಯಿತು!
ಆದರೆ ಈ ಜನ ನಿನ್ನ
ಮೃದು ಮಧುರ ಕೋಮಲ
ಹೂಗೆನ್ನೆಗಳನ್ನು ಕತ್ತರಿಸಿ ಹಾಕಿದರು!

ಹುಲ್ಲುಗರಿಗಳ ಹೆಣೆದು
ಲಲ್ಲೆಗರೆಯಲು ನಮಗೊಂದು
ಗೂಡುಕಟ್ಟಿ
ಗೂಡಿನೊಳಗೆ ಕನಸ ಭಿತ್ತಿ
ಅರಗಿಳಿಗಳಂತೆ ಮಲಗಿರುವಾಗಲೇ
ಈ ಜನ ಗೂಡಿಗೇ
ಬೆಂಕಿಯಿಟ್ಟರು!
■

ಮರೀಚಿಕೆಯಾಗಿಯೇ ಉಳಿದ ಮಹಿಳಾ ಸಬಲೀಕರಣ

– ಅಬ್ದುಲ್ ಹಕೀಂ

ಪ್ರತಿಯೊಂದು ರಾಷ್ಟ್ರದ ಬಹುದೊಡ್ಡ ಆಸ್ತಿ ಎಂದರೆ ಸಹಕಾರಿ ರಂಗ. ಆರ್ಥಿಕಾಭಿವೃದ್ಧಿ ಕ್ಷೇತ್ರದಲ್ಲಿ ಸಹಕಾರಿ ರಂಗ ಎಂಬುದು ವಿಶೇಷ ವಿಷಯವಾಗಿದೆ. ಅಷ್ಟೇ ಅಲ್ಲ ವಿಶ್ಲೇಷಣೆಯ ಮುಖ್ಯ ವಸ್ತುವಾಗಿದೆ. ಇದರ ಪರಿಣಾಮವಾಗಿ ಇಂದು ಸಹಕಾರಿ ಸಂಘಗಳ ಕಾರ್ಯಕ್ರಮಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡಿವೆ. ಅದರಲ್ಲೂ ಮಹಿಳೆಯರ ಅಭಿವೃದ್ಧಿಯಲ್ಲಿ ಸಹಕಾರ ಸಂಘಗಳ ಪಾತ್ರ ಪ್ರಮುಖವಾಗಿದೆ. ಮಹಿಳಾ ಸಬಲೀಕರಣ ಎಂಬ ಪದವು ಇತ್ತೀಚೆಗೆ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಅಲ್ಲದೇ ಇದು ಹೆಚ್ಚು ಗಂಭೀರತೆಯನ್ನು ಮತ್ತು ಮಹತ್ವವನ್ನು ಪಡೆದಿದೆ. ಸಹಸ್ರಮಾನಗಳಿಂದಲೂ ತುಳಿತಕ್ಕೊಳಗಾಗಿರುವ ಮಹಿಳೆಯು ಕಳೆದ ಎರಡು ಶತಮಾನಗಳಿಂದೀಚೆಗೆ ತನ್ನ ಆಸ್ತಿತ್ವವನ್ನು ಗುರುತಿಸಿಕೊಳ್ಳಲು ಮತ್ತು ತನ್ನ ಸಾಮರ್ಥ್ಯವನ್ನು ರೂಪಿಸಿಕೊಳ್ಳಲು ಇನ್ನಿಲ್ಲದ ಪ್ರಯತ್ನವನ್ನು ನಡೆಸುತ್ತಿದ್ದಾಳೆ. ಇದರಲ್ಲಿ ಭಾಗಶಃ ಅವಳು

ಯಶಸ್ವಿಯಾಗಿದ್ದರೂ ಕೂಡ ಅವಳಿಗೆ ಕಾಲಾನುಕ್ರಮದಲ್ಲಿ ಹೊಸ ಹೊಸ ಸವಾಲುಗಳು ಎದುರಾಗುತ್ತಲೇಯಿವೆ.

ಒಂದು ಸಮಸ್ಯೆಯಿಂದ ಪಾರಾದರೆ ಇನ್ನೊಂದು ಸಮಸ್ಯೆ ಅವಳ ಪಾಲಿಗೆ ಆಗಲೇ ಸಿದ್ಧವಾಗಿ ನಿಂತಿರುತ್ತದೆ. ಈ ಹಿಂದೆ ಬಾಲ್ಯ ವಿವಾಹ. ವಿಧವಾ ವಿವಾಹ, ಸತಿ ಸಹಗಮನ ಪದ್ಧತಿ, ಶಿಕ್ಷಣಕ್ಕೆ ಅವಕಾಶವಿಲ್ಲದಿರುವುದು ಮುಂತಾದ ಸಮಸ್ಯೆಗಳಿಂದ ಬಳಲಿದರೆ ಈಗ ಅತಿಯಾದ ಒತ್ತಡ, ಲೈಂಗಿಕ ಕಿರುಕುಳ, ಹಾಗೂ ಆಧುನಿಕ ಜೀವನ ಪದ್ದತಿ ಮುಂತಾದ ಶೋಷಣೆಗಳಿಂದ ಬಳಲುತ್ತಿದ್ದಾಳೆ. ಆದರೂ ಮಹಿಳೆ ಈ ಕಾಲಘಟ್ಟದಲ್ಲಿ ಎಲ್ಲ ಕ್ಷೇತ್ರದಲ್ಲಿಯೂ ತನ್ನ ದಾಪುಗಾಲನ್ನು ಇಟ್ಟಿದ್ದಾಳೆ. ಭಾರತೀಯ ಮಹಿಳೆಯನ್ನು ಕತ್ತಲಿನಿಂದ ಬೆಳಕಿಗೆ ತರುವಲ್ಲಿ ಅನೇಕ ಸಮಾಜಸುಧಾರಕರು ಶ್ರಮಿಸಿದ್ದಾರೆ. ಶ್ರೀ ರಾಜಾರಾಮ ಮೋಹನರಾಯ, ಶ್ರೀ ಈಶ್ವರ ಚಂದ್ರ ವಿದ್ಯಾಸಾಗರ, ಶ್ರೀ ಆತ್ಮಾರಾಂ ಪಾಂಡುರಂಗ, ಶ್ರೀ ಜ್ಯೋತಿಬಾ ಫುಲೆ, ಶ್ರೀ ಅಂಬೇಡ್ಕರ್, ಶ್ರೀ ಮಹಾತ್ಮಾಗಾಂಧಿ ಮುಂತಾದವರು ಮಹಿಳೆಯರ ಸಾಮಾಜಿಕ ಸುಧಾರಣೆಗಾಗಿ ಶ್ರಮಿಸಿದ ಮಹಾಪುರುಷರೆನಿಸಿದ್ದಾರೆ. ಇವರೆಲ್ಲರ ಚಿಂತನೆಯ ಫಲವಾಗಿ ಮಹಿಳೆ ತನ್ನನ್ನು ತಾನು ಗುರುತಿಸಿಕೊಂಡು ನಂತರ ತನ್ನನ್ನು ಭದ್ರಪಡಿಸಿಕೊಳ್ಳಲು ಸ್ವತಃ ತಾನೇ ಮುನ್ನಡಿ ಇಟ್ಟಿದ್ದು ಈಗ ಇತಿಹಾಸ. ವೈಯಕ್ತಿಕ ಮಟ್ಟದಲ್ಲಿ ಸಶಕ್ತಳಾಗುವತ್ತ ಆರಂಭಗೊಂಡ ಮಹಿಳಾ ಸಬಲೀಕರಣವು ಸಾರ್ವತ್ರಿಕವಾಗಿ ಮಹಿಳೆಯರನ್ನು ತಲುಪುವಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಆರ್ಥಿಕ ಸ್ವಾತಂತ್ರ್ಯದ ಮಹತ್ವವನ್ನು ಅರಿತ ಮಹಿಳೆ ಮನೆಯಿಂದ ಹೊರಬಂದು ದುಡಿಯಲು ಆರಂಭ ಮಾಡಿದಳು. ಅದರಲ್ಲೂ ಗ್ರಾಮೀಣ ಮಹಿಳೆ, ದಲಿತ ಮಹಿಳೆ ಹಾಗೂ ತೀರಾ ಹಿಂದುಳಿದ ವರ್ಗಕ್ಕೆ ಸೇರಿದ ಮಹಿಳೆಯನ್ನು ಆರ್ಥಿಕವಾಗಿ ಸ್ವಾತಂತ್ರ್ಯದ ಪರಿಧಿಗೆ ತರಬೇಕೆಂದು ಸಮಾಜ ಸುಧಾರಕರಿಗೆ ಹೊಳೆದಿದ್ದರಿಂದ ಸಹಕಾರ ಸಂಘ–ಸಂಸ್ಥೆಗಳ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸುವ ಕೆಲಸಕ್ಕೆ ಚಾಲನೆ ದೊರೆಯಿತು. ಇಂತಹ ಸಬಲೀಕರಣದ ಮೂಲ ಉದ್ದೇಶ ಕೇವಲ ಮಹಿಳೆಯರ ಹಕ್ಕು ಬಾಧ್ಯತೆಗಳ ಕುರಿತು ಅವರಿಗೆ ಅರಿವು ಮೂಡಿಸುವದಷ್ಟೇ ಅಲ್ಲ, ಅವಳು ತನ್ನ ಸಹಭಾಗಿತ್ವವನ್ನು ಗುರುತಿಸಿಕೊಳ್ಳುವುದೇ ಆಗಿತ್ತು. ಹಾಗೆಯೇ ಮುಂದೆ ಆರ್ಥಿಕ ಸ್ವಾತಂತ್ರ್ಯದ ಕೂಗು ಹೆಚ್ಚಾಗಿ ಕೇಳಬರತೊಡಗಿತು. ಆಗ ಆಕೆಗೆ ಆರ್ಥಿಕ ಸ್ವಾವಲಂಬನೆಯನ್ನು ನೀಡಲು, ಅವಳನ್ನು ಸಬಲೀಕರಣಗೊಳಿಸಲು ಅನೇಕ ಯೋಜನೆಗಳು, ಕಾರ್ಯಕ್ರಮಗಳು ಆರಂಭವಾದವು. ಇದರ ಜವಾಬ್ದಾರಿಯನ್ನು ಸರ್ಕಾರ, ಸಮಾಜಸೇವಾ ಸಂಸ್ಥೆಗಳು ಮತ್ತು ಸಹಕಾರ ಸಂಘಗಳು ಹೊತ್ತುಕೊಂಡವು. ಮುಂದೆ ಸಹಕಾರ ಸಂಘಗಳು ಮಹಿಳಾ ಸಬಲೀಕರಣವನ್ನು ಮಾಡುವಲ್ಲಿ ಮಹತ್ವದ ಪಾತ್ರವನ್ನೇ ವಹಿಸಿದವು.

ಮಹಿಳಾ ಸಬಲೀಕರಣದ ಅರ್ಥ ಮತ್ತು ವ್ಯಾಖ್ಯೆ

ಸಬಲೀಕರಣ ಎಂಬ ಪದವು ಇಂಗ್ಲಿಷಿನ 'ಎಂಪವರ್‌ಮೆಂಟ್' ಎನ್ನುವ ಪದದ ತರ್ಜುಮೆಯಾಗಿದೆ. ಈ ಪದವನ್ನು ಫಾಲೋ ಪ್ರೇಯರ್ ಅವರು 1970ರ ದಶಕದಲ್ಲಿ ಮೊದಲ ಬಾರಿಗೆ ಉಪಯೋಗಿಸಿದರು. ಇದು ಲ್ಯಾಟೀನ್ ಅಮೆರಿಕಾದಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತು. ಇದರ ಅರ್ಥ ಅಧಿಕಾರ ನೀಡು, ಶಕ್ತಿ ಕೊಡು ಎನ್ನುವುದೇ ಆಗಿದೆ. ಸಬಲೀಕರಣ ಎಂಬ ಪದವನ್ನು ಈಗ ಮಹಿಳೆಯರ ಕುರಿತಾಗಿ ವ್ಯಾಪಕವಾಗಿ ಬಳಸಲಾಗುತ್ತದೆ. 1971ರಲ್ಲಿ ಭಾರತದಲ್ಲಿ ಮಹಿಳೆಯರ ಸ್ಥಿತಿ–ಗತಿಯ ಕುರಿತು ಸಮೀಕ್ಷೆ ನಡೆಸಲು ಸಮಿತಿಯನ್ನು ನೇಮಿಸಲಾಯಿತು. 1974ರಲ್ಲಿ ಇದರ ವರದಿಯನ್ನು ಸಲ್ಲಿಸಲಾಯಿತು. ಇದು 1980ರ ದಶಕದ ಮಹಿಳಾ ಸಬಲೀಕರಣದ ಹೋರಾಟಕ್ಕೆ ಹೆಚ್ಚು ಪುಷ್ಟಿ ನೀಡಿತು. ವಿಶ್ವಸಂಸ್ಥೆಯು 2001ನ್ನು ಮಹಿಳಾ ಸಬಲೀಕರಣ ವರ್ಷವೆಂದು ಘೋಷಿಸಿ ರಾಷ್ಟ್ರೀಯ ಮಹಿಳಾ ಸಬಲೀಕರಣ ನೀತಿಯನ್ನು ಪ್ರಕಟಿಸಿತು. ಮಹಿಳಾ ಸಬಲೀಕರಣದ ಕುರಿತು ವಿಶ್ವಸಂಸ್ಥೆ ತನ್ನ 2001ರ ವರದಿಯಲ್ಲಿ ಈ ರೀತಿಯಾಗಿ ಹೇಳಿದೆ. ಪುರುಷ ಮತ್ತು ಮಹಿಳೆಯರ ಮಧ್ಯೆ ಸಮಾನ ಅವಕಾಶಗಳು ಮತ್ತು ಆಸ್ತಿಹಕ್ಕುಗಳನ್ನು ಒದಗಿಸಿ ಕೊಡಲು ಶಾಸನಗಳನ್ನು ಜಾರಿಗೊಳಿಸುವುದು. ಅವರ ಆರ್ಥಿಕ ಸುಧಾರಣೆಗಾಗಿ ಸಂಪನ್ಮೂಲಗಳನ್ನು ಹಂಚುವುದು ಮತ್ತು ಪ್ರೋತ್ಸಾಹ ನೀಡುವುದು ಮತ್ತು ಸಂಪನ್ಮೂಲಗಳ ಮೇಲಿನ ಹಿಡಿತ ಮತ್ತು ರಾಜಕೀಯ ಶಕ್ತಿಯನ್ನು ಒದಗಿಸುವುದು.

ಶ್ರೀ ಲತಾ ಬಾಟ್ಲಿವಾಲಾ ಅವರು ಮಹಿಳಾ ಸಬಲೀಕರಣವನ್ನು "ಪ್ರಚಲಿತ ಅಧಿಕಾರ ಸಂಬಂಧಗಳನ್ನು ಹೋಗಲಾಡಿಸಿ, ಅಧಿಕಾರ ಮತ್ತು ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ಪ್ರಕ್ರಿಯೆಯೇ ಸಬಲೀಕರಣ" ಎಂದು ವ್ಯಾಖ್ಯಾನಿಸಿದ್ದಾರೆ.

ಕುಟುಂಬ ಮತ್ತು ಸಮಾಜದಲ್ಲಿನ ಲಿಂಗ ಸಂಬಂಧಗಳನ್ನು ಪುನರ್ ರಚಿಸುವುದು ಮತ್ತು ಸಮಾಜ, ಮಹಿಳೆಯನ್ನು ಪುರುಷರಿಗೆ ಸಮಾನವಾಗಿ ಗುರುತಿಸುವುದು ಮಹಿಳಾ ಸಬಲೀಕರಣ' ಎಂದು ಎಂ. ಹ್ಯಾಪಿ ಹಾಲೆ ವ್ಯಾಖ್ಯಾನಿಸಿದ್ದಾರೆ

"ಪುರುಷ ಪ್ರಾಧಾನ್ಯ ಮತ್ತು ಆಧಿಪತ್ಯವನ್ನು ಪ್ರಶ್ನಿಸುವ ಹಾಗೂ ಅಧಿಕಾರದ ಪುನರ್ ಹಂಚಿಕೆಯೇ ಮಹಿಳಾ ಸಬಲೀಕರಣ' ಇದು ಚಂದ್ರಾರವರ ವ್ಯಾಖ್ಯಾನವಾಗಿದೆ.

ಲೈಲಾ ಕಬೀರ ವ್ಯಾಖ್ಯಾನಿಸುವಂತೆ, ಮಹಿಳೆಯರು ತಮ್ಮ ಸ್ವಾವಲಂಬನೆಯನ್ನು ಹೆಚ್ಚಿಸಿಕೊಂಡು ಸ್ವಾತಂತ್ರ್ಯದ ಹಕ್ಕನ್ನು ಪ್ರತಿಪಾದಿಸುವ ಆಯ್ಕೆ ಮಾಡುವ, ಸಂಪನ್ಮೂಲಗಳ ಮೇಲೆ ನಿಯಂತ್ರಣ ಹೊಂದುವ ಮತ್ತು ಪರಾಧೀನತೆಯನ್ನು ಪ್ರಶ್ನಿಸಿ ಅದನ್ನು ಹೋಗಲಾಡಿಸುವ ಸಾಮರ್ಥ್ಯವನ್ನು ಪಡೆಯುವ ಪ್ರಕ್ರಿಯೆಯೇ ಮಹಿಳಾ ಸಬಲೀಕರಣ.

ಬಹುಸಂಖ್ಯೆ ಮಹಿಳೆಯರಿಗೆ ಸಂವಿಧಾನದ ಪ್ರಕಾರ ತಮಗಿರುವ ಹಕ್ಕುಗಳ ಅರಿವಿಲ್ಲ, ಕೇಂದ್ರ ಸರಕಾರ, ರಾಜ್ಯ ಸರಕಾರಗಳೆರಡೂ ಹಲವಾರು ಕಾರ್ಯಕ್ರಮಗಳನ್ನು ಪರಿಚಯಿಸಿವೆ, ಮಹಿಳಾ ಕೋಶವನ್ನು ರೂಪಿಸಿ ಸಾಲವನ್ನು ಕೊಡಮಾಡುವುದು, ಮಹಿಳಾ ಸಶಕ್ತೀಕರಣಕ್ಕಾಗಿ ಒಂದು ಕಾರ್ಯನೀತಿಯನ್ನೆ ರೂಪಿಸಿದೆ. ಅಲ್ಲದೆ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿದೆ. ರಾಜ್ಯ ಸರಕಾರವು, ಕರ್ನಾಟಕ ರಾಜ್ಯ ಮಹಿಳಾ ಆಯೋಗವನ್ನು ಜಾರಿಗೆ ತಂದಿದೆ. ಕಷ್ಟದಲ್ಲಿರುವ ಮಹಿಳೆಯರಿಗೆ ಉಚಿತ ಕಾನೂನು ನೆರವು ಸೌಲಭ್ಯ ದೊರಕಿಸಿದೆ. ರಾಜ್ಯದಲ್ಲಿ ಒಂದು ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಿ 20 ಲಕ್ಷ ಮಹಿಳೆಯರನ್ನು ಸಂಘಟಿಸಿದೆ. ದೌರ್ಜನ್ಯ ಮತ್ತು ಅತ್ಯಾಚಾರಕ್ಕೆ ಒಳಗಾದ ಸ್ತ್ರೀಯರಿಗೆ ಎಲ್ಲ ರೀತಿಯಲ್ಲಿ ನೆರವಾಗಲು ಸಾಂತ್ವನ ಯೋಜನೆ ರೂಪಗೊಂಡಿದೆ. ಭಾಗ್ಯಲಕ್ಷ್ಮೀ ಯೋಜನೆ, ಹೆಣ್ಣುಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನವನ್ನು ಕೊಡಲಾಗುತ್ತಿದೆ. ವೃತ್ತಿ ತರಬೇತಿ ಪಡೆಯುವ ಮಹಿಳೆಯರಿಗೆ ಮತ್ತು ಮಹಿಳಾ ಕಾನೂನು ಪದವೀಧರರಿಗೆ ಆರ್ಥಿಕ ಸಹಾಯ ನೀಡಲಾಗುತ್ತಿದೆ. ರಾಜ್ಯದಲ್ಲಿ ಹೆಣ್ಣುಮಕ್ಕಳಿಗಾಗಿ ವಸತಿನಿಲಯಗಳನ್ನು ಪ್ರಾರಂಭಿಸಲಾಗಿದೆ. ಆರ್ಥಿಕ ಸಂಕಷ್ಟದಲ್ಲಿರುವ ವಿಧವೆಯರಿಗೆ ನೆರವಾಗಲು ಹಲವು ಯೋಜನೆಗಳಿವೆ. ಸ್ತ್ರೀ-ಶಕ್ತಿ ಮೊದಲಾದ ಯೋಜನೆಯಗಳು ಜಾರಿಗೆ ಬಂದಿವೆ.

ಮಾಧ್ಯಮಗಳು ಮಹಿಳಾಪರ ಯೋಜನೆಗಳ ಬಗ್ಗೆ ತಿಳಿವಳಿಕೆ ನೀಡಲು ವ್ಯಾಪಕ ಪ್ರಚಾರ ಕೈಗೊಂಡಿವೆ. ಮುಖ್ಯವಾಗಿ ದೂರದರ್ಶನದ ಮೂಲಕ ರಾಜ್ಯದ, ರಾಷ್ಟ್ರದ ಮೂಲೆಗಳಿಗೂ ತಿಳಿವಳಿಕೆಯನ್ನು ತಲುಪಿಸಿ ಸಮಾಜದಲ್ಲಿ ಹೊಸಪ್ರಜ್ಞೆಯನ್ನು ಸ್ತ್ರೀಪರ ನಿರ್ಧಾರವನ್ನು ಬಲಗೊಳಿಸುತ್ತಿದೆ. ಮಹಿಳೆಯರು ರಾಷ್ಟ್ರದ ಆಸ್ತಿ, ಮಹಿಳೆಯರ ಸ್ಥಿತಿಗತಿ ಉತ್ತಮವಾಗದೆ ದೇಶದ ಸ್ಥಿತಿ ಉತ್ತಮವಾಗದು ಎನ್ನುವುದನ್ನು ಎಲ್ಲರೂ ಅರಿತುಕೊಳ್ಳಬೇಕು. ಈ ನಿಟ್ಟಿನಲ್ಲಿ ಮಹಿಳೆಯರು ಸ್ವಯಂಪ್ರೇರಣೆಯಿಂದ ತಮ್ಮ ಕರ್ತವ್ಯ ಅರಿತುಕೊಂಡು ಮುಂದೆ ಬರುವುದು ತೀರಾ ಅವಶ್ಯಕ. ಮಹಿಳಾ ವರ್ಗದ ಸಶಕ್ತೀಕರಣಕ್ಕಾಗಿ ಈ ಐದು ಮಹತ್ವದ ಅಂಶಗಳನ್ನು ಪ್ರತಿಯೊಬ್ಬ ಮಹಿಳೆಯು ಅನುಸರಿಸಬೇಕು ಎಂದು ಮಾಜಿ ರಾಷ್ಟ್ರಪತಿಗಳಾಗಿದ್ದ ಡಾ.ಎ.ಪಿ.ಜೆ. ಅಬ್ದುಲ್ ಕಲಾಮ್ ಅಭಿಪ್ರಾಯ ಪಟ್ಟಿರುತ್ತಾರೆ.

1. ಜ್ಞಾನ ಸಂಪಾದನೆಯಲ್ಲಿ ತಮ್ಮ ಹೆಚ್ಚಿನ ಸಮಯವನ್ನು ವ್ಯಯಮಾಡಬೇಕು. ರಾಷ್ಟ್ರದ ಆಗು ಹೋಗುಗಳ ಬಗ್ಗೆ ಸದಾ ಪ್ರಜ್ಞೆ ಇರಬೇಕು. ಅಕ್ಷರಕ್ರಾಂತಿಯಿಂದ ಇಡೀ ದೇಶದ ಚಿತ್ರಣವನ್ನು ನಾವು ಬದಲಾಯಿಸಬಹುದು.
2. ನಿರಂತರವಾಗಿ ಕಲಿಯುತ್ತಿರಬೇಕು, ಓದುವ ಹವ್ಯಾಸವನ್ನು ಪ್ರತಿಯೊಬ್ಬ ಮಹಿಳೆಯು ತನ್ನ ದೈನಂದಿನ ಕಾರ್ಯಗಳಲ್ಲಿ ಕಡ್ಡಾಯವೆಂದು ಪರಿಗಣಿಸಿ ರೂಢಿಸಿಕೊಳ್ಳಬೇಕು. ಸರಕಾರವು ಈಗಾಗಲೇ ಗಾಮೀಣ ಹಾಗೂ ಸಂಚಾರಿ ಗ್ರಂಥಾಲಯಗಳನ್ನು ಹಳ್ಳಿಹಳ್ಳಿಗೂ ವಿಸ್ತರಿಸುತ್ತಿದ್ದು ಅದರ ಸಂಪೂರ್ಣ ಪ್ರಯೋಜನ ಪಡೆಯಬೇಕು, ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ ಶೇಕಡಾ 23ರಷ್ಟು ಜನ ಪುಸ್ತಕವನ್ನೇ ಕೊಳ್ಳುವುದಿಲ್ಲ. ಶೇಕಡಾ 18ರಷ್ಟು ಜನ ಗ್ರಂಥಾಲಯಕ್ಕೆ ಬರುವುದಿಲ್ಲ.
3. ಸೃಜಶೀಲತೆಯನ್ನು ಮೈಗೂಡಿಸಿಕೊಳ್ಳಬೇಕು. ಸದಾ ಹೊಸ ಹೊಸ ವಿಚಾರಗಳ ಆವಿಷ್ಕಾರಗೊಳಿಸಬೇಕು, ಹೊಸ ಕಲಿಕಾ ವಿಧಾನಗಳನ್ನು ರೂಢಿಸಿಕೊಳ್ಳಬೇಕು, ಒಂದಲ್ಲಾ ಒಂದು ರಚನಾತ್ಮಕ ಕಾರ್ಯದಲ್ಲಿ ತಮ್ಮ ಮನಸ್ಸನ್ನು ತೊಡಗಿಸಿಕೊಂಡು ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳಬೇಕು.
4. ಆಧುನಿಕ ಮಾಹಿತಿ ತಂತ್ರಜ್ಞಾನದ ಸಂಪೂರ್ಣ ತಿಳಿವಳಿಕೆ ಇರಬೇಕು, ಕಂಪ್ಯೂಟರ್ ಕಲಿಕೆಯನ್ನು ಕಡ್ಡಾಯವಾಗಿ ಹೊಂದಬೇಕು.

ಭಾರತ ಸರ್ಕಾರ 1997ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಿತು. ಇದು ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನು ನೀಡುವ ಪ್ರಯತ್ನ ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ ನಡೆಯಿತು. 2001ನೇ ವರ್ಷವನ್ನು ಮಹಿಳಾ ಸಬಲೀಕರಣ ವರ್ಷ ಎಂದು ಘೋಷಿಸಲಾಗಿತ್ತು. ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ದೈಹಿಕವಾಗಿ ಸಬಲರನ್ನಾಗಿಸುವುದೇ ಈ ಸಬಲೀಕರಣ ವರ್ಷದ ಪ್ರಮುಖ ಉದ್ದೇಶವಾಗಿತ್ತು. ಇದೀಗ ಈ ಕಾರ್ಯಕ್ರಮಕ್ಕೆ ಹನ್ನೊಂದು ವರ್ಷ ತುಂಬಿ ನಡೆಯುತ್ತಿದ್ದರೂ ಸಹ ಮಹಿಳಾ ಸಬಲೀಕರಣ ಭಾರತದಲ್ಲಿ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ.

5. ಸಂವಹನ ಹಾಗೂ ಸಂಪರ್ಕ ಜ್ಞಾನದ ಸಂಪೂರ್ಣ ಕಲೆಯನ್ನು ಜೀವನದ ಅವಿಭಾಜ್ಯ ಅಂಗವೆಂದು ಶಾರೀರಿಕ ಭಾಷೆಯ ಕಲೆಯನ್ನು ಅರಿತುಕೊಳ್ಳಬೇಕು, ಇದರಿಂದ ಸಮಾಜದ ಎಲ್ಲ ವರ್ಗದ ಜನರೊಡನೆ ಬೆರೆತು ಸುಲಭವಾಗಿ ಅರಿತುಕೊಳ್ಳಬಹುದು.

ಮಹಿಳಾ ಸಮಾನತೆಯನ್ನು ಸ್ವಾತಂತ್ರ್ಯಪೂರ್ವದಲ್ಲಿ ಮನಗಂಡಿದ್ದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಅವರು 1929ರಲ್ಲೇ ತಮ್ಮ 'ಯಂಗ್ ಇಂಡಿಯಾ' ದಲ್ಲಿ ಮಹಿಳಾ ಸಮಾನತೆಗೆ ಪ್ರಾಧಾನ್ಯತೆ ನೀಡಿ ಬರೆದಿದ್ದರು, ಈ ನಿಟ್ಟಿನಲ್ಲಿ ಪಂಡಿತ ಜವಾಹರಲಾಲ ನೆಹರೂ ಕೂಡಾ ಹೆಚ್ಚು ಪ್ರೋತ್ಸಾಹ ನೀಡಿದರು. ಅವರು ರಾಷ್ಟ್ರೀಯ ಯೋಜನೆಯ ಅಧ್ಯಕ್ಷರಾಗಿ ಆರ್ಥಿಕ ಯೋಜನೆಗಳಲ್ಲಿ ಮಹಿಳೆಯರ ಪಾತ್ರವನ್ನು ಗುರುತಿಸಿದ್ದರು. ಅವರು ಅಧ್ಯಕ್ಷರಾಗಿದ್ದ ಯೋಜನಾ ಸಮಿತಿಗೆ ವಿವಿಧ ದೃಷ್ಟಿಗಳಿಂದ, ಅಂದರೆ ಸಾಮಾಜಿಕ, ಆರ್ಥಿಕ, ನ್ಯಾಯಿಕ ಮತ್ತು ರಾಜಕೀಯ ಪಾತ್ರ ವಹಿಸಬೇಕೆಂದು ಆಶಿಸಿದ್ದರು, ಗಾಂಧೀಜಿಯವರ ನಿರೀಕ್ಷೆಯಂತೆ ಲಿಂಗ ಸಮಾನತೆಯನ್ನು ಮೂಲಭೂತ ಹಕ್ಕೆಂದು 1931ರ ಕಾಂಗ್ರೆಸ್‌ನ ಕರಾಚಿ ಅಧಿವೇಶನದಲ್ಲಿ ತೀರ್ಮಾನಿಸಿದರು.

ಸ್ವಾತಂತ್ರ್ಯ ನಂತರ 1950ರಲ್ಲಿ ಗಣರಾಜ್ಯ ಅಸ್ತಿತ್ವಕ್ಕೆ ಬಂದ ಮೇಲೆ ನಮ್ಮ ನಾಡಿನ ಅತ್ಯುನ್ನತ ಕಾನೂನು ಅಗಿರುವ ಸಂವಿಧಾನ ಗಂಡು ಮತ್ತು ಹೆಣ್ಣಿಗೆ ಸಮಾನ ಸ್ಥಾನಮಾನ ಕಲ್ಪಿಸುವ ಸಲುವಾಗಿ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿತು. ಪ್ರಜಾಪ್ರಭುತ್ವದಲ್ಲಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಜಾಗೃತಿಯನ್ನುಂಟುಮಾಡಿತು. ಇದೇ ಸಮಯಕ್ಕೆ ವಿಶ್ವಸಂಸ್ಥೆಯು ಸಹ ತನ್ನ ಪ್ರಣಾಳಿಕೆಯಲ್ಲಿ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯವನ್ನು ಯಾವುದೇ ಲಿಂಗ ಭೇದವಿಲ್ಲದೇ ನೀಡಬೇಕೆಂದು ಘೋಷಿಸಿತು. ವಿಶ್ವಸಂಸ್ಥೆಯು ತನ್ನ ಪೂರ್ವಪೀಠಿಕೆಯಲ್ಲಿ ಸ್ತ್ರೀ ಮತ್ತು ಪುರುಷರ ಸಮಾನ ಹಕ್ಕುಗಳ ಬಗ್ಗೆ ಸ್ಪಷ್ಟೀಕರಣ ನೀಡಿತು.

ವಿಶ್ವಸಂಸ್ಥೆಯು 1975ರ ವರ್ಷವನ್ನು ಅಂತರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ, ಮತ್ತು 1980ರ ವರ್ಷವನ್ನು ಮಹಿಳೆಯರ ಅಭಿವೃದ್ಧಿ ವರ್ಷವನ್ನಾಗಿ ಮತ್ತು 1975-1985ರ ಅವಧಿಯನ್ನು ಮಹಿಳೆಯರ ಅಭಿವೃದ್ಧಿಯ ದಶಕವೆಂದು ಘೋಷಿಸಿತು. ಈ ಅವಧಿಯಲ್ಲಿ ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಮಹಿಳೆಯರ ಸಮಸ್ಯೆಗಳ ಬಗ್ಗೆ ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಮಹಿಳೆಯರ ಕಾರ್ಯಚಟುವಟಿಕೆಗಳ ಕಡೆ ವಿಶೇಷ ಗಮನ ಕೊಡಲಾಯಿತು. ಭಾರತ ಸರ್ಕಾರ 1977ರಲ್ಲಿ ಮಹಿಳೆಯರ ಆತ್ಮಗೌರವವನ್ನು ರಕ್ಷಿಸಲು ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಅಧ್ಯಯನದ ವರದಿಯ ಆಧಾರದ ಮೇಲೆ 1997ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ರಚಿಸಿತು. ಇದು ಮಹಿಳೆಯರಿಗೆ ರಾಜಕೀಯ ಅಧಿಕಾರವನ್ನು ನೀಡುವ ಪ್ರಯತ್ನ ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ ನಡೆಯಿತು. 2001ನೇ ವರ್ಷವನ್ನು ಮಹಿಳಾ ಸಬಲೀಕರಣ ವರ್ಷ ಎಂದು ಘೋಷಿಸಲಾಗಿತ್ತು. ಮಹಿಳೆಯರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಮತ್ತು ದೈಹಿಕವಾಗಿ ಸಬಲರನ್ನಾಗಿಸುವುದೇ ಈ ಸಬಲೀಕರಣ ವರ್ಷದ ಪ್ರಮುಖ ಉದ್ದೇಶವಾಗಿತ್ತು. ಇದೀಗ ಈ ಕಾರ್ಯಕ್ರಮಕ್ಕೆ ಹನ್ನೊಂದು ವರ್ಷ ತುಂಬಿ ನಡೆಯುತ್ತಿದ್ದರೂ ಸಹ ಮಹಿಳಾ ಸಬಲೀಕರಣ ಭಾರತದಲ್ಲಿ ಇನ್ನೂ ಮರೀಚಿಕೆಯಾಗಿಯೇ ಉಳಿದಿದೆ. ■

ಸ್ವಾತಂತ್ರ್ಯದ ಹೆಸರಿನಲ್ಲಿ ಸ್ವೇಚ್ಛಾಚಾರ

ಸುರೇಶ್ ಭಟ್ ಬಾಕ್ರಬೈಲ್

ಇಂದು ಸ್ವಾತಂತ್ರ್ಯದ ಹೆಸರಿನಲ್ಲಿ ಸಾವಿರಾರು ಬಗೆಯ ಶೋಷಣೆಗಳನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. ಯಾಕೆಂದರೆ ಸ್ವಾತಂತ್ರ್ಯ ಎಂಬ ಪದವನ್ನು ಉಚ್ಚರಿಸಿದಾಕ್ಷಣ ಜನ ಭಾವುಕರಾಗುತ್ತಾರೆ; ಸ್ವಾತಂತ್ರ್ಯ ಮಂತ್ರವನ್ನು ಪಠಿಸುತ್ತಿದ್ದರೆ ಸಾಕು ಯಾವುದಕ್ಕೂ ಆಕ್ಷೇಪ ಎತ್ತುವವರಿಲ್ಲ. ಬಲಪಂಥೀಯ ಮಾಧ್ಯಮಗಳು, ಅಂತರ್ಜಾಲ ತಾಣಗಳು, ಚಿಂತನಾ ಚಾವಡಿಗಳು ಹಾಗೂ ಸರಕಾರಗಳು ಇಂದು ಶೇಕಡಾ 1ರಷ್ಟಿರುವ ಜನರಿಂದ ಬಡವರ ಬದುಕಿನ ಮೇಲಾಗುತ್ತಿರುವ ಪ್ರತಿಯೊಂದು ಆಕ್ರಮಣ, ಪ್ರತಿಯೊಂದು ಹಸ್ತಕ್ಷೇಪ ಮತ್ತು ಪ್ರತಿಯೊಂದು ರೀತಿಯ ಅಸಮಾನತೆಯ ಹುಟ್ಟನ್ನು ಕ್ಷಮಿಸುತ್ತಿರುವುದು ಈ ಸ್ವಾತಂತ್ರ್ಯ ಎಂಬ ಶಬ್ದವನ್ನು ಬಳಸಿಕೊಂಡೇ.

ಇಚ್ಛಾ ಸ್ವಾತಂತ್ರ್ಯವಾದ

ವ್ಯಕ್ತಿಗೆ ತನ್ನ ಆಲೋಚನೆ ಇತ್ಯಾದಿಗಳನ್ನು ತನಗಿಷ್ಟ ಬಂದಂತೆ ಹೇಳುವ ಸ್ವಾತಂತ್ರ್ಯವಿರಬೇಕು ಎನ್ನುತ್ತದೆ ಇಚ್ಛಾ ಸ್ವಾತಂತ್ರ್ಯವಾದ. ಇಚ್ಛಾ ಸ್ವಾತಂತ್ರ್ಯವಾದ ಒಂದು ಉದಾತ್ತ ಒಳಪ್ರೇರಣೆ, ಇಚ್ಛಾ ಸ್ವಾತಂತ್ರ್ಯ ವಾದಿಗಳು ಸ್ವಯಂನಿರ್ಧಾರದ ಅಧಿಕಾರದಲ್ಲಿ ನಂಬಿಕೆಯುಳ್ಳವರೆಂದು ಪರಿಗಣಿಸಲಾಗುತ್ತಿದ್ದ ಕಾಲವೊಂದಿತ್ತು. ಆದರೆ ಇದೇ ಇಚ್ಛಾ ಸ್ವಾತಂತ್ರ್ಯವಾದ ಇಂದು ಅನ್ಯಾಯಕ್ಕೆ ಮತ್ತೊಂದು ಹೆಸರಾಗಿ ಪರಿಣಮಿಸಿದೆ. ಉದಾಹರಣೆಗಳು ಹಲವಾರಿವೆ.

- ಧನಾಢ್ಯರಿಗೆ ತೆರಿಗೆ ಪಾವತಿಯಲ್ಲಿ ರಿಯಾಯಿತಿ.
- ಫಲವತ್ತಾದ ಕೃಷಿಭೂಮಿಗಳನ್ನು ಬಲವಂತವಾಗಿ ಸ್ವಾಧೀನಪಡಿಸಿಕೊಳ್ಳುತ್ತಿರುವುದು.
- ಕಾರ್ಪೊರೇಟುಗಳಿಗೆ ರಿಯಾಯಿತಿ ದರದಲ್ಲಿ ಭೂಮಿ, ನೀರು, ವಿದ್ಯುತ್ತು ಇತ್ಯಾದಿ ಸೌಕರ್ಯಗಳಲ್ಲದೆ ತೆರಿಗೆ ವಿನಾಯಿತಿ ನೀಡಿ ತೆರಿಗೆ ಬಾಕಿಯನ್ನೂ ಬಿಟ್ಟುಬಿಡುತ್ತಿರುವುದು.
- ಕಾರ್ಪೊರೇಟುಗಳಿಂದ ಇಡೀ ಭೂಮಂಡಲದ ಪರಿಸರ ನಾಶ.
- ಕಾರ್ಮಿಕರ ಕನಿಷ್ಠ ಕೂಲಿಯನ್ನು ಇನ್ನಷ್ಟು ಇಳಿಸಿ ಕೆಲಸದ ಅವಧಿಯನ್ನು ಇನ್ನಷ್ಟು ಹೆಚ್ಚಿಸಲು ಕಂಪೆನಿಗಳ ವಶೀಲಿಬಾಜಿ.
- ಸಾರ್ವಜನಿಕ ಆರೋಗ್ಯ ಯೋಜನೆ ಮತ್ತಿತರ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಖಾಸಗಿ ಸಂಸ್ಥೆಗಳಿಂದ ಅಡ್ಡಗಾಲು.
- ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಕೈಬಿಟ್ಟಿರುವುದು.
- ಸಾರ್ವಜನಿಕ ವಲಯದಿಂದ ಹೂಡಿಕೆ ಹಿಂತೆಗೆತ.
- ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ಹೂಡಿಕೆಯ ಪ್ರವೇಶಕ್ಕೆ ಬೆಂಬಲ.
- ಐರೋಪ್ಯ ಖಾಸಗಿ ಬ್ಯಾಂಕುಗಳಿಗೆ ಇಡೀ ಆರ್ಥಿಕತೆಯನ್ನೇ ಹಾಳುಗೆಡವಲು ಅನುವು ಮಾಡಿಕೊಟ್ಟಿರುವುದು.

ಇತ್ಯಾದಿ, ಇತ್ಯಾದಿ...... ಇವೆಲ್ಲವೂ ನಡೆಯುತ್ತಿರುವುದು ಇದೇ ಇಚ್ಛಾಸ್ವಾತಂತ್ರ್ಯದ ಹೆಸರಿನಲ್ಲಿ. ಇದು ಬಲಪಂಥೀಯ ಇಚ್ಛಾ ಸ್ವಾತಂತ್ರ್ಯವಾದ. ಇದರ ವೈಶಿಷ್ಟ್ಯ ಏನೆಂದರೆ ಇಲ್ಲಿ ಸ್ವಾತಂತ್ರ್ಯ ಮಂತ್ರೋಚ್ಚಾರಣೆಯ ಜೊತೆಜೊತೆಯಲ್ಲೇ ನಡೆಯುವ ದಬ್ಬಾಳಿಕೆಯಲ್ಲಿ ಬಲಾಢ್ಯರು ದುರ್ಬಲರ ಮತ್ತು ಶ್ರೀಮಂತರು ಬಡವರ ಶೋಷಣೆಯಲ್ಲಿ ತೊಡಗಿರುತ್ತಾರೆ.

ಕುರುಕ್ಷೇತ್ರ ಯುದ್ಧ

ಕಾರ್ಯನಿರ್ವಹಣೆಯ ಅಧಿಕಾರಕ್ಕೆ ನ್ಯಾಯಯುತ ಕಟ್ಟುಪಾಡುಗಳು ಇರಕೂಡದೆನ್ನುವುದು ಬಲಪಂಥೀಯ ಇಚ್ಛಾ ಸ್ವಾತಂತ್ರ್ಯವಾದಿಗಳ ನಿಲುವು. ಅಂತಹ ಅನಿರ್ಬಂಧಿತ ಅಧಿಕಾರದಿಂದ ಇತರರ ಬದುಕಿನ ಮೇಲಾಗುವ ಪರಿಣಾಮಗಳ ಗೊಡವೆ ಅವರಿಗಿಲ್ಲ. ನ್ಯಾಯಯುತ ಕಟ್ಟುಪಾಡುಗಳ ಮಾತೇ ಅವರಿಗೆ ಅಪಥ್ಯ. ಪ್ರಸಕ್ತ ಕಾಲಘಟ್ಟದಲ್ಲಿ ನಡೆಯುತ್ತಿರುವ ಕುರುಕ್ಷೇತ್ರ ಯುದ್ಧದಲ್ಲಿ ಸ್ವೇಚ್ಛಾಚಾರಿ ನವಉದಾರ ವಾದಿಗಳು, ಕೋಟ್ಯಧಿಪತಿಗಳು ಮತ್ತು ಅವರು ಬೆಂಬಲಿಸುತ್ತಿರುವ ಕಾರ್ಪೊರೇಟುಗಳು ಒಂದು ಕಡೆಯಾದರೆ ಇನ್ನೊಂದು ಕಡೆಯಲ್ಲಿರುವವರು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿರುವವರು ಮತ್ತು ಪರಿಸರವಾದಿಗಳು. ಬಲಪಂಥೀಯರ ಈ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ವಿರೋಧಿಸುವಲ್ಲಿ ನಾವು ಹಿಂದುಳಿದಿರುವುದಕ್ಕೆ ಒಂದು ಕಾರಣವೇನೆಂದರೆ ಇದನ್ನು ಧನಾತ್ಮಕ ಮತ್ತು ಋಣಾತ್ಮಕ ಸ್ವಾತಂತ್ರ್ಯಗಳ ಸಂಘರ್ಷವೆಂದು ಕರೆಯಲಾಗಿದೆ. ವಾಸ್ತವವಾಗಿ ಈಗ ನಡೆಯುತ್ತಿರುವ ಸಂಘರ್ಷ ಧನಾತ್ಮಕ ಮತ್ತು ಋಣಾತ್ಮಕ ಸ್ವಾತಂತ್ರ್ಯಗಳ ನಡುವಿನದಲ್ಲ. ಅದು ಎರಡು ಋಣಾತ್ಮಕ ಸ್ವಾತಂತ್ರ್ಯಗಳ ಸಂಘರ್ಷ. ಇದು ಹೇಗೆಂದು ತಿಳಿಯೋಣ.

ಧನಾತ್ಮಕ ಮತ್ತು ಋಣಾತ್ಮಕ ಸ್ವಾತಂತ್ರ್ಯ

ಇಸಾಯ ಬರ್ಲಿನ್ ಎಂಬಾತ 1958ರಲ್ಲಿ ಬರೆದ 'Two Concepts of Liberty' ಎಂಬ ಅದ್ಭುತ ಪ್ರಬಂಧವೊಂದು ಧನಾತ್ಮಕ ಮತ್ತು ಋಣಾತ್ಮಕ ಸ್ವಾತಂತ್ರ್ಯಗಳ ನಡುವಿನ ವ್ಯತ್ಯಾಸಗಳನ್ನು ಬಹಳ ಸುಂದರವಾಗಿ ನಿರೂಪಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಋಣಾತ್ಮಕ ಸ್ವಾತಂತ್ರ್ಯ ಅಂದರೆ ಸ್ವತಂತ್ರವಾಗಿ ಇರುವ ಅಥವಾ ಇತರರ ಹಸ್ತಕ್ಷೇಪವಿಲ್ಲದೆ ವ್ಯವಹರಿಸುವ ಸ್ವಾತಂತ್ರ್ಯ. ಧನಾತ್ಮಕ ಸ್ವಾತಂತ್ರ್ಯದ ಅರ್ಥ ನಿರ್ಬಂಧಗಳಿಂದ ಬಿಡುಗಡೆ; ಸಾಮಾಜಿಕ ಅಥವಾ ಮಾನಸಿಕ ನಿರ್ಬಂಧಗಳನ್ನು ಮೀರಿದಾಗ ಲಭಿಸುವ ಶಕ್ತಿ. ನಿರಂಕುಶ ಪ್ರಭುತ್ವಗಳು ಧನಾತ್ಮಕ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿವೆ. ನಿರ್ದಿಷ್ಟವಾಗಿ ಅಂದಿನ ಸೋವಿಯತ್ ಒಕ್ಕೂಟ ತನ್ನ ಕ್ರೂರ ಆಡಳಿತವನ್ನು ಜನರ ಸಬಲೀಕರಣವೆಂದು ಬಿಂಬಿಸಿ, ಜನರು ಏಕಮಾತ್ರವಾದ ಸಂಕಲ್ಪಕ್ಕೆ ತಮ್ಮನ್ನು ಅಧೀನರಾಗಿಸಿಕೊಂಡರೆ ಇನ್ನೂ ಮೇಲ್ಮಟ್ಟದ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವೆಂದು ಹೇಳಿತ್ತು.

ಸ್ವಾತಂತ್ರ್ಯಕ್ಕೆ ಅಂಕುಶವಿರಬೇಕಾಗುತ್ತದೆ

ಬರ್ಲಿನ್ ಹೇಳಿರುವ ಪ್ರಕಾರ "ಇತರರ ಬದುಕುಗಳಿಗೆ ಅಡಚಣೆ ಉಂಟುಮಾಡದಂತಹ, ಸಂಪೂರ್ಣವಾಗಿ ಖಾಸಗಿಯಾದ ಚಟುವಟಿಕೆ ಎನ್ನುವುದು

ಯಾರಿಂದಲೂ ಯಾವತ್ತಿಗೂ ಸಾಧ್ಯವಿಲ್ಲ. ಆದುದರಿಂದಲೇ ಕೆಲವರ ಸ್ವಾತಂತ್ರ್ಯವನ್ನು ಕೆಲವೊಂದು ವೇಳೆ ನಿಗ್ರಹಿಸುತ ಮೂಲಕ ಇತರರ ಸ್ವಾತಂತ್ರ್ಯವನ್ನು ಖಾತರಿಪಡಿಸಬೇಕಾಗುತ್ತದೆ." ಕೊಡಲಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತರೆ ಮರದ ಸರ್ವನಾಶವಾಗುತ್ತದೆ. ಮುಷ್ಠಿಗೆ ಸಂಪೂರ್ಣ ಸ್ವಾತಂತ್ರ್ಯವಿತ್ತರೆ ಕಪಾಳಕ್ಕೆ ಏಟು ಶತಸ್ಸಿದ್ಧ. ನಿಮ್ಮ ಮುಷ್ಠಿಯನ್ನು ಬೀಸಲು ನಿಮಗಿರುವ ಸ್ವಾತಂತ್ರ್ಯ ನನ್ನ ಕಪಾಳಕ್ಕೆ ಸಮೀಪದಲ್ಲಿ ಕೊನೆಗೊಳ್ಳುತ್ತದೆ. ನಿಮ್ಮಿಂದ ಕಪಾಳಮೋಕ್ಷಕ್ಕೊಳಗಾಗದೆ ಬದುಕುವುದೇ ನನ್ನ ಋಣಾತ್ಮಕ ಸ್ವಾತಂತ್ರ್ಯ. ಪರಿಸರವಾದಿಗಳು ಮತ್ತು ಸಾಮಾಜಿಕ ನ್ಯಾಯ ಹೋರಾಟಗಾರರು ಹೆಣಗಾಡುತ್ತಿರುವುದು ಇದೇ ಋಣಾತ್ಮಕ ಸ್ವಾತಂತ್ರ್ಯದ ರಕ್ಷಣೆಗಾಗಿ.

ಬಲಪಂಥೀಯ ಇಚ್ಛಾ ಸ್ವಾತಂತ್ರ್ಯವಾದವೂ ಒಂದು ಋಣಾತ್ಮಕ ಸ್ವಾತಂತ್ರ್ಯವೇ ಆಗಿದೆ. ಇವರ ವಾದದ ಪ್ರಕಾರ ಪರಿಸರವಾದಿಗಳು ಮತ್ತು ಸಾಮಾಜಿಕ ನ್ಯಾಯ ಹೋರಾಟಗಾರರು ಶುದ್ಧ ಸೈದ್ಧಾಂತಿಕ (ಪ್ರಾಯೋಗಿಕವಲ್ಲದ) ಕಮ್ಯೂನಿಸ್ಟರು; ಸೋವಿಯತ್ ಒಕ್ಕೂಟದ ಧನಾತ್ಮಕ ಸ್ವಾತಂತ್ರ್ಯದ ಪರಿಕಲ್ಪನೆಗೆ ಪುನರ್ಜೀವ ನೀಡಲೆತ್ನಿಸುತ್ತಿರುವವರು. ಬಲಪಂಥೀಯ ಇಚ್ಛಾ ಸ್ವಾತಂತ್ರ್ಯವಾದಿಗಳ ಋಣಾತ್ಮಕ ಸ್ವಾತಂತ್ರ್ಯವನ್ನು ಈ ಧನಾತ್ಮಕ ಸ್ವಾತಂತ್ರ್ಯದ ಪ್ರತಿಪಾದಕರು ಕಸಿದುಕೊಳ್ಳಲೆತ್ನಿಸುತ್ತಿದ್ದಾರೆಂದು ಅಪಪ್ರಚಾರ ಮಾಡಲಾಗುತ್ತಿದೆ. ಆ ಮೂಲಕ ಈ

ಸಂಘರ್ಷವನ್ನು ಧನಾತ್ಮಕ ಮತ್ತು ಋಣಾತ್ಮಕ ಸ್ವಾತಂತ್ರ್ಯಗಳ ಸಂಘರ್ಷವೆಂದು ಬಿಂಬಿಸಲಾಗುತ್ತಿದೆ.

"ಯಾವ ವ್ಯವಸ್ಥೆ ನನ್ನ ಅಥವಾ ನನ್ನ ವರ್ಗದ ಅಥವಾ ನನ್ನ ದೇಶದ ಸ್ವಾತಂತ್ರ್ಯವನ್ನು ಇನ್ನಿತರ ಹಲವಾರು ಮಾನವರ ದುಃಸ್ಥಿತಿಯ ಮೇಲೆ ಹೊಂದಿಕೊಂಡಿರುವಂತೆ ಮಾಡುತ್ತದೋ ಅಂತಹ ವ್ಯವಸ್ಥೆ ನ್ಯಾಯಯುತವಲ್ಲ, ಅದು ಅನೈತಿಕ" ಎನ್ನುವ ಬರ್ಲಿನ್, ಸ್ವಾತಂತ್ರ್ಯವು ಇತರ ಮೌಲ್ಯಗಳಾದ ನ್ಯಾಯ, ಸಮಾನತೆ ಅಥವಾ ಮಾನವಕುಲದ ಸೌಖ್ಯಗಳೊಳಗೆ ಹೇಗೆ ಮಧ್ಯಪ್ರವೇಶ ಮಾಡಬಲ್ಲುದೆಂದು ವಿವರಿಸುತ್ತಾರೆ. ಅನ್ಯರ ಸ್ವಾತಂತ್ರ್ಯಗಳಿಗೆ ಅಡ್ಡಿಯಾಗುವ ಅಥವಾ ನ್ಯಾಯ ಮತ್ತು ಮಾನವೀಯತೆಗಳಿಗೆ ವಿರುದ್ಧವಿರುವ ಸ್ವಾತಂತ್ರ್ಯದ ಮೇಲೆ ಕಾನೂನಾತ್ಮಕ ನಿರ್ಬಂಧಗಳನ್ನು ಹೇರಬೇಕಿರುವುದು ಇದೇ ಕಾರಣಕ್ಕೆ.

ಕೆಲವು ಉದಾಹರಣೆಗಳು:

- ಮರಗಳು ತನ್ನ ಸ್ವಾತಂತ್ರ್ಯಕ್ಕೆ ಅಡ್ಡಿಯಾಗಿವೆ ಎಂದು ಹೇಳುವ ಉದ್ಯಮಿಯೊಬ್ಬ ತನ್ನ ಸ್ವಾತಂತ್ರ್ಯವನ್ನು ಮಾನವಕುಲದ ಸಾಮಾನ್ಯ ಸ್ವಾತಂತ್ರ್ಯದೊಂದಿಗೆ ಬೆಸೆಯುತ್ತಾನೆ. ಮರ ಕಡಿಯುವ ವ್ಯಕ್ತಿ ಆ ಮರ, ಅದರ ಎಲೆ, ಹೂ, ಹಣ್ಣು, ಕಾಯಿ, ನೆರಳು, ಹಕ್ಕಿಗಳು ಇತ್ಯಾದಿಗಳಿಂದ ಆಹ್ಲಾದ ಅನುಭವಿಸುವ ಅನೇಕ ವ್ಯಕ್ತಿಗಳ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುತ್ತಾನೆ.
- ಅಲ್ಪಸಂಖ್ಯಾತರನ್ನು ದೂಷಿಸುವ, ಅವರ ವಿರುದ್ಧ ಹಿಂಸೆಗೆ ಪ್ರಚೋದಿಸುವ ಅನಿರ್ಬಂಧಿತ ವಾಕ್ಸ್ವಾತಂತ್ರ್ಯವು ಅಲ್ಪಸಂಖ್ಯಾತರ ಬದುಕುವ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದೆ.
- ಮಾಧ್ಯಮಗಳ, ಅಂತರ್ಜಾಲದ ಸಾಮಾಜಿಕ ತಾಣಗಳ ನಿರಂಕುಶ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿ ನಿರ್ದಿಷ್ಟ ವ್ಯಕ್ತಿ, ಸಮುದಾಯಗಳ ವಿರುದ್ಧ ಅಪಪ್ರಚಾರ ಮಾಡುವುದು ಅವರ ಬದುಕುವ ಸ್ವಾತಂತ್ರ್ಯದ ಉಲ್ಲಂಘನೆ.
- ಧಾರ್ಮಿಕ ಸ್ವಾತಂತ್ರ್ಯದ ಹೆಸರಿನಲ್ಲಿ ರಸ್ತೆ ಮಧ್ಯೆ, ಕಾಲ್ದಾರಿ, ಮೈದಾನ ಹೀಗೆ ಎಲ್ಲೆಂದರಲ್ಲಿ ಪೂಜಾ ಕೇಂದ್ರಗಳ ನಿರ್ಮಾಣದಿಂದ ಅನ್ಯಪ್ರಜೆಗಳ ಸ್ವಾತಂತ್ರ್ಯಕ್ಕೆ ಅಡಚಣೆಯಾಗುತ್ತದೆ.
- ಎಲ್ಲಾ ಬಗೆಯ ಜಾನುವಾರುಗಳ ಹತ್ಯೆಯನ್ನು ನಿಷೇಧಿಸುವ ಕಾಯ್ದೆಯೊಂದನ್ನು ಜಾರಿಗೊಳಿಸುವ ಸ್ವಾತಂತ್ರ್ಯ ಅನ್ಯರ ಆಹಾರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ.
- ಕರ್ಕಶ ಸಂಗೀತ ನುಡಿಸುವ ಮತ್ತು ಕರ್ಕಶ ಹಾರ್ನ್ ಬಾರಿಸುವ ಸ್ವಾತಂತ್ರ್ಯ ಪ್ರಯಾಣಿಕರ ಮತ್ತು ದಾರಿಹೋಕರ ಮಾಲಿನ್ಯರಹಿತ ಬದುಕಿನ ಸ್ವಾತಂತ್ರ್ಯವನ್ನು ಅತಿಕ್ರಮಿಸುತ್ತದೆ.

ಸೂಕ್ತ ಕಾಯ್ದೆ, ಕಾನೂನುಗಳನ್ನು ಮಾಡದಿದ್ದಲ್ಲಿ ಅಥವಾ ಇರುವ ಕಾಯ್ದೆಗಳನ್ನೇ ಕಟ್ಟುನಿಟ್ಟಾಗಿ ಜಾರಿಗೊಳಿಸದಿದ್ದಲ್ಲಿ ಬಲಶಾಲಿಗಳು ಇದೇ ರೀತಿ ಸ್ವಾತಂತ್ರ್ಯದ ಹೆಸರು ಹೇಳುತ್ತಾ ದುರ್ಬಲರ ಸುಖ, ಸಂತೋಷ ಮತ್ತು ನೆಮ್ಮದಿಯ ಬದುಕಿಗೆ ಕನ್ನ ಹಾಕುತ್ತಾರೆ.

ಆಧುನಿಕ ಇಚ್ಛಾ ಸ್ವಾತಂತ್ರ್ಯವಾದ ಎಂಬ ಮಾರುವೇಷದಡಿ ಲಂಗುಲಗಾಮಿಲ್ಲದ ಶೋಷಣೆ ನಡೆಯುತ್ತಿದೆ. ಕಾರ್ಪೊರೇಟುಗಳು, ಧನಿಕರು, ಮೇಲ್ಜಾತಿಗಳು, ಧಾರ್ಮಿಕ, ಭಾಷಿಕ ಬಹುಸಂಖ್ಯಾತರು ಮುಂತಾದ ಬಲಾಢ್ಯ ವರ್ಗಗಳ ಇಚ್ಛಾ ಸ್ವಾತಂತ್ರ್ಯಕ್ಕೆ ನಿರ್ಬಂಧ ವಿಧಿಸಿ ದುರ್ಬಲರ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೆ ಆಧುನಿಕ ಇಚ್ಛಾ ಸ್ವಾತಂತ್ರ್ಯವಾದಿಗಳ ವಿರೋಧವಿದೆ. ಇದೊಂದು ಕೀಳ್ಮಟ್ಟದ ಒಕ್ಕಣ್ಣ ತತ್ವ.

ಬಲಪಂಥೀಯ ಇಚ್ಛಾ ಸ್ವಾತಂತ್ರ್ಯವಾದಿಗಳು ಕೊಡಲಿಯ ಸ್ವಾತಂತ್ರ್ಯ ಮತ್ತು ಮರದ ಸ್ವಾತಂತ್ರ್ಯದ ನಡುವೆ ಸಂಘರ್ಷ ಏರ್ಪಡುತ್ತದೆಂದು ಒಪ್ಪಲು ಸಿದ್ಧರಿಲ್ಲ. ಅವರ ಮಟ್ಟಿಗೆ ಇಲ್ಲಿ ಸಂಘರ್ಷದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅವರು ಅನ್ಯರ ಶೋಷಣೆ, ಪರಿಸರ ಪ್ರದೂಷಣೆ ಮತ್ತು ಕೆಲವೊಮ್ಮೆ ಹಿಂಸಾಚಾರವನ್ನು ಕೂಡಾ ತಮ್ಮ ಮೂಲಭೂತ ಮಾನವ ಹಕ್ಕೆಂದೇ ಭಾವಿಸುತ್ತಾರಲ್ಲದೆ ಅದನ್ನೆಲ್ಲ ಮಾಡುವ ಸ್ವಾತಂತ್ರ್ಯವೂ ತಮಗಿದೆಯೆಂದು ಸಾಧಿಸುತ್ತಾರೆ. ಪ್ರತಿಬಂಧಿಸಲು ಮುಂದಾದರೆ ದಬ್ಬಾಳಿಕೆ ಎಂದು ಹುಯಿಲೆಬ್ಬಿಸುತ್ತಾರೆ.

ಆಧುನಿಕ ಇಚ್ಛಾ ಸ್ವಾತಂತ್ರ್ಯವಾದ

ಆಧುನಿಕ ಇಚ್ಛಾ ಸ್ವಾತಂತ್ರ್ಯವಾದ ಎಂಬ ಮಾರುವೇಷದಡಿ ಲಂಗುಲಗಾಮಿಲ್ಲದ ಶೋಷಣೆ ನಡೆಯುತ್ತಿದೆ. ಕಾರ್ಪೊರೇಟುಗಳು, ಧನಿಕರು, ಮೇಲ್ಜಾತಿಗಳು, ಧಾರ್ಮಿಕ, ಭಾಷಿಕ ಬಹುಸಂಖ್ಯಾತರು ಮುಂತಾದ ಬಲಾಢ್ಯ ವರ್ಗಗಳ ಇಚ್ಛಾ ಸ್ವಾತಂತ್ರ್ಯಕ್ಕೆ ನಿರ್ಬಂಧ ವಿಧಿಸಿ ದುರ್ಬಲರ ಸ್ವಾತಂತ್ರ್ಯವನ್ನು ಕಾಪಾಡುವುದಕ್ಕೆ ಆಧುನಿಕ ಇಚ್ಛಾ ಸ್ವಾತಂತ್ರ್ಯವಾದಿಗಳ ವಿರೋಧವಿದೆ. ಇದೊಂದು ಕೀಳ್ಮಟ್ಟದ ಒಕ್ಕಣ್ಣ ತತ್ವ. ಇದರ ಪ್ರತಿಪಾದಕರು ಒಂದು ಮೋಸಗಾರಿಕೆಯ ತಂತ್ರವನ್ನು ಪ್ರಯೋಗಿಸುತ್ತಿದ್ದಾರೆ. ಅವರು ನ್ಯಾಯವನ್ನು ಇಚ್ಛಾ ಸ್ವಾತಂತ್ರ್ಯದ ವಿರುದ್ಧ ನಿಲ್ಲಿಸಿ ನ್ಯಾಯದ ಹಳಿತಪ್ಪಿಸಲು ಯತ್ನಿಸುತ್ತಿದ್ದಾರೆ. ಆ ಮೂಲಕ "ಸ್ವಾತಂತ್ರ್ಯ"ವನ್ನೊಂದು ದಬ್ಬಾಳಿಕೆಯ ಅಸ್ತ್ರವನ್ನಾಗಿ ಪರಿವರ್ತಿಸಿದ್ದಾರೆ. ■

ಆತ್ಮಾಭಿಮಾನ ಮತ್ತು ಆತ್ಮಾವಲೋಕನ

ಮಾಧ್ಯಮಕ್ಕೆ ಸಂವೇದನೆ ಮುಖ್ಯ; ಉದ್ಯಮಕ್ಕೆ ಸಂಪಾದನೆ ಮುಖ್ಯ. ಸಂವೇದನೆ ಮತ್ತು ಸಂಪಾದನೆಗಳ ಸಂಘರ್ಷದಲ್ಲಿ ಸಂಪಾದನೆಯ ನೆಲೆ-ನಿಲುವುಗಳೇ ಮುನ್ನೆಲೆಗೆ ಬರುತ್ತಿರುವುದಕ್ಕೆ ಜಾಗತೀಕರಣದ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯು ಒಂದು ಪ್ರಮುಖ ಕಾರಣವಾಗಿದೆ. ಇಂಥ ಸನ್ನಿವೇಶದಲ್ಲಿ 'ಸಂವಾದ'ದಂತಹ ಎಲ್ಲ ಸಣ್ಣ ಪ್ರಮಾಣದ ಪತ್ರಿಕೆಗಳ ಪಾತ್ರ ತುಂಬಾ ಪ್ರಮುಖವಾದುದು.

ಬರಗೂರು ರಾಮಚಂದ್ರಪ್ಪ

'ಸಂವಾದ' ವಿಶೇಷಾಂಕ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಖ್ಯಾತ ಅಂಕಣಕಾರ ಪ್ರೊ. ಮುಜಾಫ್ಫರ್ ಅಸ್ಸಾದಿ, ಸಂಸ್ಕೃತಿ ಚಿಂತಕ ಪ್ರೊ. ವಿ. ಎಸ್. ಶ್ರೀಧರ್, ಪತ್ರಿಕೆ ಪ್ರಕಾಶಕರಾದ ಶ್ರೀ ಎಸ್. ಮರಿಸ್ವಾಮಿ, ನಾಡೋಜ ಬರಗೂರು ರಾಮಚಂದ್ರಪ್ಪ ಹಾಗೂ ಸಂಪಾದಕರಾದ ಶ್ರೀ ಇಂದೂಧರ ಹೊನ್ನಾಪುರ

ಶ್ರೀ ಮರಿಸ್ವಾಮಿಯವರ ಒತ್ತಾಸೆ ಹಾಗೂ ವ್ಯವಸ್ಥಾಪನೆಯಲ್ಲಿ ಗೆಳೆಯ ಇಂದೂಧರ ಹೊನ್ನಾಪುರ ಅವರು ಸಂಪಾದಕರಾಗಿ ಹೊರತರುತ್ತಿರುವ 'ಸಂವಾದ' ಮಾಸಿಕದ ದಶವಾರ್ಷಿಕ ವಿಶೇಷಾಂಕ ಈಗ ಬಿಡುಗಡೆಯಾಗಿದೆ. ಇದೊಂದು ಸಂತೋಷದ ಸಂದರ್ಭ. ಬಿಡುಗಡೆ ಮಾಡಿದ ನಿಜದ ಖುಷಿ ನನ್ನದು. ನನ್ನ ಖುಷಿಗೆ ಕಾರಣಗಳಿವೆ; 'ಸಂವಾದ'ವು ಸಾಮಾಜಿಕ ಸ್ವರೂಪದ ವಿಶಿಷ್ಟ ಮಾಸಿಕ. ಇದು ವೈಚಾರಿಕ ಸಂವಾದದ ಸಾಧ್ಯತೆಗಳನ್ನು ಸದಾ ವಿಸ್ತರಿಸುತ್ತಿರುವ ಪತ್ರಿಕೆ. ಚರ್ಚೆಗಳನ್ನು ಬೆಳೆಸುತ್ತ ಸಾಮಾಜಿಕ ನ್ಯಾಯದ ವಿವಿಧ ಆಯಾಮಗಳನ್ನು ಅನಾವರಣಗೊಳಿಸುತ್ತಿರುವ ಒಂದು ಅಕ್ಷರವೇದಿಕೆ. ಹತಾಶೆಯಲ್ಲಿ ಹೂತು ಹೋಗದಂತೆ ಆಶಾವಾದವನ್ನು ಮುಂಚೂಣಿಗೆ ತರುವ ಒಂದು ಒತ್ತಾಸೆ. ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳಲ್ಲಿ ಸಾಮಾಜಿಕವಾಗಿ ಸರ್ವ ಸಮ್ಮತವೆಂದು ಹೇಳಲಾಗದಿದ್ದರೂ ಪತ್ರಿಕೆಯ ಸಾಮಾಜಿಕ ಜವಾಬ್ದಾರಿಯನ್ನು ಮೆಚ್ಚಲೇ ಬೇಕು. ಅದರಲ್ಲೂ ಸಾಮಾಜಿಕ ಕಾಳಜಿ, ಸಾಮಾಜಿಕ ನ್ಯಾಯ ಮುಂತಾದ ಪರಿಕಲ್ಪನೆಗಳನ್ನು ಕಡೆಯ ಸಾಲಿನಲ್ಲಿ ಕೂಡಿಸುವ 'ಆರ್ಥಿಕ ಸುಧಾರಣೆ'ಗಳ ಈ ಸನ್ನಿವೇಶದಲ್ಲಿ 'ಸಂವಾದ'ದ ಪಾತ್ರ ಮಹತ್ವದ್ದೆಂದು ಹೇಳಲೇಬೇಕು.

A. Kukarkin ಅವರು ತಮ್ಮ 'The passing Age' ಎಂಬ ಪುಸ್ತಕದಲ್ಲಿ ಹೇಳಿದ ಒಂದು ಮಾತು ಇಲ್ಲಿ ನೆನಪಿಗೆ ಬರುತ್ತಿದೆ; 'ಅಧಿಕ ಪ್ರಸಾರವುಳ್ಳ ಪತ್ರಿಕೆಗಳು, ಸಮೂಹ ಮಾಧ್ಯಮದ ವಿವಿಧ ಪ್ರಕಾರಗಳು ಬಹು ಸಂಖ್ಯೆಯನ್ನು ತಲುಪಲು ಬಯಸುವುದು ಲಾಭಕ್ಕಾಗಿ ಮಾತ್ರ. ಇಲ್ಲಿ ಸ್ವಾರ್ಥ ಮತ್ತು ಲಾಭಕೋರತನವೇ ಮುಖ್ಯ'- ಇದು ಕುಕಾರ್ಕಿನ್ ಮಾತಿನ ಸಾರ. ಮುಂದುವರೆದು ಅವರು 'ಜಾಹೀರಾತು ಸಂಸ್ಕೃತಿ'ಯ (ಕೇವಲ ಜಾಹೀರಾತುಗಳಲ್ಲ-ಸಂಸ್ಕೃತಿ) ಅಪಾಯಗಳಲ್ಲಿ ಗಮನ ಸೆಳೆಯುತ್ತಾರೆ; 'ಜಾಹೀರಾತು ಸಂಸ್ಕೃತಿಯು ಬೂರ್ಜ್ವಾ ಸಂಸ್ಕೃತಿಯ ಶೈಲಿಯನ್ನು ಸ್ಥಾಪಿಸುತ್ತದೆ ಮತ್ತು ಅದರ ನೀತಿಗಳನ್ನು ನಿರೂಪಿಸುತ್ತದೆ. ಇದು ಬಂಡವಾಳಶಾಹಿ ರಾಷ್ಟ್ರಗಳ ಸಂಸ್ಕೃತಿಯಲ್ಲಿ ಅತ್ಯಗತ್ಯವಾದ ಹಾಗೂ ಪ್ರಮುಖವಾದ ಒಂದು ಅಂಶವಾಗಿದೆ. ಸಾಮಾಜಿಕ ಪ್ರಜ್ಞೆಯನ್ನು ನಿಯಂತ್ರಿಸುವ ಸಾಧನವಾಗಿದೆ'. -ಕುಕಾರ್ಕಿನ್ ಅವರ ಈ ಒಟ್ಟಾರೆ ಅಭಿಪ್ರಾಯದ ನಿಜ ನೆಲೆಯನ್ನು ನಮ್ಮ ದೇಶದ ಇಂದಿನ ಸನ್ನಿವೇಶದಲ್ಲೂ ಕಾಣಬಹುದಾಗಿದೆ.

ಬಂಡವಾಳಶಾಹಿ ಆರ್ಥಿಕ ನೀತಿಯು ಮೇಲುಗೈ ಪಡೆಯುತ್ತ ಸಾಮಾಜಿಕ ಪ್ರಜ್ಞೆಯನ್ನು ನಿಯಂತ್ರಿಸುತ್ತ ಮಾರುಕಟ್ಟೆ ಮನೋಧರ್ಮವೇ ಮುಖ್ಯವಾಗುತ್ತಿರುವ ನಮ್ಮ ಸನ್ನಿವೇಶ ಸೈದ್ಧಾಂತಿಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಜಾಗತೀಕರಣದ ಫಲವಾದ 'ಆರ್ಥಿಕ ಸುಧಾರಣೆ'ಯ ಪ್ರತಿಪಾದಕರು ಮತ್ತು ಫಲಾನುಭವಿಗಳಿಗೆ ಶ್ರೇಣೀಕೃತ ಸಮಾಜದ ಸಂಕಟಗಳು ಕಾಣಿಸುತ್ತಿಲ್ಲ. ಜಾತಿ ಮತ್ತು ವರ್ಗಮೂಲ ಶೋಷಣೆಯ ನೆಲೆಗಳು ನಿಜವೆನ್ನಿಸುತ್ತಿಲ್ಲ ಅಥವಾ ನಿಜವೆನ್ನಿಸದಂತಹ ವಿಚಾರಗಳನ್ನು ಪ್ರತಿಪಾದಿಸಲಾಗುತ್ತಿದೆ. ಸ್ವಾರ್ಥ, ಲಾಭಕೋರತನಗಳ ಮಾರುಕಟ್ಟೆಯ ರೂಪಕವಾಗಿ ಮನುಷ್ಯನ ವ್ಯಕ್ತಿತ್ವವನ್ನು ರೂಪಿಸಲಾಗುತ್ತಿದೆ. ಇದರ ಪರಿಣಾಮದಲ್ಲಿ ಸಮೂಹ ಮಾಧ್ಯಮಗಳೂ ತಮ್ಮ ಸಾಮಾಜಿಕ

ಪ್ರಜ್ಞೆಯ ಪ್ರಖರತೆಯನ್ನು ಉಳಿಸಿಕೊಳ್ಳುತ್ತಿಲ್ಲ. ಕೆಲವರಿಗೆ ಬೇಕಾಗಿಲ್ಲ; ಬೇಕಾದವರಿಗೆ ಬಿಕ್ಕಟ್ಟುಗಳು ಬಿಡುತ್ತಿಲ್ಲ. ಒಂದು ರೀತಿಯ ಸಂದಿಗ್ದ ಹಾಗೂ ವೈರುಧ್ಯಗಳ ನಡುವೆ ಸಿಕ್ಕಿರುವ ಮಾಧ್ಯಮಗಳು ಉದ್ಯಮ ಪ್ರಧಾನ ಮಾತ್ರವಾಗುವ ಅಪಾಯ ಕಾಣಿಸುತ್ತಿದೆ.

ಪತ್ರಿಕೆ, ಪುಸ್ತಕ, ಚಲನಚಿತ್ರ–ಇವುಗಳೆಲ್ಲ ಮೂಲತಃ ಮಾಧ್ಯಮಗಳು. ಆದರೆ ಬರಬರುತ್ತ ಈ ಮಾಧ್ಯಮಗಳೆಲ್ಲ ಉದ್ಯಮಗಳಾದವು. ಪತ್ರಿಕಾ ಮಾಧ್ಯಮ ಪತ್ರಿಕೋದ್ಯಮವಾಯಿತು, ಪುಸ್ತಕ ಮಾಧ್ಯಮ ಪುಸ್ತಕೋದ್ಯಮವಾಯಿತು, ಚಲನಚಿತ್ರ ಮಾಧ್ಯಮ ಚಲನಚಿತ್ರೋದ್ಯಮವಾಯಿತು. ಹೀಗೆ ಮಾಧ್ಯಮಗಳೆಲ್ಲ ಉದ್ಯಮವಾಗಲು ಭಾರಿ ಬಂಡವಾಳದ ತೊಡಗಿಸುವಿಕೆಯೇ ಮುಖ್ಯಕಾರಣವಾಯಿತು. ಈಗಲೂ ಸಣ್ಣ ಮತ್ತು ಮಧ್ಯಮ ಪ್ರಮಾಣದ ಪತ್ರಿಕೆಗಳು, ಪ್ರಕಾಶನ ಸಂಸ್ಥೆಗಳು, ಸಿನಿಮಾಗಳು ಮಾಧ್ಯಮದ ನೆಲೆಗಳನ್ನು ಉಳಿಸಿಕೊಳ್ಳಲು ಪ್ರಾಮಾಣಿಕವಾಗಿ 'ಸೆಣಸುತ್ತಿವೆ'. ಗಮನಿಸಿ: ಮಾಧ್ಯಮಕ್ಕೆ ಸಂವೇದನೆ ಮುಖ್ಯ; ಉದ್ಯಮಕ್ಕೆ ಸಂಪಾದನೆ ಮುಖ್ಯ. ಸಂವೇದನೆ ಮತ್ತು ಸಂಪಾದನೆಗಳ ಸಂಘರ್ಷದಲ್ಲಿ ಸಂಪಾದನೆಯ ನೆಲೆ–ನಿಲುವುಗಳೇ ಮುನ್ನೆಲೆಗೆ ಬರುತ್ತಿರುವುದಕ್ಕೆ ಜಾಗತೀಕರಣದ ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯು ಒಂದು ಪ್ರಮುಖ ಕಾರಣವಾಗಿದೆ. ಇಂಥ ಸನ್ನಿವೇಶದಲ್ಲಿ 'ಸಂವಾದ'ದಂತಹ ಎಲ್ಲ ಸಣ್ಣ ಪ್ರಮಾಣದ ಪತ್ರಿಕೆಗಳ ಪಾತ್ರ ತುಂಬಾ ಪ್ರಮುಖವಾದುದು. 'ಸಂವಾದ'ದ ಜೊತೆಗೆ ಸಂಕ್ರಮಣ, ಶೂದ್ರ, ಹೊಸತು, ಅನ್ವೇಷಣೆ, ಒಡನಾಡಿ– ಮುಂತಾದ ಪತ್ರಿಕೆಗಳು ನಿರಂತರವಾಗಿ ತೋರಿದ ಸಾಮಾಜಿಕ ಕ್ರಿಯಾಶೀಲತೆಯೂ ಮುಖ್ಯವಾದುದು. (ಯಾವುದಾದರೂ ಇಂತಹ ಪತ್ರಿಕೆಯ ಹೆಸರು ಉಲ್ಲೇಖವಾಗಿಲ್ಲದಿದ್ದರೆ ಅದು ಉದ್ದೇಶಪೂರ್ವಕವಲ್ಲ. ಕ್ಷಮೆಯಿರಲಿ)

ಸಮಾರಂಭಕ್ಕೆ ಆಗಮಿಸಿದ್ದ ಖ್ಯಾತ ಲೇಖಕಿ ಕಮಲಾ ಹಂಪನಾ ಅವರೊಂದಿಗೆ ಬರಗೂರು

ಪ್ರಗತಿಪರವಲಯದ ಒಗ್ಗಟ್ಟು ಎಂದರೆ ಕೇವಲ ಶೋಷಿತ ಜಾತಿ ಮತ್ತು ವರ್ಗಗಳು ಒಂದಾಗುವುದು ಮಾತ್ರವಲ್ಲ. ಆತ್ಮಾಭಿಮಾನ ಮತ್ತು ಆತ್ಮಾವಲೋಕನಗಳ ಮೂಲಕ ವಿಶ್ವಾಸಾರ್ಹತೆಯನ್ನು ಗಟ್ಟಿಗೊಳಿಸುವ, ವೃದ್ಧಿಸುವ ಸಂಘಟನಾತ್ಮಕ ಶಕ್ತಿಯಾಗುವ ಕ್ರಿಯೆ ಮುಖ್ಯ.

ಮುಕ್ತ ಮಾರುಕಟ್ಟೆ ಆರ್ಥಿಕ ನೀತಿಯು ಮಾಧ್ಯಮಗಳ ಮೇಲಷ್ಟೇ ಅಲ್ಲ ಇಡೀ ಸಾಮಾಜಿಕ ಪರಿಸರದ ಮೇಲೆ ಪ್ರಭಾವ ಬೀರಿದೆ; ಬಿಕ್ಕಟ್ಟುಗಳನ್ನು ಸೃಷ್ಟಿ ಮಾಡಿದೆ: ಸೈದ್ಧಾಂತಿಕ ಸಂಬಂಧಗಳನ್ನು ಜಟಿಲಗೊಳಿಸಿದೆ. ಇಂಥ ಸಂದರ್ಭದಲ್ಲಿ ಎಡ ಮತ್ತು ಪ್ರಗತಿಪರ ಶಕ್ತಿಗಳು ತಮ್ಮ ಸೈದ್ಧಾಂತಿಕ ಸಂಬಂಧಾಂತರಗಳನ್ನು ಆತಂಕದಿಂದ ಆತ್ಮಾವಲೋಕನ ಮಾಡಿಕೊಂಡು ಪ್ರತಿಗಾಮಿಗಳಿಗೆ ಪ್ರತಿರೋಧ ಒಡ್ಡುವ ಕಾರ್ಯವಿಧಾನಗಳನ್ನು ರೂಪಿಸಿಕೊಳ್ಳಬೇಕಾಗಿದೆ. ನಿಜ, ಮೇಲ್ನೋಟಕ್ಕೆ ಎಡ ಮತ್ತು ಎಲ್ಲ ಪ್ರಗತಿಪರರ ನಡುವೆ ಉತ್ತಮ ಸಂಬಂಧವಿರುವಂತೆ ಕಾಣುತ್ತಿದೆ. ಆದರೆ ಈ ಸಂಬಂಧವು ಕ್ರಿಯೆಯಲ್ಲಿ ಪ್ರತಿಫಲನಗೊಳ್ಳುತ್ತಿದೆಯೆ? ಪ್ರತಿಫಲನಗೊಂಡರೂ ಅದು ಅನುಮಾನ ಮತ್ತು ಅಪನಂಬಿಕೆಗಳಿಂದ ದೂರವಾಗಿದೆಯೇ? ತಮ್ಮ ಸೈದ್ಧಾಂತಿಕ ಶತ್ರುಗಳನ್ನು ಆದ್ಯತೆಯ ಮೇಲೆ ಗುರಿತಿಸಿಕೊಂಡು ವಿರೋಧಿಸುವ ಒಗ್ಗಟ್ಟು ಕಾಣಿಸುತ್ತಿದೆಯೆ? ಎಪ್ಪತ್ತರ ದಶಕದ ಕ್ರಿಯಾಶಕ್ತಿ ಮತ್ತು ಸನ್ನಿವೇಶ ಈಗಲೂ ಇದೆಯೆ? ಇಂತಹ ಪ್ರಶ್ನೆಗಳನ್ನು ವಿಶೇಷವಾಗಿ ನಾವು– ಎಡ ಹಾಗೂ ಪ್ರಗತಿಪರ ಪಂಥೀಯರು– ಕೇಳಿಕೊಂಡು ಕ್ರಿಯಾಶೀಲತೆಯನ್ನು ಮತ್ತಷ್ಟು ರಚನಾತ್ಮಕಗೊಳಿಸಿಕೊಳ್ಳಬೇಕಾಗಿದೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೇಲೆ ಸಮಾನ ಶತ್ರುವಿಗೆ ಎದುರಾಗಬೇಕಾಗಿದೆ. ಎದುರಾಗುವ ಸಂ–ಭ್ರಮಕ್ಕಿಂತ ಹೆಚ್ಚಾಗಿ ಹೆಚ್ಚು–ಹೆಚ್ಚು ಜನರನ್ನು ನಮ್ಮೊಂದಿಗೆ ಕರೆದೊಯ್ಯುವ ಹೊಸ ಕಾರ್ಯವಿಧಾನಗಳ ಬಗ್ಗೆ ಚಿಂತಿಸಬೇಕಾಗಿದೆ. ನಮಗೀಗ 'ಹೀರೊಗಳು' ಬೇಕಿಲ್ಲ 'ನಾಯಕರು' ಬೇಕು. ಜನರ ವಿಶ್ವಾಸವನ್ನು ಒಳಗೊಳ್ಳುವ ಕಾರ್ಯವಿಧಾನ ಬೇಕು. ನನ್ನ ದೃಷ್ಟಿಯಲ್ಲಿ 'ಹೀರೋತನ'ವೇ ಬೇರೆ. 'ನಾಯಕತ್ವ'ವೇ ಬೇರೆ. ಜನರನ್ನು ಕ್ಷಣಿಕ ಉದ್ವೇಗ ಮತ್ತು ಉದ್ರೇಕಗಳಿಗೆ ಈಡುಮಾಡುವ 'ಹೀರೋತನ'ದ ಜಾಗದಲ್ಲಿ ದೂರದರ್ಶಿತ್ವದ ದರ್ಶನಾತ್ಮಕ ಧೀಮಂತಿಕೆಯ ನಾಯಕತ್ವ ಬೇಕು. ಈ ನಾಯಕತ್ವ ಏಕ ವ್ಯಕ್ತಿಯದಾಗಬೇಕೆಂದು ನಾನು ಹೇಳುತ್ತಿಲ್ಲ. ಸಂಘಟನಾತ್ಮಕ ಕ್ರಿಯೆಗಳಲ್ಲೇ ನಾಯಕತ್ವದ ನೆಲೆಗಳು ಮೂಡಿಬರುತ್ತವೆ.

ಇವತ್ತಿನ ನಾಯಕತ್ವದ ಸ್ವರೂಪಗಳನ್ನು ಗಮನಿಸಿ. ಧಾರ್ಮಿಕ ನಾಯಕತ್ವದಲ್ಲಿ ಧಾರ್ಮಿಕತೆಗಿಂತ ಜಾತೀಯತೆ ಮತ್ತು ಆರ್ಥಿಕತೆಯೇ ಪ್ರಬಲವಾಗುತ್ತಿದೆ. ರಾಜಕೀಯ ನಾಯಕತ್ವ ಸೈದ್ಧಾಂತಿಕವಾಗಿ ಆರ್ಥಿಕ ನಾಯಕತ್ವಕ್ಕೆ ಶರಣಾಗಿ ಅಧಿಕಾರ ಮತ್ತು ಹಣದಲ್ಲಿ ತೇಲಾಡುತ್ತಿದೆ. ಈ ಮಧ್ಯೆ ಸಾಮಾಜಿಕ ನಾಯಕತ್ವದ ಶಕ್ತಿ ಕ್ಷೀಣವಾಗುತ್ತಿದೆ. ಆಳುವ ಪಕ್ಷ ಹಾಗೂ ಸರ್ಕಾರದ ಓಲೈಕೆಯಲ್ಲಿ ತೊಡಗಿರುವ ಸಾಮಾಜಿಕ ಧುರೀಣರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಆತಂಕದ ಸಂಗತಿ. ಎಪ್ಪತ್ತರ ದಶಕದ ಆದ್ಯತೆಗಳು ಈಗ ಪಲ್ಲಟಗೊಂಡಿರುವುದೂ ಇಂತಹ ಅನಾರೋಗ್ಯಕರ ಸನ್ನಿವೇಶಕ್ಕೆ ಒಂದು ಪ್ರಮುಖ ಕಾರಣ.

ಎಪ್ಪತ್ತರ ದಶಕದ ಸೈದ್ಧಾಂತಿಕತೆಯ ಜಾಗವನ್ನು ಸಮಯ ಸಾಧಕತೆ ಆಕ್ರಮಿಸಿಕೊಳ್ಳುತ್ತಿದೆ. ಸಾಮಾಜಿಕ ವಿವೇಕದ ಬದಲು ಆರ್ಥಿಕ ಅವಿವೇಕ ವಿಜೃಂಭಿಸುತ್ತಿದೆ. ಮಾನವೀಯತೆಯನ್ನು ಮತೀಯತೆಯು ಮಣ್ಣುಮುಕ್ಕಿಸುತ್ತಿದೆ. ಕೋಮು ಸಾಮರಸ್ಯದ ಬದಲು ಕೋಮು ಸಂಘರ್ಷ ಆದರ್ಶವಾಗುವ ಅಪಾಯ ಕಾಣುತ್ತಿದೆ. ಜಾತಿ ವಿನಾಶದ ಆಶಯಗಳನ್ನು ಜಾತಿವಾದ ನುಂಗುತ್ತಿದೆ. ಧರ್ಮಗುರುಗಳು ಜಾತಿ ಗುರುಗಳು ಮಾತ್ರವಾಗುತ್ತಿದ್ದಾರೆ. ರಾಜಕೀಯ ನಾಯಕರು ಕುರ್ಚಿಯಲ್ಲಿ ಕೂತ ಕುಬ್ಜರಾಗುತ್ತಿದ್ದಾರೆ. ಉದ್ಯಮಪತಿಗಳು ರಾಜಕೀಯ ಕುರ್ಚಿಗಳ ಕಣ್ಣಾಗುತ್ತಿದ್ದಾರೆ. ಇಂಥ ಸನ್ನಿವೇಶದಲ್ಲಿ ನೈಜ ಹೋರಾಟಗಳಿಗಿಂತ ಹೋರಾಟ ಪ್ರಹಸನಗಳಿಗೆ ಪ್ರಚಾರ ಹೆಚ್ಚಾಗುತ್ತಿದೆ. ಸ್ವಾರ್ಥಕೇಂದ್ರಿತ ಹೋರಾಟಗಳೂ ಮುಂಚೂಣಿಗೆ ಬರುತ್ತಿವೆ. ರಾಜಕೀಯ ಕ್ಷೇತ್ರವೊಂದೇ ಅಲ್ಲ, ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ವಿಶ್ವಾಸಾರ್ಹತೆಯೂ ಪ್ರಶ್ನಾರ್ಹವಾಗುತ್ತಿದೆ. ಸಮುದಾಯಪ್ರಜ್ಞೆಗಿಂತ ವ್ಯಕ್ತಿ ವೈಪರೀತ್ಯಗಳು ವೈಭವೀಕರಣಗೊಳ್ಳುತ್ತಿವೆ. ಒಟ್ಟಾರೆ ಒಂದು ಕ್ರೂರ ಸನ್ನಿವೇಶದಲ್ಲಿ ನಮ್ಮ ಸಮಾಜ ತೊಳಲಾಡುತ್ತಿದೆ. ಆದ್ದರಿಂದ ಸರಿದಾರಿಯತ್ತ ಕೊಂಡೊಯ್ಯುವ ಹೊಣೆ ಎಲ್ಲ ಪ್ರಗತಿಪರ ಸಂಘಟನೆಗಳ ಮೇಲಿದೆ. ಆದರೇನು ಮಾಡುವುದು, ಎಪ್ಪತ್ತರ ದಶಕದ ಸಂಘಟನೆಯ ನೆಲೆಗಳನ್ನು ಈಗ ವಿಘಟನೆಯ ನೆಲೆಗಳು ಆವರಿಸಿಕೊಳ್ಳುತ್ತಿವೆ. ಪ್ರತಿಗಾಮಿಗಳಿಗಿಂತ ಹೆಚ್ಚಾಗಿ ಪ್ರಗತಿಗಾಮಿಗಳಲ್ಲೇ ವಿಘಟನೆಯ ವ್ಯಾಪ್ತಿ ದೊಡ್ಡದಾಗಿದೆ. ವಿಪರ್ಯಾಸ ಮತ್ತು ವಿಷಾದದ ಸಂಗತಿಯೆಂದರೆ, ಪ್ರತಿಗಾಮಿಗಳು ಈಗ ಹೆಚ್ಚು ಸಂಘಟಿತರಾಗುತ್ತಿದ್ದಾರೆ, ಪ್ರಗತಿಗಾಮಿಗಳು ಹೆಚ್ಚು ವಿಘಟಿತರಾಗುತ್ತಿದ್ದಾರೆ. ಹೀಗಾಗಿ ಪ್ರಗತಿಪರ ಮಯ ವಿಘಟನೆಯ ವಲಯವಾಗುತ್ತಿದೆ. ಸೈದ್ಧಾಂತಿಕ ಶಿಥಿಲತೆ ಅಧಿಕವಾಗುತ್ತಿದೆ. ಆದರೆ ಪ್ರತಿಗಾಮಿ ವಲಯ ಸಂಘಟನೆಯ ವಲಯವಾಗುತ್ತಿದೆ. ಪ್ರತಿಗಾಮಿ ಸಿದ್ಧಾಂತದ ಬದ್ಧತೆ

ಅಧಿಕವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಪ್ರಗತಿಪರ ವಲಯದ ಒಗ್ಗಟ್ಟೂ ತೀರಾ ಅಗತ್ಯವಾಗಿದೆ.

ಪ್ರಗತಿಪರವಲಯದ ಒಗ್ಗಟ್ಟು ಎಂದರೆ ಕೇವಲ ಶೋಷಿತ ಜಾತಿ ಮತ್ತು ವರ್ಗಗಳು ಒಂದಾಗುವುದು ಮಾತ್ರವಲ್ಲ. ಆತ್ಮಾಭಿಮಾನ ಮತ್ತು ಆತ್ಮಾವಲೋಕನಗಳ ಮೂಲಕ ವಿಶ್ವಾಸಾರ್ಹತೆಯನ್ನು ಗಟ್ಟಿಗೊಳಿಸುವ, ವೃದ್ಧಿಸುವ ಸಂಘಟನಾತ್ಮಕ ಶಕ್ತಿಯಾಗುವ ಕ್ರಿಯೆ ಮುಖ್ಯ. ಶೋಷಿತ ಜಾತಿಯವರು ಮತ್ತು ವರ್ಗದವರು ಎಂಬ ಒಂದೇ ಕಾರಣಕ್ಕಾಗಿ ಆಯಾ ಜಾತಿ-ವರ್ಗಗಳನ್ನು ಅಥವಾ ನಾಯಕರನ್ನು ವಿಮರ್ಶೆಗೆ ಒಡ್ಡದೆ ಹೋದರೆ ನಮ್ಮ ವಿಶ್ವಾಸಾರ್ಹತೆ ಉಳಿಯುವುದಿಲ್ಲ... ಶೋಷಿತ ಜಾತಿ ಮತ್ತು ವರ್ಗ ಎಂದು ತಪ್ಪುಗಳಿಗೂ ವಿನಾಯಿತಿ ಕೇಳುವ ಕಾಲ ಮುಗಿದಿದೆ ಎಂದು ನಾನು ಭಾವಿಸುತ್ತೇನೆ. ಇದರರ್ಥ ಶೋಷಿತವಲಯವು ವಿಶಿಷ್ಟ ಹಾಗೂ ವಿಶೇಷ ಸವಲತ್ತುಗಳನ್ನು ಕೇಳಬಾರದೆಂದಲ್ಲ, ಕೇಳಲೇಬೇಕು, ಅಗತ್ಯವಾದರೆ ಹೋರಾಟಕ್ಕಿಳಿಯಬೇಕು. ಸೈದ್ಧಾಂತಿಕ ನೆಲೆಯ ಹೋರಾಟಗಳ ಜೀವಶಕ್ತಿಯನ್ನು ಸದಾ ಅಂತರ್ಗತ ಮಾಡಿಕೊಂಡಿರಬೇಕು. ವೈಯಕ್ತಿಕ ನೆಲೆಯನ್ನು ಮೀರಿದ ಸಾಮುದಾಯಿಕ ಪ್ರಜ್ಞೆಯು ಮುಖ್ಯವಾಗಬೇಕು. ಶೋಷಿತವಲಯದವರಿಗೆ ಅಧಿಕಾರ ಸಿಕ್ಕಾಗ ಈ ಎಲ್ಲ ಅಂಶಗಳೂ ಜಾಗೃತವಾಗಿರಬೇಕು; ಸಾಮಾಜಿಕ ವಿವೇಕದ ಎಚ್ಚರ ಜೊತೆಗಿರಬೇಕು.

ಈಗ ನೋಡಿ; ಮೇಲ್‌ಜಾತಿ ಮತ್ತು ವರ್ಗಗಳೇ ಹೆಚ್ಚು ಕಾಲ ಅಧಿಕಾರ ಕೇಂದ್ರದಲ್ಲಿದ್ದ ಕಾರಣದಿಂದ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಪರ್ಯಾಯ ಶಕ್ತಿಯ ಅನಿವಾರ್ಯವುಂಟಾಯಿತು. ದಲಿತ ಮತ್ತು ಹಿಂದುಳಿದವರ ಸಂಘಟನೆ ಮತ್ತು ಸಂವೇದನೆಯ ಫಲವಾಗಿ ಕಾನ್ಸಿರಾಂ, ಕರ್ಪೂರಿ ಠಾಕೂರ್, ಮಾಯಾವತಿ, ಲಾಲೂಪ್ರಸಾದ್ ಯಾದವ್, ಮುಲಾಯಂಸಿಂಗ್ ಯಾದವ್ ಮುಂತಾದವರ ಉದಯವಾಯಿತು. ಕಾನ್ಸಿರಾಂ ಅವರು ಸ್ವತಃ ಅಧಿಕಾರ ಹಿಡಿಯದಿದ್ದರೂ ದಲಿತರು ಅಧಿಕಾರಕ್ಕೆ ಬರುವುದಕ್ಕೆ ಬೇಕಾದ ಕ್ರಿಯಾಯೋಜನೆಯನ್ನು ಸಮರ್ಥವಾಗಿ ರೂಪಿಸುತ್ತ ಬಂದರು. ಕರ್ನಾಟಕದಲ್ಲಿ ದೇವರಾಜ ಅರಸರು ಬಂದು ಹೋದದ್ದರಿಂದ ಕಾನ್ಸಿರಾಂ ಅವರ ಅನಿವಾರ್ಯತೆ ಇಲ್ಲಿ ಇಲ್ಲ ಎಂದು ನಾನು ತುಂಬಾ ಹಿಂದೆಯೇ ಬರೆದಿದ್ದೆ. ಇದು ಕಾನ್ಸಿರಾಂ ಶಕ್ತಿಯ ನಿರಾಕರಣೆ ಅಲ್ಲ. ಕರ್ನಾಟಕದ ಸಾಮಾಜಿಕ-ರಾಜಕೀಯ ವಿಕಾಸದ ವಿವರಣೆ. ಅದು ಬೇರೆ ವಿಷಯ; ದಲಿತ ಹಾಗೂ ಹಿಂದುಳಿದ ವರ್ಗಗಳಿಂದ ಯಾರೇ ಅಧಿಕಾರಕ್ಕೆ ಬಂದರೂ ಅದೊಂದು ಚಾರಿತ್ರಿಕ ಸಂಭ್ರಮವೇ ಸರಿ. ಆದರೆ ಅವರು ಹೊಸ ಚರಿತ್ರೆಯನ್ನು ನಿರ್ಮಿಸದೆ ಹೋದರೆ ಚಾರಿತ್ರಿಕ ದುರಂತವಾದೀತು ಎಂಬ ಎಚ್ಚರ ಮತ್ತು ವಿವೇಕ ಅಗತ್ಯ. ಲಾಲೂಪ್ರಸಾದ್ ಯಾದವ್, ಮುಲಾಯಂಸಿಂಗ್ ಯಾದವ್, ಮಾಯಾವತಿ- ಇಂಥವರ ಜಾತ್ಯತೀತ ನಿಲುವಿನ ಬಗ್ಗೆ ಗೌರವವನ್ನಿಟ್ಟುಕೊಂಡೇ ಇವರು ಕರ್ಪೂರಿ ಠಾಕೂರ್ ಆಗಲಿಲ್ಲ, ದೇವರಾಜ ಅರಸು ಆಗಲಿಲ್ಲ, ಕಾನ್ಸಿರಾಂ ಆಗಲಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಅಧಿಕ್ಕಾರಕ್ಕಾಗಿ ಕೋಮುವಾದಿಗಳ ಜೊತೆ ಕೈ ಜೋಡಿಸಲು ಹಿಂಜರಿಯದೆ ಇದ್ದವರೂ ಇಂಥವರಲ್ಲಿದ್ದಾರೆ. ಈ ವಿಷಯದಲ್ಲಿ ಲಾಲೂಪ್ರಸಾದ್ ಮಾತ್ರ ಪ್ರತ್ಯೇಕವಾಗಿ ನಿಲ್ಲುತ್ತಾರೆ. ಆದರೆ ಇವರ್‍ಯಾರೂ ಹಗರಣ ಮುಕ್ತರಾಗಲಿಲ್ಲ; ಆತ್ಮರತಿಯಿಂದ ಹೊರಬರಲಿಲ್ಲ. ಮಾಯಾವತಿಯವರು ಆನೆಗಳ ಪ್ರತಿಮೆಗಳನ್ನು ಯಥೇಚ್ಛವಾಗಿ ಸ್ಥಾಪಿಸುವುದರ ಜೊತೆಗೆ ತಮ್ಮ ಪ್ರತಿಮೆಯನ್ನೂ ಸ್ವತಃ ಸ್ಥಾಪಿಸಿದರು. ಇತ್ತೀಚೆಗೆ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಮುಲಾಯಂ ಅವರ ಸಮಾಜವಾದಿ ಪಕ್ಷ ಸ್ಪಷ್ಟ ಬಹುಮತ ಪಡೆದಾಗ ನಡೆದ ಸಂಭ್ರಮಾಚರಣೆಯಲ್ಲಿ ಉನ್ಮತ್ತ ಕಾರ್ಯಕರ್ತನ ಬಂದೂಕಿಗೆ ಎಂಟು ವರ್ಷದ ಬಾಲಕ ಬಲಿಯಾದ. ಎರಡೇ ದಿನಗಳಲ್ಲಿ ಹತ್ತು ಹದಿನೈದು ದಲಿತರ ಗುಡಿಸಲುಗಳನ್ನು ಇದೇ ಕಾರ್ಯಕರ್ತರು ಸುಟ್ಟು ಹಾಕಿದರು. ಹಿಂದುಳಿದವರ್ಗ ಎಂಬ ಕಾರಣಕ್ಕಾಗಿ ಇದನ್ನೆಲ್ಲ ಕ್ಷಮಿಸಲಾದೀತೆ? ದಲಿತ ಮಹಿಳೆ ಎಂಬ ಕಾರಣಕ್ಕಾಗಿ ಮಾಯಾವತಿಯವರು ಮಾಡಿದ್ದೆಲ್ಲ ಸರಿ ಎನ್ನಲಾದೀತೆ? ಕೆಲವು ತಪ್ಪುಗಳ ನಡುವೆಯೂ ದೇವರಾಜ ಅರಸು ಹೆಸರು ಯಾಕೆ ಉಳಿದಿದೆ? ಬಿ. ಬಸವಲಿಂಗಪ್ಪನವರು ಯಾಕೆ ನೆನಪಲ್ಲಿದ್ದಾರೆ? ಕರ್ಪೂರಿ ಠಾಕೂರ್ ಯಾಕೆ ಕಾಣಿಸುತ್ತಾರೆ? ಇಂಥ ಪ್ರಶ್ನೆಗಳ ಮೂಲಕ ನಮ್ಮ ಅಧಿಕಾರಸ್ಥರನ್ನು ವಿಮರ್ಶೆಗೆ ಒಡ್ಡದಿದ್ದರೆ ಅದು ಆತ್ಮವಂಚನೆಯಾದೀತು.

ಈ ಎಲ್ಲ ಎಚ್ಚರ ಮತ್ತು ವಿವೇಕಗಳ ನೆಲೆಯಲ್ಲಿ ಆತ್ಮಾವಲೋಕನ ಮಾಡಿಕೊಂಡರೆ ದಲಿತ ಮತ್ತು ಹಿಂದುಳಿದ ವರ್ಗಗಳ ಆತ್ಮಾಭಿಮಾನವು ಮತ್ತಷ್ಟು ಗಟ್ಟಿಯಾಗುತ್ತದೆ. ಈ ದಿಕ್ಕಿನಲ್ಲಿ ಸೂಕ್ತ 'ಸಂವಾದ' ನಡೆಯಲಿ ಎಂದು ಆಶಿಸುತ್ತೇನೆ.

('ಸಂವಾದ' ವಿಶೇಷಾಂಕ ಬಿಡುಗಡೆ ಸಂದರ್ಭದಲ್ಲಿ ಮಾಡಿದ ಭಾಷಣದ ಲೇಖನ ರೂಪ)

ಜೈನ್ ಸಮೂಹ ಸಂಸ್ಥೆಗಳು
ಬೆಂಗಳೂರು
SRI BHAGAWAN MAHAVEER JAIN COLLEGE
KOLAR GOLD FIELDS
COURSES OFFERED
PRE-UNIVERSITY COURSES
PCMB,PCMC,PCME
ABMS,ABES,HEBA
ABECS

DEGREE COURSES
BBM , BCOM
BCA , PMCs
BGB , CBM
08153 - 261 733
261 833
SBMJC@SBMJCKGF.IN
WWW.SBMJCKGF.IN

ನಮ್ಮ ಆಸೆ ನೀವು ನಗುತ್ತಾ ಇರಬೇಕು

● ಏಕಲವ್ಯ



ಕನ್ನಡನಾಡು ಹುಟ್ಟಿದ ದಿನ
ನೀವು ನಗುತ್ತಾ ಇರಬೇಕು
ನಾವು ರಾಜಕಾರಣಿಗಳು
ನಮಗೆ ಅಧಿಕಾರಕೊಟ್ಟವರು ನೀವು
ನಮ್ಮ ಆಸೆ...
ನೀವು ನಗುತ್ತಾ ಇರಬೇಕು...!

ರೈತರ ಬಡತನ, ಆತ್ಮಹತ್ಯೆ
ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ
ಹಳ್ಳಿಜನ ವಲಸೆ ಹೋಗುವುದು
ಈ ಎಲ್ಲವು ನಮಗೆ ಗೊತ್ತಿದೆ
ನಮ್ಮಲ್ಲಿ ಕೆಲವರಾದರೂ
ಚನ್ನಾಗಿ ಇರಬೇಕೆಂಬುದೆ ಹಿರಿಯರ ಆಸೆ
ನಾವು ಚಿನ್ನದ ತಟ್ಟೆಯಲ್ಲಿ ಊಟಮಾಡುತ್ತೇವೆ
ಚಿನ್ನದ ಸಿಂಹಾಸದಲಿ ಕೂರುತ್ತೇವೆ
ನಮ್ಮ ನಾಡಿನ ಆಸ್ತಿಯ ಗುರುತಾಗುತ್ತೇವೆ
ನಮ್ಮ ಆಸೆ ನೀವು ನಗುತ್ತಾ ಇರಬೇಕು...!

ನಾಡಿನ ಸಂಪತ್ತನ್ನು ಹಣವನ್ನು ಖನಿಜಗಳನ್ನು
ಲೂಟಿ ಮಾಡುವುದಾಗಿ ನಮ್ಮಮೇಲೆ ಆರೋಪ!
ಸಂಪತ್ತು ಸಮಾನಾಗಿ ಹಂಚಿಕೆಯಾದರೆ
ನಾಡಿನಲ್ಲಿ ಬಡತನ ಇರುವುದಿಲ್ಲ
ಬಡತನ ಇಲ್ಲದನಾಡು
ಪೈಪೋಟಿಯಲ್ಲಿ ಗೆಲ್ಲುವುದಿಲ್ಲ
ನಾಡಿನ ಜನರು ಪೈಪೋಟಿಯಲ್ಲಿ ಗೆಲ್ಲಲೇಬೇಕು
ಕಾರಣ...

ಆಸ್ತಿಗಳನ್ನು ನಾವೇ ಇಟ್ಟುಕೊಂಡಿದ್ದೇವೆ
ಭ್ರಷ್ಟಾಚಾರಕ್ಕಾಗಿ ಜೈಲಲ್ಲಿ ಇಟ್ಟಿದ್ದಾರೆ
ನಾವು ಮಾಡಿದ ತಪ್ಪೇನು?
ಚರಿತ್ರೆ ಅರಿಯದವರ ಮಾತುಗಳನ್ನು ನಂಬಬೇಡಿ
ಚರಿತ್ರೆಯಲ್ಲಿ ರಾಜಮಹಾರಾಜರು
ಕಾಡು ಕಡಿದು ನಾಡುಮಾಡಲಿಲ್ಲವೆ...
ನಾವು ಮಾಡಿದ್ದೇನು
ಕಾನೂನು ಬದ್ಧವಾಗಿ
ಭೂಮಿಯನ್ನು ರಕ್ಷಣೆ ಮಾಡಲು
ನಮ್ಮ ಹೆಸರಿನಲ್ಲಿ, ಹೆಂಡ್ತಿರ ಹೆಸರಿನಲಿ
ಮಕ್ಕಳ ಮಾಡಿಕೊಂಡಿದ್ದೇವೆ
ನಮ್ಮನ್ನು ಜೈಲಿಗೆ ಕಳಿಸಿದ್ದಾರೆ

ನಮ್ಮ ಆಸ್ತಿಯನ್ನು ಕರ್ನಾಟಕದಲ್ಲೇ ಇಟ್ಟಿದ್ದೇವೆ
ಏಕೆ? ಅದು ನಮ್ಮ ದೇಶಭಕ್ತಿ
ನಮ್ಮ ಆಸೆ ನೀವು ನಗುತ್ತಾ ಇರಬೇಕು
ನಮ್ಮ ಮನೆಯಲ್ಲೂ ಹೆಣ್ಣುಮಕ್ಕಳಿದ್ದಾರೆ
ಅವರಿಗಾಗಿ ಐದಾರು ಕೆ.ಜಿ. ಚಿನ್ನ ಇಟ್ಟಿದ್ದೇವೆ
ನಮ್ಮ ಆಸೆ ನೀವು ನಗುತ್ತಾ ಇರಬೇಕು...

ವ್ಯಂಗ್ಯವಿರುವುದು ಇಂದಿನ ಸಂದರ್ಭದಲ್ಲಿ...

ಶಿವಸುಂದರ್

ನಮ್ಮ ಪಾರ್ಲಿಮೆಂಟಿನಲ್ಲಿ ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳು ದಿನನಿತ್ಯ ನಡೆಯುತ್ತಿರುವಾಗಲೂ ಎಂದು ಅದರ ವಿರುದ್ಧ ಇಷ್ಟು ದೊಡ್ಡ ಧ್ವನಿ ಎದ್ದಿರಲಿಲ್ಲ. ಆದರೆ ಈ ವ್ಯಂಗ್ಯಚಿತ್ರವನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಧ್ವನಿ ಮಾತ್ರ ಪಾರ್ಲಿಮೆಂಟಿನಲ್ಲಿ ಅತಿ ಗಟ್ಟಿಯಾಗಿ ಕೇಳಿಸಿದ್ದು ಮಾತ್ರವಲ್ಲದೆ ದಲಿತ ವಿರೋಧಿಗಳು, ಅವಕಾಶವಾದಿಗಳು ಮತ್ತು ಪಕ್ಷಾತೀತವಾಗಿ ಎಲ್ಲಾ ರಾಜಕಾರಣಿಗಳು ಒಂದಾಗಿ ಹುಯಿಲೆಬ್ಬಿಸಿ ಇಡೀ ಪಠ್ಯ ಪುಸ್ತಕವನ್ನೇ ಹಿಂತೆಗೆದುಕೊಳ್ಳುವಂತೆ ಮಾಡಿಬಿಟ್ಟರು. ಪ್ರಾಯಶಃ ಇದು ನಮ್ಮ ಸಂದರ್ಭದ ಅತಿ ದೊಡ್ಡ ವ್ಯಂಗ್ಯಚಿತ್ರವಲ್ಲವೇ?

ಭಾರತ ಕಂಡ ಅತ್ಯಂತ ಸಂವೇದನಾಶೀಲ ಮತ್ತು ಪ್ರತಿಭಾವಂತ ವ್ಯಂಗ್ಯಚಿತ್ರಕಾರ ಶಂಕರ್ ಅವರು 1949ರಲ್ಲಿ ಬರೆದ ವ್ಯಂಗ್ಯಚಿತ್ರವೊಂದು ಇದೀಗ ಅತ್ಯಂತ ವಿವಾದಕ್ಕೊಳಗಾಗಿದೆ. NCERT ಸಿಲಬಸ್ಸಿನಂತೆ 11ನೇ ತರಗತಿಯ CBSE ಪಠ್ಯಗಳಲ್ಲಿ ಸಂವಿಧಾನ ಮತ್ತು ಅದರ ರಚನೆಗೆ ಸಂಬಂಧಪಟ್ಟಂತೆ ನೀಡಲಾಗಿರುವ ಪರಿಚಯಾತ್ಮಕ ಪಠ್ಯದಲ್ಲಿ ಶಂಕರ್ ಅವರು 1949ರಲ್ಲಿ ಬರೆದ ವ್ಯಂಗ್ಯಚಿತ್ರವೊಂದನ್ನು ಸೇರಿಸಲಾಗಿದೆ. ಈ ಪಠ್ಯ, ಚಿತ್ರ ಹಾಗೂ ಒಟ್ಟಾರೆ ಪಠ್ಯಕ್ರಮ ಇತ್ಯಾದಿಗಳಿಗೆ ಸಲಹೆ ನೀಡಿದವರು ಭಾರತದ ಅತ್ಯಂತ ಪ್ರಸಿದ್ಧ ಜನಪರ ಚಿಂತಕರಾದ ಸುಭಾಷ್ ಪಾಲ್ಷೀಕರ್ ಮತ್ತು ಪ್ರಖ್ಯಾತ ಸಮಾಜವಾದಿ ಮುತ್ಸದ್ಧಿ ಯೋಗೇಂದ್ರ ಯಾದವ್ ಅವರುಗಳು. ವ್ಯಂಗ್ಯಚಿತ್ರವನ್ನು ಬರೆದವರು ಮತ್ತು ಅದನ್ನು ಪಠ್ಯದಲ್ಲಿ ಸೇರಿಸಿದವರು ಎಲ್ಲರೂ ದಲಿತ ಹಿತಾಸಕ್ತಿಯ ಹಿತಚಿಂತಕರೇ ಆದರೂ ಆ ವ್ಯಂಗ್ಯಚಿತ್ರವು ಸಂವಿಧಾನ ಕರ್ತೃ ಅಂಬೇಡ್ಕರ್ ಅವರನ್ನು ಹೀಯಾಳಿಸುವಂತೆ ತೋರಿಸುತ್ತದೆ ಎಂದು ಈಗ ಆ ಚಿತ್ರವನ್ನು ಮಾತ್ರವಲ್ಲದೆ ಇಡೀ ಪುಸ್ತಕವನ್ನೇ ಹಿಂತೆಗೆದುಕೊಳ್ಳಲಾಗಿದೆ. ಪಾರ್ಲಿಮೆಂಟಿನಲ್ಲಿ ದಲಿತರ ಮೇಲೆ ಯಾವ ಘೋರ ಅತ್ಯಾಚಾರ ಅಥವಾ ಅನ್ಯಾಯಗಳು ನಡೆದಾಗಲೂ ನಡೆಯದಷ್ಟು ಚರ್ಚೆ ಮತ್ತು ಪಕ್ಷಾತೀತವಾದ ಒಗ್ಗಟ್ಟು ಈ ವ್ಯಂಗ್ಯಚಿತ್ರ ಪ್ರಕರಣದಲ್ಲಿ ವ್ಯಕ್ತವಾಗಿದ್ದು ಕೂಡಾ ಸಂದರ್ಭದ ವ್ಯಂಗ್ಯವೋ ಅಥವಾ ವಾಸ್ತವವೋ ಎಂಬ ಗೊಂದಲ ಹುಟ್ಟುಹಾಕುವಷ್ಟು ವಿಷಯ ಮತ್ತು ಸಂದರ್ಭ ಗೋಜಲಾಗಿದೆ.

ಅಸಲು ಆ ವ್ಯಂಗ್ಯಚಿತ್ರದಲ್ಲಿ ಇರುವುದಿಷ್ಟು, ಸಂವಿಧಾನ ರಚನಾ ಸಭೆಯಲ್ಲಿ ಸಂವಿಧಾನ ರಚನಾ ಸಭೆಯ ವೇಗ ಕುಂಠಿತವಾಗಿದ್ದ ವಿಷಯದ ಬಗ್ಗೆ ಈ ವ್ಯಂಗ್ಯ ಚಿತ್ರವಿದೆ. ಸಂವಿಧಾನ ರಚನೆಯ ಕರಡು ಸಮಿತಿಯ ಅಧ್ಯಕ್ಷರಾಗಿದ್ದವರು ಅಂಬೇಡ್ಕರ್. ಆಗ (1949ರಲ್ಲಿ) ಪ್ರಧಾನಿಯಾಗಿದ್ದವರು ನೆಹರೂ. ಸಂವಿಧಾನ ರಚನೆ ಮಂದಗತಿಯಲ್ಲಿ ಸಾಗುತ್ತಿರುವುದನ್ನು ಬಸವನ ಹುಳು ತೆವಳುತ್ತಿರುವ ರೂಪಕದಲ್ಲಿ ತೋರಿಸುವ ವ್ಯಂಗ್ಯ ಚಿತ್ರ, ಅದರ ಅಧ್ಯಕ್ಷರಾದ ಅಂಬೇಡ್ಕರ್ ಅವರು ಅದರ ಮೇಲೆ ಕೂತು ಅದಕ್ಕೆ ಚಾಟಿ ಹಿಡಿದು ಬೇಗ ತೆವಳುವಂತೆ ಆದೇಶಿಸುತ್ತಿರುವಂತೆಯೂ, ಅವರ ಹಿಂದೆ ನೆಹರೂ ಕೂಡಾ ಚಾಟಿ ಹಿಡಿದು ಬಸವನಹುಳುವಿನ ವೇಗ ಹೆಚ್ಚಿಸಲು ಪ್ರಯತ್ನಿಸುತ್ತಿರುವಂತೆಯೂ ತೋರಿಸುತ್ತದೆ.

ಇದರ ಪ್ರಧಾನ ವ್ಯಂಗ್ಯವಿರುವುದು ಸಂವಿಧಾನ ರಚನೆ ಸಭೆಯ ಗತಿಯನ್ನು ಬಸವನಹುಳುವಿಗೆ ಹೋಲಿಸಿದ ರೂಪಕದಲ್ಲಿ. ಮತ್ತು ಅದರ ವೇಗವನ್ನು ಹೆಚ್ಚಿಸಲಾಗದ ನಾಯಕರನ್ನು ವಿಡಂಬನೆ ಮಾಡುವುದರಲಿ. ಅಂಬೇಡ್ಕರ್ ಮತ್ತು ನೆಹರೂ ಇಬ್ಬರ ಬಗ್ಗೆಯೂ ಅಪಾರ ಗೌರವ ಮತ್ತು ಅಭಿಮಾನ ಹೊಂದಿದ್ದ ವ್ಯಂಗ್ಯಚಿತ್ರಕಾರ ಶಂಕರ್ ಅವರ ಮನೋಧರ್ಮ ಮತ್ತು ರಾಜಕೀಯವನ್ನು ಬಲ್ಲವರಿಗೆ ಮತ್ತು 1949ರ ಹೊತ್ತಿನ ರಾಜಕೀಯ ಪ್ರಜ್ಞೆಯ ಐತಿಹಾಸಿಕ ನಿರ್ದಿಷ್ಟತೆಗಳನ್ನು ಬಲ್ಲವರಿಗೆ ಈ ವ್ಯಂಗ್ಯಚಿತ್ರ ಇದಕ್ಕಿಂತ ಹೆಚ್ಚಿನ ಅರ್ಥವನ್ನೇನೂ ಧ್ವನಿಸಬೇಕಿರಲಿಲ್ಲ. ಆದರೆ ಆ ವ್ಯಂಗ್ಯಚಿತ್ರವನ್ನು ವಿದ್ಯಾರ್ಥಿಗಳಿಗೆ ಸಂವಿಧಾನ ರಚನಾ ಸಭೆಯ ಇತಿಹಾಸವನ್ನು ಮೊಟ್ಟ ಮೊದಲ ಬಾರಿಗೆ ಪರಿಚಯಿಸಲು ಬಳಸಿದಾಗ ಒಂದಷ್ಟು ಸಕಾರಣವಾದ ಪ್ರಶ್ನೆಗಳನ್ನೂ ಮತ್ತಷ್ಟು ವಿನಾಕಾರಣ ವಿರೋಧಗಳನ್ನೂ ಹುಟ್ಟುಹಾಕಿದೆ.

ಕಾರಣ ವ್ಯಂಗ್ಯ ಚಿತ್ರ ರಚನೆಯಾದ ಸಂದರ್ಭ ಮತ್ತು ಅದನ್ನು ಒಂದು ಪೂರಕ ಪಠ್ಯವಾಗಿ ಓದುತ್ತಿರುವ ಸಂದರ್ಭ ಬೇರೆಯಾಗಿದೆ.

ಈ ವ್ಯಂಗ್ಯಚಿತ್ರವನ್ನು 63 ವರ್ಷಗಳ ನಂತರ, ಅಂದರೆ ಸ್ವಾತಂತ್ರ್ಯದ ಬಗ್ಗೆ ಮತ್ತು ನಮ್ಮ ಸ್ವಾತಂತ್ರ್ಯ ಹೋರಾಟದ ಬಗ್ಗೆ ಹಾಗೆಯೇ ಸಂವಿಧಾನ ರಚನೆಯ ಬಗ್ಗೆ 1949ರಲ್ಲಿ ಇರದಿದ್ದ ಹಲವು ಎಚ್ಚೆತ್ತ ಪ್ರಜ್ಞೆಯ ಕಾಲಘಟ್ಟದಲ್ಲಿ, 11ನೇ ತರಗತಿಯ ಮಕ್ಕಳಿಗೆ ಪರಿಚಯಾತ್ಮಕವಾಗಿ ನೀಡಲಾಗಿದೆ. ಕಳೆದ 63 ವರ್ಷಗಳಲ್ಲಿ 1949ರಲ್ಲಿ ಸೀಮಿತವಾಗಿದ್ದ ಅಂಬೇಡ್ಕರ್ ಪ್ರತಿನಿಧಿಸುತ್ತಿದ್ದ ಎಚ್ಚೆತ್ತ ದಲಿತ ಪ್ರಜ್ಞೆ ವ್ಯಾಪಕವಾಗಿ ಹರಡಿದೆ ಮತ್ತು ಅದು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ತನ್ನ ಹಕ್ಕಿನ ಸ್ಥಾನವನ್ನು ಗಟ್ಟಿಸಿಕೇಳಿ ಪಡೆದುಕೊಳ್ಳುತ್ತಿದೆ. ಹಾಗೆಯೇ ಅಂದಿನ ಬ್ರಿಟಿಷ್ ವಿರೋಧಿ ಭಾರತ ರಾಷ್ಟ್ರೀಯವಾದದಲ್ಲಿ ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ಹೊರಗಿಟ್ಟಿದ್ದ ಹಲವು (ಸ್ತ್ರಿ, ದಲಿತ, ಮಹಿಳೆ, ಪ್ರಾದೇಶಿಕತೆ, ಉಪ ರಾಷ್ಟ್ರೀಯತೆ) ಸಂವೇದನೆಗಳು ಕಳೆದ 63 ವರ್ಷಗಳಲ್ಲಿ ಆಯಾ ಸಮುದಾಯಗಳನ್ನು ಜಾಗೃತಗೊಳಿಸಿ 49ರ ಕಾಲಘಟ್ಟದ ರಾಷ್ಟ್ರೀಯವಾದದ ಇತಿಮಿತಿಗಳನ್ನು ಬಯಲಿಗೆ ತರುತ್ತಿದೆ. ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದಲ್ಲಿ ಪ್ರಶ್ನಾತೀತ "ಐಕಾನ್"ಗಳಾಗಿದ್ದ ನೆಹರೂ, ಗಾಂಧಿ ಇನ್ನಿತರರ ಪಾತ್ರವನ್ನು ಮರು ವಿಶ್ಲೇಷಣೆಗೆ ಒಳಪಡಿಸುತ್ತಿದೆ. ಹಾಗೆಯೇ ಆ ದಿನಗಳಲ್ಲಿ ಅಧಿಕೃತವಾಗಿ ಪ್ರಚಲಿತಪಡಿಸಿದ ಸ್ವತಂತ್ರ ಭಾರತದ ಹಲವು ಕಥನಗಳ ಮತ್ತು ಹಳೆಯ ಐಕಾನ್‌ಗಳ ಬಿರುಕುಗಳನ್ನು ಬಯಲಿಗೆ ತಂದಿದ್ದೇ ಅಲ್ಲದೇ ಮೂಲೆಗುಂಪಾಗಿದ್ದ ಶೋಷಿತ ಪ್ರಜ್ಞೆಯ "ಐಕಾನ್"ಗಳನ್ನು ರಾಷ್ಟ್ರೀಯ ಮುಖ್ಯವಾಹಿನಿಯಲ್ಲಿ ಪ್ರತಿಷ್ಠಾಪಿಸುತ್ತಿದೆ. ಇದೊಂದು ಸ್ವಾಗತಾರ್ಹ ಪ್ರಜಾತಾಂತ್ರಿಕ ಪ್ರಕ್ರಿಯೆ ಎಂಬುದನ್ನು ಮೊದಲು ಗುರುತಿಸಬೇಕು.

ಸ್ವತಂತ್ರ ಭಾರತದಲ್ಲಿ ಶೋಷಿತರಿಗೆ ಸಹ್ಯವಾಗುವಂತೆ ಕಟ್ಟುವಲ್ಲಿ ಅಂಬೇಡ್ಕರ್ ನಡೆಸಿದ ಜೀವನ್ಮರಣದ ಹೋರಾಟದ ಪ್ರಜ್ಞೆ ನಮ್ಮ ರಾಷ್ಟ್ರೀಯ ಸಂವೇದನೆಗಳಿಗೆ ಸೇರಿದ್ದೇ 80ರ ದಶಕದಲ್ಲಿ. ದಲಿತ ಪ್ರಜ್ಞೆಯ ಎಚ್ಚೆತ್ತ ಹೋರಾಟದ ಉತ್ತುಂಗದಲ್ಲಿ. ಅಂಬೇಡ್ಕರ್ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಕೊಡಲು ಭಾರತದ ಆಳುವ ವರ್ಗ ಮನಸ್ಸು ಮಾಡಿದ್ದೇ ಸ್ವಾತಂತ್ರ್ಯ ಬಂದು 50 ವರ್ಷಗಳ ನಂತರ ಎಂಬುದು ಈ ಪ್ರಕ್ರಿಯೆಗೆ ಒಂದು ನಿದರ್ಶನ.

ಹೀಗಾಗಿ 1949ರ ಸಂದರ್ಭವನ್ನು ಮತ್ತು ನಮ್ಮ ಇಡೀ ಸಂವಿಧಾನ ರಚನೆಯ ಪ್ರಕ್ರಿಯೆಯನ್ನು "ಅಧಿಕೃತ ರಾಷ್ಟ್ರೀಯವಾದದ" ನೆಲೆಯಲ್ಲಲ್ಲದೆ ದಲಿತ, ಸ್ತ್ರಿ, ಭಾಷಿಕ ರಾಷ್ಟ್ರೀಯತೆ, ಶೂದ್ರ ಇನ್ನಿತ್ಯಾದಿ ವಂಚಿತ ನೆಲೆಗಳಿಂದ ಭಿನ್ನವಾಗಿ ವಿಶ್ಲೇಷಿಸುವ ಮತ್ತು ಭಿನ್ನವಾಗಿ ಅರ್ಥಮಾಡಿಕೊಳ್ಳುವ ವಿಮರ್ಶಿಸುವ ದೃಷ್ಟಿಕೋನಗಳು ಇಂದಿನ ಪ್ರಜಾತಂತ್ರವನ್ನು ಆಳಗೊಳಿಸಿದೆ. ಹೀಗಾಗಿಯೇ ಅಂದಿನ ಯಾವುದೇ ಹೇಳಿಕೆಗಳು ಅಥವಾ ಕಥನಗಳ ಬಗ್ಗೆ ಇಂದು ಭಿನ್ನಮತ ಅಥವಾ ಟೀಕೆ ಇರುವುದು ಸಹಜ. ಅದು

ನಮ್ಮ ತಿಳವಳಿಕೆಯನ್ನು ಇನ್ನಷ್ಟು ಶ್ರೀಮಂತಗೊಳಿಸುತ್ತದೆ ಮತ್ತು ಬಹುಮುಖಿಯಾಗಿಸುತ್ತದೆ. ಅದು ಸ್ವಾಗತಾರ್ಹ.

ಪ್ರಸ್ತುತ 11ನೇ ತರಗತಿಯಲ್ಲಿ ಸೇರಿಸಲ್ಪಟ್ಟಿರುವ ವ್ಯಂಗ್ಯಚಿತ್ರ ಸಂವಿಧಾನ ರಚನೆಯ ಗತಿಯ ಬಗ್ಗೆ ಮತ್ತು ಅದರಲ್ಲಿ ನೆಹರೂ ಮತ್ತು ಅಂಬೇಡ್ಕರ್ ಅವರ ಪಾತ್ರದ ಬಗ್ಗೆ ತೆಳು ಟೀಕೆಯನ್ನು ತೋರಿಸುತ್ತದೆ. ಹಾಗೆ ನೋಡಿದರೆ ಈಗಲೂ ಈ ವ್ಯಂಗ್ಯಚಿತ್ರವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಮಾತನಾಡುವುದಾದರೆ ಅವಕಾಶವಾದಿ ರಾಜಕಾರಣಿಗಳು ಹೇಳುತ್ತಿರುವಂತೆ ಅಂಬೇಡ್ಕರ್ ಅವರಿಗೆ ಅವಮಾನವಾಗುವಂತ ಯಾವುದೂ ವ್ಯಂಗ್ಯ ಚಿತ್ರದಲ್ಲಿಲ್ಲ. ಶಂಕರ್ ಅವರ ಒಟ್ಟಾರೆ ಸೃಜನಶಿಲ ಅಭಿವ್ಯಕ್ತಿಯನ್ನು ಗಮನಿಸುವುದಾದರೂ ಅವರಿಗೆ ಅಂಬೇಡ್ಕರ್ ಅವರ ಬಗ್ಗೆ ಗೌರವದ ಹೊರತು ಇನ್ಯಾವ ಕುತ್ಸಿತ ಭಾವನೆಯೂ ಇರಲಿಲ್ಲ. ಆದರೆ ಇಂದಿನ ಪ್ರಗತಿಪರ ಸೃಜನಶಿಲತೆಯು ಖಂಡಿತವಾಗಿಯೂ ಒಳಗೊಳಬೇಕಾದ ದಲಿತ ಪ್ರಜ್ಞೆಯ ಹರಿತ ಆ ಕಾಲಘಟ್ಟದಲ್ಲಿ ಶಂಕರ ಅವರಿಗೆ ಮಾತ್ರವಲ್ಲ, ಬಹುಪಾಲು ಸಮಾಜವಾದಿಗಳಿಗೆ ಮತ್ತು ಕಮ್ಯುನಿಸ್ಟರಿಗೇ ಇರಲಿಲ್ಲ. ಹಾಗೆಂದ ಮಾತ್ರಕ್ಕೆ ಅವರೆಲ್ಲಾ ಆ ಕಾಲಘಟ್ಟದಲ್ಲಿ ದಲಿತ ವಿರೋಧಿಗಳೆಂದು ಶರಾ ಬರೆಯಲಾಗುವುದಿಲ್ಲ.

ಅಂಬೇಡ್ಕರ್ ಪ್ರಣೀತ ದಲಿತ ಪ್ರಜ್ಞೆ ಭಾರತೀಯ ಸಮಾಜದಲ್ಲಿ ಒಂದು ಚಳವಳಿ ಸ್ವರೂಪ ಪಡೆದುಕೊಳ್ಳಲು ಹಲವು ದಶಕಗಳೇ ಬೇಕಾಯಿತು ಎಂಬುದನ್ನು ಗಮನದಲ್ಲಿಟ್ಟುಕೊಂಡಾಗ ಆ ಕಾಲಘಟ್ಟದ ಐತಿಹಾಸಿಕ ಮಿತಿಗಳು ಇನ್ನಷ್ಟು ಸ್ಪಷ್ಟವಾಗುತ್ತದೆ. ಯಾವುದೇ ಸೃಜನಶೀಲ ಕೃತಿ ನಿರ್ದಿಷ್ಟ ಕಾಲ ಸಂದರ್ಭದಲ್ಲಿ ಸೃಷ್ಟಿಯಾಗುವುದರಿಂದ ಅದಕ್ಕೆ ಆ ಕಾಲಘಟ್ಟದ ಮಿತಿಗಳು ಇದ್ದೇ ಇರುತ್ತವೆ. ಕಾಲಘಟ್ಟದದ ಮಿತಿಯನ್ನು ವ್ಯಕ್ತಿಯ ಮಿತಿಯಾಗಿಯೋ ಅಥವಾ ಆ ವ್ಯಕ್ತಿಯ ದುರುದ್ದೇಶವಾಗಿಯೋ ಅರ್ಥಮಾಡಿಕೊಳ್ಳುವುದು ಈ ಕಾಲಘಟ್ಟದ ದುರುದ್ದೇಶಪ್ರೇರಿತ ತಿಳವಳಿಕೆಯಾಗುತ್ತದೆ. ಪ್ರಶ್ನೆಯೇನೆಂದರೆ ಆ ಕಾಲಘಟ್ಟದ ಪ್ರಗತಿಪರತೆಯನ್ನಾದರೂ ಆ ವ್ಯಕ್ತಿ ಒಳಗೊಡಿದ್ದರೋ ಇಲ್ಲವೋ ಎಂಬುದೇ. ಉದಾಹರಣೆಗೆ ನಮ್ಮ ಸಂವಿಧಾನ ರಚನೆಯ ಸಂದರ್ಭದಲ್ಲಿ ಅಂಬೇಡ್ಕರ್, ಕೃಪಲಾನಿ, ಲೋಹಿಯಾ, ಕಮ್ಯುನಿಸ್ಟ್ ನಾಯಕರುಗಳು ಆ ಕಾಲಘಟ್ಟದ ಸರಾಸರಿ ಜನಪರತೆಯ ಮೌಲ್ಯಗಳನ್ನು ಮೈಗೂಡಿಸಿಕೊಂಡಿದ್ದರೆ ಸರ್ದಾರ್ ವಲ್ಲಭಬಾಯಿ ಪಟೇಲ್, ಪುರುಷೋತಮ್ ದಾಸ್ ಟಂಡನ್, ಗೋಲ್ವಾಲ್ಕರ್ (ಇವರಲ್ಲಿ ಹಲವರು ಆ ಕಾಲಘಟ್ಟದ ವಿವಿಧ ತಿಳವಳಿಕೆಯ ನಾಯಕರೇ ಹೊರತು ಸಂವಿಧಾನ ರಚನಾ ಸಭೆಯ ಸದಸ್ಯರಲ್ಲ..) ಇನ್ನಿತರರು ಆ ಕಾಲದ ಪ್ರಗತಿಪರತೆಯ ಒಂದಿಂಚನ್ನೂ ಮೈಗೂಡಿಸಿಕೊಳ್ಳದ ಪ್ರತಿಗಾಮಿಗಳು. ನೆಹರು ಹಾಗೂ ಇನ್ನಿತರರು ಇವೆರಡರ ಮಧ್ಯೆ ತೇಲುತ್ತಿದ್ದ ಯಥಾಸ್ಥಿತಿವಾದಿಗಳು. ಅದೇ ಮಾನದಂಡಗಳನ್ನು ಸೃಜನಶೀಲ ಪ್ರತಿಭೆಗಳ ಬಗ್ಗೆಯೂ ಅನ್ವಯಿಸಿ ಹೇಳುವುದಾದರೆ ಶಂಕರ್ ಅವರ ಸೃಜನಶೀಲ ಪ್ರತಿಭೆಯನ್ನು ಮಾರ್ಗದರ್ಶನ ಮಾಡುತ್ತಿದ್ದ ತಿಳವಳಿಕೆ ಹೆಚ್ಚು ಮೊದಲ ಬಗೆಗೆ ಸೇರುವ ಆ ಕಾಲದ ಪ್ರಗತಿಪರ ಚಿಂತನೆಯದ್ದೇ ಆಗಿತ್ತು. ಹಾಗೆ ನೋಡಿದರೆ ವ್ಯಂಗ್ಯಚಿತ್ರಕಾರನೊಬ್ಬ ಹುಟ್ಟುವುದೇ ಯಥಾಸ್ಥಿತಿವಾದದ ವಿಮರ್ಶೆಯಲ್ಲಿ..

ಹೀಗಾಗಿ ಶಂಕರ್ ಅವರ ವ್ಯಂಗ್ಯಚಿತ್ರ ಆ ಕಾಲಘಟ್ಟದ ಮಿತಿಯನ್ನು ಹೊಂದಿದ್ದರೂ ಪ್ರಧಾನವಾಗಿ ಆ ಕಾಲದ ಜನಪರ ಆಶಯಗಳನ್ನು ಪ್ರತಿಬಿಂಬಿಸುತ್ತವೆ ಎಂಬುದು ನಿರ್ವಿವಾದ.

ಆದರೆ ಪ್ರಶ್ನೆ ಅದಲ್ಲ. 63 ವರ್ಷಗಳಷ್ಟು ಹಿಂದಿನ ವ್ಯಂಗ್ಯಚಿತ್ರವನ್ನು ಒಂದು ಐತಿಹಾಸಿಕ ದಾಖಲೆಯಾಗಿ ನೋಡುವುದಕ್ಕೂ ಮತ್ತು ವರ್ತಮಾನದಲ್ಲಿ ಇತಿಹಾಸದ ಅಂಶವೊಂದನ್ನು ಗತಿಶೀಲವಾಗಿ ಅರ್ಥಮಾಡಿಕೊಳ್ಳಲು ಸಾಧನವಾಗಿ ಬಳಸುವುದಕ್ಕೂ ವ್ಯತ್ಯಾಸವಿದೆ. "1949ರಲ್ಲಿ ಶಂಕರ್ ಎಂಬ ವ್ಯಂಗ್ಯಚಿತ್ರಕಾರರು ಸಂವಿಧಾನ ರಚನೆಯ ಬಗ್ಗೆ ಈ ರೀತಿಯ ವ್ಯಂಗ್ಯ ಚಿತ್ರ ಬರೆದಿದ್ದರು" ಎಂಬಂತೆ ಒಂದು ಐತಿಹಾಸಿಕ ಸಂಗತಿಯಂತೆ ಈ ವ್ಯಂಗ್ಯಚಿತ್ರ ಬಳಕೆಯಾಗಿದ್ದರೆ ಅದರಲ್ಲಿ ಹೆಚ್ಚು ಗೊಂದಲವೇ ಇರುತ್ತಿರಲಿಲ್ಲ. ಆದರೆ 63 ವರ್ಷಗಳ ನಂತರವೂ ಸಂವಿಧಾನ ರಚನಾ ಸಭೆಯ ಬಗ್ಗೆ ಪ್ರಸ್ತಾಪ ಮಾಡುತ್ತಾ ಸಂವಿಧಾನ ರಚನೆಯ ಬಗ್ಗೆ ಮೌಲಿಕವಾಗಿ ಅರ್ಥಮಾಡಿಕೊಳ್ಳುವ ಸಾಧನವಾಗಿ ವ್ಯಂಗ್ಯಚಿತ್ರ ಬಳಕೆಯಾದಾಗ ಸಹಜವಾಗಿಯೇ ಅದರ ಬಗ್ಗೆ ಭಿನ್ನವಾದ ಧ್ವನಿಗಳು ಕೂಡಾ ಹುಟ್ಟಿಕೊಳ್ಳುತ್ತವೆ.

1949ರಲ್ಲಿ ಶಂಕರ್ ಅವರು ಗ್ರಹಿಸಿದಂತೆ, ಅಥವಾ ಈ ವ್ಯಂಗ್ಯಚಿತ್ರ ಸಲಹೆ ಮಾಡುವಂತೆ, ರಾಷ್ಟ್ರೀಯ ಹೋರಾಟದಲ್ಲಿ ಮತ್ತು ಸಂವಿಧಾನ ರಚನೆಯಲ್ಲಿ ನೆಹರು ಮತ್ತು ಅಂಬೇಡ್ಕರ್ ಅವರ ಪಾತ್ರವನ್ನು ಪರಸ್ಪರ ಪೂರಕವಾಗಿತ್ತೆಂದೇನೂ ಇಂದಿನ ಎಚ್ಚೆತ್ತ ದಲಿತ ಪ್ರಜ್ಞೆ ಸಕಾರಣವಾಗಿ ಗ್ರಹಿಸುವುದಿಲ್ಲ. ಗಾಂಧಿ ಮತ್ತು ನೆಹರು ಅವರ ಬಗ್ಗೆ ದಲಿತ ವಿಮರ್ಶೆ ಸಕಾರಣವಾಗಿ ಹರಿತವಾಗಿದೆ. 1949ರಲ್ಲಿ ಈ ವ್ಯಂಗ್ಯ ಚಿತ್ರ ರಚನೆಯಾದ ನಂತರದಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ನಡುವೆ ಈ ದೇಶದ ದಮನಿತ ಸಮುದಾಯಗಳ ವಿಮೋಚನೆಯ ಕುರಿತಾದ ಸಂಘರ್ಷ ಇನ್ನಿತ್ಯಾದಿಗಳ ಹಿನ್ನೆಲೆಯಲ್ಲಿ, ಈ ವ್ಯಂಗ್ಯಚಿತ್ರ ಸಂವಿಧಾನ ರಚನೆಯಲ್ಲಿ ಮತ್ತು ದೇಶದ ಕಟ್ಟೋಣದಲ್ಲಿ ಅಂಬೇಡ್ಕರ್ ಮತ್ತು ನೆಹರೂ ಅವರ ಪಾತ್ರದ ಬಗ್ಗೆ ವ್ಯಂಗ್ಯಚಿತ್ರ ಹೇಳುವ ರೀತಿಯ ಓದನ್ನು ಆಗಮಾಡುವುದಿಲ್ಲ. ದಮನಿತ ಕಣ್ಣುಗಳು ಆ ವ್ಯಂಗ್ಯಚಿತ್ರದಲ್ಲಿ ನೆಹರು ಅಂಬೇಡ್ಕರ್ ಅವರನ್ನು ಉಸ್ತುವಾರಿ ಮಾಡುವಂತೆ ಕಂಡರೆ ಅದರಲ್ಲಿ ಆ ಕಣ್ಣಿನ ತಪ್ಪೇನೂ ಇಲ್ಲ. ಹಾಗೆಯೇ ಕೆಲವು ಕಾಮಾಲೆ ಕಣ್ಣುಗಳು ನೆಹರು ಚಾಟಿ ಬೀಸುತ್ತಿರುವುದು ಅಂಬೇಡ್ಕರ್ ಮೇಲೆ ಎಂದು ಅಂದುಕೊಳ್ಳುವುದನ್ನೂ ಆ ವ್ಯಂಗ್ಯಚಿತ್ರ ತಡೆಯುವುದಿಲ್ಲ.

ಈ ಬಗೆಯ ಓದಿನ ಹಿಂದೆ ಒಂದು ಅವಕಾಶವಾದಿ ರಾಜಕಾರಣ ಇರುವುದು ಸ್ಪಷ್ಟವಾದರೂ ಒಟ್ಟಾರೆ ನೆಹರು ಮತ್ತು ಅಂಬೇಡ್ಕರ್ ಅವರ ವಿಚಾರ ಬೇಧ ಮತ್ತು ಪ್ರಧಾನಿ ಮತ್ತು ಕಾಂಗ್ರೆಸ್ ಪಕ್ಷ ಪ್ರತಿನಿಧಿಸುತ್ತಿದ್ದ ಹಿತಾಸಕ್ತಿಗಳು ಅಂಬೇಡ್ಕರ್ ಅವರು ಪ್ರತಿನಿಧಿಸುತ್ತಿದ ಹಿತಾಸಕ್ತಿಗಳ ಮೇಲೆ ಚಾಟಿಯನ್ನೇ ಬೀಸಿದ ಇತಿಹಾಸವನ್ನು ಬೆನ್ನಿಗಿಟ್ಟುಕೊಂಡು ನೋಡಿದಾಗ ವ್ಯಂಗ್ಯಚಿತ್ರ ಅನುದ್ದೇಶಪೂರ್ವಕವಾಗಿ ಹಲವು ಓದುಗಳನ್ನು ಹುಟ್ಟಿಸುತ್ತದೆ. ಹೀಗಾಗಿ ಬಹುಬಗೆಯ ಓದಿನ ಸಾಧ್ಯತೆ ವ್ಯಂಗ್ಯ ಚಿತ್ರದಲ್ಲೂ ಇದೆ. ನೋಡುಗರಲ್ಲೂ ಇದೆ.

ಹೀಗಾಗಿ ಅದರ ಬಗ್ಗೆ ಹುಯಿಲೆಬ್ಬಿಸುವ ಅವಕಾಶವಾದಿ ರಾಜಕಾರಣಿಗಳ ದುರುದ್ದೇಶವನ್ನು ಟೀಕಿಸಬಹುದಾದರೂ ಆ ಬಗೆಯ ಓದಿನ ಸಾಧ್ಯತೆಯನ್ನು ಸಾಹಿತ್ಯ ಮತ್ತು ಸಂಸ್ಕೃತಿ ಅರ್ಥವಾಗದವರ ಬುದ್ಧಿಹೀನ ಓದು ಎಂದು ತಿರಸ್ಕರಿಸಲಾಗುವುದಿಲ್ಲ. ಹೀಗಾಗಿ ಅಂಬೇಡ್ಕರ್ ಅವರನ್ನು ಬಳಸಿಕೊಂಡು ರಾಜಕಾರಣ ಮಾಡುತ್ತಿರುವ ಅವಕಾಶವಾದಿ ರಾಜಕಾರಣವನ್ನು ಟೀಕಿಸುವ ಹೊತ್ತಿನಲ್ಲೇ ಬದಲಾದ ಸಂದರ್ಭ ಮತ್ತು ಎಚ್ಚೆತ್ತ ದಮನಿತ ಪ್ರಜ್ಞೆಗಳ ಹಿನ್ನೆಲೆಯಲ್ಲಿ ಒಟ್ಟಾರೆ ವಿರೋಧವನ್ನು ಸಹಾನುಭೂತಿಯಿಂದಲೇ ಪರಿಶೀಲಿಸಬೇಕಾಗುತ್ತದೆ. ಈ ವ್ಯಂಗ್ಯಚಿತ್ರವನ್ನು ಅಪಮಾನವೆಂಬಂತೆ ಪ್ರಾಮಾಣಿಕವಾಗಿಯೇ ಗ್ರಹಿಸಬಹುದಾದ ತಿಳವಳಿಕೆಯ ರಾಜಕೀಯ ಮುಗ್ಧತೆಯೆಂದು ಅವಗಣನೆ ಮಾಡುವುದು ಸಹ ಇಂದಿನ ದಲಿತ ಪ್ರಶ್ನೆಯನ್ನು ತಿರಸ್ಕರಿಸುವ ದುಷ್ಟ ವಿಧಾನವೇ ಆಗಿಬಿಡುವ ಸಾಧ್ಯತೆ ಇದೆ..

ಅದೇನೇ ಇರಲಿ. ಈ ವಿರೋಧಕ್ಕೆ ಐತಿಹಾಸಿಕ ತಳಹದಿಯಿದೆ ಎಂದು ಒಪ್ಪಿಕೊಂಡ ಮೇಲೆ ಆ ವ್ಯಂಗ್ಯಚಿತ್ರವನ್ನು ಮತ್ತು ಪಠ್ಯವನ್ನು ಏನು ಮಾಡಬೇಕು?

ಈ ಪ್ರಶ್ನೆಗೆ ಮಾತ್ರ ನಮ್ಮ ಪಾರ್ಲಿಮೆಂಟು ಅತ್ಯಂತ ಕೆಟ್ಟ ಉತ್ತರವನ್ನು ನೀಡಿದೆ. ಆ ವ್ಯಂಗ್ಯಚಿತ್ರವಾಗಲೀ, ಅದನ್ನು ಪಠ್ಯಕ್ಕೆ ಸೇರಿಸಿದ ಸುಭಾಷ್ ಮತ್ತು ಯಾದವ್ ಅವರಿಗೇ ಆಗಲೀ ಯಾವುದೇ ಜಾತಿವಾದಿ ದುರುದ್ದೇಶಗಳಿಲ್ಲ. ಹೀಗಾಗಿ ಅವರ ಮೇಲೆ ಅದನ್ನು ಆರೋಪಿಸುವುದು, ಇಡೀ ಪಠ್ಯಪುಸ್ತಕವನ್ನೇ ಹಿಂತೆಗೆದುಕೊಳ್ಳುವುದು ಹಾಗೂ ಅವರ ಮೇಲೆ ಕೇಸುಗಳನ್ನು ಜಡಿಯುವುದು, ಹಲ್ಲೆ ಮಾಡುವುದು ಇತ್ಯಾದಿಗಳೆಲ್ಲಾ ಅತಿರೇಕದ

(33ನೇ ಪುಟಕ್ಕೆ)

ಮೂಲಭೂತವಾದಕ್ಕೆ ಧಾರ್ಮಿಕ ಸೌಹಾರ್ದತೆಯೇ ಮದ್ದು

ಡಾ॥ ಎಂ.ಡಿ ಒಕ್ಕುಂದ

'Harmony' ಎಂಬ ಪದದ ಮೂಲ 'Harmonica' ಎಂದರೆ ಬಾಯಿಯ ಮೂಲಕ ಬಾರಿಸುವ ತಂತಿವಾದ್ಯ. ಇದರಲ್ಲಿ ಹಲವಾರು ತಂತಿಗಳನ್ನು ಸಾಲಾಗಿ ಜೋಡಿಸಿದ್ದು ಬಾಯಿಯಿಂದ ಊದಿ ಗಾಳಿ ಬೀಸಿದರೆ ಅನುರಣಿಸಿ ಸುಂದರ ರಾಗಗಳು ಹೊರಡುತ್ತವೆ. 1. ಸಮರಸವಾದ, ಸುಸಂಗತವಾದ, ಏಕಮೇಳವಾಗಿ ಒಂದುಗೂಡಿದ ಏಕಶೃತಿಯಾಗಿ ಏಕೀಭವಿಸಿದ, 2. ಭಿನ್ನಾಭಿಪ್ರಾಯವಿಲ್ಲದ ಅಭಿಪ್ರಾಯ ಭೇದವಿಲ್ಲದ, 3. ವಿರಸವಿಲ್ಲದ, ವೈಷಮ್ಯವಿಲ್ಲದ, 4. ಇಂಪಾದ ಮಧುರವಾದ ನಾದವುಳ್ಳ, 5. ಸುಸ್ವರವಾಗಿ ಹಾಡುವ, ಸುಶ್ರಾವ್ಯವಾಗಿ ವಾದನ ಮಾಡುವ" ಮುಂತಾದ ಅರ್ಥಗಳು ಈ ಪದಕ್ಕುಂಟು.[1] ತಾತ್ವಿಕವಾಗಿ ಅತ್ಯಂತ ಮೌಲಿಕಾರ್ಥವನ್ನು ಹೊಂದಿದ ಪರಿಕಲ್ಪನೆ ಇದು. ಸೌಹಾರ್ದತಾ ತತ್ವದ ಮುಖ್ಯ ಲಕ್ಷಣಗಳನ್ನು ಈ ಅರ್ಥಗಳು ಸ್ಪಷ್ಟಪಡಿಸುತ್ತವೆ.

ಸೌಹಾರ್ದತೆ ಪದದಲ್ಲಿ 'ಹೃದ್' ಪದವಿದ್ದು ಅದು 'ಹೃದಯ'ಕ್ಕೆ ಸಂಬಂಧಿಸಿದೆ. "ದೇಹದ ಮಲಿನ ರಕ್ತವನ್ನು ಶುದ್ಧಗೊಳಿಸಿ ಅಂಗಾಂಗಗಳಿಗೆ ಶುದ್ಧ ರಕ್ತವನ್ನು ಒದಗಿಸುವ ರಕ್ತಕೋಶ ಎದೆ, ಮನಸ್ಸು, ಅಂತಃಕರಣ, ದಯೆ, ಕರುಣೆ, ಸಾರವತ್ತಾದ ಭಾಗ, ತಿರುಳು"[2] ಮುಂತಾದ ಅರ್ಥಗಳನ್ನು ಹೊಂದಿದೆ. ಇಂಥ ಸಮಾನ ಹೃದಯವನ್ನು 'ಸಹ'ವಾಗಿ ಸ್ವೀಕರಿಸುವುದೇ ಸೌಹಾರ್ದತೆ. ಸೌಹಾರ್ದತೆ ಎಂಬ ಪದವೇ ಮೂಲದಲ್ಲಿ ಬಹುವ್ಯಕ್ತಿ, ಬಹು ಸಮುದಾಯಗಳಿಗಿರಬೇಕಾದ ಗುಣವನ್ನು ಸೂಚಿಸುತ್ತದೆ. ಸದ್ಭಾವನೆ, ಸಾಮರಸ್ಯ, ಸಮನ್ವಯ ಎಂಬ ಅರ್ಥ ಛಾಯೆಗಳನ್ನು ಒಳಗೊಂಡಿದೆ. ವ್ಯಕ್ತಿ ಮತ್ತು ಸಮಾಜದ ನೆಮ್ಮದಿಯ ಬದುಕಿಗೆ ಅನಿವಾರ್ಯವೂ, ಅಗತ್ಯವೂ ಆಗಿರುವ ಸಾಮರಸ್ಯದ ಮನೋಧರ್ಮವೇ ಸೌಹಾರ್ದತೆ. ಹಲವು ತಂತಿಗಳು ಮೇಳವಿಸಿ ಸುಸಂಗತವಾದ, ಇಂಪಾದ ನಾದ ಹೊರಡಿಸುವಂತೆ ಹಲವು ಮನಸ್ಸುಗಳು ಭಿನ್ನಾಭಿಪ್ರಾಯ ದ್ವೇಷ, ಅಸೂಯೆಗಳಿಲ್ಲದೇ ಒಂದಾಗುವ ಮನೋಧರ್ಮ. ವ್ಯಕ್ತಿ ಮತ್ತು ಸಮಾಜಗಳಲ್ಲಿರುವ ಮಾಲಿನ್ಯಗಳನ್ನು ಶುದ್ಧಗೊಳಿಸಿ ಪರಸ್ಪರ ಸೌಜನ್ಯ, ಪ್ರೀತಿ, ಅಂತಃಕರಣಗಳನ್ನು ಹಂಚಿಕೊಳ್ಳಲು ಸಿದ್ಧವಾದ ಹೃದಯವಂತಿಕೆ. ಆದಿಮ ಕಾಲದಿಂದಲೂ ಸಮಾಜದಲ್ಲಿ ಹಿಂಸೆ ಮಾತ್ರ ವಿಜೃಂಭಿಸಿಲ್ಲ. ಅದನ್ನು ಮೀರಿಯೂ ಮಾನವ ಸಮುದಾಯಗಳನ್ನು ಜೀವಂತವಾಗಿಟ್ಟಿರುವ ಆತ್ಯಂತಿಕ ಆದರ್ಶವಾದ ಸಾಮರಸ್ಯವನ್ನು ಈ ಪರಿಕಲ್ಪನೆ ಒಳಗೊಂಡಿದೆ. ಹಿಂಸೆ ಭೀಕರವಾದಷ್ಟೂ ಸೌಹಾರ್ದತೆಯ ಅನಂತ ಸಾಧ್ಯತೆಗಳು ತೆರೆದುಕೊಳ್ಳುತ್ತವೆ. ಭಿನ್ನತೆ, ವೈವಿಧ್ಯತೆ, ಶ್ರೇಣೀಕರಣ, ಶೋಷಣೆಗಳು ತುಂಬಿರುವ ಸಮುದಾಯಗಳಲ್ಲಿ ಎಲ್ಲ ವಾಸ್ತವಿಕ ಮಿತಿಗಳ ನಡುವೆಯೂ ಮನುಷ್ಯರು ತಮ್ಮ ದೈನಂದಿನ ಬದುಕಿನ ಅನುಸಂಧಾನದಲ್ಲಿ ಪರಸ್ಪರ ಸಾಮರಸ್ಯವನ್ನು ಸಾಧಿಸುತ್ತಾರೆ. ಎಲ್ಲ ವಿಕಾರಗಳ ಮಧ್ಯದಲ್ಲಿಯೂ ಮಾನವ ಸಂಸ್ಕೃತಿ, ನಾಗರಿಕತೆ, ಸಮಾಜಗಳು ಹರಿಗಡಿಯದಂತೆ ನಿರಂತರವಾಗಿ ಮುಂದುವರೆದಿರುವುದಕ್ಕೆ ಸೌಹಾರ್ದ ಸಂಸ್ಕೃತಿಯೇ ಕಾರಣವಾಗಿದೆ. ಧರ್ಮವು ಆಳುವ ವರ್ಗದ ಅಸ್ತ್ರವಾಗಿ ಹಿಂಸೆಯನ್ನು ಹುಟ್ಟು ಹಾಕಲು ಶ್ರಮಿಸಿದಂತೆಯೇ ಅದರ ಇನ್ನೊಂದು ಮುಖ ಸೌಹಾರ್ದತೆಯ ಪ್ರತಿಪಾದನೆಯನ್ನು ಮಾಡಿದೆ. ಧಾರ್ಮಿಕ ಸಾಮರಸ್ಯ ಎಂಬ ಪರಿಕಲ್ಪನೆ ಕೂಡ ಕೆಲವೊಮ್ಮೆ ಆಳುವ ವರ್ಗದ ಹಿತಾಸಕ್ತಿಯನ್ನು ಪೂರೈಸಿದೆ.

ಬೇರೆ ಬೇರೆ ಧಾರ್ಮಿಕ ಸಮುದಾಯಗಳು ಬದುಕುತ್ತಿರುವ ಭಾರತದಲ್ಲಿ ನಂಬಿಕೆ, ಆಚಾರ, ವಿಚಾರ, ದಾರ್ಶನಿಕತೆ, ವೇಷಭೂಷಣ, ಪೂಜಾವಿಧಾನ ಮೊದಲಾದವುಗಳಲ್ಲಿ ಭಿನ್ನತೆ ಇದೆ. ವೈವಿಧ್ಯತೆ ಇದೆ. ಪರಸ್ಪರ ನಾನಾ ಕಾರಣಗಳಿಗೆ ಸಹಜವಾಗಿ ಸಂಘರ್ಷಗಳು ಹುಟ್ಟುತ್ತವೆ. ಅಸಹನೆಗಳು ಬೆಳೆಯುತ್ತವೆ. ಅವು ಬಹಳಷ್ಟು ಸಾರಿ ವ್ಯಕ್ತಿಗತವಾಗಿರುತ್ತವೆ. ಅವುಗಳಿಗೆ ಮಹತ್ವ ನೀಡದೇ ಅಂಥ ಸಂಘರ್ಷಗಳನ್ನು ಸಮುದಾಯಗಳಿಗೆ ವಿಸ್ತರಿಸದೇ ದ್ವೇಷ, ಅಸಹನೆಗಳನ್ನು ಮೀರಿ ಪರಸ್ಪರ ಸಹನೆ, ಸಹಕಾರ, ಹೊಂದಾಣಿಕೆ ಹಾಗೂ ಗೌರವಗಳಿಂದ ಬದುಕುವುದೇ ಧಾರ್ಮಿಕ ಸಾಮರಸ್ಯವಾಗಿದೆ.

ಭಾರತದಲ್ಲಿ ಧಾರ್ಮಿಕ ಸಾಮರಸ್ಯವು ಸಹಬಾಳ್ವೆ ಹಾಗೂ ಕೊಡುಕೊಳ್ಳುವಿಕೆಯ ರೂಪದಲ್ಲಿ ಪ್ರಚಲಿತವಿದೆ. ಸಹಬಾಳ್ವೆ ಎಂದರೆ ಪರಸ್ಪರ ಕೊಡುಕೊಳೆ ಇಲ್ಲದೇ ಆದರೆ ಸಂಘರ್ಷ, ಅಸಹನೆಗಳೂ ಇಲ್ಲದೇ ಒಟ್ಟಿಗೆ ಇರುವುದು. ಕರ್ನಾಟಕದಲ್ಲಿ ಕ್ರೈಸ್ತರು ಮತ್ತು ಮುಸಲ್ಮಾನರಲ್ಲಿ ಕೊಡುಕೊಳೆ ಇಲ್ಲ. ಆದರೆ ಪರಸ್ಪರ ಸಹನಶೀಲತೆ ಇದೆ. ಆದರೆ ಹಿಂದೂ ಮುಸ್ಲಿಂ ಕೆಳವರ್ಗಗಳಲ್ಲಿ ಕೊಡುಕೊಳೆ ಇದೆ. ಸಹಬಾಳ್ವೆಯೂ ಇದೆ. ಇದು ಧಾರ್ಮಿಕ ಸೌಹಾರ್ದತೆಯ ಉತ್ತಮ ಮಾದರಿಯಾಗಿದೆ. ಕೆಲವೊಮ್ಮೆ ಕೊಡುವಿಕೆ ಹಾಗೂ ತೆಗೆದುಕೊಳ್ಳುವಿಕೆ ಧರ್ಮಗಳ ಬಲಾಬಲವನ್ನಾಧರಿಸಿರುತ್ತದೆ. ಬಹುಸಂಖ್ಯಾತ ಧರ್ಮ ಕೊಡುವುದು ಅಲ್ಪಸಂಖ್ಯಾತ ಧರ್ಮ ತೆಗೆದುಕೊಳ್ಳುವುದು ನಡೆಯುತ್ತದೆ. ಉದಾ: ಪಾಕಿಸ್ತಾನದಲ್ಲಿ ಹಿಂದೂಗಳು ಕೊಡಲು ಸಾಧ್ಯವಿಲ್ಲ. ಬಲಿಷ್ಠ ಧರ್ಮಗಳು ಅಲ್ಪಸಂಖ್ಯಾತ ಧರ್ಮಗಳ ಮೇಲೆ ಕೆಲವು ಸಂಗತಿಗಳನ್ನು ಹೇರುವ ಮೂಲಕ ಸಾಮರಸ್ಯವನ್ನು ಸಾಧಿಸುತ್ತವೆ. ಸಾಮಾನ್ಯವಾಗಿ ಶಿಷ್ಟ ಧರ್ಮಗಳ ಮೇಲ್‌ವರ್ಗಗಳಲ್ಲಿ ಸಹಬಾಳ್ವೆ ಕಂಡುಬಂದರೆ ಕೆಳವರ್ಗಗಳಲ್ಲಿ ಕೊಡುಕೊಳ್ಳು ಇರುತ್ತದೆ. ಯಾಕೆಂದರೆ ಒಂದೇ ಬಗೆಯ ಶೋಷಿತ ಬದುಕನ್ನು ಎದುರಿಸುತ್ತವೆ. ಹೀಗಾಗಿ ಧಾರ್ಮಿಕ ಸೌಹಾರ್ದತೆಗೆ ಬಾಳಿನ ಅಸಹಾಯಕತೆಯ ಆಯಾಮವಿದೆ. ಮೇಲ್‌ವರ್ಗಗಳು ಆಳುವ ವರ್ಗವಾಗಿರುವುದರಿಂದ ರಾಜ್ಯಭಾರ, ಆಡಳಿತ, ನೌಕರಶಾಹಿ, ಉದ್ದಿಮೆ ಮೊದಲಾದವುಗಳಲ್ಲಿ ಪರಸ್ಪರ ಮುಖಾಮುಖಿಯಾಗುತ್ತವೆ. ಅಲ್ಲಿ ಕೂಡ ಸಹಬಾಳ್ವೆ ಸಾಧ್ಯವಾಗುವುದು ಬದುಕಿನ ಪರಸ್ಪರಾವಲಂಬನೆಯ ಅನಿವಾರ್ಯತೆಯಲ್ಲಿ. ಮಧ್ಯಕಾಲೀನ ಚರಿತ್ರೆಯಲ್ಲಿ ಹಿಂದೂ, ಮುಸ್ಲಿಂ, ಮೇಲ್ವರ್ಗಗಳು ಕೊಡುಕೊಳ್ಳುವಿಕೆ ನಡೆಸಿರುವುದಕ್ಕೆ ಆ ಕಾಲದ ರಾಜರ ಅಂತರ್ಧರ್ಮೀಯ ಮದುವೆಗಳು ದಾಖಲೆ ನೀಡುತ್ತವೆ. ಧಾರ್ಮಿಕ ಸಾಮರಸ್ಯ ಪ್ರಾಚೀನ ಹಾಗೂ ಮಧ್ಯಕಾಲದಲ್ಲಿ ಪ್ರಭುತ್ವಗಳು ಪ್ರಜೆಗಳ ಮೇಲೆ ಹಿಡಿತ ಸಾಧಿಸಲು ಅನಿವಾರ್ಯವಾಗಿ ಅವಲಂಬಿಸಿದ ಒಂದು ತತ್ವವಾಗಿತ್ತು. ಆಶ್ಚರ್ಯವೆಂದರೆ ಒಂದೇ ಧರ್ಮದ ಒಳಗಿನ ವಿಭಿನ್ನ ವರ್ಗಗಳಲ್ಲಿ ಸಾಮರಸ್ಯ ಕಂಡುಬರುವುದಿಲ್ಲ. ಉದಾಹರಣೆಗೆ ಬ್ರಾಹ್ಮಣರು ಮತ್ತು

ಬೇರೆ ಬೇರೆ ಧಾರ್ಮಿಕ ಸಮುದಾಯಗಳು ಬದುಕುತ್ತಿರುವ ಭಾರತದಲ್ಲಿ ನಂಬಿಕೆ, ಆಚಾರ, ವಿಚಾರ, ದಾರ್ಶನಿಕತೆ, ವೇಷಭೂಷಣ, ಪೂಜಾವಿಧಾನ ಮೊದಲಾದವುಗಳಲ್ಲಿ ಭಿನ್ನತೆ ಇದೆ. ವೈವಿಧ್ಯತೆ ಇದೆ. ಪರಸ್ಪರ ನಾನಾ ಕಾರಣಗಳಿಗೆ ಸಹಜವಾಗಿ ಸಂಘರ್ಷಗಳು ಹುಟ್ಟುತ್ತವೆ. ಅಸಹನೆಗಳು ಬೆಳೆಯುತ್ತವೆ. ಅವು ಬಹಳಷ್ಟು ಸಾರಿ ವ್ಯಕ್ತಿಗತವಾಗಿರುತ್ತವೆ. ಅವುಗಳಿಗೆ ಮಹತ್ವ ನೀಡದೇ ಅಂಥ ಸಂಘರ್ಷಗಳನ್ನು ಸಮುದಾಯಗಳಿಗೆ ವಿಸ್ತರಿಸದೇ ದ್ವೇಷ, ಅಸಹನೆಗಳನ್ನು ಮೀರಿ ಪರಸ್ಪರ ಸಹನೆ, ಸಹಕಾರ, ಹೊಂದಾಣಿಕೆ ಹಾಗೂ ಗೌರವಗಳಿಂದ ಬದುಕುವುದೇ ಧಾರ್ಮಿಕ ಸಾಮರಸ್ಯವಾಗಿದೆ.

ದಲಿತರು, ಶ್ರೀಮಂತ ಮತ್ತು ಬಡವ. ಪಠಾಣರು ಮತ್ತು ಪಿಂಜಾರರು ಇತ್ಯಾದಿ. ಕೋಮುವಾದ ಮತ್ತು ಮೂಲಭೂತವಾದಗಳು ಎರಡೂ ಧರ್ಮಗಳನ್ನು ಏಕಾಕಾರಿ ಶಿಲ್ಪವಾಗಿಸಲು ಯತ್ನಿಸಿದರೂ ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆಯ ಕಾರಣದಿಂದ ಧರ್ಮಗಳಲ್ಲಿ ಆಂತರಿಕ ಸಾಮರಸ್ಯವಿಲ್ಲ. ದೈನಂದಿನ ಬದುಕಿನಲ್ಲಿ ಧರ್ಮ ಧರ್ಮಗಳ ವರ್ಗ ವರ್ಗಗಳ ನಡುವೆ ಸೌಹಾರ್ದತೆ ಕಂಡುಬರುತ್ತದೆ.

ಹಿಂದೂ ಮುಸ್ಲಿಂ ಸಂಬಂಧದಲ್ಲಿ ಸದಾಶಯ ಪ್ರಧಾನವಾದ ಸಾಮರಸ್ಯದ ಅತ್ಯಂತ ಸರಳೀಕರಣದ ಮಾದರಿಗಳೂ ಇವೆ. ವಿಭಿನ್ನ ಒತ್ತಡಗಳ ಮಧ್ಯ ರೂಪತಾಳುವ ವೈವಿಧ್ಯಮಯವಾದ ಪರಿಕಲ್ಪನೆಗಳೂ ಚಾಲ್ತಿಯಲ್ಲಿವೆ. ಜತೆಗೆ ಭೀಕರ ವಾಸ್ತವದ ನಡುವೆ ಸೌಹಾರ್ದತೆಯ ವಾಸ್ತವಿಕ ಮಿತಿಯನ್ನು ಗುರುತಿಸುವ ಕ್ರಮವೂ ಇದೆ. ಬಹುಸಂಖ್ಯಾತ ಸಮುದಾಯದ ಒತ್ತಡ ಬಲಾತ್ಕಾರಗಳಿಗೆ ಮಣಿದು ಅವರ ಆಶಯಗಳನ್ನು ಒಪ್ಪಿಕೊಳ್ಳುವ ಸಾಮರಸ್ಯ ಇದನ್ನು ಭಯಭೀತ ಮಾದರಿ ಎನ್ನಬಹುದು. ಅಲ್ಪಸಂಖ್ಯಾತ ಸಮುದಾಯವನ್ನು ಕುರಿತಾದ ಕರುಣೆಯನ್ನು ವ್ಯಕ್ತಪಡಿಸುವ ಉದಾರವಾದಿ ಮಾದರಿ. ಸಮುದಾಯ ಕೆಟ್ಟದ್ದು ಕೆಲವರು ಒಳ್ಳೆಯವರೆಂದು ಭಾವಿಸುವ ಮಾದರಿ. ರಾಜಕೀಯ ಹಿತಾಸಕ್ತಿಗಾಗಿ ಅಲ್ಪಸಂಖ್ಯಾತರ ಹಬ್ಬಗಳ ದಿವಸ ಮಸೀದಿಗೆ ಹೋಗಿ ಅಪ್ಪಿಕೊಳ್ಳುವುದು, ಇಫ್ತಾರ ಕೂಟಗಳಲ್ಲಿ ಭಾಗವಹಿಸುವುದು, ಸಮಕಾಲೀನ ಒತ್ತಡದ ಹಿನ್ನೆಲೆಯಲ್ಲಿ ಚರಿತ್ರೆಯ ವೈರುಧ್ಯಗಳನ್ನು ಮರೆತು ಸೌಹಾರ್ದತೆಯ ಸಂದರ್ಭಗಳನ್ನು ಮಾತ್ರ ಆಯ್ದುಕಟ್ಟುವ ಮಾದರಿ. ಬಹುಸಂಖ್ಯಾತರ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವ ಅನುಸರಿಸುವ ಹಾಗೂ ಅದನ್ನು ವೈಭವೀಕರಿಸುವ ಮಾದರಿ. ಕೋಮುವಾದಿಗಳನ್ನು ಟೀಕಿಸಿ ಮೂಲಭೂತವಾದವನ್ನು ವಿಮರ್ಶಿಸದೇ ಸೌಹಾರ್ದತೆಗೆ ತುಡಿಯುವ ಮಾದರಿ. ಕೋಮುವಾದ ಮೂಲಭೂತವಾದಗಳ ಕಲ್ಪನೆ ಇರಲಾರದೇ ದೈನಂದಿನ ಬದುಕಿನಲ್ಲಿ ಒಂದಾಗುವ ಮಾದರಿ. ಉದ್ದಿಮೆ, ಕೈಗಾರಿಕೆ, ವ್ಯಾಪಾರೀ ವಹಿವಾಟುಗಳಿಗಾಗಿ ಮೇಲ್ವರ್ಗಗಳು ದುಡಿಯುವ ವರ್ಗಗಳಲ್ಲಿ ಸಾಮರಸ್ಯವಿರಬೇಕೆಂದು ಬಯಸುವ ಮಾದರಿ. ಆಳದಲ್ಲಿ ಮತೀಯ ಭಾವನೆಗಳಿದ್ದರೂ ಸಾಮಾಜಿಕ ಅವಮಾನದ ಕಾರಣದಿಂದ ಸಾಮರಸ್ಯದ ಮುಖವಾಡ ತೊಡುವ ಮಾದರಿ. ಸಾಮರಸ್ಯದ ಬಗ್ಗೆ ಬದ್ಧತೆ ಇದ್ದರೂ ಅದನ್ನೇ ಜೀವನದೃಷ್ಟಿ ಹಾಗೂ ವಿಧಾನವಾಗಿಸಿಕೊಂಡಿದ್ದರೂ ಸಾಮಾಜಿಕ ಒತ್ತಡಗಳಿಂದ ಸಾರ್ವಜನಿಕವಾಗಿ ಅಭಿವ್ಯಕ್ತಿಸಲಾಗದ ಮಾದರಿ. ದ್ವೇಷ, ಹಿಂಸೆಯನ್ನೇ ಉದ್ದೇಶ ಹಾಗೂ ಕ್ರಿಯಾಚರಣೆಯನ್ನಾಗಿಸಿಕೊಂಡಿದ್ದರೂ ಮುಕ್ತವಾಗಿ ಅಭಿವ್ಯಕ್ತಿಸುತ್ತಿದ್ದರೂ ತಾವು ಸೌಹಾರ್ದತೆಯ ಪರವೆಂದು ಬಾಯಿ ಬಡಿವ ಮಾದರಿ. ಎರಡೂ ಧರ್ಮಗಳ ಸಂಕರಶೀಲತೆಯನ್ನು ಬದುಕಿನ ಸಹಜ ಭಾಗವೆಂದು ಸ್ವೀಕರಿಸುವ ಮಾದರಿ. ಸೌಹಾರ್ದತೆಯನ್ನು ಕೇವಲ ಜನಾಂಗಗಳ ನಡುವಿನ ಭಾವನಾತ್ಮಕ ಸಂಬಂಧವೆಂದು ಗ್ರಹಿಸಿ ಅಲ್ಪಸಂಖ್ಯಾತರ ಆರ್ಥಿಕ ಅಭಿವೃದ್ಧಿಯ ಬಗ್ಗೆ ತಳಮಟ್ಟದ ಕಾರ್ಯಕ್ರಮಗಳನ್ನು ರೂಪಿಸದ ಮೊಸಳೆ ಕಣ್ಣೀರು ಸುರಿಸುವ ಮಾದರಿ. ಗಲಭೆಗಳು ಸಂಭವಿಸಿದಾಗ ರಕ್ತಪಾತವಾದಾಗ ತಕ್ಷಣಕ್ಕೆ ತಹಬಂದಿಗೆ ಬಂದರೆ ಸಾಕೆಂಬ ತಾತ್ಕಾಲಿಕ ಆಶಯದ ಮಾದರಿ. ಹೀಗೆ ಸಮಕಾಲೀನ ಬದುಕಿನಲ್ಲಿ ಸೌಹಾರ್ದತೆಯ ಅಸಂಖ್ಯ ಮಾದರಿಗಳನ್ನು ಗುರುತಿಸಬಹುದು.



ತಾತ್ವಿಕವಾಗಿ ಅತ್ಯಂತ ಮುಖ್ಯವಾದ ಮಾದರಿಗಳೆಂದರೆ;

1. ಬಲಪಂಥೀಯ ಮಾದರಿ
2. ಎಡಪಂಥೀಯ ಮಾದರಿ
3. ಸುಧಾರಣಾವಾದಿ ಮಾದರಿ
4. ದೈನಿಕ ಅನುಸಂಧಾನದ ಮಾದರಿ

ಬಲಪಂಥೀಯ ಸೌಹಾರ್ದ ಮಾದರಿ

ಡಾ. ಎಮ್.ಎಸ್.ಗೋಲ್ವಾಲ್ಕರ್ ಅವರ "ನಾವು ಮತ್ತು ನಮ್ಮ ರಾಷ್ಟ್ರೀಯತೆಯ ನಿರ್ವಚನ" ಎಂಬ ಕೃತಿಯಲ್ಲಿ ಇದರ ನಿರ್ವಚನವನ್ನು ಗಮನಿಸಬಹುದು. "ತಮ್ಮ ಭಿನ್ನತೆಯನ್ನು ತ್ಯಜಿಸಿ, ಈ ರಾಷ್ಟ್ರದ ಧರ್ಮ, ಸಂಸ್ಕೃತಿ ಮತ್ತು ಭಾಷೆಯನ್ನು ಸ್ವೀಕರಿಸಿ ರಾಷ್ಟ್ರೀಯ ಜನಾಂಗದಲ್ಲಿ ಸಂಪೂರ್ಣ ಬೆರೆತು ಹೋದರೆ ಮಾತ್ರವೇ ಅವರಿಗೊಂದು ಸ್ಥಾನ. ತಮ್ಮ ಜನಾಂಗೀಯ ಧಾರ್ಮಿಕ, ಸಾಂಸ್ಕೃತಿಕ ಭಿನ್ನತೆಯನ್ನು ಉಳಿಸಿಕೊಂಡಿರುವವರೆಗೆ ಅವರು ವಿದೇಶೀಯರಲ್ಲದೇ ಬೇರೇನೂ ಅಲ್ಲ. ವಿದೇಶೀಯರಿಗೆ ಎರಡು ದಾರಿಗಳು ಮಾತ್ರ ಉಳಿದಿವೆ. ಒಂದು ರಾಷ್ಟ್ರೀಯ ಜನಾಂಗದೊಂದಿಗೆ ಬೆರೆತು ಹೋಗುವುದು. ಅದರ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವುದು. ಎರಡನೆಯದು ರಾಷ್ಟ್ರೀಯ ಜನಾಂಗ ಅನುಮತಿಸುವವರೆಗೂ ಅದರ ಕೃಪೆಯಲ್ಲಿ ಬದುಕುವುದು. ಮತ್ತು ರಾಷ್ಟ್ರೀಯ ಜನಾಂಗ ಇಚ್ಛೆಪಟ್ಟಾಗ ದೇಶವನ್ನು ತ್ಯಜಿಸುವುದು. ಈ ನಿಲುವಿನ ಆಧಾರದಲ್ಲಿ ಹಿಂದೂಸ್ಥಾನದ ವಿದೇಶಿ ಜನಾಂಗಗಳು ಹಿಂದೂ ಸಂಸ್ಕೃತಿ ಭಾಷೆಯನ್ನು ಅಂಗೀಕರಿಸಬೇಕು... ಅವರು ತಮ್ಮ ಪ್ರತ್ಯೇಕ ಅಸ್ತಿತ್ವನ್ನು ಬಿಟ್ಟು ಹಿಂದೂ ಜನಾಂಗದಲ್ಲಿ ಸಂಪೂರ್ಣವಾಗಿ ಬೆರೆತು ಹೋಗಬೇಕು. ಇಲ್ಲವೇ ಹಿಂದೂ ರಾಷ್ಟ್ರಕ್ಕೆ ಸಂಪೂರ್ಣ ಅಡಿಯಾಳಾಗಬೇಕು. ಏನನ್ನೂ ಕೇಳದೇ ಯಾವುದೇ ಅಧಿಕಾರಕ್ಕೇರಲು ಅನರ್ಹರಾಗಬೇಕು. ವಿಶೇಷ ನೆರವನ್ನು ಅಪೇಕ್ಷಿಸದೇ ನಾಗರಿಕ ಹಕ್ಕುಗಳನ್ನು ನಿರೀಕ್ಷಿಸದೇ ಇಲ್ಲಿ ಉಳಿಯಬಹುದು."[3] ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿಗಿಂತಲೂ, ವರ್ಣಾಶ್ರಮ ಧರ್ಮದ ಜಾತಿ ವ್ಯವಸ್ಥೆಗಿಂತಲೂ ಕ್ರೂರವಾದ ವ್ಯವಸ್ಥೆಯ ಆಶಯ ಇಲ್ಲಿದೆ. ಇದು ಹಿಂದುತ್ವದ ಧಾರ್ಮಿಕ ಸೌಹಾರ್ದತೆಯ ಸ್ವರೂಪವಾಗಿದೆ.

ಎಡಪಂಥೀಯ ಸೌಹಾರ್ದ ಮಾದರಿ

ಕೋಮುವಾದ, ಮೂಲಭೂತವಾದ, ಧಾರ್ಮಿಕ ಹಿಂಸೆ, ಭಯೋತ್ಪಾದನೆ ಮೊದಲಾದ ಧರ್ಮಮೂಲ ವಿಕಾರಗಳ ಕಾರಣವನ್ನು ಅಸಮಾನತೆಯಿಂದ ಕೂಡಿದ ವರ್ಗ ಸಮಾಜದಲ್ಲಿ ಹುಡುಕುವ ಎಡಪಂಥೀಯ ದೃಷ್ಟಿಕೋನವು ವರ್ಗ ಸಮಾಜ ಇರುವವರೆಗೆ ಧಾರ್ಮಿಕ ಹಿಂಸೆಯನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದು ಗ್ರಹಿಸುತ್ತದೆ. ವರ್ಗ ಹೋರಾಟ ಹಾಗೂ ವರ್ಗ ಸಮಾನತೆಯ ಹೊರತಾದ ಯಾವುದೇ ಸೌಹಾರ್ದತೆಯ ಪರಿಕಲ್ಪನೆಗಳು ತಾತ್ಕಾಲಿಕ ಹಾಗೂ ವರ್ಗ ಸಮಾಜದ ಉಳಿವಿಗೆ ಪೂರಕವೆನ್ನುವುದು ಅದರ ಸ್ಪಷ್ಟ ನಿಲುವು. ಭಾರತದ ಸಂದರ್ಭದಲ್ಲಿ ಜಾತಿ ಮತ ಪಂಥಗಳಾಚೆ ದುಡಿಯುವ ಹಾಗೂ ಶೋಷಿತ ಸಮುದಾಯಗಳು ಶೋಷಕ ವ್ಯವಸ್ಥೆಯ ವಿರುದ್ಧ ಸಮರಸಾರಿ ಸಮಾನ ವ್ಯವಸ್ಥೆಯೊಂದನ್ನು ರೂಪಿಸಿದಾಗ ಮಾತ್ರ ಸೌಹಾರ್ದತೆ ಸಾಧ್ಯವಾಗುತ್ತದೆ ಎನ್ನುವುದು ಅದರ ಪ್ರತಿಪಾದನೆ. ಎಡಪಂಥೀಯ ವಿಭಿನ್ನ ಧಾರೆಗಳಲ್ಲಿ ವೈಧಾನಿಕವಾದ ವ್ಯತ್ಯಾಸಗಳಿರಬಹುದಾದರೂ ಅತ್ಯಂತಿಕವಾಗಿ ಸಮಾನತೆಯೇ ಸೌಹಾರ್ದತೆ ಅಥವಾ ಆರ್ಥಿಕ ಸಮಾನತೆಯಿಂದ ಮಾತ್ರ ವಾಸ್ತವಿಕ ಸೌಹಾರ್ದತೆ ಸಾಧ್ಯ ಎಂಬ ನಿಲುವನ್ನು ವ್ಯಕ್ತಪಡಿಸುತ್ತವೆ. ಒಂದು ಆದರ್ಶವಾಗಿ ಹಾಗೂ ವಾಸ್ತವವಾಗಿ ಈ ನಿಲುವು ಸರಿಯಾದದ್ದು. ಆದರೆ ಭಾರತದ ಜಾತಿ ಶ್ರೇಣೀಕರಣದ ನಡುವೆ ಇಂಥ ಸೌಹಾರ್ದತೆಯನ್ನು ರೂಪಿಸುವ ಹೋರಾಟಗಳನ್ನು ರೂಪಿಸುವದು ಕಷ್ಟದ ಸಾಧ್ಯತೆ. ಕರ್ನಾಟಕದಲ್ಲಿ ನಡೆದ ಬಾಬುಬುಡನ್‌ಗಿರಿ ಕೋಮು ಸೌಹಾರ್ದತಾ ಹೋರಾಟ ಅತ್ಯಂತಿಕವಾಗಿ ದುರ್ಬಲಗೊಂಡಿದ್ದು, ಎಡಪಕ್ಷಗಳ ತಾತ್ವಿಕ ಬಿರುಕಿನಿಂದ ಎನ್ನುವದನ್ನು ನೆನಪಿಸಿಕೊಂಡರೆ ಸಮಾನತೆಯಾಧಾರಿತ ಸೌಹಾರ್ದತೆಯ ಹೋರಾಟದ ಸಮಸ್ಯೆಯು ಅರಿವಿಗೆ ಬರುತ್ತದೆ.

(50ನೇ ಪುಟಕ್ಕೆ)

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಮಹಿಳಾ ಸಂವೇದನೆಯ ಹುಡುಕಾಟ

— ಫಕೀರ್ ಮುಹಮ್ಮದ್ ಕಟ್ಪಾಡಿ



ಮುಸ್ಲಿಂ ಮಹಿಳಾ ಸಂವೇದನೆ
ಲೇಖಕಿ: ಡಾ॥ ಕೆ. ಷರೀಫಾ
ಬೆಲೆ: ರೂ. 130/-
ಪ್ರಕಾಶಕರು: ಅಂಕಿತ ಪುಸ್ತಕ

ತಮ್ಮ 'ಬಂಡಾಯ ಮುಸ್ಲಿಂ ಸಂವೇದನೆ' ಲೇಖನಗಳು ಮತ್ತು ವಿಶಿಷ್ಟವಾದ ಕವನ ಸಂಕಲನ 'ಬುರ್ಖಾ ಪ್ಯಾರಡೈಸ್'ನೊಂದಿಗೆ ಕನ್ನಡ ಸಾಹಿತ್ಯದಲ್ಲಿ ಮುಖ್ಯ ಕವಯತ್ರಿಯರಲ್ಲೊಬ್ಬರೆಂದು ಆಗಲೇ ಹೆಸರು ಗಳಿಸಿದ ಡಾ॥ ಕೆ. ಷರೀಫಾರ ಸಂಶೋಧನಾ ಕೃತಿ 'ಮುಸ್ಲಿಂ ಮಹಿಳಾ ಸಂವೇದನೆ' ಕುತೂಹಲ ಕೆರಳಿಸುವುದರಲ್ಲಿ, ಓದುಗನಿಗೆ ಹಲವು ಹೊಸ ವಿಚಾರಗಳನ್ನು ನೀಡುವುದರಲ್ಲಿ, ಕನ್ನಡ ಸಾಹಿತ್ಯದಲ್ಲಿ ಒಂದು ಹೊಸರಕ್ತ ಸಂಚಾರದ ಮೂಲವನ್ನು ದಾಖಲಿಸುವ ಮೂಲಕ ವೈಚಾರಿಕತೆಯ ಹೊಸ ಆಯಾಮವನ್ನು ಪರಿಚಯಿಸುವ ಕೆಲಸವನ್ನು ಮಾಡಿದ್ದಾರೆ. ಇದೊಂದು ಸಂಶೋಧನಾ ಕೃತಿಯೆಂಬುದನ್ನು ಮರೆತು ನೋಡಿದರೂ ಕೂಡ ಸ್ವತಂತ್ರ ಕೃತಿಯ ಎಲ್ಲ ಸೂಕ್ಷ್ಮಗಳನ್ನೂ ಒಳಗೊಂಡು ಭಿನ್ನವಾಗಿ ನಿಲ್ಲುತ್ತದೆ. ಕನ್ನಡ ಸಾಹಿತ್ಯದಲ್ಲಿ ಮಹಿಳಾ ಸಂವೇದನೆಯನ್ನು ಹಲವು ಭಿನ್ನ ಆಯಾಮಗಳಲ್ಲಿ, ವೈಚಾರಿಕ ನೆಲೆಯಲ್ಲಿ, ಸಮಾಜೋ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಡುಕುವ ಕೃತಿಗಳು ಸಾಕಷ್ಟು ಬಂದಿವೆ. ಆದರೆ ಒಟ್ಟು ಮಹಿಳಾ ಸಂವೇದನೆಯ ಅಭಿನ್ನ ಭಾಗವಾಗಿ ಹೆಚ್ಚು ಕಮ್ಮಿ 40 ದಶಕಗಳ ಈಚೆಗೆ ಸೃಷ್ಟಿಯಾಗಿ ಕನ್ನಡ ಸಾಹಿತ್ಯದ ಒಳಗೆ ಹೊಸ ರಕ್ತಸಂಚಾರದ ಮೂಲಕ ಓದುಗರಲ್ಲಿ ರೋಮಾಂಚನವನ್ನು ಸೃಷ್ಟಿಸಿದ 'ಮುಸ್ಲಿಂ ಮಹಿಳಾ ಸಂವೇದನೆ'ಯನ್ನು ಅದರ ಎಲ್ಲ ಮುಖಗಳನ್ನೂ, ಅನನ್ಯತೆಯನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದ ಮತ್ತು ಆ ಮೂಲಕ ಸಾಕಷ್ಟು ಯಶಸ್ಸನ್ನೂ ಗಳಿಸಿದ ಡಾ॥ ಕೆ. ಷರೀಫಾರ ಶ್ರಮ ಸಫಲವಾಗಿದೆ.

ಕನ್ನಡ ಸಾಹಿತ್ಯದಲ್ಲಿ ಮುಸ್ಲಿಮ್ ಸಂವೇದನೆಯನ್ನು ಪರಿಚಯಿಸಿ, ಬೆಳಕಿಗೆ ತಂದ ಶ್ರೇಯಸ್ಸು ದಲಿತ ಬಂಡಾಯ ಸಾಹಿತ್ಯ ಚಳವಳಿಗೆ ಇಡಿಯಾಗಿ ಸಲ್ಲಬೇಕಾಗುತ್ತದೆ. ಈ ಸಂದರ್ಭದಲ್ಲಿ ಈ ಲೇಖಕರಿಗೆ ಸಿಕ್ಕ ಮಾನ್ಯತೆಗೆ 'ಮುಸ್ಲಿಮರು ಅನ್ನುವ ಕಾರಣಕ್ಕೆ ಗ್ರೇಸ್ ಮಾರ್ಕ್ ಸಿಗುವ ಮೂಲಕ ಬೆಳಕಿಗೆ ಬಂದವರು' ಎಂದೋ ಅಥವಾ 'ಅಲ್ಪಸಂಖ್ಯಾತರ ತುಷ್ಟೀಕರಣದ ಕಾರಣಕ್ಕೆ' ಎನ್ನುವ ಬೆನ್ನಹಿಂದಿನ ಮಾತುಗಳು ಸಾಹಿತ್ಯವಲಯದಲ್ಲಿ ಕೇಳಿ ಬಂದದ್ದೂ ಇದೆ. ಎಡಪಂಥೀಯ ವಿಚಾರಧಾರೆಯ ಲವಲೇಶವೂ ಅರಿತಿರದ ನನ್ನಂತಹ ಲೇಖಕರ ಕೃತಿಗಳನ್ನು ಕಮ್ಯೂನಿಸ್ಟ್ ಬರವಣಿಗೆಯೆಂಬ ಹಣೆಪಟ್ಟಿ ನೀಡಿ (ಅತ್ತ ಕನ್ನಡದ ಎಡಪಂಥೀಯ ವಿಮರ್ಶಕರ ಮಾನ್ಯತೆಯೂ ಸಿಗದೆ) ಮೂಲೆಗುಂಪು ಮಾಡುವ ಹುನ್ನಾರಕ್ಕೆ ಒಳಗಾದದ್ದೂ ಇದೆ. ಒಂದೆಡೆ ತನ್ನ ಮುಸ್ಲಿಂ ಸಮಾಜದ ಜನಗಳಿಂದ ತಮ್ಮ ಸಮಸ್ಯೆಗಳ ಬಗ್ಗೆ ಬಹಿರಂಗವಾಗಿ ಬರೆಯುವ ಮೂಲಕ ಸಮಾಜದ ಮರ್ಯಾದೆ ತೆಗೆದು ಅವಮಾನಿಸಿದ್ದಾರೆಂದು ಕನ್ನಡದ ಮುಸ್ಲಿಂ ಸಮಾಜದ ಹಿನ್ನೆಲೆಯುಳ್ಳ ಲೇಖಕರು ಆರೋಪಗಳನ್ನು ಎದುರಿಸುತ್ತಿದ್ದರೆ, ಇನ್ನೊಂದೆಡೆಯಲ್ಲಿ ಮುಸ್ಲಿಂ ದ್ವೇಷವನ್ನು ತಮ್ಮ ಒಡಲಲ್ಲಿ ತುಂಬಿಕೊಂಡವರು ಅಥವಾ ಅಂತಹ ದ್ವೇಷದ ಪ್ರಭಾವಕ್ಕೆ ಒಳಗಾದವರು 'ನೀನು ಮುಸ್ಲಿಮರನ್ನು ಚೆನ್ನಾಗಿ ತೊಳೆಯುತ್ತಿದ್ದಿ' ಎಂದೋ, 'ಮುಸ್ಲಿಂ ಆಗಿದ್ದೂ ಕನ್ನಡ ಭಾಷೆಯಲ್ಲಿ ಚೆನ್ನಾಗಿ ಬರೆಯುತ್ತಿ' ಅಥವಾ 'ಮುಸ್ಲಿಂ ಆಗಿದ್ದೂ, ಭಾರತೀಯ ಸಂಸ್ಕೃತಿಯ ಪರವಾಗಿ, ಈ ನೆಲಕ್ಕೆ ನಿಷ್ಠೆಯನ್ನು ತೋರುವಂತೆ ಬರೆಯುತ್ತಿಯಾ' ಎಂಬ ಶಹಬಾಸ್‌ಗಿರಿ. ವೈಯಕ್ತಿಕವಾಗಿ ಲೇಖಕನನ್ನು ಹೊಗಳುವ ಮೂಲಕ ಲೇಖಕ ಹುಟ್ಟಿದ ಸಮಾಜವನ್ನು ರಾಕ್ಷಸೀಕರಿಸುವ, ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವ ಈ ಅಭಿಪ್ರಾಯಗಳ ಹಿನ್ನೆಲೆಯಲ್ಲಿರುವ ಕುತಂತ್ರ, ಅಪಾಯಗಳನ್ನು ಕೆಲವು ಲೇಖಕರು ಮಾತ್ರ ಅರ್ಥಮಾಡಿಕೊಂಡು ಕ್ರಮೇಣ ತೀವ್ರವಾಗಿ ಪ್ರತಿಭಟಿಸುವುದು ಸಾಧ್ಯವಾಯಿತಾದರೂ ಇಂದಿಗೂ ಇದನ್ನೊಂದು ಹೊಗಳಿಕೆಯೆಂದೇ ತಿಳಿಯುವವರು ಇನ್ನೂ ಇರುವುದು ವಿಷಾದಕರ. (ಉದಾಹರಣೆಗೆ 23.01.2012ರ ವಾರ್ತಾಭಾರತಿಯ ಪುಟ 2ರಲ್ಲಿ ಪ್ರಕಟವಾದ 'ಸ್ವಾತಂತ್ರ್ಯದ ಓಟ'ದಲ್ಲಿ ಹಿಂದೂ-ಮುಸ್ಲಿಮ್ ಬಾಂಧವ್ಯದ ಶೋಧ: ಎಸ್.ಜಿ.ಎಸ್, -ಎರಡು ಕೆ.ಜಿ. ತೂಕದ ಕಾದಂಬರಿ ಎಂಬ ತಲೆಬರಹದ ವರದಿಯಲ್ಲಿ 'ಅವರು ಮುಸ್ಲಿಂ ಸಮುದಾಯದಿಂದ ಬಂದಿರುವ ಬರಹಗಾರರಾದರೂ ಮಾನವೀಯ ಸಂವೇದನೆಗೆ ಮತ್ತು ಈ ನೆಲಕ್ಕೆ ನಿಷ್ಠರಾಗಿ ಈ ಮಹಾಕೃತಿಯನ್ನು ರಚಿಸಿದ್ದಾರೆ ಎಂದು ಶ್ಲಾಘಿಸಿದರು' ಎಂಬ ಮಾತನ್ನು ಗಮನಿಸಿ.) ಸಾಮಾಜಿಕ, ಧಾರ್ಮಿಕ ಕಾರಣಕ್ಕೆ ಮೂದಲಿಕೆ, ಬಯ್ಗಳು, ಹಲ್ಲೆಗಳಿಗಿಂತಲೂ ಭೀಕರವಾಗಿ ಇಂತಹ ಹುನ್ನಾರಗಳನ್ನು ಎದರಿಸುತ್ತಿರುವುದು ಬಹುಶಃ ಮುಸ್ಲಿಂ ಸಮಾಜದಿಂದ ಬಂದ ಲೇಖಕರ ವಿಶಿಷ್ಟ ಅನುಭವಗಳೆಂದೇ ಹೇಳಬೇಕಾಗುತ್ತದೆ.

ಕೆಲವೊಮ್ಮೆ ಕನ್ನಡ ಸಾಹಿತ್ಯದಲ್ಲಿ 'ಮುಸ್ಲಿಂ' ಎಂಬ ಹಣೆಪಟ್ಟಿ ಅಗತ್ಯವಿದೆಯೇ ಎಂಬ ಚರ್ಚೆಗೆ 'ಸಾಹಿತ್ಯದ ಅಭ್ಯಾಸಕ್ಕಾಗಿ' ಎಂಬ ಉತ್ತರ ಸಿಕ್ಕಿದ್ದರೂ, ಸಾಹಿತ್ಯದ ಸಂದರ್ಭದಲ್ಲಿ ಈ ಹಣೆಪಟ್ಟಿ 'ಕಮ್ಯೂನಿಸ್ಟ್' ಎಂಬ ಹಣೆಪಟ್ಟಿಯಂತೆಯೇ ಹಚ್ಚಿ ದೂರವಿಡುವ ಮತ್ತು ಮೂಲೆಗೆ ತಳ್ಳುವ ಹುನ್ನಾರವಲ್ಲ ತಾನೆ? ಎಂಬ ಅನುಮಾನ ಈ ಲೇಖಕರನ್ನು ಅನೇಕ ಸಂದರ್ಭದಲ್ಲಿ ಕಾಡಿದ್ದು ಇದೆ. ಹಾಗೆಯೇ ಕನ್ನಡ ಸಾಹಿತ್ಯದಲ್ಲಿ 'ಮುಸ್ಲಿಂ ಮಹಿಳಾ ಸಂವೇದನೆ' ಅನ್ನುವುದೊಂದು ಇದೆಯೇ? ಇದು ಮಹಿಳಾ ಸಂವೇದನೆ ಅಥವಾ ಇತರ ಸಂವೇದನೆಗಳಿಗಿಂತ ಭಿನ್ನವಾಗಿದೆಯೇ ಎಂಬ ಪ್ರಶ್ನೆ ನನ್ನಂತೆಯೇ ಡಾ॥ ಕೆ. ಷರೀಫಾರವರನ್ನು ಕೂಡ ಈ ಕೃತಿಯಲ್ಲಿ ಕಾಡಿದೆ. ಇದಕ್ಕೆ ಸರಿಯಾದ ಉತ್ತರವನ್ನೂ ಅವರು ಕಂಡುಕೊಳ್ಳಲು ಪ್ರಯತ್ನಿಸಿದ್ದಾರೆ. ಕೆಲವೆಡೆ ಗೊಂದಲವೂ ಎದುರಾಗುತ್ತದೆ. ಪುಟ 29ರಲ್ಲಿ ಲೇಖಕಿ ಹೀಗೆ ಹೇಳುತ್ತಾರೆ, 'ಒಬ್ಬ ಮುಸ್ಲಿಂ ಮಹಿಳೆಯೇ ಬರೆದರೂ, ಅದರಲ್ಲಿ ಮುಸ್ಲಿಂ ಲೋಕದ ಸಂವೇದನೆಗಳಿದ್ದರೂ, ಅಲ್ಲಿ ರಾಜಕೀಯ ಪ್ರಜ್ಞೆ ಅವಳ ಬಿಡುಗಡೆಯ ತುಡಿತಗಳಿಲ್ಲದಿದ್ದರೆ, ಅದು ಮುಸ್ಲಿಂ ಸಂವೇದನೆಯೆನಿಸಿಕೊಳ್ಳಲಾರದು. ಇದೇ ರೀತಿ ಮುಸ್ಲಿಂ ಪುರುಷರ ಬರಹದಲ್ಲಿ ದಮನಿತ ಮುಸ್ಲಿಂ ಮಹಿಳೆಯ ಪರವಾದ ಧ್ವನಿಯಿಲ್ಲದಿದ್ದರೆ, ಅದು ಮುಸ್ಲಿಂ ಸಂವೇದನೆ ಎನಿಸಿಕೊಳ್ಳಲಾರದು'. ಇಲ್ಲಿ ಬರುವ 'ರಾಜಕೀಯ ಪ್ರಜ್ಞೆ' ಎನ್ನುವುದು ಗೊಂದಲಕ್ಕೆ ಕಾರಣವಾಗುವುದು ಸಾಧ್ಯ. ರಾಜಕೀಯ ಪ್ರಜ್ಞೆಯ ಮಹಿಳಾ ಸಂವೇದನೆ ಸ್ತ್ರೀವಾದವಲ್ಲವೇ? ಹೌದೆಂದಾದರೆ ದಿವಂಗತ ಡಾ॥ ಡಿ.ಆರ್ ನಾಗರಾಜ್‌ರವರ 'ಕನ್ನಡದಲ್ಲಿ ಸ್ತ್ರೀವಾದಿ ಸಾಹಿತ್ಯ ಮತ್ತು ಸಂಪ್ರದಾಯಿಕ ಎಡಪಂಥೀಯ ಸಾಹಿತ್ಯಿಕ ಮೌಲ್ಯಗಳ ನಡುವಣ ಸಮನ್ವಯದಿಂದ ಸಾಹಿತ್ಯಿಕ ಪ್ರಯೋಗಶೀಲತೆ ಮತ್ತು ಸಮೃದ್ಧತೆಗೆ

ತೊಡಕುಗಳೇ ಹೆಚ್ಚಾಗಿವೆ' (ಸ್ತ್ರಾಹಿತ್ಯ ಕಥನ ಪು. 142) ಎಂಬ ಮಾತು ನೆನಪಾಗುತ್ತದೆ.

ಷರೀಫಾರವರು ಮುಸ್ಲಿಂ ಮಹಿಳಾ ಸಂವೇದನೆಯ ಅನೇಕ ಅಯಾಮಗಳನ್ನು ಭಾರತದ ಸಂದರ್ಭದಲ್ಲಿ ಮಾತ್ರವಲ್ಲ, ಕರ್ನಾಟಕದ ಹಲವು ಪ್ರಾಂತ್ಯಗಳು ವೈವಿಧ್ಯಮಯ ಸಾಂಸ್ಕೃತಿಕ, ಸಾಮಾಜಿಕ ಸಂದರ್ಭದಲ್ಲಿ, ಬದಲಾಗುತ್ತಿರುವ ಆಧುನಿಕ ಸಂದರ್ಭದಲ್ಲಿ, ದೇಸಿ ಮಾತ್ರವಲ್ಲದೆ ವಿದೇಶೀ ಹಿನ್ನೆಲೆಯಲ್ಲೂ ಚರ್ಚಿಸುತ್ತಾರೆ. ಕನ್ನಡ ಸಾಹಿತ್ಯದಲ್ಲಿ ಇವು ಹೇಗೆ ಮೂಡಿಬಂದಿವೆಯೆನ್ನುವುದನ್ನು ಪರಿಚಯಾತ್ಮಕವಾಗಿ ಮಾತ್ರವಲ್ಲ ವಿಮರ್ಶಾತ್ಮಕವಾಗಿಯೂ ಮೂಡಿಸಲು ಸಾಕಷ್ಟು ಪ್ರಯತ್ನ ಮಾಡಿದ್ದಾರೆ. ಸಾಮಾನ್ಯವಾಗಿ ಸಾಂಸ್ಕೃತಿಕ ಸಾಮಾಜಿಕ ಸಂದರ್ಭದಲ್ಲಿ, ಧಾರ್ಮಿಕ ಪರಿಸರದಲ್ಲಿ ಮುಸ್ಲಿಂ ಮಹಿಳಾ ಸಂವೇದನೆಯ ಮೇಲೆ ಯಾವ ಪರಿಣಾಮ ಬೀರಿದೆ? ಕೌಟುಂಬಿಕ ವ್ಯವಸ್ಥೆ, ಪರಂಪರೆ ಮತ್ತು ಮೌಲ್ಯಗಳು ಮುಸ್ಲಿಂ ಮಹಿಳೆಗೆ ಯಾವ ಮಾನ್ಯತೆ ನೀಡಿವೆ, ಇವುಗಳು ಯಾವ ಸ್ವರೂಪದಲ್ಲಿವೆ? ಸಾಮಾಜಿಕ ಹಕ್ಕುಗಳು, ಸ್ಥಳೀಯ ಪರಂಪರೆಗಳು, ಆಚರಣೆಗಳು ಮುಸ್ಲಿಂ ಪಂಗಡಗಳಲ್ಲಿ ಧಾರ್ಮಿಕ ಚೌಕಟ್ಟನ್ನು ಮೀರಿಯೂ ಸಾಂಸ್ಕೃತಿಕವಾಗಿ ಭಿನ್ನವಾಗಿವೆ. ಇದು ಭಾರತದ ಉದ್ದಗಲಕ್ಕೂ, ಕರ್ನಾಟಕದಲ್ಲೂ ಕಂಡುಬರುತ್ತದೆ. ಈ ವೈವಿಧ್ಯಮಯ ಸಂಸ್ಕೃತಿಯಲ್ಲಿ ಮಹಿಳೆಯ ಸ್ಥಾನಮಾನ ಸಶಕ್ತವಾಗಿಯೂ ಭಿನ್ನವಾಗಿಯೂ ಇರುವುದನ್ನು ಕಾಣಬಹುದು. ಧಾರ್ಮಿಕ ಕಟ್ಟುಪಾಡುಗಳ ಮಧ್ಯೆಯೂ ಪುರುಷರು ಮತ್ತು ಮಹಿಳೆಯರು ಅಧಿಕಾರಕ್ಕಾಗಿ, ಸಮಾನತೆಗಾಗಿ ನಡೆಸುವ ಸಂಘರ್ಷ ಒಟ್ಟು ಭಾರತೀಯ ಸಂದರ್ಭವನ್ನು ಒಳಗೊಂಡಂತೆ ಮುಸ್ಲಿಂ ಸಮಾಜದಲ್ಲೂ ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದರೆ ಮುಸ್ಲಿಂ ಮಹಿಳೆ ಮತ್ತು ಮುಸ್ಲಿಮೇತರ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ಭಿನ್ನವಾಗಿಲ್ಲ.

ಮುಸ್ಲಿಂ ಮಹಿಳೆ ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಿಗೆ, ಕೌಟುಂಬಿಕ ಸಮಸ್ಯೆಗಳಿಗೆ ಧಾರ್ಮಿಕ ಮೂಲಭೂತವಾದದ ಹಿನ್ನೆಲೆ ಮುಖ್ಯವಾಗಿರುತ್ತದೆ. ತಲಾಕ್ ಅಥವಾ ವಿವಾಹ ವಿಚ್ಛೇದನ, ಬಹುಪತ್ನಿತ್ವ, ಆಸ್ತಿಯ ಹಕ್ಕುಗಳ ನಿರಾಕರಣೆ ಇವೆಲ್ಲ ಸಮಸ್ಯೆಗಳು ಕುರಾನ್ ಗ್ರಂಥದ ಮೂಲ ಆಶಯಗಳ ಹಿನ್ನೆಲೆಯಲ್ಲಿ ಕಾನೂನು ರಚಿತವಾಗುತ್ತಿದ್ದರೆ ಅದೊಂದು ಸಮಸ್ಯೆಯಾಗುತ್ತಿರಲಿಲ್ಲವೆಂದು ಷರೀಫಾ ಕೂಡ ಅಭಿಪ್ರಾಯ ಪಡುತ್ತಾರೆ. ಅಮೀನಾ ವದೂದ್ ಎಂಬ ವಿಶ್ವವಿಖ್ಯಾತ ಇಸ್ಲಾಂ ಧರ್ಮಪಂಡಿತೆ ಬರೆದ 'ಮಹಿಳೆ ಮತ್ತು ಕುರಾನ್' ('Qur'an and woman'-Oxford University Press 1999) ಎಂಬ ಕೃತಿಯಲ್ಲಿ ಕುರಾನ್ ಗ್ರಂಥದಲ್ಲಿ ಮಹಿಳೆಯ ಸ್ಥಾನಮಾನವನ್ನು ಮಹಿಳಾ ದೃಷ್ಟಿಕೋನದಲ್ಲಿ ಅಭ್ಯಾಸ ಮಾಡಿ ತನ್ನ ಗ್ರಂಥದಲ್ಲಿ ಪುರುಷ-ಮಹಿಳೆಯನ್ನು ಒಂದೇ ಜೀವಮೂಲದಿಂದ ಸೃಷ್ಟಿಸಿದ್ದೇನೆನ್ನುವ ಕುರಾನ್‌ನ(4:1) ಸಮಾನತೆಯ ಸಂದೇಶವನ್ನು ಅದರ ಅಂತರಾರ್ಥವನ್ನು ವಿವರಿಸುತ್ತಾರೆ. ತನ್ನ ಧಾರ್ಮಿಕ ಪಾಂಡಿತ್ಯದಿಂದ ಇಮಾಮ್ ಅಥವಾ ಧಾರ್ಮಿಕ ಮುಖಂಡತ್ವವನ್ನು ನಿರ್ವಹಿಸಿದ ಗೌರವಕ್ಕೆ ಪಾತ್ರವಾದ ಈ ಪ್ರಥಮ ಆಧುನಿಕ ಮಹಿಳೆ ತನ್ನ ಕೃತಿಯಲ್ಲಿ 'ಧಾರ್ಮಿಕ ಸಂದೇಶಗಳ ಭಾಗವಾಗಿ ಮತ್ತು ಈ ಸಂದೇಶಗಳಿಗೆ ಪ್ರತಿಕ್ರಿಯೆಯಾಗಿ ಹುಟ್ಟಿದ ಮಹಿಳೆಯರ ಪರವಾದ ಧ್ವನಿಗಳನ್ನು ಕಡೆಗಣಿಸಿ ಸಾಕಷ್ಟು ವಿಶಿಷ್ಟವೆನಿಸಿದ ಇಸ್ಲಾಮಿಕ್ ಜ್ಞಾನ ಅಭಿವೃದ್ಧಿ ಹೊಂದುವುದು ಹೇಗೆ ಸಾಧ್ಯ?' ಎಂದು ಕೇಳುತ್ತಾರೆ. ಕುರಾನ್‌ನ ಸಂದೇಶಗಳ ಮೂಲಕ ಮುಸ್ಲಿಂ ಮಹಿಳೆಯರ ಸ್ಥಾನಮಾನಕ್ಕಾಗಿ ವಿಶ್ವದಾದ್ಯಂತ ಧಾರ್ಮಿಕ ತತ್ವಗಳ ಚೌಕಟ್ಟಿನೊಳಗೆ ನಿಂತು ಇವರು ಹೋರಾಟ ನಡೆಸುತ್ತಿದ್ದಾರೆ. ಆದರೆ ಈ ತತ್ವಗಳಿಗೆ ಭಿನ್ನವಾಗಿ ರಚಿತವಾದ ಭಾರತದ ಮುಸ್ಲಿಂ ವೈಯಕ್ತಿಕ ಕಾನೂನು ಮಹಿಳೆಯನ್ನು ತೀವ್ರ ಸಂಕಷ್ಟಗಳಿಗೆ ತುತ್ತಾಗುವಂತೆ ಮಾಡಿದೆ. ಇದರ ಅನೇಕ ಮುಖಗಳು ಕನ್ನಡದ ಮುಸ್ಲಿಂ ಸಮಾಜದಿಂದ ಬಂದ ಲೇಖಕರ ಕೃತಿಗಳಲ್ಲಿ ಮೂಡಿ ಬಂದಿದೆ.

ಕನ್ನಡದ ಮುಸ್ಲಿಂ ಹಿನ್ನೆಲೆಯ ಲೇಖಕರನ್ನು ಡಾ॥ ಷರೀಫಾರವರು ಗುರುತಿಸಿದಂತೆ ಶಾಬಾನು ಪ್ರಕರಣ, ಕೋಮುವಾದ, ಕೋಮು ಹಿಂಸೆಯ ಘಟನೆಗಳು ಬಹಳ ತೀವ್ರರೂಪದಲ್ಲಿ ಕಾಡಿವೆ. ಹೆಣ್ಣುಮಕ್ಕಳು 'ಎದುರಿಸುವ ಸಂಪ್ರದಾಯಗಳು, ನಿರ್ಬಂಧಗಳು ಎಲ್ಲ ಜನಸಮುದಾಯಗಳಲ್ಲೂ ಕಂಡುಬರುತ್ತವೆ'(ಪುಟ 155) ಎನ್ನುತ್ತಾರೆ ಷರೀಫಾ.

ಮುಸ್ಲಿಂ ಮಹಿಳೆ ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಿಗೆ, ಕೌಟುಂಬಿಕ ಸಮಸ್ಯೆಗಳಿಗೆ ಧಾರ್ಮಿಕ ಮೂಲಭೂತವಾದದ ಹಿನ್ನೆಲೆ ಮುಖ್ಯವಾಗಿರುತ್ತದೆ. ತಲಾಕ್ ಅಥವಾ ವಿವಾಹ ವಿಚ್ಛೇದನ, ಬಹುಪತ್ನಿತ್ವ, ಆಸ್ತಿಯ ಹಕ್ಕುಗಳ ನಿರಾಕರಣೆ ಇವೆಲ್ಲ ಸಮಸ್ಯೆಗಳು ಕುರಾನ್ ಗ್ರಂಥದ ಮೂಲ ಆಶಯಗಳ ಹಿನ್ನೆಲೆಯಲ್ಲಿ ಕಾನೂನು ರಚಿತವಾಗುತ್ತಿದ್ದರೆ ಅದೊಂದು ಸಮಸ್ಯೆಯಾಗುತ್ತಿರಲಿಲ್ಲವೆಂದು ಷರೀಫಾ ಕೂಡ ಅಭಿಪ್ರಾಯ ಪಡುತ್ತಾರೆ.

ಪುಸ್ತಕ ಅವಲೋಕನ

ಇದು ಹೆಚ್ಚುಕಮ್ಮಿ ನಾವೆಲ್ಲ ನಮ್ಮನ್ನು ಸಮಾಧಾನ ಪಡಿಸಿಕೊಳ್ಳುವುದಕ್ಕೂ, ನಮ್ಮ ಸಮಾಜದ ಪರಂಪರೆಯನ್ನು ಹೊರ ಆಘಾತಗಳಿಂದ ರಕ್ಷಿಸುವ ಕವಚವಾಗಿಯೂ ಈ ಅಭಿಪ್ರಾಯವನ್ನು ಬಳಸಿಕೊಳ್ಳುತ್ತೇವೆ. ಆದರೆ ಉರ್ದುವಿನ ಹೆಸರಾಂತ ಕಥೆಗಾರ್ತಿ ದಿವಂಗತ ಇಸ್ಮತ್ ಚುಗ್ತಾಯಿಯವರು ಈ ಪರಿಸ್ಥಿತಿ ಬೇರೆಯವರಲ್ಲೂ ಇದೆ ಎನ್ನುವುದರಿಂದ ಸಮಾಧಾನಪಡುವವರಲ್ಲ. ಇನ್ನಿತರ ಸಮಾಜದಲ್ಲಿ ಅದೇನೇ ಇರಲಿ ನಮ್ಮಲ್ಲಿ ಯಾಕಿರಬೇಕು ಅನ್ನುವುದನ್ನು ನೇರವಾಗಿ ಮುಖಕ್ಕೆ ರಾಚುವಂತೆ ಪ್ರಶ್ನಿಸುತ್ತಾರೆ. ಈ ಸಂಪ್ರದಾಯಗಳು, ದೌರ್ಜನ್ಯಗಳು, ನಿರ್ಬಂಧಗಳನ್ನು ತೀವ್ರವಾಗಿ ವಿರೋಧಿಸುತ್ತಲೇ ಅಲ್ಲೊಂದು ಬದುಕಿದೆ, ಜೀವಸೆಲೆಯಿದೆ ಎಂಬುದನ್ನು ಇಸ್ಮತ್ ಚುಗ್ತಾಯಿ (ಚೌತಿ ಕಾ ಜೋಡ, ಅಮರ್‌ಬೆಲ್ ಇತ್ಯಾದಿ) ತನ್ನ ಕೃತಿಗಳ ಮೂಲಕ ಮಾರ್ಮಿಕವಾಗಿ ಹೇಳುತ್ತಾರೆ. ಯಾವುದೇ ರಾಜಿ ಸೂತ್ರಗಳಿಲ್ಲದೆ ಮಹಿಳೆಯರ ಪರಿಸ್ಥಿತಿಯನ್ನು, ವಿಶಿಷ್ಟ ಅನುಭವವನ್ನು ತನ್ನೆಲ್ಲ ಅನನ್ಯ ಆಯಾಮಗಳೊಂದಿಗೆ ದಿಟ್ಟವಾಗಿ, ಅದರಲ್ಲೂ ಮುಖ್ಯವಾಗಿ ಅಷ್ಟರ ತನಕ ಅನ್ವೇಷಿಸದ, ವ್ಯಕ್ತಪಡಿಸಲು ಮುಜುಗರಪಡುವ ಮಹಿಳಾ ಲೈಂಗಿಕತೆಯ ಹಲವು ಸೂಕ್ಷ್ಮ ಸಂಗತಿಗಳನ್ನು (ಲಿಹಾಫ್, ಬದನ್ ಕಿ ಖುಷ್ಬೂ, ಗೇಂದಾ ಇತ್ಯಾದಿ) ಕೃತಿಗಳಲ್ಲಿ ಮೂಡಿಸಿದರು. ಸಾಧಾರಣವಾಗಿ ಹೆಚ್ಚಿನವರು ಅವರನ್ನು ಅರ್ಥಮಾಡಿಕೊಂಡಂತೆ, ಅವರು ಸ್ತ್ರೀವಾದಿಯಲ್ಲ, ಉದಾರವಾದಿ ಸ್ತ್ರೀವಾದದ ನಿಲುವಿನವರಂತೂ ಖಂಡಿತಾ ಅಲ್ಲ. ಹೆಚ್ಚಾಗಿ ಅವರು ಸಾಂಪ್ರದಾಯಿಕವಾಗಿ ಲೈಂಗಿಕ ತಾರತಮ್ಯದ ಹಿನ್ನೆಲೆಯಲ್ಲಿ ಗಂಡು-ಹೆಣ್ಣು ಪಾತ್ರಗಳನ್ನು ರೂಪಿಸಿದರೂ ಈ ಪರಿಮಿತಿಯೊಳಗೆ ಮಹಿಳೆಯರ ಕೆಳಮಟ್ಟದ ಸ್ಥಾನಮಾನವನ್ನು ಎತ್ತಿ ತೋರಿಸಿ, ಯಾವುದೇ ಮುಲಾಜಿಗೊಳಗಾಗದೆ ನೇರವಾಗಿ ಅವರ ಹಕ್ಕುಗಳ ಬಗ್ಗೆ ವಾದಿಸುತ್ತಾರೆ. ತಮ್ಮ ಚಟುವಟಿಕೆಗಳು ಮತ್ತು ದೇಹ ಪ್ರಕೃತಿಯನ್ನು ಅವಲೋಕಿಸಿದರೆ ಕೆಲವು ಸ್ತರಗಳಲ್ಲಿ ಸಮಾನರಲ್ಲವೆಂದು ಮೇಲ್ನೋಟಕ್ಕೆ ಅನಿಸಿದರೂ ಗಂಡು ಮತ್ತು ಹೆಣ್ಣು ಬದುಕಿನಲ್ಲಿ ಪರಸ್ಪರ ಪೂರಕವಾಗಿ ಮತ್ತು ಸಮಾನತೆ, ಪರಸ್ಪರ ನಿರ್ಭರತೆಯ ಸೂತ್ರಗಳಿಗೆ ಅನ್ವಯವಾಗುವಂತೆ ಸಂಬಂಧ ಬೆಳೆಸಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ತಮ್ಮ ಕೃತಿಗಳಲ್ಲಿ ಅವರು ವ್ಯಕ್ತಪಡಿಸುತ್ತಾರೆ. ನೀವು ಧರ್ಮದಲ್ಲಿ ವಿಶ್ವಾಸ ಇರುವವರೋ? ಎಂದು ಸಂದರ್ಶಕನೊಬ್ಬ ಕೇಳಿದಾಗ ಇಸ್ಮತ್ ಹೇಳಿದ್ದು ಹೀಗೆ 'ಈಗ ನೀವು ನನ್ನನ್ನು ತೊಂದರೆಗೆ ಸಿಕ್ಕಿಸಬೇಡಿ. ನಾನು ಅಗತ್ಯವಿರುವಾಗ ಕಲ್ಮಾವನ್ನು ಸುಂದರವಾಗಿ ಹೇಳಬಲ್ಲೆ ವಿಶೇಷವಾಗಿ ಪಾಕಿಸ್ಥಾನಕ್ಕೆ ಭೇಟಿನೀಡಿದಾಗ!. ಒಂದು ಶಕ್ತಿಯಿರುವುದನ್ನು ನಾನು ನಂಬುತ್ತೇನೆ, ಆದರೆ ನಾನು ಅದಕ್ಕೆ ಭಯಪಡುವುದಿಲ್ಲ. ನಾನು ನನ್ನ ಕಟಿಕಿಯಿಂದ ಅಲ್ಲಾಹನ ಹೆಸರು ಹೇಳಿಕೊಂಡು ಹಾರಿದರೆ ನನ್ನನ್ನು ಅವನು ಕಾಪಾಡುವುದಿಲ್ಲವೆಂದು ನನಗೆ ತಿಳಿದಿದೆ. ನಾನು ಪ್ರಾರ್ಥಿಸುವುದಿಲ್ಲ, ಆದರೆ ನಾನು ಯಾರಿಗೂ ಕೆಡುಕನ್ನು ಮಾಡುವುದಿಲ್ಲ. ನಾನು ಯಾರಿಗೂ ಮೋಸಮಾಡಿಲ್ಲ.'

ಷರೀಫಾರವರು ಈ ಕೃತಿಯಲ್ಲಿ ಕನ್ನಡ ಸಾಹಿತ್ಯದ 'ಮುಸ್ಲಿಂ ಮಹಿಳಾ ಸಂವೇದನೆಯಲ್ಲಿ ಪ್ರಕಟವಾದ ಪ್ರತಿಭಟನಾ ನೆಲೆಗಳನ್ನೂ, ಅದರ ಪರ್ಯಾಯ ಸಾಧ್ಯತೆಗಳನ್ನು' ವಿಶ್ಲೇಷಿಸುತ್ತಾರೆ. ಕನ್ನಡದ ಸಂದರ್ಭದಲ್ಲಿ ಇದೊಂದು ವೈಶಿಷ್ಟ್ಯಪೂರ್ಣ ಅಧ್ಯಯನ ಗ್ರಂಥವಾಗಿದ್ದು, ನನ್ನ ಈ ಕೃತಿಯ ಪರಿಚಯಾತ್ಮಕ ಲೇಖನ ಅಪೂರ್ಣವೆಂದೇ ತಿಳಿದುಕೊಂಡಿದ್ದೇನೆ, ಯಾಕೆಂದರೆ ಈ ಕೃತಿಯ ಬಹಳಷ್ಟು ಆಯಾಮಗಳನ್ನು ಅದರ ಸೂಕ್ಷ್ಮಗಳನ್ನು ಚರ್ಚಿಸಲು ಇಲ್ಲಿ ಅವಕಾಶವಿಲ್ಲದಿರುವುದು ಇದಕ್ಕೆ ಕಾರಣ. ಕನ್ನಡ ಸಾಹಿತ್ಯಕ್ಕೆ ಡಾ॥ ಕೆ. ಷರೀಫಾ ನೀಡಿದ ಈ ಕೃತಿ ಎಲ್ಲ ನಿಟ್ಟಿನಲ್ಲೂ ಅಧ್ಯಯನ ಯೋಗ್ಯ ಮತ್ತು ಇಂತಹ ಮಹತ್ವಪೂರ್ಣ ಗ್ರಂಥ ನೀಡಿದ್ದಕ್ಕೆ ಅಭಿನಂದನಾರ್ಹರು. ■

ಶತಮಾನಗಳಿಂದ ಕಾಡಿನಲ್ಲಿ ನೆಲೆಸಿರುವ ಆದಿವಾಸಿಗಳು ಹಕ್ಕುಪತ್ರ ಮತ್ತು ಸಾಗುವಳಿ ಚೀಟಿ ಕೇಳಿದರೆ, ನಕ್ಸಲೀಯರು ಎಂದು ಗುಂಡಿಕ್ಕಿ ಕೊಲ್ಲುವ ಪ್ರಭುತ್ವ ನಮ್ಮದು. ಈ ದೇಶದಲ್ಲಿ ಯಾರನ್ನೂ ಬೇಕಾದರೂ ಮಾವೋವಾದಿಗಳೆಂದು, ಭಯೋತ್ಪಾದಕರೆಂದು ಕರೆದು ಹೊಸಕಿಹಾಕಿಬಿಡಬಹುದು. ಹಾಗೆ ಹೊಸಕಿ ಹಾಕುವ ತುರ್ತು ಈಗಿನ ಭಾರತದ ಆಳುವ ವರ್ಗಕ್ಕೆ ಇದೆ. ಈ ದೇಶದ ಬೆಟ್ಟಗುಡ್ಡಗಳನ್ನು ನದಿ, ಕೆರೆಗಳನ್ನು, ಕಾಡು, ಉದ್ಯಾನಗಳನ್ನು ಮಾರಾಟ ಮಾಡಲು ಹೊರಟವರಿಗೆ ಇಂಥ ಒಂದು ಅನಿವಾರ್ಯತೆಯಿದೆ. ಈ ಕಾಡಿನಲ್ಲಿ ನೆಲೆಸಿದವರನ್ನು ತುರ್ತಾಗಿ ಹೊರದಬ್ಬಬೇಕಿದೆ. ಹೊರದಬ್ಬಲು ಪೊಲೀಸ್ ಮತ್ತು ಸೇನೆಯನ್ನು ಬಳಸಿಕೊಳ್ಳಲೇಬೇಕಾಗಿದೆ. ನೂರಾರು ವರ್ಷಗಳಿಂದ ತಮಗೆ ಆಸರೆ ನೀಡಿದ ನೆಲವನ್ನು ಬಿಟ್ಟುಕೊಡುವುದಿಲ್ಲವೆಂದು ಪ್ರತಿಭಟಿಸಿದರೆ, ಅಂಥ ಪ್ರತಿಭಟನೆ ರಾಷ್ಟ್ರದ ಭದ್ರತೆಗೆ ಹಿಂದೆಂದೂ ಒದಗದ ಅಪಾಯವೆಂದು ಅಧಿಕಾರದಲ್ಲಿದ್ದವರು ಅಬ್ಬರಿಸುತ್ತಾರೆ.



ಪ್ರತಿಭಟನೆ ಕತ್ತು ಹಿಸುಕುವ ಪ್ರಭುತ್ವ

ಸನತ್‌ಕುಮಾರ ಬೆಳಗಲಿ

ಬೆಳ್ತಂಗಡಿ ತಾಲ್ಲೂಕಿನ ಕುತ್ಲೂರಿನ ಆದಿವಾಸಿ ಯುವಕ ವಿಠಲ್ ಮಲೆಕುಡಿಯ ಈಗ ಸರ್ಕಾರದ ದೃಷ್ಟಿಯಲ್ಲಿ ಗಂಡಾಂತರ ತಂದೊಡ್ಡಿರುವ ಅಪಾಯಕಾರಿ ವ್ಯಕ್ತಿ. ಈತನನ್ನು ಮಾವೋವಾದಿ ಎಂದು ಜೈಲಿಗೆ ತಳ್ಳಿದ್ದಾರೆ. ಮಂಗಳೂರು ವಿಶ್ವವಿದ್ಯಾಲಯದ ಸಮೂಹ ಸಂವಹನ ಹಾಗೂ ಪತ್ರಿಕೋದ್ಯಮ ವಿದ್ಯಾರ್ಥಿಯಾದ ವಿಠಲ ನಕ್ಸಲೀಯನಾಗಿದ್ದು ಯಾವಾಗ? ಇದಕ್ಕೆ ಸರ್ಕಾರದ ಬಳಿ ಏನು ಪುರಾವೆಗಳಿವೆ? ಹೀಗೆಂದು ಪ್ರಶ್ನಿಸಿದರೆ ಪೊಲೀಸರ ಬಳಿ ಉತ್ತರವಿಲ್ಲ. ಆದರೆ ಉತ್ತರ ನೀಡಲಾಗದ ಪೊಲೀಸರು ವಿಠಲ್‌ನ ತಂದೆ ಲಿಂಗಣ್ಣನ ಕಾಲು ಮುರಿದಿದ್ದಾರೆ. ಜೈಲು ಸೇರಿರುವ ವಿಠಲ್‌ನಿಗೆ ಸಮೂಹ ಸಂವಹನ ಪರೀಕ್ಷೆ ಬರೆಯುವ ಅವಕಾಶವೂ ಇಲ್ಲದಂತಾಗಿದೆ. ಈ ಹಿಂದೆ ಇಂಟರ್ನಲ್ ಅಸೆಸ್‌ಮೆಂಟ್ ಪರೀಕ್ಷೆ ಬರೆಯಲು ನ್ಯಾಯಾಲಯ ಅವಕಾಶ ನೀಡಿತ್ತು. ಆಗ ಪೊಲೀಸರ ಕಾವಲಿನಲ್ಲಿ ಬಂದು ಈತ ಈ ಪರೀಕ್ಷೆಯನ್ನು ಬರೆದಿದ್ದ. ಆದರೆ ಮೇ 21ರಂದು ನಡೆಯಲಿರುವ ಅಂತಿಮ ಪರೀಕ್ಷೆ ಬರೆಯಲು ಅವಕಾಶ ದೊರೆತಿಲ್ಲ. ಇದಕ್ಕೆ ಕಾರಣ, ಈತನಿಗೆ ಶೇ 75ರಷ್ಟು ಹಾಜರಾತಿ ಇಲ್ಲವಂತೆ.

ಈ ಹಿಂದೆ ವಿಠಲ್‌ನ ಹಾಜರಾತಿ 90ರಷ್ಟು ಇದೆ ಎಂದು ಹೇಳಿದ್ದ ಮಂಗಳೂರು ವಿಶ್ವವಿದ್ಯಾಲಯ ಈಗ ಯಾರದೋ ಒತ್ತಡಕ್ಕೆ ಒಳಗಾಗಿ ಹಾಜರಾತಿಯ ಕೊರತೆ ನೆಪ ತೋರಿಸುತ್ತಿದೆ. ಸ್ನಾತಕೋತ್ತರ ಪರೀಕ್ಷೆ ಬರೆಯುವ ವಿದ್ಯಾರ್ಥಿಗೆ ಶೇ 70ರಷ್ಟು ಹಾಜರಾತಿ ಇರಬೇಕು ಎಂಬುದೇನೋ ನಿಜ. ಆದರೆ ಕಳೆದ ಎರಡು ತಿಂಗಳ ಕಾಲ ಸೆರೆಮನೆಯಲ್ಲಿರುವ ವಿಠಲ್‌ನಿಗೆ ತರಗತಿಯಲ್ಲಿ ಹಾಜರಾಗಲು ಹೇಗೆ ಸಾಧ್ಯವಾಗುತ್ತದೆ? ಏಕಕಾಲದಲ್ಲಿ ಜೈಲು ಮತ್ತು ತರಗತಿ ಎರಡೂ ಕಡೆ ಪ್ರತ್ಯಕ್ಷವಾಗಿರುವ ಅತಿಮಾನುಷ ಶಕ್ತಿಯನ್ನೇನೂ ವಿಠಲ್ ಪಡೆದಿಲ್ಲ. ಈ ಸಂಗತಿ ಗೊತ್ತಿದ್ದರೂ ವಿವಿ ಆಡಳಿತ ವರ್ಗ ನ್ಯಾಯಾಲಯಕ್ಕೆ ಪತ್ರ ಕೊಟ್ಟು ಈ ಯುವಕನ ಭವಿಷ್ಯಕ್ಕೆ ಕಲ್ಲು ಹಾಕಿದೆ.

ವಿಠಲ್ ಮಲೆಕುಡಿಯನ ಮೇಲೆ ಪ್ರಭುತ್ವಕ್ಕೆ ಹಾಗೂ ಪ್ರಭುತ್ವದ ಕಾವಲುರಕ್ಷಕರಾದ ಪೊಲೀಸರಿಗೆ ಈ ಪರಿ ಕೋಪವೇಕೆ? ಈ ಹಿಂದೆ ವಿಠಲ್‌ನ ತಂದೆ ಸಾಗುವಳಿ ಮಾಡುತ್ತಿದ್ದ. ಕೃಷಿಯೋಗ್ಯ ಭೂಮಿಯನ್ನು ಬಿಟ್ಟು ಕೊಡಬೇಕೆಂದು ಅಧಿಕಾರದಲ್ಲಿದ್ದವರು ಒತ್ತಡ ತಂದಿದ್ದರು. ಎಕರೆಗೆ 60 ಲಕ್ಷ ರೂಪಾಯಿ ಬೆಲೆಬಾಳುವ ಭೂಮಿಯನ್ನು ಕೇವಲ ಹತ್ತು ಲಕ್ಷ ರೂಪಾಯಿಗೆ ಬಿಟ್ಟುಕೊಡಬೇಕೆಂದು ಒತ್ತಡ ಹೇರಿದರು. ಆದರೆ ಈ ಒತ್ತಡಕ್ಕೆ ವಿಠಲ್ ಮತ್ತು ಆತನ ತಂದೆ ಮಣಿಯಲಿಲ್ಲ. ಮಾತ್ರವಲ್ಲ ತಮ್ಮೂರಿಗೆ ರಸ್ತೆ, ನೀರು, ಶಾಲೆ ಮುಂತಾದ ಮೂಲಸೌಕರ್ಯ ಕಲ್ಪಿಸಬೇಕೆಂದು ಜನರನ್ನು ಸಂಘಟಿಸಿ ಹೋರಾಟಕ್ಕಿಳಿದರು. ಇದಕ್ಕಾಗಿ ಚುನಾವಣಾ ಬಹಿಷ್ಕಾರ ಹಾಕುವುದಾಗಿ ಘೋಷಿಸಿದ್ದರು. ಆದರೆ ಅಧಿಕಾರಿಗಳು ಬಂದು ಬೇಡಿಕೆಗಳನ್ನು ಈಡೇರಿಸುವುದಾಗಿ ಒಪ್ಪಿಕೊಂಡ ನಂತರ ಚುನಾವಣೆಯಲ್ಲಿ ಪಾಲ್ಗೊಂಡು ಮತದಾನ ಮಾಡಿದ್ದಾರೆ. ಈ ಸಂಗತಿ ಮುಚ್ಚಿಟ್ಟ ಪೊಲೀಸರು ಚುನಾವಣಾ ಬಹಿಷ್ಕಾರ ಹಾಕಿರುವುದರಿಂದ ಇವರನ್ನೆಲ್ಲ ನಕ್ಸಲೀಯರು ಎಂದು ಕರೆದು ಜೈಲಿಗೆ ತಳ್ಳಿದ್ದಾರೆ.

ವಿಠಲ್ ಮಲೆಕುಡಿಯ ನಕ್ಸಲೀಯನೆನ್ನಲು ಪೊಲೀಸರ ಬಳಿಯಿರುವ ಸಾಕ್ಷ್ಯಾಧಾರಗಳಾದರೂ ಏನು? ಆತನ ಮನೆಯಲ್ಲಿ ನೂರು ಗ್ರಾಂ ಚಹಾಪುಡಿ, 250 ಗ್ರಾಂ ಸಕ್ಕರೆ, ಒಂದು ಟೂತ್‌ಬ್ರಶ್ ಮತ್ತು ಒಂದು ಬೈನಾಕುಲರ್ ಸಿಕ್ಕಬಿಟ್ಟವಂತೆ. ಇದರ ಜೊತೆಗೆ ಕುಲದೀಪ್ ನಯ್ಯರ್ ಬರೆದ ಜಿ.ಪಿ.ಬಸವರಾಜು ಅನುವಾದಿಸಿದ ಭಗತ್‌ಸಿಂಗ್ ಎಂಬ ಪುಸ್ತಕ ಸಿಕ್ಕಿದೆಯಂತೆ ಇದು ನಕ್ಸಲ್ ಸಾಹಿತ್ಯವಂತೆ. ಆದರೆ ಈ ಪುಸ್ತಕವನ್ನು ವಿಠಲ್‌ನಿಗೆ ತಾನು ನೀಡಿದ್ದಾಗಿ ಡಿವೈಎಫ್‌ಐ ನಾಯಕ ಮುನೀರ್ ಕಾಟಿಪಳ್ಳ ಹೇಳುತ್ತಾರೆ. ಆದರೂ ಪೊಲೀಸರಿಗೆ ಹೇಗಾದರೂ ಮಾಡಿ ಈತನನ್ನು ನಕ್ಸಲೀಯನೆಂದು ಬ್ರ್ಯಾಂಡ್ ಮಾಡಿ ಸರ್ಕಾರದಿಂದ ಶಹಬ್ಬಾಸ್‌ಗಿರಿ ಪಡೆಯಬೇಕಿದೆ. ಆ ಕಾರಣಕ್ಕಾಗಿ ಮಂಗಳೂರು ವಿವಿ ಕುಲಪತಿ ಮೇಲೆ ಒತ್ತಡ ತಂದು ಕೋರ್ಟ್‌ಗೆ ಪತ್ರ ಬರೆಯುವಂತೆ ಮಾಡಿದ್ದಾರೆ.

ಈತ ನಕ್ಸಲೀಯನಲ್ಲ. ನಮ್ಮ ಸಂಘಟನೆಗೆ ಸೇರಿದವನು ಎಂದು ಡಿವೈಎಫ್‌ಐ ನಾಯಕರು ಪದೇ ಪದೇ ಹೇಳುತ್ತಾರೆ. ಸಿಪಿಎಂ ಸಂಸದ ರಾಜೇಶ್ ಅವರು

ವಿಠಲ್ ಮಲೆಕುಡಿಯ ನಕ್ಸಲೀಯನೆನ್ನಲು ಪೊಲೀಸರ ಬಳಿಯಿರುವ ಸಾಕ್ಷ್ಯಾಧಾರಗಳಾದರೂ ಏನು? ಆತನ ಮನೆಯಲ್ಲಿ ನೂರು ಗ್ರಾಂ ಚಹಾಪುಡಿ, 250 ಗ್ರಾಂ ಸಕ್ಕರೆ, ಒಂದು ಟೂತ್‌ಬ್ರಶ್ ಮತ್ತು ಒಂದು ಬೈನಾಕುಲರ್ ಸಿಕ್ಕಬಿಟ್ಟವಂತೆ. ಇದರ ಜೊತೆಗೆ ಕುಲದೀಪ್ ನಯ್ಯರ್ ಬರೆದ ಜಿ.ಪಿ.ಬಸವರಾಜು ಅನುವಾದಿಸಿದ ಭಗತ್‌ಸಿಂಗ್ ಎಂಬ ಪುಸ್ತಕ ಸಿಕ್ಕಿದೆಯಂತೆ ಇದು ನಕ್ಸಲ್ ಸಾಹಿತ್ಯವಂತೆ. ಆದರೆ ಈ ಪುಸ್ತಕವನ್ನು ವಿಠಲ್‌ನಿಗೆ ತಾನು ನೀಡಿದ್ದಾಗಿ ಡಿವೈಎಫ್‌ಐ ನಾಯಕ ಮುನೀರ್ ಕಾಟಿಪಳ್ಳ ಹೇಳುತ್ತಾರೆ. ಆದರೂ ಪೊಲೀಸರಿಗೆ ಹೇಗಾದರೂ ಮಾಡಿ ಈತನನ್ನು ನಕ್ಸಲೀಯನೆಂದು ಬ್ರ್ಯಾಂಡ್ ಮಾಡಿ ಸರ್ಕಾರದಿಂದ ಶಹಬ್ಬಾಸ್‌ಗಿರಿ ಪಡೆಯಬೇಕಿದೆ.

ಮಂಗಳೂರಿಗೆ ಬಂದು ಜೈಲಿನಲ್ಲಿರುವ ವಿಠಲ್‌ನನ್ನು ಭೇಟಿಯಾಗಿ ಹೋಗಿದ್ದಾರೆ. ಚಿಂತಕ ಜಿ.ಕೆ. ಗೋವಿಂದರಾವ್ ಮತ್ತು ಡಿಎಸ್‌ಎಸ್ ನಾಯಕ ಮಾವಳ್ಳಿ ಶಂಕರ್ ವಿಠಲ್‌ನನ್ನು ಭೇಟಿ ಮಾಡಿ, ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಸಿಪಿಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಕೂಡ ಈತನನ್ನು ಕಾಣಲು ಬಂದಿದ್ದಾರೆ. ಆದರೂ ಪೊಲೀಸರು ಒಪ್ಪಿಕೊಳ್ಳಲು ತಯಾರಿಲ್ಲ. ನಕ್ಸಲರನ್ನು ಹತ್ತಿಕ್ಕಲು ನಕ್ಸಲ್ ನಿಗ್ರಹ ಪಡೆಗೆ ಸರ್ಕಾರದಿಂದ ಕೋಟ್ಯಂತರ ರೂಪಾಯಿ ಬರುತ್ತದೆ. ಅದಕ್ಕಾಗಿ ನಕ್ಸಲೀಯರನ್ನು ಹಿಡಿಯಲಾಗದಿದ್ದರೂ ಇಂತಹ ಅಮಾಯಕರನ್ನು ಹಿಡಿದು ಸರ್ಕಾರಕ್ಕೆ ದಾಖಲೆ ಒದಗಿಸುವುದು ಪೊಲೀಸರ ಚಾಳಿಯಾಗಿದೆ. ಮಲೆನಾಡಿನಲ್ಲಿ ಕೋರ್ಟ್‌ನಲ್ಲಿ ಖುಲಾಸೆಯಾಗಿ ಬಂದ ನಕ್ಸಲ್ ಬೆಂಬಲಿಗರನ್ನು ಸಂಪರ್ಕಿಸಿ ಶರಣಾಗತರಾದರೆ, ನಕ್ಸಲ್ ಪ್ಯಾಕೇಜ್‌ನ ಹಣ ಕೊಡುವುದಾಗಿ ಒತ್ತಡ ಹೇರಿದ ಉದಾಹರಣೆಗಳಿವೆ.

ಇದು ಒಬ್ಬ ವಿಠಲ್‌ನ ಕತೆಯಲ್ಲ, ಈ ದೇಶದ ನೂರಾರು ಬಡವರ ಮಕ್ಕಳ ವ್ಯಥೆ. ಛತ್ತೀಸಗಢದ ಶಾಲಾ ಶಿಕ್ಷಕಿ ಸೋನಿ ಸೂರಿ ಎಂಬ ಯುವತಿಯನ್ನು ಇದೇ ರೀತಿ ಬೆನ್ನು ಹತ್ತಿ ಕಾಡುತ್ತಿದ್ದಾರೆ. ಆಕೆ ನಕ್ಸಲ್ ಬೆಂಬಲಿಗಳೆಂದು ಜೈಲಿಗೆ ತಳ್ಳಿ ಪೈಶಾಚಿಕ ಚಿತ್ರಹಿಂಸೆ ನೀಡುತ್ತಿದ್ದಾರೆ. ಆಕೆಯ ಮರ್ಮಾಂಗದಲ್ಲಿ ಕಲ್ಲುಗಳನ್ನು ಹಾಕಿ ಹಿಂಸಿಸಿದ್ದಾರೆ. ಮಾನಸಿಕ ಮತ್ತು ದೈಹಿಕವಾಗಿ ಗಾಯಗೊಂಡ ಆಕೆ ದಿಲ್ಲಿಯ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಆಸ್ಪತ್ರೆಗೆ ಹೋದರೆ, ಆಕೆಗೆ ಚಿಕಿತ್ಸೆ ನೀಡಲು ನಿರಾಕರಿಸಲಾಯಿತು. ಈ ಬಗ್ಗೆ ಸಂಸತ್ತಿನಲ್ಲಿ ಕಮ್ಯುನಿಸ್ಟ್ ಸದಸ್ಯರು ಆಕ್ಷೇಪಿಸಿದಾಗ, ಹಾಗೇನೂ ಇಲ್ಲ. ಚಿಕಿತ್ಸೆ ನೀಡುವುದಾಗಿ ಸಬೂಬು ನೀಡಿತು.

ಜೂಲಿನಾ ಪೂರ್ತಿ ಜಾರ್ಖಂಡದ ಒಂಬತ್ತನೇ ಕ್ಲಾಸಿನ ವಿದ್ಯಾರ್ಥಿನಿ. ಈಕೆ ತನ್ನ ಹಳ್ಳಿಯಿಂದ ಹಾಕಿ ಪಂದ್ಯ ನೋಡಲು ಗೆಳತಿಯರೊಂದಿಗೆ ರಾಂಚಿಗೆ ಬಂದಿದ್ದಳು. ಹಾಕಿ ಪಂದ್ಯ ನೋಡಿದ ನಂತರ ಈ ಆದಿವಾಸಿ ಹುಡುಗಿ ತನ್ನ ಸಂಬಂಧಿಕರ ಮನೆಗೆ ಹೋಗಿ ತಂಗಿದಳು. ಆದರೆ ಆಕೆ ತಂಗಿದ ಮನೆ ನಕ್ಸಲ್ ಬೆಂಬಲಿಗನದೆ ಪೊಲೀಸರು ಈ ಬಾಲಕಿಯನ್ನು ಬಂಧಿಸಿ ಜೈಲಿಗೆ ಹಾಕಿದ್ದಾರೆ. ಈಕೆ ಓದುತ್ತಿರುವ ಶಾಲೆಯ ಶಿಕ್ಷಕರು ಆಕೆ ಅಂಥವಳಲ್ಲ. ಆಕೆಯ ಹಾಜರಾತಿ ದಾಖಲೆ ನೋಡಿಯೆಂದು ತೋರಿಸಿದರೂ ಪೊಲೀಸರು ಕೇಳಲಿಲ್ಲ. ಬ್ರಿಟಿಷ್ ಸಾಮ್ರಾಜ್ಯಶಾಹಿ ವಿರುದ್ಧ ಬಂಡಾಯವೆದ್ದ ಆದಿವಾಸಿ ಹೋರಾಟಗಾರ ಬಿರ್ಸಾ ಮುಂಡಾನ ಹಳ್ಳಿಯಿಂದ ಬಂದ ಈ ಬಾಲಕಿ ಇಂದಿಗೂ ಜೈಲಿನಲ್ಲಿದ್ದಾಳೆ.

ಸುಧೀರ್ ಢವಳೆ ಮಹಾರಾಷ್ಟ್ರದ ದಲಿತ ಸಂಘಟನೆಯೊಂದರ ಕಾರ್ಯಕರ್ತ. ಹವ್ಯಾಸಿ ಪತ್ರಕರ್ತ. ದಮನಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಬಗ್ಗೆ ಹಲವಾರು ಪುಸ್ತಕಗಳನ್ನು ಬರೆದು ಹೆಸರು ಮಾಡಿದ ಯುವಕ. ಇಂಥ ಜನಪರ ಹೋರಾಟಗಾರನನ್ನು ನಕ್ಸಲೀಯ ಎಂದು ಕರೆದು ಪೊಲೀಸರು ಬಂಧಿಸಿದ್ದಾರೆ. 2011ರ ಜನವರಿಯಲ್ಲಿ ವರ್ಧಾ ನದಿಯಲ್ಲಿ ಬಂಧಿಸಲ್ಪಟ್ಟ ಢವಳೆಯನ್ನು ಇನ್ನೂ ಬಿಡುಗಡೆ ಮಾಡಲಾಗಿಲ್ಲ. ಮರಾಠಿ ದಲಿತ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ವಾಪಸು ಬರುತ್ತಿರುವಾಗ ಈ ಬಂಧನವಾಗಿದೆ. ಇದರಿಂದಾಗಿ ಈತನನ್ನೇ ಅವಲಂಬಿಸಿದ ಇಬ್ಬರು ಮಕ್ಕಳು ಮತ್ತು ಪತ್ನಿಯ ಸ್ಥಿತಿ ಚಿಂತಾಜನಕವಾಗಿದೆ. ಭೀಮರಾವ್ ಭೂತೆ ಎಂಬ ನಕ್ಸಲ್ ನಾಯಕನ ಜೊತೆಗೆ ಢವಳೆ ಸಂಪರ್ಕವಿತ್ತು ಎಂದು ಪೊಲೀಸರು ಕತೆ ಕಟ್ಟಿದ್ದಾರೆ.

ಜಾರ್ಖಂಡನಲ್ಲಿ ಬಲವಂತದ ಭೂಸ್ವಾಧೀನದ ವಿರುದ್ಧ ಮಾನವಹಕ್ಕುಗಳ ಪರವಾಗಿ ಹೋರಾಟ ಮಾಡುತ್ತ ಬಂದಿರುವ ಚೇತನ್ ಮರಾಂಡಿಯನ್ನು ನಕ್ಸಲವಾದಿ ಎಂದು ಆರೋಪಿಸಿ ಜೈಲಿಗೆ ತಳ್ಳಲಾಗಿತ್ತು. ಆದರೆ ನ್ಯಾಯಾಲಯದ ಮಧ್ಯಪ್ರವೇಶದ ನಂತರ ಬಿಡುಗಡೆಯಾಯಿತು. ಒಡಿಶಾದ ಸಾಮಾಜಿಕ ಕಾರ್ಯಕರ್ತ ಕೋಪಾಕುಂಜಂ ಯುನಿಸೆಫ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾರೆ. ಬಸ್ತಾರ್‌ನ ವನವಾಸಿ ಚೇತನ ಆಶ್ರಮದಂತಹ ಸಂಸ್ಥೆಯೊಂದಿಗೆ ಒಡನಾಟ ಹೊಂದಿದ್ದಾರೆ. ಸರ್ಕಾರಿ ಕೃಪಾಪೋಷಿತ ಗುಂಡಾ ಗ್ಯಾಂಗ್ ಆದ ಸಲ್ವಾ-ಜುಡಂ ಅಂತಹ ಹಂತಕ ಪಡೆ ವಿರುದ್ಧ ಈತ ಹೋರಾಡುತ್ತ ಬಂದಿದ್ದಾನೆ. ಡಾ. ಬಿನಾಯಕ ಸೇನ್ ಅವರು ಆದಿವಾಸಿಗಳ ಆರೋಗ್ಯರಕ್ಷಣೆಗಾಗಿ ಕೈಗೊಂಡ ಕಾರ್ಯಕ್ರಮಗಳಲ್ಲೂ ಇವರು ಪಾಲ್ಗೊಂಡಿದ್ದಾರೆ. ಇಂತಹ ವ್ಯಕ್ತಿಯನ್ನು ಛತ್ತೀಸಗಢದ ಪೊಲೀಸರು 2010ರ ಡಿಸೆಂಬರ್ 10ರಂದು ಬಂಧಿಸಿದರು. ಈತನ ಭೇಟಿಗೆ ಬಂದ ಮೇಧಾ ಪಾಟ್ಕರ್ ಅವರಿಗೂ ಭೇಟಿ ಮಾಡಲು ಅವಕಾಶ ನೀಡಲಿಲ್ಲ.

ಬರೆಯುತ್ತ ಹೋದರೆ, ಇಂಥ ನೂರಾರು ಕತೆಗಳು ಕಣ್ಣೆದುರು ಬಂದು ನಿಲ್ಲುತ್ತವೆ. ಛತ್ತೀಸಗಢದಲ್ಲಿ ಒಟ್ಟು 2065 ಮಂದಿಯನ್ನು ಜೈಲಿಗೆ ತಳ್ಳಲಾಗಿದೆ. ಜಾರ್ಖಂಡನಲ್ಲಿ 500 ಜನರನ್ನು ದಸ್ತಗಿರಿ ಮಾಡಲಾಗಿದೆ. ಒಡಿಶಾದಲ್ಲಿ 460 ಮಂದಿಯನ್ನು ಕಾರಾಗೃಹಕ್ಕೆ ತಳ್ಳಲಾಗಿದೆ. ಜಾರ್ಖಂಡನಲ್ಲಿ ಸಾಂಸ್ಕೃತಿಕ ಚಟುವಟಿಕೆಯಲ್ಲಿ ತೊಡಗಿದ ಇಡೀ ತಂಡವನ್ನೇ ಬಂಧಿಸಲಾಗಿದೆ. ಪೊಲೀಸರಿಗೆ ಹೆದರಿ ಮಹಾರಾಷ್ಟ್ರದ ಸಾಂಸ್ಕೃತಿಕ ತಂಡವೊಂದು ಇಡಿಯಾಗಿ ಭೂಗತವಾಗಿದೆ.

ಇದು ನಮ್ಮ ಪ್ರಜಾಪ್ರಭುತ್ವ. ನವ ಉದಾರವಾದದ ಕರಾಳ ಛಾಯೆ ಎಲ್ಲೆಡೆ ಕವಿಯುತ್ತಿರುವಂತೆ ಪ್ರತಿರೋಧದ ಧ್ವನಿಗಳು ಹೊರಗೆ ಬರಬಾರದಂತೆ ಕುತ್ತಿಗೆ ಒಸುಕುವ ಕೆಲಸವನ್ನು ಪ್ರಭುತ್ವ ಅತ್ಯಂತ ವ್ಯವಸ್ಥಿತವಾಗಿ ಮಾಡುತ್ತಿದೆ. ಬರಲಿರುವ ದಿನಗಳು ಇನ್ನೂ ಭಯಾನಕವಾಗಿವೆ ಎಂದು ಅನ್ನಿಸುತ್ತದೆ. ಬಂಡವಾಳಶಾಹಿ ಬಿಕ್ಕಟ್ಟು ತೀವ್ರಗೊಳ್ಳುತ್ತಿದ್ದಂತೆ ಜನ ಚಳವಳಿಗಳು ಭುಗಿಲೇಳಬೇಕು. ಆದರೆ ಹಾಗೆ ಭುಗಿಲೇಳದಂತೆ ಹತ್ತಿಕ್ಕಲು ಪ್ರಭುತ್ವ ಹೊಸ ಅಸ್ತ್ರಗಳನ್ನು ಪ್ರಯೋಗಿಸುವ ಅಪಾಯವಿದೆ. ಅಂತಲೇ ಹೋರಾಟಗಾರರು ಸಾಂಪ್ರದಾಯಿಕವಲ್ಲದ ಹೊಸದಾರಿಯನ್ನು ಅನ್ವೇಷಿಸಿದರೆ ಅಚ್ಚರಿಪಡಬೇಕಾಗಿಲ್ಲ. ■

ಸೂಫಿ ಕಾವ್ಯದಲ್ಲಿ ಪ್ರೇಮ ಹಾಗೂ ಪ್ರೇಮ ಕವಿ ಮೌಲಾನಾ ರೂಮಿ

ಆಂಗ್ಲ ಮೂಲ: ಡಾ॥ ಅಸ್ಗರ್ ಅಲಿ ಎಂಜಿನಿಯರ್
ಕನ್ನಡಕ್ಕೆ: ಹಸನ್ ನಯೀಂ ಸುರಕೋಡ

ಸಾಮಾನ್ಯವಾಗಿ ಅರೇಬಿಕ್, ಪರ್ಷಿಯನ್ ಹಾಗೂ ಉರ್ದುವಿನ ಗಜಲ್ ಕಾವ್ಯ ಹಾಗೂ ವಿವಿಧ ಪ್ರಕಾರಗಳ ಸೂಫಿ ಕಾವ್ಯ ಮೂಲಭೂತವಾಗಿ ಪ್ರೇಮ ಕಾವ್ಯ. ಅರೇಬಿಕ್ ಪದ 'ಗಜಲ್'ಗೆ ವಿಭಿನ್ನ ಅರ್ಥಗಳಿವೆ. ಆ ಪೈಕಿ ಒಂದು–ಪ್ರಿಯತಮೆಯ ಜತೆಗಿನ ಮಾತುಕತೆ. ಅನೇಕ ಸೂಫಿಗಳು ಗಜಲ್ ಪ್ರಕಾರದಲ್ಲೇ ಬರೆದಿದ್ದಾರೆ. ಉಳಿದ ಹಲವಾರು ಸೂಫಿಗಳು ಮಸನವಿ(ದ್ವಿಪದಿ)ಯಂಥ ಬೇರೆ ಪ್ರಕಾರಗಳನ್ನು ಬಳಸಿದ್ದಾರೆ. ಸೂಫಿಗಳು ಅನೇಕ ವಿಚಾರಧಾರೆಯ ಸಿಲ್‌ಸಿಲಾ(ಪರಂಪರೆ)ಗಳಿಗೆ ಸೇರಿದವರಾಗಿದ್ದಾರೆ. ಈ ಪರಂಪರೆಗಳು ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಬೇರೆಯಾದರೂ ಮೂಲ ವಿಚಾರಗಳಲ್ಲಿ ಒಂದಾಗಿವೆ.

ಇಸ್ಲಾಂ ಸದ್ಯಕ್ಕೆ ಆಳುವ ವ್ಯವಸ್ಥೆಯ ಅಂಗವಾಗಿಬಿಟ್ಟಿದೆ. ಹೀಗಾಗಿ ಜನಸಾಮಾನ್ಯ ಹಾಗೂ ದೈವಿಶಾಸ್ತ್ರಜ್ಞರ ದೃಷ್ಟಿಯಲ್ಲಿ, ಅದು ಅಧಿಕಾರದೊಂದಿಗೆ ಬೆಸೆದುಕೊಳ್ಳುವ ಹಂತಕ್ಕೆ ಬಂತು, ಆ ಕಾರಣಕ್ಕಾಗಿ ಇಸ್ಲಾಮಿನಲ್ಲಿ ಧರ್ಮ ಹಾಗೂ ರಾಜಕೀಯವನ್ನು ಪ್ರತ್ಯೇಕಿಸಲಾಗದು ಎಂದು ಜನಸಾಮಾನ್ಯರು ನಂಬುವಂತಾಯಿತು. ಈ ಸೂತ್ರ ಸರಿಯಲ್ಲವಾದರೂ ಅದು ಜನತೆಯ ನಂಬಿಕೆಯಾಗಿ ಬಿಟ್ಟಿದೆ. ಅಧಿಕಾರ ರಾಜಕೀಯದ ಜತೆಗಿನ ಈ ಸಂಬಂಧ ಧಾರ್ಮಿಕ ಮನೋಭಾವವನ್ನು ಪ್ರಭಾವಿಸತೊಡಗಿತು.

ಇಸ್ಲಾಮಿಗೂ ಮುಂಚೆ ಅರಬ್ ಸಮಾಜದಲ್ಲಿ ಸಂಪೂರ್ಣ ಕಾನೂನು ನಿರ್ವಾತವಿತ್ತು. ಆ ಕಾರಣಕ್ಕಾಗಿ ಕುರ್‌ಆನ್‌ನ ಘೋಷಣೆಗಳು, ಪ್ರವಾದಿಯ ನಡೆ–ನುಡಿ(ಸುನ್ನಾ)ಗಳನ್ನಾಧರಿಸಿ ಹೊಸ ಕಾನೂನು ವ್ಯವಸ್ಥೆಯನ್ನು ರೂಪಿಸಬೇಕಾಯಿತು. ರಾಜಕೀಯ ಆಡಳಿತ ಲಿಖಿತ ಕಾನೂನುಗಳನ್ನು ಅವಲಂಬಿಸಬೇಕಿತ್ತು. ಸುನ್ನಿ ಹಾಗೂ ಶಿಯಾ ಎರಡೂ ಪಂಗಡಗಳ ಅನೇಕ ಇಮಾಮರಿಂದ ರಚಿತಗೊಂಡ ಷರಿಯಾ ಇಸ್ಲಾಮಿಕ್ ವ್ಯವಸ್ಥೆಗಳಿಗೆ ಅನಿವಾರ್ಯವಾಯಿತು.

ಇನ್ನೊಂದೆಡೆ ಸೂಫಿಗಳು ಮೂಲಭೂತವಾಗಿ ಆಧ್ಯಾತ್ಮಿಕ ವ್ಯಕ್ತಿಗಳಾಗಿದ್ದರು. ಅವರು ಯಾವುದೇ ರಾಜಕೀಯ ವ್ಯವಸ್ಥೆಗಳೊಂದಿಗೆ ಸಂಬಂಧ ಹೊಂದುವುದನ್ನು ಇಷ್ಟಪಡಲಿಲ್ಲ. ತಮ್ಮ ಬಯಕೆಗಳನ್ನು ನಿಯಂತ್ರಿಸಿಕೊಂಡು, ಆಂತರಿಕ ಶಿಸ್ತಿಗೆ ಒತ್ತುಕೊಡುತ್ತ ಅಲ್ಲಾಹನ ಸ್ಮರಣೆ(ಜಿಕರ್)ಯಲ್ಲಿ ತೊಡಗಿ ಆಧ್ಯಾತ್ಮಿಕ ವಿಷಯಗಳ ಕುರಿತು ಚಿಂತಿಸುತ್ತ ಅವರು ಕಾಲ ಕಳೆಯಬಯಸಿದರು. ಸನ್ಯಾಸ ನಿಷಿದ್ಧವಾಗಿರದಿದ್ದರೂ ಸನ್ಯಾಸಕ್ಕೆ ಆದ್ಯತೆ ಇದ್ದಿರಲಿಲ್ಲ. ಅವರು ಲೌಕಿಕ ಬದುಕಿಗೆ ವಿಮುಖವಾಗಿರದಿದ್ದರೂ ಲೌಕಿಕ ವಿಷಯಗಳಲ್ಲಿ ಅವರು ಆಸಕ್ತಿ ವಹಿಸುತ್ತಿದ್ದುದು ಅಷ್ಟಕ್ಕಷ್ಟೇ.

ಮನೋವಿಜ್ಞಾನದ ದೃಷ್ಟಿಯಿಂದ ಹೇಳಬೇಕೆಂದರೆ ಯಾವುದೇ ವ್ಯಕ್ತಿಯ ಮೇಲೆ ಗಮನ ಕೇಂದ್ರೀಕರಿಸಬೇಕಿದ್ದರೆ ಆ ವ್ಯಕ್ತಿಯೊಂದಿಗೆ ಅವಿನಾಭಾವ ಸಂಬಂಧ ಬೆಳೆಸಿಕೊಳ್ಳುವುದು ಅನಿವಾರ್ಯವಾಗಿಬಿಡುತ್ತದೆ. ಇದು ಆ ವ್ಯಕ್ತಿಯ ಜೊತೆ ಒಡನಾಟ ಹಾಗೂ ತೀವ್ರ ಪ್ರೇಮದಲ್ಲಿ ಪರಿಣತಿಗೊಳ್ಳುತ್ತದೆ. ಸೂಫಿಗಳ ಸಂದರ್ಭದಲ್ಲಿ ಅದು ಬೇರೆ ಯಾರೂ ಅಲ್ಲ, ಅಲ್ಲಾಹನೇ. ಹೀಗೆ ಸೂಫಿ ಕಾವ್ಯದಲ್ಲಿ ಅಲ್ಲಾಹನ ಬಗೆಗಿನ ಪ್ರೇಮವೇ ತುಂಬಿಕೊಂಡಿದೆ. ಅಲ್ಲಾಹನ ಬಗೆಗಿನ ತಮ್ಮ ಪ್ರೇಮವನ್ನು ವ್ಯಕ್ತಪಡಿಸಲು ಸೂಫಿಗಳು ಚಾಲ್ತಿಯಲ್ಲಿದ್ದ ಕಾವ್ಯ ಪ್ರಕಾರಗಳಾದ ಗಜಲ್ ಇಲ್ಲಾ ಮಸನವಿಯನ್ನು ಬಳಸಬೇಕಾಯಿತು.

ಸಾಂಪ್ರದಾಯಿಕವಾಗಿ ಕಾವ್ಯದಲ್ಲಿನ ಪ್ರೇಮ ಪ್ರಿಯತಮೆಯ ಬಗೆಗಿನ ಪ್ರೀತಿಯನ್ನು ಪ್ರತಿನಿಧಿಸುತ್ತಿತ್ತು. ಸೂಫಿಗಳು ಸಹ ಅಲ್ಲಾಹನ ಬಗೆಗಿನ ತಮ್ಮ ಪ್ರೇಮವನ್ನು ವ್ಯಕ್ತಪಡಿಸುವಾಗ ಚಾಲ್ತಿಯಲ್ಲಿದ್ದ ಮಾನವ–ಸಂಬಂಧಿತ ಪಾರಿಭಾಷಿಕ ಪದಗಳನ್ನು ಬಳಸಬೇಕಾಯಿತು. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ಅಲ್ಲಾಹ್ ನಮ್ಮೆಲ್ಲರ ಗ್ರಹಿಕೆ ಮೀರಿದವನಾಗಿದ್ದು ಅವನನ್ನು ಮಾನವನೊಂದಿಗೆ ಹೋಲಿಕೆ ಮಾಡುವಂತಿರಲಿಲ್ಲವಾದರೂ ಅಲ್ಲಾಹನನ್ನು ಮಾನವ ರೂಪದಲ್ಲಿ ಮೂರ್ತೀಕರಿಸಲಾಯಿತು. ಹೀಗೆ ಸೂಫಿಕಾವ್ಯದಲ್ಲಿ ಪ್ರಿಯತಮೆ ಮಾನವ ಜೀವಿಯಾಗಿ ಕಂಡುಬಂದರೂ ಅದಕ್ಕೆ ಮನುಷ್ಯ ಭಾಷೆಯ ಇತಿಮಿತಿಗಳೇ ಕಾರಣ. ನೈಜ ಪ್ರಿಯತಮೆ ಅಲ್ಲಾಹನೇ. ಹೀಗೆ ಸೂಫಿ ಕಾವ್ಯ ಅಲ್ಲಾಹನ ಪ್ರೇಮದಲ್ಲೇ ಮಿಂದು ಹೋಗಿದೆ.

ಈ ರೀತಿ ಸೂಫಿಗಳು ಹಾಗೂ ದೈವಶಾಸ್ತ್ರಜ್ಞರ ಅಲ್ಲಾಹ್‌ನ ಪರಿಕಲ್ಪನೆಗಳಲ್ಲಿ ಮೂಲಭೂತ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಒಂದೆಡೆ ಸೂಫಿಗಳು ಅಲ್ಲಾಹ್‌ನ ಪ್ರೇಮಕ್ಕೆ ಒತ್ತುಕೊಡುತ್ತಾರೆ, ಪದೇ ಪದೇ ಅದಕ್ಕಾಗಿ ಪರಿತಪಿಸುತ್ತಾರೆ ಆದರೆ ದೈವಶಾಸ್ತ್ರಜ್ಞರ ಅಲ್ಲಾಹ್‌ನ ಪರಿಕಲ್ಪನೆಗೆ ಭಯವೇ ಮೂಲವಾಗುತ್ತದೆ. ಅಲ್ಲಾಹ್‌ನ ಬಗ್ಗೆ ಭಯವಿರಲಿ ಹಾಗೂ ಅವನಿಗೆ ಅವಿಧೇಯವಾಗುವುದರ ಪರಿಣಾಮಗಳ ಬಗ್ಗೆ ಭಯವಿರಲಿ ಎಂದು ದೈವಶಾಸ್ತ್ರಜ್ಞ ನಮಗೆ ಎಚ್ಚರಿಸುತ್ತಾನೆ. ಆದರೆ ಸೂಫಿ ಅಲ್ಲಾಹ್‌ನ್ನು ಪ್ರೀತಿಸಿರಿ, ಅವನ ಪ್ರೇಮದಲ್ಲಿ ಮೈಮರೆಯಿರಿ ಎಂದು ಹೇಳುತ್ತಾನೆ.

ಈ ವ್ಯತ್ಯಾಸ ತುಂಬ ಸುಲಭವಾಗಿ ಅರ್ಥವಾಗುವಂತಹುದು. ಒಬ್ಬ ದೈವಶಾಸ್ತ್ರಜ್ಞ ಪ್ರತ್ಯಕ್ಷವಾಗಿ ಇಲ್ಲಾ ಪರೋಕ್ಷವಾಗಿ ಅಧಿಕಾರಸ್ಥನೊಂದಿಗೆ ಸಂಬಂಧ ಹೊಂದಿರುತ್ತಾನೆ, ಸಮಾಜದಲ್ಲಿ ಸುವ್ಯವಸ್ಥೆ ಕಾಪಾಡುವ ಬಗ್ಗೆ, ಕಾನೂನು ಮತ್ತು ಸುವ್ಯವಸ್ಥೆಯ ಜವಾಬುದಾರಿ ನಿರ್ವಹಿಸುವವರ ಬಗ್ಗೆ ಕಾಳಜಿಯುಳ್ಳವನಾಗಿರುತ್ತಾನೆ. ಅವನು ಪ್ರಭುತ್ವದ ಬಗ್ಗೆ ಭಯ ಹುಟ್ಟುಹಾಕಬೇಕಾಗುತ್ತದೆ. ಇದು ಪ್ರಾಯಶಃ ಅಲ್ಲಾಹ್‌ನ ಬಗೆಗಿನ ಭಯ ಅವನಿಗೆ ಏಕೆ ಇಷ್ಟೊಂದು ಮುಖ್ಯ ವಿಷಯವಾಗುತ್ತದೆ ಎನ್ನುವುದನ್ನು ವಿವರಿಸಬಲ್ಲದು. ಕಾರಣ ಅಲ್ಲಾಹ್ ಪ್ರಭುತ್ವದ ಪ್ರತೀಕವಾಗಿದ್ದಾನೆ.

ಕುರ್‌ಆನ್ ನಿಜಕ್ಕೂ ಅಲ್ಲಾಹ್‌ನ ಭಯ ಹಾಗೂ ಅಲ್ಲಾಹ್‌ನ ಬಗೆಗಿನ ಪ್ರೇಮ –ಇವೆರಡೂ ತೆರನಾದ ಸೂಕ್ತಿಗಳನ್ನೊಳಗೊಂಡಿದೆ. ಏಕೆಂದರೆ ಅರಬ್ ಸಮಾಜದ ಸನ್ನಿವೇಶ ತುಂಬ ಸಂಕೀರ್ಣವಾಗಿತ್ತು. ಆಡಳಿತ ನಡೆಸುವ ವ್ಯವಸ್ಥೆಯೆ ಇರಲಿಲ್ಲ. ಬುಡಕಟ್ಟಿನ ರೀತಿ–ರಿವಾಜುಗಳ ಮಿತಿಗಳಲ್ಲೇ ಎಷ್ಟೊ ಸಂದರ್ಭಗಳಲ್ಲಿ ವ್ಯಭಿಚಾರದ ನಡತೆಗೂ ಅವಕಾಶ ಕಲ್ಪಿಸಿತ್ತು. ಅದೇನೇ ಇರಲಿ, ಬಡಕಟ್ಟು ಸಂಪ್ರದಾಯಗಳನ್ನು ಛಿದ್ರಗೊಳಿಸತೊಡಗಿದ್ದ ಹೊಸ ವ್ಯಾಪಾರಿ ಸಂಬಂಧಗಳು ಹೆಚ್ಚು ಸಂಕೀರ್ಣವಾದ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಕಾಳಜಿ ವಹಿಸುವುದು ಅವಶ್ಯವಾಯಿತು. ಹೀಗಾಗಿ ಕುರ್‌ಆನ್ ಹಾಗೂ ಸುನ್ನಾ ಸ್ಪಷ್ಟವಾದ ಕಾನೂನು ಕಟ್ಟಳೆಗಳನ್ನು ವಿಧಿಸಿ ಆ ಅಗತ್ಯವನ್ನು ಪೂರೈಸಿದವು.

ಸಾಮಾಜಿಕ ವ್ಯವಸ್ಥೆಗೆ ಕನಿಷ್ಠ ಆದ್ಯತೆ ನೀಡಿದ್ದ ಬುಡಕಟ್ಟು ಸಮಾಜ ಮನಸ್ಸನ್ನು ಕೊರೆಯುತ್ತಿದ್ದಾಗ ಪ್ರಭುತ್ವದ ಭಯ ಅವಶ್ಯವಾಯಿತು, ಪ್ರವಾದಿಯ ಮರಣದ ನಂತರ ಕೆಲವೇ ದಶಕಗಳಲ್ಲಿ ಶಕ್ತಿಶಾಲಿಯಾದ ಕೇಂದ್ರೀಕೃತ ರಾಜ್ಯ ಸಂರಚನೆ ಹೊರಹೊಮ್ಮಿತು. ಇಸ್ಲಾಮಿನ ಕಾನೂನು ಸಂರಚನೆ ಸಹ ಇದೇ ರಾಜಕೀಯ ಪರಿಸರದಲ್ಲಿ ವಿಕಸಿತಗೊಂಡಿತು. ಅಲ್ಲಾಹ್‌ನ ಬಗೆಗಿನ ಭಯಕ್ಕೆ ಒತ್ತು ಹೀಗೆ ಅನಿವಾರ್ಯವಾಯಿತು.

ಇನ್ನೊಂದೆಡೆ, ಈಗಾಗಲೇ ಸೂಚಿಸಿರುವಂತೆ ಸೂಫಿಗಳಿಗೆ ಆಂತರ್ಯದ ಆಧ್ಯಾತ್ಮಿಕ ಇರುವು ಹೆಚ್ಚು ಮುಖ್ಯವಾಯಿತು. ಹೀಗೆ ಅಲ್ಲಾಹ್‌ನ ಬಗೆಗಿನ ಭಯಕ್ಕಿಂತ ಅವನ ಪ್ರೀತಿಗೆ ಅವರ ಆದ್ಯತೆ ಇತ್ತು. ಅವರಲ್ಲಿ ಅಲ್ಲಾಹ್‌ನ ಭಯ ಇದ್ದೇ ಇರಲಿಲ್ಲವೆಂದೇನಲ್ಲ. ಆದರೆ ಭಯಕ್ಕಿಂತ ಪ್ರೀತಿಯೇ ಅವರ ಆದ್ಯತೆಯಾಗಿತ್ತು. ಹೀಗೆ ನಾವು ಸುಪ್ರಸಿದ್ಧ ಮಹಿಳಾ ಸೂಫಿ ರಾಬಿಯ ಬಸ್ರಿ ಬಗೆಗಿನ ಒಂದು ಜನಪ್ರಿಯ ಕತೆ ಕೇಳುತ್ತೇವೆ.

ಒಂದು ದಿನ ಒಂದು ಕೈಯಲ್ಲಿ ನೀರು ತುಂಬಿದ ಬಕೆಟ್ ಹಾಗೂ ಇನ್ನೊಂದು ಕೈಯಲ್ಲಿ ಉರಿಯುತ್ತಿರುವ ದೊಂದಿ ಹಿಡಿದು ರಾಬಿಯಾ ಬಸ್ರಿ ಹೊರಟಿದ್ದಳು. ಒಂದು ಕೈಯಲ್ಲಿ ನೀರು ಹಾಗೂ ಇನ್ನೊಂದು ಕೈಯಲ್ಲಿ ಬೆಂಕಿ ಹಿಡಿದುಕೊಂಡು ಏಕೆ ಹೊರಟಿದ್ದಿಯೆ ಎಂದು ಒಬ್ಬ ವ್ಯಕ್ತಿ ಅವಳನ್ನು ಕೇಳಿದ. ಅದಕ್ಕೆ ಅವಳು ಉತ್ತರಿಸಿದ್ದು ಹೀಗೆ: ಜನ ನರಕದ ಬೆಂಕಿಯ ಬಗೆಗಿನ ಭಯದಿಂದಾಗಿ ಅಲ್ಲಾಹ್‌ನನ್ನು ಆರಾಧಿಸುವಂತಾಗಬಾರದೆಂದು ನಾನು ನರಕದ ಬೆಂಕಿಯನ್ನು ಈ ಬಕೆಟ್‌ದಲ್ಲಿನ ನೀರಿನಿಂದ ನಂದಿಸಬಯಸಿದ್ದೇನೆ. ಸ್ವರ್ಗದ ದುರಾಸೆಯಿಂದ ಜನ ಅಲ್ಲಾಹ್‌ನನ್ನು ಆರಾಧಿಸುವಂತಾಗಬಾರದೆಂದು ನಾನು ಸ್ವರ್ಗಕ್ಕೆ ಬೆಂಕಿ ಹಚ್ಚಬೇಕೆಂದಿದ್ದೇನೆ. ಹೀಗೆ ಅಲ್ಲಾಹ್‌ನ ಬಗೆಗಿನ ಶುದ್ಧ ಪ್ರೀತಿಯಿಂದ ಅವನನ್ನು ಆರಾಧಿಸಬೇಕೇ ವಿನಾ ಬೇರೆ ಯಾವುದಕ್ಕೂ ಅಲ್ಲ ಎನ್ನುವುದೇ ಸಂದೇಶವಾಗಿತ್ತು.

ಸೂಫಿಗಳು ಹಾಗೂ ದೈವಶಾಸ್ತ್ರಜ್ಞರ ಅಲ್ಲಾಹ್‌ನ ಪರಿಕಲ್ಪನೆಗಳಲ್ಲಿ ಮೂಲಭೂತ ವ್ಯತ್ಯಾಸವಿರುವುದನ್ನು ಗಮನಿಸಬಹುದು. ಒಂದೆಡೆ ಸೂಫಿಗಳು ಅಲ್ಲಾಹ್‌ನ ಪ್ರೇಮಕ್ಕೆ ಒತ್ತುಕೊಡುತ್ತಾರೆ, ಪದೇ ಪದೇ ಅದಕ್ಕಾಗಿ ಪರಿತಪಿಸುತ್ತಾರೆ ಆದರೆ ದೈವಶಾಸ್ತ್ರಜ್ಞರ ಅಲ್ಲಾಹ್‌ನ ಪರಿಕಲ್ಪನೆಗೆ ಭಯವೇ ಮೂಲವಾಗುತ್ತದೆ. ಅಲ್ಲಾಹ್‌ನ ಬಗ್ಗೆ ಭಯವಿರಲಿ ಹಾಗೂ ಅವನಿಗೆ ಅವಿಧೇಯವಾಗುವುದರ ಪರಿಣಾಮಗಳ ಬಗ್ಗೆ ಭಯವಿರಲಿ ಎಂದು ದೈವಶಾಸ್ತ್ರಜ್ಞ ನಮಗೆ ಎಚ್ಚರಿಸುತ್ತಾನೆ. ಆದರೆ ಸೂಫಿ ಅಲ್ಲಾಹ್‌ನ್ನು ಪ್ರೀತಿಸಿರಿ, ಅವನ ಪ್ರೇಮದಲ್ಲಿ ಮೈಮರೆಯಿರಿ ಎಂದು ಹೇಳುತ್ತಾನೆ.

ದುರದೃಷ್ಟವಶಾತ್ ಇಂದು ಮುಸಲ್ಮಾನರ ಒಂದು ಸಮೂಹ ಹಾಗೂ ಪಾಶ್ಚಾತ್ಯ ಶಕ್ತಿಗಳು, ವಿಶೇಷವಾಗಿ ಅಮೆರಿಕೆ ಪ್ರತಿನಿಧಿಸುವ ಶಕ್ತಿಗಳ ನಡುವಣ ರಾಜಕೀಯ ಕಲಹದಿಂದಾಗಿ ಹಿಂಸೆ ಮತ್ತು ಭಯವನ್ನು ಇಸ್ಲಾಮದೊಂದಿಗೆ ತಳುಕು ಹಾಕುವ ಸ್ಥಿತಿ ಒದಗಿದೆ. ಇಸ್ಲಾಂ ಕುರಿತ ಈ ಒಂದೇ ಆಯಾಮದ ಗ್ರಹಿಕೆ ಇಸ್ಲಾಮಿನ ಭವ್ಯ ಹಾಗೂ ಸಂಕೀರ್ಣ ಲೋಕವನ್ನು ಅರ್ಥೈಸುವಲ್ಲಿ ಭಾರಿ ಅನಾಹುತ ಉಂಟುಮಾಡಿದೆ. ಇಸ್ಲಾಮಿಕ್ ನಾಗರಿಕತೆ ಅತ್ಯಂತ ಭವ್ಯವಾಗಿದ್ದು ಅದು ತನ್ನೊಳಗೆ ಹಲವಾರು ಜೀವಸೆಲೆಗಳನ್ನು ಹೊಂದಿದೆ.

ಪ್ರೊ. ಹಂಟಿಂಗ್ಟನ್‌ರಂಥ ವಿದ್ವಾಂಸರು Clash of Civilizations ಎನ್ನುವ ಪುಸ್ತಕ ಬರೆಯುವುದರ ಮೂಲಕ ಒಂದೇ ಆಯಾಮದ ಇಸ್ಲಾಮನ್ನು ರೂಪಿಸಿ ಹಿಂಸೆ ಮತ್ತು ಭಯವನ್ನು ಸೃಷ್ಟಿಸುವ ಇಸ್ಲಾಮನ್ನು ಖಂಡನಾರ್ಹಗೊಳಿಸಿದ್ದಾರೆ. ಅಮೆರಿಕಾದ ಮಹಾತ್ವಾಕಾಂಕ್ಷೆಗೆ ಪೂರಕವಾಗಿ ಹಂಟಿಗ್ಟನ್‌ರಂಥ ಪಾಶ್ಚಾತ್ಯ ವಿದ್ವಾಂಸರು ಇಸ್ಲಾಮಿಗೆ ಸಾಕಷ್ಟು ಕೆಟ್ಟ ಹೆಸರು ತಂದಿದ್ದಾರೆ. ಇಸ್ಲಾಮಿನ ಭವ್ಯ ಪರಂಪರೆಯ ಇತರ ಮಗ್ಗುಲಗಳ ಮೇಲೆ ಬೆಳಕು ಚೆಲ್ಲುವುದು ಅವಶ್ಯವಾಗಿದೆ. ಸೂಫಿ ಇಸ್ಲಾಂ ಪ್ರೀತಿ ಹಾಗೂ ವಿಶ್ವ ಮಾನವತೆಯ ಇಸ್ಲಾಂ ಆಗಿದೆ. ರಾಜಕೀಯ ಇಸ್ಲಾಮಿನ ಗುಂಗಿನಿಂದ ನಾವು ಹೊರಬರಬೇಕಿದೆ. ರಾಜಕೀಯ ಇಸ್ಲಾಮನ್ನು ಮೇಲ್ವರ್ಗದ ಒಂದು ಪುಟ್ಟ ಸಮೂಹ ಪ್ರತಿಪಾದಿಸಿತು ಹಾಗೂ ಅನುಸರಿಸಿತು. ಆದರೆ ಸೂಫಿ ಇಸ್ಲಾಂ ಬಹುಸಂಖ್ಯಾತ ಮೌನಗಳಾದ ಮುಸಲ್ಮಾನರಿಗೆ ಪ್ರೇರಣೆಯ ಸ್ರೋತವಾಗಿದೆ. ಬಹುಸಂಖ್ಯಾತ ಮೌನಗಳಾದ ಮುಸಲ್ಮಾನರೇ ಹೆಚ್ಚಾಗಿ ರಾಜಕೀಯ ಇಸ್ಲಾಮಿಗೆ ಬಲಿಪಶುಗಳಾಗುತ್ತಿದ್ದಾರೆ.

ಈ ಪ್ರಬಂಧದಲ್ಲಿ ನಾನು ಸೂಫಿ ಇಸ್ಲಾಂ ಹಾಗೂ ಅದರ ಪ್ರೀತಿಯ ತತ್ವದ ಮೇಲೆ ಬೆಳಕು ಚೆಲ್ಲಬಯಸುತ್ತೇನೆ. ಇಬ್ನೆ ಅರಬಿ ಎಂದು ಜನಪ್ರಿಯವಾದ ಪ್ರಸಿದ್ಧ ಶೇಖ್ ಸ್ಪೇನ್‌ನಲ್ಲಿ (ಕ್ರಿ.ಶ.1165) ಹುಟ್ಟಿದ. 76 ವರ್ಷದ ತುಂಬು ಜೀವನ ಸಾಗಿಸಿ ಕ್ರಿ.ಶ.1240ರಲ್ಲಿ ತೀರಿಹೋದ. ಅವನು ವಹದತ್ ಅಲ್ ವುಜುದ್ (ಇರುವಿಕೆಯ ಏಕತೆ) ಎಂಬ ಸುಪ್ರಸಿದ್ಧ ಸೂಫಿ ಪಂಥದ ಸಂಸ್ಥಾಪಕನಾಗಿದ್ದ. ಈ ಪಂಥದ ಪ್ರಕಾರ, ವಾಸ್ತವ ಇರುವಿಕೆ ಒಂದೇ ಆಗಿದ್ದು ಎಲ್ಲ ಸೃಷ್ಟಿ ಅದರ ಪ್ರತೀಕ. ಇದು ತನ್ನ ಮನೋಧರ್ಮದಲ್ಲಿ ಅತ್ಯಂತ ಸಾರ್ವತ್ರಿಕವಾಗಿದ್ದು ಧರ್ಮ, ಜನಾಂಗ ಹಾಗೂ ರಾಷ್ಟ್ರಗಳ ಸೀಮೆಗಳನ್ನು ಇಲ್ಲವಾಗಿಸುತ್ತದೆ.

ಶೇಖ್ –ಎ–ಅಕಬರ್(ಮಹಾನ್ ಶೇಖ್) ಎಂದು ಪ್ರಸಿದ್ಧನಾಗಿರುವ ಅವನು ಶ್ರೇಷ್ಠ ಕವಿಯಾಗಿದ್ದ. ಹುಲುಸಾದ ಸಾಹಿತ್ಯ ಕೃಷಿ ಮಾಡಿದ್ದ. ಸುಮಾರು 800 ಕೃತಿಗಳನ್ನು– ಎಲ್ಲ ಪ್ರಮಾಣೀಕರಿಸಲ್ಪಡದಿದ್ದರೂ– ರಚಿಸಿದ್ದ. ಪ್ರೇಮವೇ ಅವನ ತತ್ವಜ್ಞಾನಕ್ಕೆ ಹಾಗೂ ಧರ್ಮದ ಅಧ್ಯಯನಕ್ಕೆ ಮೂಲಾಧಾರವಾಗಿತ್ತು. ತನ್ನ ಒಂದು ಕವನದಲ್ಲಿ ಅವನು ಬರೆಯುತ್ತಾನೆ: ನಾನು ಪ್ರೇಮದ ಧರ್ಮದಲ್ಲಿ ನಂಬಿಕೆಯುಳ್ಳವನು ಅದರ ಕಾರವಾನಗಳು ಯಾವ ದಿಕ್ಕಿಗೆ ಸಾಗಿದರೂ. ಕಾರಣ ಪ್ರೇಮವೇ ನನ್ನ ಧರ್ಮ, ನನ್ನ ಶ್ರದ್ಧೆ (ಹುಬ್ಬಿ ದೀನಿ ವ ಷರಿಯತ್).

ಒಂದೆಡೆ ಅವನು ಬರೆಯುತ್ತಾನೆ:
ಈಗ ನನ್ನನ್ನ ಗಜಲಾಗಳ ಕುರುಬ ಎನ್ನುವರು
ಈಗ ಒಬ್ಬ ಕ್ರೈಸ್ತ ಪಾದ್ರಿ
ಈಗ ಒಬ್ಬ ಜರೊಷ್ಟ್ರಿಯನ್
ಪ್ರಿಯತಮೆಯರು ಮೂವರು, ಆದರೂ ಒಬ್ಬಳೇ
ನಿಜಕ್ಕೂ ಮೂರರ ಅರ್ಥ ಒಂದು.

ತನ್ನ 'ನನ್ನ ಹೃದಯ ತಾಳುವುದು ಅನೇಕ ರೂಪ'ದಲ್ಲಿ ಅವನು ಬರೆಯುತ್ತಾನೆ: "ನನ್ನ ಹೃದಯ ಹಲವು ಯಾವುದೇ ರೂಪ ತಳೆಯಬಹುದು. ಆಳದ ಮನಸ್ಸಾಕ್ಷಿಯ ಬದಲಾವಣೆಗನುಗುಣವಾಗಿ ಹೃದಯ ಬದಲಾಗುತ್ತಿರುತ್ತದೆ. ಸಂತನ ಆಶ್ರಮ, ಮಂದಿರ, ಕಾಬಾ ಕ್ಷೇತ್ರ, ವಿಜ್ಞಾನಕ್ಕೆ ತೊರಾಹದ ಹಲಗೆ, ಕುರ್‌ಆನ್‌ನ ಪುಟಗಳ ರೂಪದಲ್ಲಿ ಕಂಡು ಬರಬಹುದು.

ಪ್ರೀತಿಯೆ ಋಣವೇ ನನ್ನ ಹಾಡು. ನನ್ನ ಮೇಲೆ ಹೇರಲಾದ ಯಾವುದೇ ಭಾರವನ್ನು ಸ್ವಚ್ಛಂದವಾಗಿ ಸಂತೋಷದಿಂದ ಸ್ವೀಕರಿಸುವೆ. ಪ್ರೀತಿ ಪ್ರಿಯತಮೆಯ ಪ್ರೀತಿ. ಅಪವಾದವೆಂದರೆ ಘಟನೆಯನ್ನು ಪ್ರೀತಿಸುವುದಕ್ಕೆ ಬದಲಾಗಿ ನಾನು ಸತ್ವವನ್ನು ಪ್ರೀತಿಸುತ್ತೇನೆ. ಆ ಧರ್ಮ, ಆ ಕರ್ತವ್ಯ ನನ್ನದು, ಅದು ನನ್ನ ಶ್ರದ್ಧೆ. ಮಾನವ ಪ್ರೀತಿಯ ಉದ್ದೇಶ ಪರಮ ವಾಸ್ತವ ಪ್ರೀತಿಯನ್ನು ಪ್ರದರ್ಶಿಸುವುದಾಗಿದೆ. ಇದು ಜಾಗೃತ ಪ್ರೀತಿ. ಇನ್ನೊಂದು ಮನುಷ್ಯನನ್ನು ಮೈಮರೆಸುವಂಥದು.'

ಇನ್ನೂ ಒಂದು ಕವನದ **'ಆಳುತ್ತಿರುವಾಗ ಸೂರ್ಯನ ಕಣ್ಣು ನನ್ನ ದೃಷ್ಟಿಯನ್ನು'** ದಲ್ಲಿ ಹೇಳುತ್ತಾನೆ:

ಆಳುತ್ತಿರುವಾಗ ಸೂರ್ಯನ ಕಣ್ಣು ನನ್ನ ದೃಷ್ಟಿಯನ್ನು
ಆಸೀನವಾಗಿರುವುದು ಪ್ರೀತಿ ಸುಲ್ತಾನ್‌ನಾಗಿ ನನ್ನ ಆತ್ಮದಲ್ಲಿ
ಬೀಡು ಬಿಡುವುದು ಅವನ ದಂಡು ನನ್ನ ಹೃದಯದಲ್ಲಿ
ಪರವಶತೆ ಹಾಗೂ ಹಂಬಲ, ವೇದನೆ ಹಾಗೂ ದುಃಖ
ಅವನ ಸೇನೆ **ಕೈವಶ ಮಾಡಿಕೊಂಡಾಗ** ನನ್ನನ್ನು
ನಾನು ರೋದಿಸುವೆ, ಏಕೆಂದರೆ ನನ್ನ ಉದರದಲ್ಲಿ
ಹೊತ್ತಿ ಉರಿಯುವುದು ಬಯಕೆಯ ಬೆಂಕಿ
ಪ್ರೀತಿ ಕದಿಯುವುದು ನನ್ನ ನಿದ್ರೆಯನ್ನು, ದಂಗುಬಡಿಸುವುದು
ಪ್ರೀತಿ ಅನ್ಯಾಯವಾಗಿ ಕೊಲ್ಲುವುದು ನನ್ನನ್ನು
ಅಸಹಾಯಕನಾಗುವೆ ನಾನು
ನನಗೆ ಹೊರಲು ಸಾಧ್ಯವಾಗುವುದಕ್ಕಿಂತ ಹೆಚ್ಚಾಗಿ
ಭಾರ ಹೇರುವುದು ಪ್ರೀತಿ
ಹೀಗೆ ನಾನು ಅವನಿಗೆ ಆತ್ಮವನ್ನು ಮತ್ತ್ಯಾರನ್ನಲ್ಲ.

ಈ ರೀತಿ ಪರಮ ಸತ್ಯ ಹಾಗೂ ಮಾನವನ ನಡುವಣ ಸಂಬಂಧಗಳನ್ನು ಅರಿತುಕೊಳ್ಳುವ ಅವನ ಪ್ರಯತ್ನದಲ್ಲಿ ಪ್ರೀತಿ ಮೂಲ ತತ್ವವಾಗಿದೆ ಎನ್ನುವುದನ್ನು ಸೂಚಿಸುವಂತಹ ಇಂಥ ಇನ್ನೂ ಅನೇಕ ಕವನಗಳನ್ನು ಇಬ್ನೆ ಅರಬಿ ಬರೆದಿರುವುದನು ನಾವು ಗಮನಿಸಬಹುದು. ಅವನು ಸ್ಪಷ್ಟವಾಗಿ **ಘಟನೆ ಹಾಗೂ ಸತ್ವದ ನಡುವೆ ವ್ಯತ್ಯಾಸ ಕಾಣುತ್ತಾನೆ.** ಅವನು ಸತ್ವಕ್ಕಾಗಿ ಪರದಾಡುತ್ತಾನೆಯೆ ವಿನಾ ಘಟನೆಗಾಗಿ ಅಲ್ಲ. ಘಟನೆ ಪರಿವರ್ತನೆಯಾಗಲೇಬೇಕು. ಆದರೆ ಸತ್ವ ಒಂದೇ ರೀತಿ ಇರುತ್ತದೆ. ತನ್ನ ವಿಧಾನದಲ್ಲಿ ಮೂಲತಃ ಒಬ್ಬ ಸೂಫಿಯಾಗಿದ್ದ ಗಾಲಿಬ್ ತನ್ನ ಒಂದು ಪದ್ಯದಲ್ಲಿ ಹೀಗೆ ಹೇಳುತ್ತಾನೆ:

ನಹೀಂ ಕುಚ್ಛ ಸುಬಹ–ಓ–ಜುನ್ನಾರ ಕೀ ಫಂದೆ ಮೇಂ ಗೀರಾಯಿ
ವಫಾದಾರಿ ಮೇಂ ಹೈ ಶೇಖ–ಓ–ಬರಹಮನ್ ಕೀ ಆಜಮಾಯಿಶ್

ಅದರರ್ಥ ಜಪಮಾಲೆ ಇಲ್ಲಾ ಜನಿವಾರ (ಬ್ರಾಹ್ಮಣ ಧರಿಸುವಂಥ)ದ ಜಂಜಾಟದಲ್ಲೇನೂ ಇಲ್ಲ. ಶೇಖ್(ಮುಸ್ಲಿಂ ಪುರೋಹಿತ) ಹಾಗೂ ಬರಹಮನ್(ಹಿಂದೂ ಪುರೋಹಿತ)ರ ಸತ್ವ ಪರೀಕ್ಷೆ ಇರುವುದು ತಾವು ನಂಬಿರುವ ದೇವರ ಬಗೆಗಿನ ನಿಷ್ಠೆಯಲ್ಲಿ. ಮುಸ್ಲಿಂ ಸಂಕೇತವಾದ ಜಪಮಾಲೆ ಹಾಗೂ ಹಿಂದೂ ಸಂಕೇತವಾದ ಜನಿವಾರದ ರೂಪದಲ್ಲಿ ಬೇರೆ ಬೇರೆಯಾಗಿವೆ. ಆದರೆ ಸತ್ವ–ಅವರು ಆರಾಧಿಸುವ ಪರಮ ಸತ್ಯ ಒಂದೇ ಆಗಿದೆ. ಅವರ ಪರೀಕ್ಷೆ ಇರುವುದು ಜಪಮಾಲೆ ಹಿಡಿದುಕೊಂಡಿರುವುದರಲ್ಲಿ ಇಲ್ಲಾ ಜನಿವಾರ ಧರಿಸುವುದರಲ್ಲಿ ಅಲ್ಲ. ದೇವರಿಗೆ ನಿಷ್ಠೆ ಇಲ್ಲಾ ನೈಜ ಪ್ರೀತಿಯಲ್ಲಿದೆ.

ಇದು ಧರ್ಮ ಕುರಿತ ಸೂಫಿಗಳ ದೃಷ್ಟಿಕೋನ. ಅವರು ರೂಪದಿಂದ ಆಕರ್ಷಿತರಾಗದೆ ಸತ್ವದಲ್ಲಿ ಹೆಚ್ಚು ಆಸಕ್ತಿ ತಳೆದಿದ್ದರು. ದೈವಜ್ಞಾನಕ್ಕೆ ಸಂಬಂಧಿಸಿದ, ಹಲವು ಮುಸಲ್ಮಾನರು ಪರ್ಷಿಯನ್‌ನಲ್ಲಿನ ಕುರ್‌ಆನ್ ಎಂದು ಪರಿಗಣಿಸುವ 'ಮಸನವಿ ಮಾನವಿ' ಎನ್ನುವ ಕೃತಿಗಾಗಿ ವಿಖ್ಯಾತನಾದ ಮೌಲಾನಾ ಜಲಾಲುದ್ದೀನ್ ರೂಮಿ ಕೂಡ ಪ್ರೀತಿಗೆ ಒತ್ತು ಕೊಡುತ್ತಾನೆ. ಅವನು ಆರಂಭದಲ್ಲಿ ಮಹಾನ್ ವಿದ್ವಾಂಸ ಹಾಗೂ ಕಾನೂನು ತಜ್ಞನಾಗಿದ್ದ. ತನ್ನ ತಂದೆ ವಲಸೆಹೋಗಿದ್ದ ನಗರ ಕುನಿಯಾದ ನ್ಯಾಯಾಲಯದಲ್ಲಿ ಅವನಿಗೆ ಪ್ರತಿಷ್ಠಿತ ಸ್ಥಾನ ಲಭಿಸಿತು.

ಮೌಲಾನಾ ವಿದ್ವಾಂಸ ಹಾಗೂ ಕಾನೂನು ತಜ್ಞ ಎಂದು ತುಂಬ ಗೌರವಿಸಲ್ಪಡುತ್ತಿದ್ದ. ತಪ್ಪದೆ ಅವನ ಉಪನ್ಯಾಸಗಳಿಗೆ ಹಾಜರಾಗುತ್ತಿದ್ದ ಸಾವಿರಾರು ಜನ ಅವನ ಶಿಷ್ಯಂದಿರಾಗಿದ್ದರು. ಅವನು ಸಿರಿಯಾದ ಶಮ್ಸ್ ತಬರೇಜ್ ಎನ್ನುವ ಸೂಫಿಯ ಸಂಪರ್ಕಕ್ಕೆ ಬರುತ್ತಲೇ ಎಲ್ಲವೂ ಬದಲಾಗಿ ಬಿಟ್ಟಿತು. ಶಮ್ಸ್ ತಬರೇಜ್ ಅವನ ಮೇಲೆ ಮೋಡಿ ಹಾಕಿದ. ಫತ್ವಾ ಹೊರಡಿಸುವ ವಿದ್ವಾಂಸ ಹಾಗೂ ಕಾನೂನು ತಜ್ಞನಿಗೆ ಬದಲಾಗಿ ಅವನು ಪ್ರೀತಿಯಲ್ಲಿ ಮಿಂದು ಪರವಶವಾಗಿ ಬದುಕುವ ಸೂಫಿಯಾಗಿ ಪರಿವರ್ತನೆಗೊಂಡ.

ಇಸ್ಲಾಮ್‌ನ ಖ್ಯಾತ ವಿದ್ವಾಂಸ ಅಫಜಲ್ ಇಕಬಾಲ್ ತನ್ನ 'ಜಲಾಲುದ್ದೀನ್ ರೂಮಿಯ ಜೀವನ ಮತ್ತು ಕೃತಿ'ಯಲ್ಲಿ ಹೇಳುತ್ತಾನೆ: "ಒಂದುಕಾಲಕ್ಕೆ ಧರ್ಮದ ವಿಷಯದಲ್ಲಿ ತನ್ನ ತಲೆಮಾರಿನವರಿಂದಲೇ ಅಂತಿಮ ಮಾತು ಎನಿಸಿಕೊಂಡಿದ್ದ, ತನ್ನ ಸ್ವಂತ ಪರಿಜ್ಞಾನದ ಮೇರೆಗೆ ಸಂಗೀತವನ್ನು ಅನಿಷ್ಟವೆಂದು ತಿರಸ್ಕರಿಸಿದ್ದ ವ್ಯಕ್ತಿಯೇ ಎಲ್ಲ 'ಶಿಷ್ಟಾಚಾರ'ಗಳನ್ನು ಗಾಳಿಗೆ ತೂರಿ ಅವೇಳೆಯಲ್ಲಿ ಸಂಗಿತವನ್ನು ತನ್ಮಯನಾಗಿ ಕೇಳತೊಡಗಿದ, ಭಾವಪರವಶನಾಗಿ ಕುಣಿದು ಕುಪ್ಪಳಿಸತೊಡಗಿದ.

ರೂಮಿಯ ಬಗೆಗಿನ ಅವನ ಮಗನ ಬಣ್ಣನೆ(ಪರ್ಶಿಯನ್‌ದಿಂದ ಕವನಗಳ ಅನುವಾದ)ಯನ್ನು ಅಫಜಲ್ ಉಲ್ಲೇಖಿಸುತ್ತಾನೆ:

ಹಗಲೂ ರಾತ್ರಿ ಭಾವಪರವಶನಾಗಿ ಕುಣಿದನವನು
ಪ್ರದಕ್ಷಿಣೆ ಹಾಕಿದ ನೆಲದ ಮೇಲೆ ಸ್ವರ್ಗವಾಗಿ
ಅವನ (ಆವೇಶದ)ಅರಚಾಟ ತಲುಪಿತು ಆಗಸದ ಅಂಚು
ಅವನಿವನೆನ್ನದೆ ಕೇಳಿಸಿಕೊರು ಎಲ್ಲರೂ
ಅವನು ಸುರಿದನು ಗಾಯಕರ ಮೇಲೆ ಬೆಳ್ಳಿ ಬಂಗಾರ
ಕೊಟ್ಟುಬಿಟ್ಟ ತನ್ನ ಬಳಿ ಇದ್ದುದೆಲ್ಲವನು
ಸಂಗೀತ ಭಾವಪರವಶತೆಯ ವಿನಾ ಕಳೆಯಲಿಲ್ಲ ಒಂದು ಕ್ಷಣ
ಶಾಂತಚಿತ್ತನಾಗಿ ಕಳೆಯಲಿಲ್ಲ ಒಂದು ಕ್ಷಣ
ನಗರದಲ್ಲಿ ಎದ್ದಿತು ಬಂಡಾಯದ ಅಲೆ
ಇಲ್ಲ, ಲೋಕದಲ್ಲೆಲ್ಲ ಅನುರಣಿಸಿತು ಅದು
ಇಸ್ಲಾಮಿನ ಇಂತಹ ಕುತ್ಬ್, ಮುಫ್ತಿ ಉಭಯ ಲೋಕದ
ನಾಯಕನೆಂದು ಉದ್ಗರಿಸಿದರು ಜನ
ಒಳಗೆ ಹೊರಗೆ ಎನ್ನದೆ ಬಡಬಡಿಸಿದ ಅವನು ಹುಚ್ಚನಂತೆ
ಅವನಿಂದಾಗಿ ವಿಮುಖರಾದರು ಜನ ಮತ ಧರ್ಮಗಳಿಗೆ
ಹುಚ್ಚರಂತೆ ಅಂಡಲೆದರು ಜನ ಪ್ರೀತಿಗಾಗಿ

ಶಮ್ಸ್ ತಬರೇಜ್‌ನ ಪ್ರಭಾವ ಎಂಥದಾಗಿತ್ತೆಂದರೆ ಮಹಾನ್ ಮುಫ್ತಿ ಹಾಗೂ ಆಲಿಮ್‌ನೊಬ್ಬ ಹುಚ್ಚ ಯಾಚಕನಾಗಿ ಪರಿವರ್ತನೆಗೊಂಡ. ಆಲಾಲುದ್ದೀನ್ ರೂಮಿಯ ವ್ಯಕ್ತಿತ್ವದ ಮೇಲೆ ಅಲ್ಲಾಹನ ಪ್ರೀತಿಯ ಪ್ರಭಾವ ಎಂತಹದಾಗಿತ್ತೆಂದರೆ ರೂಮಿಯಂತಹ ಸ್ಥಾನಮಾನದ ಆಲಿಂ ಹಾಗೂ ದೈವಶಾಸ್ತ್ರಜ್ಞ ಧರ್ಮ ಕುರಿತಂತೆ ಆಗ ತೀರ ಭಿನ್ನವಾದ ದೃಷ್ಟಿಕೋನ ರೂಪಿಸಿಕೊಂಡ–ಕಾನೂನಾತ್ಮಕ ಷರಿಯಾ ಪ್ರಧಾನ ದೃಷ್ಟಿಕೋನದಿಂದ ಆಧ್ಯಾತ್ಮಿಕ ಪ್ರೀತಿ ಪ್ರಧಾನವಾದ ದೃಷ್ಟಿಕೋನ. ಅದೊಂದು ಅದ್ಭುತ ಪರಿವರ್ತನೆ. ಶಮ್ಸ್ ತಬ್ರೇಜ್‌ನೊಂದಿಗಿನ ರೂಮಿಯ ಭೇಟಿಯಿಂದಾಗಿಯೇ ಜ್ಞಾನದ ಭಂಡಾರವಾದ ಮಸನವಿ ಲೋಕಕ್ಕೆ ಕಾಣಿಕೆಯಾಗಿ ಲಭಿಸಿತು.

ಪರಿವರ್ತನೆ ಅದೆಷ್ಟು ಪರಿಪೂರ್ಣವಾಗಿತ್ತೆಂದರೆ ಮೌಲಾನಾ ಮುಸಲ್ಮಾನರನ್ನು ಈ ಕೆಳಗಿನಂತೆ ಸಂಬೋಧಿಸಿದ:

ಓ ಮುಸಲ್ಮಾನರೇ, ಏನು ಮಾಡುವುದು?
ಸಿಗದಾಗಿದೆ ನನಗೆ ನನ್ನದೇ ಗುರುತು
ನಾನು ಕ್ರಿಶ್ಚಿಯನ್ ಅಲ್ಲ, ಯಹೂದಿ ಅಲ್ಲ
ಗಬರ್ ಅಲ್ಲ, ಮುಸ್ಲಿಮನೂ ಅಲ್ಲ
ನಾನು ಪೂರ್ವದವನಲ್ಲ, ಪಶ್ಚಿಮದವನೂ ಅಲ್ಲ

ಮುಸ್ಲಿಂ ಪುರೋಹಿತ ಹಾಗೂ ಹಿಂದೂ ಪುರೋಹಿತರ ಸತ್ವ ಪರೀಕ್ಷೆ ಇರುವುದು ತಾವು ನಂಬಿರುವ ದೇವರ ಬಗೆಗಿನ ನಿಷ್ಠೆಯಲ್ಲಿ. ಮುಸ್ಲಿಂ ಸಂಕೇತವಾದ ಜಪಮಾಲೆ ಹಾಗೂ ಹಿಂದೂ ಸಂಕೇತವಾದ ಜನಿವಾರದ ರೂಪದಲ್ಲಿ ಬೇರೆ ಬೇರೆಯಾಗಿವೆ. ಆದರೆ ಸತ್ವ-ಅವರು ಆರಾಧಿಸುವ ಪರಮ ಸತ್ಯ ಒಂದೇ ಆಗಿದೆ. ಅವರ ಪರೀಕ್ಷೆ ಇರುವುದು ಜಪಮಾಲೆ ಹಿಡಿದುಕೊಂಡಿರುವುದರಲ್ಲಿ ಇಲ್ಲಾ ಜನಿವಾರ ಧರಿಸುವುದರಲ್ಲಿ ಅಲ್ಲ. ದೇವರಿಗೆ ನಿಷ್ಠೆ ಇಲ್ಲಾ ನೈಜ ಪ್ರೀತಿಯಲ್ಲಿದೆ. ಇದು ಧರ್ಮ ಕುರಿತ ಸೂಫಿಗಳ ದೃಷ್ಟಿಕೋನ.

ಭೂಮಿಗೆ ಸೇರಿದವನಲ್ಲ, ಸಾಗರಕ್ಕೂ ಸೇರಿದವನಲ್ಲ
ನಾನು ಸೃಷ್ಟಿಯ ಪಡಿಯಚ್ಚಲ್ಲ, ಸುತ್ತುತ್ತಲಿರುವ ಸ್ವರ್ಗದವನೂ ಅಲ್ಲ
ನಾನು ನೆಲದವನಲ್ಲ ನೀರಿನವನಲ್ಲ, ಗಾಳಿಯವನಲ್ಲ ಬೆಂಕಿಯವನೂ ಅಲ್ಲ
ನಾನು ದೇವಲೋಕದವನಲ್ಲ ಮಣ್ಣಿನವನಲ್ಲ
ಅಸ್ತಿತ್ವದವನಲ್ಲ ಅಸ್ಮಿತೆಯವನೂ ಅಲ್ಲ
ನಾನು ಭಾರತದವನಲ್ಲ ಚೀನಾದವನಲ್ಲ
ಬಲ್ಗೇರಿಯಾದವನಲ್ಲ ಸಕೇನದವನೂ ಅಲ್ಲ
ನಾನು ಇರಾಕಿ ರಾಜ್ಯದವನಲ್ಲ ಖುರಾಸಾನ್ ದೇಶದವನಲ್ಲ
ನಾನು ಈ ಲೋಕದವನಲ್ಲ ಪರಲೋಕದವನಲ್ಲ
ಸ್ವರ್ಗದವನಲ್ಲ ನರಕದವನೂ ಅಲ್ಲ
ನಾನು ಆದಮ್‌ನವ ಅಲ್ಲ ಈವ್‌ನವ ಅಲ್ಲ
ಈಡನ್‌ನವ ಅಲ್ಲ ರಿಜ್ವಾನ್‌ನವನೂ ಅಲ್ಲ
ನೆಲೆ ಇಲ್ಲದ ನೆಲೆ ನನ್ನದು ಗುರುತು ಸಿಗದ ಗುರುತು ನನ್ನದು
ಇದು ಕಾಯವೂ ಅಲ್ಲ ಆತ್ಮವೂ ಅಲ್ಲ
ಏಕೆಂದರೆ ನನ್ನ ಪ್ರಿಯತಮೆಯ ಆತ್ಮಕ್ಕೆ ಸೇರಿದವನು ನಾನು
ನಾನು ತಳ್ಳಿಹಾಕಿರುವೆ ಅದ್ವೈತವನು
ಮನಗಂಡಿರುವೆ ಉಭಯ ಲೋಕಗಳೆರಡೂ ಒಂದೇ ಎಂದು
ಹುಡುಕುತಲಿರುವೆ ಒಂದನ್ನ ತಿಳಿದಿರುವೆ ಒಂದನ್ನ
ನೋಡುತಲಿರುವೆ ಒಂದನ್ನು ಬೇಡುತಲಿರುವೆ ಇನ್ನೊಂದನ್ನ
ಅವನೇ ಆದಿ ಅವನೇ ಅಂತಿಮ
ಅಂತರಂಗ ಅವನೇ ಬಹಿರಂಗವೂ ಅವನೇ
ಪ್ರೀತಿಯ ಅಮಲು ಏರಿದೆ ನನಗೆ
ಸುಳಿದು ಹೋಗುತಿವೆ ಉಭಯ ಲೋಕ ನನ್ನ ಕಣ್ಣ ನೋಟದಲಿ
ಬದುಕಿನಲಿ ಒಮ್ಮೆಯಾದರೂ ನನ್ನ ವಿನಾ ಕಳೆದರೆ ಒಂದು ಕ್ಷಣ
ಆ ಕಾಲದಿಂದಲೇ ಅದೇ ಗಳಿಗೆಯಲ್ಲಿ ಪರಿತಪಿಸುವೆ ಬದುಕಿಗಾಗಿ
ನನ್ನ ಜತೆಗೆ ಈ ಲೋಕದಲಿ ನನ್ನದಾದರೆ ಒಂದು ಕ್ಷಣ
ಎರಡು ಲೋಕಗಳಿಗೆ ಹೇಳುವೆ ಧಿಕ್ಕಾರ
ಕುಣಿದು ಕುಪ್ಪಳಿಸುವೆ ಜಯಶಾಲಿಯಾಗಿ ನಿರಂತರ

ಈ ಕವನ ಮೌಲಾನಾ ರೂಮಿ ಪ್ರೀತಿಯಲ್ಲಿ ಪರವಶನಾಗಿರುವುದನ್ನು ಹಾಗೂ ಅವನ ದರ್ಶನವನ್ನು ಅರ್ಥೈಸಿಕೊಳ್ಳುವಲ್ಲಿ ತುಂಬ ಮಹತ್ವದ್ದಾಗುತ್ತದೆ. ಇದು ಧರ್ಮ ಕುರಿತು ಮೂಲಭೂತವಾಗಿ ಬೇರೆಯೆ ಆದ ದೃಷ್ಟಿಕೋನ. ಧರ್ಮ ದೈವಶಾಸ್ತ್ರಜ್ಞರ ಆಟವಾಗಿ ಬಿಟ್ಟರೆ, ಸಿದ್ಧಾಂತಗಳು ನಮ್ಮ ಬದುಕಿನ ಮೇಲೆ ಪ್ರಭುತ್ವ ಸಾಧಿಸಿದರೆ, ಸತ್ಯದ ಹುಡುಕಾಟಕ್ಕಿಂತ ಹೆಚ್ಚಾಗಿ ಬರೀ ಧರ್ಮವನ್ನು ಅಧಿಕಾರದ ಹುಡುಕಾಟಕ್ಕೆ ಮಾರ್ಗ ಮಾತ್ರವಾಗಿ ಬಗ್ಗಿಸಿದರೆ ದ್ವೇಷ ಮತ್ತು ಹಿಂಸೆಯನ್ನೊಳಗೊಂಡಂತೆ ಎಲ್ಲ ಬಗೆಯ ಸಂಕೀರ್ಣ ಸಮಸ್ಯೆಗಳು ನಮ್ಮನ್ನು ಸುತ್ತುವರಿಯುತ್ತವೆ.

ಅದೇನೇ ಇರಲಿ ಮೇಲಿನ ಕವನದಲ್ಲಿ ಹೇಳುವಂತೆ ಮನುಷ್ಯರು ತಮ್ಮೆಲ್ಲ ಅಸ್ಮಿತೆಗಳನ್ನು ಕಳೆದುಕೊಂಡು ಬಿಟ್ಟರೆ ಬದುಕುವುದಾದರೂ ಹೇಗೆ ಎಂದು ವಾದಿಸಬಹುದು. ಈ ಲೋಕದಲ್ಲಿ ಒಬ್ಬ ವ್ಯಕ್ತಿ ಪ್ರಜ್ಞಾವಂತ ಬದುಕನ್ನು ಬದುಕಬೇಕಾದರೆ ಕೆಲವು ಅಸ್ಮಿತೆಗಳು, ಕೆಲವು ವೈಶಿಷ್ಟ್ಯಗಳು ಹಾಗೂ ಕೆಲವು ಗುರಿಗಳು ಅವಶ್ಯವಾಗುತ್ತವೆ. ನಾವು ಕಾರ್ಯ ಪ್ರವೃತ್ತರಾಗುವುದು ಹೇಗೆ? ಮೌಲಾನಾ ರೂಮಿ ಹೇಳುವುದು ಅಲ್ಲಾಹನ ಪ್ರೀತಿಯಲ್ಲಿ ಮುಳುಗಿರುವ ಮತಿಭ್ರಾಂತನ ಬಡಬಡಿಕೆಯಷ್ಟೇ.

ನಿಜ. ನೂರಕ್ಕೆ ನೂರರಷ್ಟು ನಿಜ. ಆದರೆ ಮೌಲಾನಾ ರೂಮಿ ಅವರ ಉವಾಚಗಳ ಕುರಿತು ಚಿಂತಿಸಿದರೆ ನಮ್ಮ ಬದುಕಿಗೆ ಅವು ತುಂಬ ಪ್ರಸ್ತುತವೆನಿಸುತ್ತವೆ. ಮೌಲಾನಾ ಅಲ್ಲಾಹನ ಪ್ರೀತಿಯಲ್ಲಿ ಮುಳುಗಿ ಅಸ್ಮಿತೆ ಹಾಗೂ ದ್ವೈತವನ್ನು ಅಲ್ಲಗಳೆದರೆ ನಾವು ಸಹ ಈ ಲೋಕದಲ್ಲಿ ಮುಳುಗಿಹೋಗಿದ್ದೇವೆ. ಅಸ್ಮಿತೆ ಹಾಗೂ ದ್ವೈತಕ್ಕೆ ಅತಿಯಾದ ಮಹತ್ವ ನೀಡುತ್ತಿದ್ದೇವೆ ಹಾಗೂ ಅದರ ಪರಿಣಾಮವೇ ಈ ಅಸ್ಮಿತೆಗಳ ಹೆಸರಿನಲ್ಲಿ ನಡೆದಿರುವ ಇಷ್ಟೆಲ್ಲ ಘರ್ಷಣೆಗಳು, ಇಷ್ಟೊಂದು ಹಿಂಸೆ.

ಗತಕಾಲದಲ್ಲಿ ಕಳೆದ ಶತಮಾನವೊಂದರಲ್ಲೇ ನಡೆದ ಇತರ ಪ್ರಮುಖ ಯುದ್ಧಗಳ ಹೊರತಾಗಿ ಮಿಲಿಯಗಟ್ಟಲೆ ಜನರ ಸಾವಿಗೆ ಕಾರಣವಾದ ಎರಡು ವಿಶ್ವ ಯುದ್ಧಗಳನ್ನು ನಾವು ಕಂಡಿದ್ದೇವೆ. ಇಂತಹ ಬರ್ಬರತೆಗೆ ಕಾರಣವಾಗುವ ಇಂತಹ ಅಸ್ಮಿತೆಗಳಿಗೆ ಏನಾದರೂ ಅರ್ಥವಿದೆಯೆ? ಹೌದು, ನಾವೆಲ್ಲ ಮತಿಭ್ರಾಂತರಾಗಲಾರೆವು. ನಾವು ಈ ಲೋಕದಲ್ಲಿ ಬದುಕಬೇಕಿದೆ, ಅಸ್ಮಿತೆಗಳು ಮಹತ್ವದ್ದಾಗುತ್ತವೆ. ಆದರೆ ಮೌಲಾನಾ ಈ ಅಸ್ಮಿತಿಗಳ ಮಿತಿಗಳ ಬಗ್ಗೆ ಎಚ್ಚರಿಸುತ್ತಾನೆ ಹಾಗೂ ನಾವೆಲ್ಲ ಪರಮ ಸತ್‌ನಿಂದ ಉದ್ಭವಿಸಿದ್ದೇವೆ ಹಾಗೂ ಅದರತ್ತಲೇ ನಾವು ಮರಳಬೇಕಾಗಿದೆ ಎನ್ನುವುದನ್ನು ನಮಗೆ ನೆನಪಿಸಿಕೊಡುತ್ತಾನೆ. ಇದನ್ನು ಎಂದೂ ಅಲಕ್ಷಿಸಕೂಡದು.

ರೂಮಿ ಹಾಗೂ ಅವನಂಥ ಸೂಫಿಗಳು ಬೋಧಿಸಿದ ಈ ದರ್ಶನ ವಿಜ್ಞಾನದ ಮೂಲಕ ಈ ವಿಶ್ವ ಕುರಿತು ನಾವು ಅರಿತುಕೊಂಡಿರುವುದಕ್ಕೆ ತುಂಬ ಹತ್ತಿರವಾಗಿದೆ, ಭವ್ಯವಾಗಿದೆ, ವಿಶಾಲವಾಗಿದೆ. ಇದರ ಆಯಾಮಗಳು ಬಿಲಿಯಗಟ್ಟಲೆ ಜ್ಯೋತಿರ್ವರ್ಷಗಳಿಗೆ ವಿಸ್ತರಿಸಿದೆ. ಇದು ನಮ್ಮೆಲ್ಲರ ಕಲ್ಪನೆಯನ್ನು ಮೀರಿದೆ. ಈ ಪೃಥ್ವಿ ಒಂದು ಚಿಕ್ಕ ಚುಕ್ಕೆಗಿಂತ ಹೆಚ್ಚೇನಲ್ಲ, ಅದಕ್ಕಿಂತ ನಗಣ್ಯವಾದುದು ಎನ್ನಬಹುದು. ಇಂತಹ ಪೃಥ್ವಿಯಲ್ಲಿ ಕಣ ಮಾತ್ರವಾಗಿರುವ ನಾವು ಮನುಷ್ಯರು ಲೌಕಿಕ ಒಡೆತನಕ್ಕಾಗಿ ಇತರರ ಆಸ್ತಿಯನ್ನು ಇತರರ ಪ್ರದೇಶವನ್ನು ಕಬಳಿಸುವುದಕ್ಕಾಗಿ ಎಷ್ಟೊಂದು ನಿರ್ದಯವಾಗಿ ಕಚ್ಚಾಡುತ್ತಿದ್ದೇವೆ.

ನಾವು ನಮ್ಮನ್ನೆಲ್ಲ ಸೃಷ್ಟಿಸಿದ ಆ ಪರಮ ಸತ್‌ನ ಪ್ರೀತಿಯಲ್ಲಿ ಒಂದು ಚೂರು ಮೈಮರೆತದ್ದೇ ಆದರೆ ನಾವು ಅವನ ಸಕಲ ಸೃಷ್ಟಿಯನ್ನು ಪ್ರೀತಿಸಬಹುದು, ನಮ್ಮ ಜತೆ ಸಹಬಾಳ್ವೆ ಮಾಡುತ್ತಿರುವವರ ಒಂದು ಕಣವನ್ನೂ ನಾಶಮಾಡಲಾರೆವು. ನಮ್ಮ ಅಸ್ಮಿತೆಯ ಪ್ರಜ್ಞೆಯು ಅಸ್ಮಿತೆಯಲ್ಲದ ಪ್ರಜ್ಞೆಯನ್ನು ಸಹ ಒಳಗೊಂಡಿರಬೇಕು, ಈ ಲೋಕ ಹಾಗೂ ಅದರ ಸೃಷ್ಟಿಕರ್ತ –ಈ ದ್ವೈತದ ಬಗ್ಗೆ ಸಹ ನಾವು ಎಚ್ಚರಿಕೆ ಉಳ್ಳವರಾಗಿರಬೇಕು. ಆಗ ನಾವು ಎಷ್ಟೋ ದ್ವೇಷ ಹಾಗೂ ವಿಧ್ವಂಸಕಾರಿ ಕೃತ್ಯಗಳನ್ನು ಕೈ ಬಿಡಬಹುದು.

ಅಷ್ಟೇ ಅಲ್ಲ, ನಾವು ರಾಜಕೀಯ ಲೋಕದ ಇಸ್ಲಾಂ, ಹಿಂಸೆ ಹಾಗೂ ಯುದ್ಧದ ಇಸ್ಲಾಂ–ಹೀಗೆ ಇಸ್ಲಾಮಿನ ಏಕಮುಖೀ ನೋಟ ಪಡೆದಿದ್ದೇವೆ. ಅಧಿಕಾರದ ಪಾತ್ರವಿರದ ಹಾಗೂ ಪ್ರೀತಿ, ಸೃಷ್ಟಿಕರ್ತನೊಂದಿಗಿನ ತಾದಾತ್ಮ್ಯವೇ ಕೇಂದ್ರಾಗಿರುವ ಆ ಇಸ್ಲಾಂ ಕುರಿತು ಸಹ ನಾವು ಅರಿತುಕೊಳ್ಳುವುದು ಅವಶ್ಯವಾಗಿದೆ. ಮಿತಿಮೀರಿದ ರಾಜಕೀಯಕರಣಗೊಂಡಿರುವ ನಮ್ಮ ಜಗತ್ತಿನಲ್ಲಿ ಅತ್ಯಂತ ಗೌರವಾರ್ಹರಾದ ಸೂಫಿಗಳು, ತತ್ವಜ್ಞಾನಿಗಳು ಹಾಗೂ ವಿಜ್ಞಾನಿಗಳ ಮಹತ್ವದ ಕೊಡುಗೆಗಳನ್ನು ಸಂಪೂರ್ಣವಾಗಿ ಮರೆಯುವಂತೆ ಮಾಡಲಾಗಿದೆ ಇಲ್ಲಾ ಉದ್ದೇಶಪೂರ್ವಕವಾಗಿ ಬದಿಗೊತ್ತಲಾಗಿದೆ.

ಇಸ್ಲಾಂ ಕುರಿತ ನಮ್ಮ ದೃಷ್ಟಿಕೋನ ಅದೆಷ್ಟು ಏಕಮುಖಿಯಾಗಿದೆಯೆಂದರೆ ಪ್ರೀತಿ ಹಾಗೂ ಶಾಂತಿಯನ್ನಾಧರಿಸಿದ ಯಾವುದೇ ವೈಕಲ್ಪಿಕ ನೋಟವನ್ನು ನಂಬಲಾಗುತ್ತಿಲ್ಲ. ನಾನು ಇಲ್ಲಿ ಈ ವೈಕಲ್ಪಿಕ ಇಸ್ಲಾಮಿನತ್ತ ಗಮನ ಸೆಳೆಯಲು ಮಿಲಿಯಗಟ್ಟಲೆ ಮುಸಲ್ಮಾನರು ಅನುಸರಿಸುವ ಅತ್ಯಂತ ಗೌರವಾನ್ವಿತ ಸೂಫಿಗಳನ್ನು ಉಲ್ಲೇಖಿಸಿದ್ದೇನೆ. ವಾಸ್ತವದಲ್ಲಿ ಜಗತ್ತಿನಾದ್ಯಂತ ಯಾವುದೇ ದೇಶದಲ್ಲೇ ವಾಸಿಸುತ್ತಿದ್ದರೂ ಬಹುದೊಡ್ಡ ಸಂಖ್ಯೆಯ ಮುಸಲ್ಮಾನ ಜನತೆ ಅನುಸರಿಸುತ್ತಿರುವುದು ಹಾಗೂ ಅವರಿಗೆ ಪ್ರೇರಣೆಯ ಮೂಲವಾಗಿರುವುದು ಇದೇ ಇಸ್ಲಾಂ.

ನಿಧಾನವಾಗಿ ರಾಜಕೀಯ ಇಸ್ಲಾಮಿಗೆ ಬದಲಾಗಿ ಈ ವೈಕಲ್ಪಿಕ ಇಸ್ಲಾಂ ಮಾಧ್ಯದಲ್ಲಿ ಸ್ಥಳಾವಕಾಶ ಸಿಗುತ್ತದೆ ಹಾಗೂ ಪ್ರೀತಿ ಮತ್ತು ಶಾಂತಿಯ ಈ ಇಸ್ಲಾಂ ಕುರಿತು ಜಗತ್ತು ಹೆಚ್ಚು ಹೆಚ್ಚು ತಿಳಿದುಕೋಳ್ಳುತ್ತದೆಂದು ಆಶಿಸೋಣ. ಸಹಜವಾಗಿ ಮಾಧ್ಯಮ ಈ ವೈಕಲ್ಪಿಕ ಇಸ್ಲಾಮಿಗೆ ಸುಲಭವಾಗಿ ಸ್ಥಳಾವಕಾಶ ಮಾಡಿಕೊಡಲಿಕ್ಕಿಲ್ಲ. ಅದೇ ನಮ್ಮ ಮುಖ್ಯ ಸಮಸ್ಯೆಯಾಗಿ ಉಳಿಯುತ್ತದೆ. ■

ಸಂವಾದ

ಆದರ್ಶದೊಳಗಿನ ಹುಚ್ಚಿ

ಅವರಿವರ ಬಗ್ಗೆ ಸುಖಾ ಸುಮ್ನೆ ನಮ್ಮ ಪೇಪರ್ ಪೇಜು ತುಂಬಿಸಲು ಬರೆಯುವ ಬದಲು ಯಾಕೆ ಈ ಹುಚ್ಚಿಯ ಬಗ್ಗೆ ಬರೆಯಬಾರದು ಅಂತ ಒಂದು ದಿನ ನನಗೆ ಸಡನ್ನಾಗಿ ಯೋಚನೆ ಹೊಳೆದು ಅದು ಗಟ್ಟಿಗೊಳ್ಳತೊಡಗಿತು. ಅಂದು ಕಚೇರಿಗೆ ಹೋದ ತಕ್ಷಣವೇ ಆಕೆಯ ಬಗ್ಗೆ ತಲೆಯಲ್ಲಿ ತುಂಬಿಕೊಂಡದ್ದನ್ನೆಲ್ಲ ಅಕ್ಷರಕ್ಕಿಳಿಸತೊಡಗಿದೆ. ಹೀಗೆ ಅಕ್ಷರ ರೂಪ ಪಡೆಯುತ್ತಿರುವ ಆಕೆಯ ನೆನಪುಗಳಿಗೆ ನನಗರಿವಿಲ್ಲದೆ ಮಸಾಲೆ ಒಗ್ಗರಣೆ ಸೇರತೊಡಗಿದವು.

ಹನುಮಂತ ಹಾಲಿಗೇರಿ

ನಾನು ಎಂದಿನಂತೆ ಬಸ್ಸಿಗಾಗಿ ಕಾಯುತ್ತಾ ನಿಂತಿದ್ದೆ. ರಸ್ತೆಯ ಆ ಕಡೆ ಶಾಲಿ ಹುಡುಗರು ಒಂದು ಹುಚ್ಚಿ ತಿರುವಿಕೊಂಡು ಬರುತ್ತಿದ್ದರು. ಅವತ್ತು ಶನಿವಾರವಾದ್ದರಿಂದ ಶಾಲಿ ಮಕ್ಕಳಿಗೆ ರಜೆ ಇರಬೇಕು. ಆಟದ ಗ್ರೌಂಡಿಗೆ ಆಡಲು ಹೋಗಬೇಕಾದ ಹುಡುಗರಿಗೆ ದಾರಿ ಮಧ್ಯೆ ಈ ಹುಚ್ಚಿ ಸಿಕ್ಕಿದ್ದಳೋ ಎನೋ. ಪಾಪ ಎಷ್ಟು ದೂರಿಂದ ತಿರುವಿಕೊಂಡು ಬಂದಿದ್ದರೋ. ಹುಚ್ಚಿ ಎದುಸಿರು ಬಿಡುತ್ತಿತ್ತು. ಆಗಾಗ ಹೊಳ್ಳಿ ಹಿಂದಕ್ಕೆ ನೋಡುತ್ತಾ ಮುಂದಕ್ಕೆ ನಡೆಯುತ್ತಿದ್ದಳು. ಕೆದರಿದ ತಲೆಗೂದಲು, ಅಲ್ಲಲ್ಲಿ ಹರಿದ, ಮಾಸಿದ ಬಟ್ಟೆಗಳು ಆಕೆಯ ಮೈಯಿಂದ ನೇತಾಡುತ್ತಿದ್ದವು. ಆಕೆಯ ಚೂಡಿಯ ಮೇಲೆ ಹೂವಿನ ಪತ್ತಲವೊಂದು ಸುತ್ತಿಕೊಂಡಿತ್ತು. ಸಿರೆಯ ಸೆರಗು ಹನುಮನ ಬಾಲದಂತೆ ಆಕೆಯನ್ನು ಹಿಂಬಾಲಿಸಿಕೊಂಡು ಹಾದಿಗುಂಟ ಕಸ ಹೊಡ್ಕೊಂಡು ಬರುತ್ತಿತ್ತು.

ಆಕೆಯುಟ್ಟಿದ್ದ ಚೂಡಿದಾರ ಯಾವ ಕಾಲದ್ದೋ ಏನೋ. ಅಲ್ಲಲ್ಲಿ ತೂತಾಗಿ, ಸವೆದು, ಗುಂಜೆದ್ದು, ಪಿಸಿದು ತನ್ನ ಸಿನಿಯಾರಿಟಿ ಸಾರುತ್ತಿತ್ತು. ಕಾಲಿಗುಂಟ ಅಂಟಿಕೊಂಡಿದ್ದ ಚೂಡಿಯ ದೊಗಳೆ ಬಾಟಂ ಅಂತೂ ಮೀನುಖಂಡ ದಾಟಿ ತೊಡೆಯವರೆಗೆ ಸೀಳಿಕೊಂಡು ಆಕೆಯ ತುಂಬಿದ ತೊಡೆಯನ್ನು, ಆಕರ್ಷಕ ಬಣ್ಣವನ್ನು ಸಾದರಪಡಿಸುತ್ತಿತ್ತು. ಆಕೆ ನಡೆಯುವ ದಾಟಿಗೆ ತುಂಬಿದೆದೆ ಮತ್ತು ಹಿಂಭಾಗಗಳು ಗಂಭೀರವಾಗಿ ಝುಘಣಗೊಳ್ಳುತ್ತಿದ್ದವು. ದಾರಿಹೋಕರು ಆಕೆ ಹುಚ್ಚಿ ಎಂಬುದನ್ನು ಮರೆತು ಲಜ್ಜೆಗೆಟ್ಟವರಂತೆ ಲೋಕದ ಜಂಜಡಗಳನ್ನು ಮರೆತು ಅರೆಕ್ಷಣ ನಿಂತು ನೋಡೆ ಮುಂದುವರೆಯುತ್ತಿದ್ದರು.

ನಾನು ನಿಂತಿದ್ದ ಬಸ್ ನಿಲ್ದಾಣದ ಎದುರುಗಡೆಯೆ ಯಾವ ಕಾಲದಲ್ಲಿಯೋ ಕಟ್ಟಿದ ಹಳೆಯ ಕಟ್ಟಡವೊಂದಿತ್ತು. ಅದರ ಮೂಲೆಯೊಂದರಲ್ಲಿ ಯಾರೋ ಬಟ್ಟೆ ಕಟ್ಟಿ ಜೋಪಡಿಯಂತೆ ಮಾಡಿದ್ದರು. ಅಥವಾ ಇಕೆ ಮಾಡಿಕೊಂಡಿದ್ದಳೋ. ಸಿಟ್ಟಿನಿಂದ ಹುಡುಗರ ಕಡೆ ಹಿಡಿ ಮಣ್ಣು ತೂರಿ ಅದರೊಳಗೆ ಹೊಕ್ಕೊಂಡಳು. ಅದಕ್ಕೆ ಅಡ್ಡ ಪರದೆ ಸರಿಸಿ ಒಳಗಡೆ ಮಾಯವಾದಳು.

ಹುಡುಗರ ಕಿಟಲೆ ಬುದ್ಧಿ ಇನ್ನೂ ಕಡಿಮೆಯಾದಂತೆ ಕಾಣಲಿಲ್ಲ. ಅವರು ಆ ಜೋಪಡಿಯ ಹತ್ತಿರಕ್ಕೆ ಸಾಗಲು ಧೈರ್ಯವಿಲ್ಲದೆ, ದೂರ ಸುಮ್ಮನೆ ನಿಲ್ಲಲು ಮನಸ್ಸು ಒಪ್ಪದೆ ಒಂದರೆಗಳಿಗೆ ಏನು ಮಾಡಬೇಕೆಂದು ಯೋಚಿಸಿದರು. ಮರುಕ್ಷಣ ತಮ್ಮತಮ್ಮಲ್ಲಿ ಸನ್ನೆ ಮಾಡಿಕೊಂಡು ಅಲ್ಲಲ್ಲಿ ಬಿದ್ದಿದ್ದ ಹಿಡಿಗಲ್ಲು ಆಯ್ದು ಆ ಜೋಪಡಿಯತ್ತ ಬೀಸತೊಡಗಿದರು. ನೋಡುತ್ತಿದ್ದ ನನಗೆ ನಿಜಕ್ಕೂ ಸಿಟ್ಟು ಬಂತು. ನಾನು ಇನ್ನೇನು ಬರಲಿರುವ ನನ್ನ ಬಸ್ಸನ್ನು ಮರೆತು ರಸ್ತೆ ದಾಟಿ ಆ ಕಡೆ ನಡೆದೆ. ಅಲ್ಲಿಯ ಬಿದ್ದಿದ್ದ ಕಟ್ಟಿಗೆಯ ಕೋಲು ನನ್ನ ಕೈ ಸೇರಿತು. ತಮ್ಮತ್ತಲೆ ರಭಸದಿಂದ ಬರುತ್ತಿದ್ದ ನನ್ನನ್ನು ನೊಡಿದ ಹುಡಗರು ಅಲ್ಲಿಂದ ಕಾಲ್ಕಿತ್ತರು.

* * *

ಹೆಸರಾಂತ ಪತ್ರಿಕೆಯೊಂದರ ಜಿಲ್ಲಾ ವರದಿಗಾರನಾಗಿರುವ ನಾನು ದಿನವೂ

ಜಿಲ್ಲೆಯಲ್ಲಿ ನಡೆಯುವ ದಿನನಿತ್ಯದ ಕಾರ್ಯಕ್ರಮಗಳು, ಹಾಳುಮೂಳು ಸುದ್ದಿಗೋಷ್ಠಿ ಇದರ ಜೊತೆಗೆ ದಿನಕ್ಕೊಂದು ನನ್ನ ಬೈಲೈನ್‌ನಲ್ಲೊಂದು ಸ್ಟೋರಿ ಬರೆಯಬೇಕು. ಜಿಲ್ಲೆಯ ದೊಡ್ಡ ದೊಡ್ಡ ಸುದ್ದಿಗಳನ್ನು ಬರೆಯುವ ನಮ್ಮಂಥವರಿಗೆ ಇಂತಹ ಚಿಲ್ಲರೆ ವಿಷಯಗಳು ಕಣ್ಣಿಗೆ ಬಿಳುವುದಿಲ್ಲ. ಆದರೆ ಇವತ್ಯಾಕೋ ಈ ವಿಷಯ ಬಹಳಷ್ಟು ಬಾಧಿಸತೊಡಗಿತು. ನನ್ನಂಥವನಿಗೆ ತಂಗಿಯೋ, ಹೆಂಡತಿಯೋ ಆಗಿರಬೇಕಾದವಳು, ತುಂಬು ಮನೆಗೆ ಮಗಳೋ, ಸೊಸೆಯೊ ಆಗಿದ್ದವಳು ಈಗ ಬೀದಿ ಬದುಕು ಸಾಗಿಸಬೇಕಾಗಿರುವುದು ಎಂಥ ದುರಂತ. ಯಾವ ಊರೋ ಏನು ಕಥೆಯೋ.

ಕಥೆ

ಹುಡುಗರ ಕಿಟಲೆ ಮಾಡಿದ ಘಟನೆಯ ನಂತರ ನಾನು ಆಪೀಸಿನಿಂ ಮನೆ, ಮನೆಯಿಂದ ಆಪೀಸಿಗೆ ಹೋಗುವಾಗ ಇವಳ ಮೇಲೆ ಒಂದು ಕಣ್ಣಿಟ್ಟುಕೊಂಡೆ ಅಡ್ಡಾಡತೊಡಗಿದೆ. ಇವಳಿಗೆ ರಸ್ತೆ ಬದಿಯ ಹಳೆ ಕಟ್ಟಡ ಮತ್ತು ಹೊರಗಿನ ಜಾಲಿ ಬೇಲಿಯೇ ಮನೆ. ಚಿಂದಿ ಬಟ್ಟೆ, ಹರುಕು ಮುರುಕು ಪ್ಲಾಸ್ಟಿಕ್‌ಗಳೆ ಜೊತೆಗಾತಿಯರು. ಯಾವಾಗ ತಿರುಗಾಡುತ್ತಾಳೊ, ಯಾವಾಗ ಮಲಗುತ್ತಾಳೊ ಈವರೆಗೂ ಅಲ್ಲಿ ಅಡ್ಡಾಡುವ ಯಾರೊಬ್ಬರಿಗೂ ಗೊತ್ತಿಲ್ಲ. ಯಾವಾಗ ನೋಡಿದರೂ ಶೂನ್ಯವನ್ನು ದಿಟ್ಟಿಸುತ್ತಿರುತ್ತಾಳೆ. ಕೆಲವೊಮ್ಮೆ ತಲೆಕೂದಲನ್ನು ಕೆದರಿಕೊಂಡಿದ್ದರೆ ಮತ್ತೆ ಕೆಲವೊಮ್ಮೆ ನೀಟಾಗಿ ಜಡೆ ಹೆಣೆದುಕೊಂಡು ಯಾವ್ಯಾವದೋ ಹೂ ಮುಡಿದುಕೊಂಡಿರುತ್ತಾಳೆ. ಜಾಲಿಗಿಡದ ಪಕ್ಕದಲ್ಲೊಂದು ಮೂರು ಗುಂಡಕಲ್ಲು ಹೂಡಿ ಅದರ ಮೇಲೆ ಏನನ್ನೊ ಬೇಯಿಸುತ್ತಿರುತ್ತಾಳೆ. ಅಲ್ಲಲ್ಲಿ ಸಿಗುವ ಹಾಳೆ, ರಟ್ಟು, ಕಡ್ಡಿಕಸಗಳನ್ನೆ ಒಲೆಯಲ್ಲಿ ಹಾಕಿ ಉಸ್ ಉಸ್ ಅಂತ ಊದುತ್ತಿರುತ್ತಾಳೆ. ಯಾರು ಮಾತನಾಡಿಸಿದರೂ ಅವರತ್ತ, ಅವರ ಮಾತುಗಳತ್ತ ಕನಿಷ್ಠ ಗಮನವನ್ನು ಕೊಡದೆ ಈ ಲೋಕಕ್ಕೆ ಕಿವುಡಾದವಳಂತೆ ಇರುವುದನ್ನು ಆಗಾಗ ಕಂಡಿದ್ದೆ.

ಅವರಿವರ ಬಗ್ಗೆ ಸುಖಾ ಸುಮ್ಮನೆ ನಮ್ಮ ಪೇಪರ್ ಪೇಜು ತುಂಬಿಸಲು ಬರೆಯುವ ಬದಲು ಯಾಕೆ ಈ ಹುಚ್ಚಿಯ ಬಗ್ಗೆ ಬರೆಯಬಾರದು ಅಂತ ಒಂದು ದಿನ ನನಗೆ ಸಡನ್ನಾಗಿ ಯೋಚನೆ ಹೊಳೆದು ಅದು ಗಟ್ಟಿಗೊಳ್ಳತೊಡಗಿತು. ಅಂದು ಕಚೇರಿಗೆ ಹೋದ ತಕ್ಷಣವೇ ಆಕೆಯ ಬಗ್ಗೆ ತಲೆಯಲ್ಲಿ ತುಂಬಿಕೊಂಡದ್ದನ್ನೆಲ್ಲ ಅಕ್ಷರಕ್ಕಿಳಿಸತೊಡಗಿದೆ. ಹೀಗೆ ಅಕ್ಷರ ರೂಪ ಪಡೆಯುತ್ತಿರುವ ಆಕೆಯ ನೆನಪುಗಳಿಗೆ ನನಗರಿವಿಲ್ಲದೆ ಮಸಾಲೆ ಒಗ್ಗರಣೆ ಸೇರತೊಡಗಿದವು. ಓದುಗರನ್ನು ಹಿಡಿದಿಡಲು, ಪತ್ರಿಕೆಯ ಪ್ರಸಾರ ಸಂಖ್ಯೆ ಹೆಚ್ಚಿಸಲು ಜೊತೆಗೆ ನನ್ನ ಪ್ರಮೋಷನ್ನು ಮುಂತಾದವುಗಳೆಲ್ಲವೂ ಒಂದು ಲೇಖನರೂಪಗೊಳ್ಳುವ ಸಮಯದಲ್ಲಿ ಕೆಲಸ ಮಾಡುತ್ತವೆ. ಅದು ನಮ್ಮೊಂಥೊರಿಗೆ ಅನಿವಾರ್ಯ ಕೂಡ.

ಸುಂದರ ಯುವತಿಯಾಗಿ ಯಾವದೋ ಕಂಪನಿಯಲ್ಲಿ ನೌಕರಸ್ಥಳಾಗಿ, ತನ್ನ ಗಂಡ ಮಕ್ಕಳೊಂದಿಗೆ ಆದರ್ಶ ದಾಂಪತ್ಯವನ್ನು ನಡೆಸಬೇಕಿದ್ದ ಈ ಯುವತಿ ಸಮಾಜದ ಯಾವದೋ ಮೌಢ್ಯಕ್ಕೆ, ಇನ್ಯಾವದೋ ಕ್ರೌರ್ಯಕ್ಕೆ ಸಿಕ್ಕು ಹೀಗೆ ಹುಚ್ಚಿಯಾಗಿ ಬೀದಿಯಲ್ಲಿ ಬದುಕಬೇಕಾಗಿದೆ. ಈ ಮಳೆಗಾಲದಲ್ಲಿ ಮುಳ್ಳುಪೊದೆಯ ಪಕ್ಕದಲ್ಲಿ ಬದುಕುತ್ತಿರುವ ಇವಳ ದುರಂತಕ್ಕೆ ನಾಗರಿಕ ಸೋಗಿನಲ್ಲಿ ಬದುಕುತ್ತಿರುವ ಸಮಾಜವೇ ಕಾರಣ.

ಈಗಿನ ಮಳೆಗಾಲದಲ್ಲೂ, ಜಿಟಿಜಿಟಿ ಮಳೆಹನಿಯಲ್ಲೂ ಮೂರು ಗುಂಡಕಲ್ಲುಗಳ ಮೇಲೆ ನೆಗ್ಗಿದ ಅಲ್ಯುಮಿನಿಯಂ ಪಾತ್ರೆಯನ್ನಿಟ್ಟು ಏನನ್ನೋ ಬೇಯಿಸುತ್ತಿರುತ್ತಾಳೆ. ಮಳೆಯ ತಂಪಿನ ದಿನಗಳಲ್ಲಿ ಕಾಂಕ್ರಿಟ್ ಕಟ್ಟಡಗಳ ಈ ನಗರದಲ್ಲಿ ಒಣ ಸೌದೆಯಾದರೂ ಎಲ್ಲಿ ಸಿಗಬೇಕು. ಕಡ್ಡಿಕಸ, ಹಾಳೆ-ರಟ್ಟುಗಳನ್ನೆ ಒಲೆಯಲ್ಲಿ ತುರುಕಿ ಉರಿ ಹತ್ತಿಸುವ ಪ್ರಯತ್ನವಾಗಿ ಉಸ್ ಉಸ್ ಅನ್ನುತ್ತಿರುತ್ತಾಳೆ. ಯಾರಾದರೂ ಏನಾದರೂ ತಿನ್ನಲು ಕೊಟ್ಟರೆಮಾತ್ರ ತೆಗೆದುಕೊಳ್ಳುತ್ತಾಳೆ. ಇಲ್ಲದಿದ್ದರೆ ಅವತ್ತಿಗೆ ಉಪವಾಸವೇ ಗತಿ.

ಊರ ಹೊರಗಿನ ನಿರ್ಜನ ಹಾಳು ಬಸ್ ನಿಲ್ದಾಣದ ಎದುರಿನ ಹಳೆಯ ಕಟ್ಟಡವೊಂದರಲ್ಲಿ ಆಕೆ ವಾಸಿಸುವುದರಿಂದ ದುಷ್ಟರ ಕಳ್ಳ ಕಾಕರ, ಕಾಮುಕರ ಪಾಲಾಗುವ ಸಂಭವವಿದೆ. ಗೌರವಸ್ಥ ಮನೆತನದವರನ್ನು ಬಿಡದ ಬೀದಿ ಕಾಮುಕರು, ಇನ್ನು ಇಂಥ ಅನಾಥ ಯುವತಿಯರನ್ನು ಸುಮ್ಮನೆ ಬಿಡುವರೆ, ದಯವಿಟ್ಟು ಸರಕಾರದ ಸಮಾಜ ಕಲ್ಯಾಣ ಇಲಾಖೆ ಈ ಅನಾಥ ಬುದ್ಧಿಮಾಂದ್ಯ ಯುವತಿಯ ಕಡೆ ಲಕ್ಷ್ಯವಹಿಸಬೇಕು. ಯಾವುದಾದರೂ ಅನಾಥ ಆಶ್ರಮಕ್ಕೋ ಅಥವಾ ಮಾನಸಿಕ ಆಸ್ಪತ್ರೆಗೆ ಸೇರಿಸಬೇಕು' ಎಂದು ಅಗ್ರಹ ಪೂರಕ ಲೇಖನ ಒಂದನ್ನು ಬರೆದು ನಮ್ಮ ಪತ್ರಿಕೆಯ ಹೆಡ್ಡಾಫಿಸ್‌ಗೆ ಕಳುಹಿಸಿದೆ.

ಮರುದಿನ ಹಾಸಿಗೆಯಲ್ಲಿದ್ದಾಗಲೆ ಕೆಲವು ಪರಿಚಯದವರು "ಫೋನು ಮಾಡಿ ಗುಡ್ ಹ್ಯುಮನ್ ಇಂಟ್ರಸ್ಟೆಡ್ ಸ್ಟೋರಿ ಮಾಡಿರಿ ಸರ್" ಎಂದು ಅಭಿನಂದಿಸುವ ಅಭಿನಯ ಮಾಡಿದರು. ನನಗೂ ಖುಷಿಯಾಯಿತು.

* * *

ಎಂದಿನಂತೆ ಅಂದು ಬಸ್ ನಿಲ್ದಾಣಕ್ಕೆ ಹೋಗಿ ನಿಂತುಕೊಂಡೆ. ಅಂದು ಬಸ್ ನಿಲ್ದಾಣದ ವಾತಾವರಣವೇ ಬದಲಾದಂತೆ ನನಗೆ ಕಾಣತೊಡಗಿತು. ಸೂಕ್ಷ್ಮವಾಗಿ ಮನಿಸುತ್ತಾ ನಿಂತುಕೊಂಡಿದ್ದೆ. ಬಸ್ ನಿಲ್ದಾಣಕ್ಕೆ ಬಂದವರೆಲ್ಲರೂ ದುರುಗಡೆಯ ಆ ಹುಚ್ಚು ಹುಡುಗಿಯತ್ತಲೆ ನೋಡುತ್ತಿದ್ದಂತೆ ನನಗೆ ಾಸವಾಗತೊಡಗಿತು. ಅಂದು ಬಸ್ ನಿಲ್ದಾಣಕ್ಕೆ ಯಾರ‍್ಯಾರೋ ಹೊಸಬರು ಂದ ಹಾಗೆ ಇದ್ದರು. ಬಸ್, ಬೈಕು. ಸೈಕಲ್ಲುಗಳಲ್ಲಿ ಓಡಾಡುವವರೆಲ್ಲರದೂ ಹುಡುಗಿಯ ವಾಸದ ಕಡೆ ಒಂದು ನೋಟ ಇದ್ದೆ ಇತ್ತು. ಎಂದಿನಂತೆ ಂದೂ ಸಹ ಆ ಹುಡುಗಿಯದು ಶೂನ್ಯ ನೋಟ.

ನಾನು ಯಾವದು ಆಗಬಾರದೆಂದು ಆಶಿಸಿ ಲೇಖನ ಬರೆದಿದ್ದೇನೋ ಅದು ನನ್ನ ಲೇಖನದಿಂದಾಗಿ ಮತ್ತಷ್ಟು ದೊಡ್ಡ ಪ್ರಮಾಣದಲ್ಲಿ ಉಲ್ಬಣಿಸಿದ್ದು ನನಗೆ ತಳಮಳವನ್ನುಂಟು ಮಾಡಿತ್ತು. ಯಾಕಾದರೂ ಆ ಲೇಖನ ಬರೆದೆ ಎಂದು ಮನಸ್ಸು ಚಿಂತಿಸತೊಡಗಿತು. ಅವತ್ತೆಲ್ಲ ಆ ಬೇಜಾರಿನಲ್ಲಿಯೇ ಕೆಲಸ ಮುಗಿಸಿ ಮನೆಯ ಹಾದಿ ಹಿಡಿದೆ. ನಮ್ಮ ಜಿಲ್ಲೆಯ ಶಾಸಕರೊಬ್ಬರು ಬೆಂಗಳೂರಿನಲ್ಲಿ ಮಹಿಳೆಯೊಬ್ಬಳ ಹಿಂದೆ ಬಿದ್ದು ಲೈಂಗಿಕ ಹಗರಣದಲ್ಲಿ ಸಿಕ್ಕಿಬಿದ್ದ ಘಟನೆ ನಡೆದಿತ್ತು. ಆ ಶಾಸಕ ನಮ್ಮ ಜಿಲ್ಲೆಯಲ್ಲಿ ಹೇಗ್ಹೇಗೆ ಇರತಿದ್ದ, ಅವನ ದೊಡ್ಡತನ ಸಣ್ಣತನಗಳ ಕುರಿತು ಲೇಖನವೊಂದನ್ನು ಕಂಪ್ಯೂಟರಿನಲ್ಲಿ ಕುಟ್ಟಿ ಕಳಿಸಿದ್ದರಿಂದ ಅವತ್ತು ಮನೆಗೆ ಹೋಗುವುದಕ್ಕೆ ಮತ್ತಷ್ಟು ತಡವಾಗಿತ್ತು.

ಆಫೀಸಿನಿಂದ ಹೊರ ಬಿದ್ದಾಗಲೆ ಆಕಾಶದಲ್ಲಿ ಗುಡುಗು ಸಿಡಿಲು. ಅವಸರವಾಗಿ ಮನೆಯತ್ತ ಹೋಗಬೇಕೆಂದರೂ ಬಸ್ ಏನು ನಮ್ಮಪ್ಪನ ಮನೇದೆ. ಇಂಥ ಅವಸರದಲ್ಲಿಯೆ ಬಸ್ ಮತ್ತಷ್ಟು ಲೇಟಾಗೋದು. ಬೀಳುವ ಮಳೆಯಲ್ಲೂ ಬಸ್ಸು ನನ್ನನು ನಮ್ಮ ಬಡಾವಣೆಯ ಬಸ್ ನಿಲ್ದಾಣದಲ್ಲಿ ಒಗಾಯಿಸಿ ನಿರ್ಧಯಿಯಾಗಿ ಮುಂದೆ ಹೋಗಿಯೆ ಬಿಟ್ಟಿತು. ವಿಧಿಯಿಲ್ಲದೆ ಚಾಟಿಗಾಗಿ ಸುತ್ತಲೆಲ್ಲ ನೋಡಬೇಕಾಯಿತು. ಹತ್ತಿರದಲ್ಲಿ ಯಾವುದೇ ಮನೆಯಿರದೆ ಇದ್ದುದರಿಂದ ರಸ್ತೆಯಾಚೆಯ ಹಾಳು ಬಿಲ್ಡಿಂಗಿನತ್ತ ಸಾಗಿ ಚಾವಣಿಯಿಲ್ಲದೆ ಮುಗಿಲನೋಡುತ್ತಿದ್ದ ಗೋಡೆಯ ಪಕ್ಕ ಹೋಗಿ ನಿಂತುಕೊಂಡೆ. ಹಾಗೆ ನಿಲ್ಲುವ ಹೊತ್ತಿಗೆ ಮಳೆಯ ಬಿರುಸು ಮತ್ತೂ ಜೋರಾಗಿ ಅಲ್ಲಿಂದ ಹೊರಡಲು ಸಾಧ್ಯವಾಗದಂತ ವಾತಾವರಣವಿದ್ದುದರಿಂದ ಮಳೆ ಬಿಡುವುದನ್ನೆ ಕಾಯುವುದು ಅನಿವಾರ್ಯವಾಯಿತು.

ಕಣ್ಣು ಹುಯ್ದರೆ ಬರೀ ಕತ್ತಲು. ನಾನು ಕೂತಿದ್ದ ಮರದ ಬುಡದಿಂದ ಒಂದೆರಡು ಮೊಳದ ದೂರದಲ್ಲಿ ಚರಂಡಿಯಲ್ಲಿ ನೀರು ಹರಿಯುವ ಸದ್ದಾಗುತ್ತಿತ್ತೇ ಹೊರತು ನೀರು ಮಾತ್ರ ಕಾಣುತ್ತಿರಲಿಲ್ಲ. ಮರದ ಪಕ್ಕದಲ್ಲಿ ಬೆಳೆದಿದ್ದ ಜಾಲಿ ಗಿಡದ ಬೇಲಿ ಆ ಚರಂಡಿಯನ್ನು ಪೂರಾ ಕವಿದುಕೊಂಡಿತ್ತು.

ಇದ್ದಕ್ಕಿದ್ದಂತೆ ನನ್ನ ಎಡಗಾಲಿಗೆ ಏನೋ ಮೆಲ್ಲಗೆ ತಗುಲಿದಂತಾಯ್ತು. ಮರದ ಪುಟ್ಟ ರೆಂಬೆಯೋ ಅಥವಾ ಬೇಲಿಯ ಯಾವುದೋ ಗಿಡವಿರಬೇಕೆಂದುಕೊಂಡು ಅದರ ಕಡೆ ಅಷ್ಟು ಗಮನ ಕೊಡದೆ ಮಳೆ ಬಿಡುವುದನ್ನೆ ಕಾಯುತ್ತಾ, ಚಳಿಗೆ ಹಲ್ಲು ಕಡಿಯುತ್ತಾ ನಿಂತಿದ್ದೆ. ಕೆಲವು ಕ್ಷಣಗಳ ಬಳಿಕ ಮತ್ತೆ ಮೊದಲ ಸಲದಂತೆ ಅದೇ ಕಾಲಿನ ಮೆದುವಿನ ವಸ್ತುವೊಂದು ಮಿಸುಕಾಡಿದಂತಾಗಿ ಮಿದುಳಿಗಿಂತಲೂ ಪೂರ್ವದಲ್ಲಿ ಎಚ್ಚರಗೊಂಡ ಕಣ್ಣುಗಳು ಕಾಲಿನತ್ತ ದೃಷ್ಟಿ ಚೆಲ್ಲಿದವು. ಆ ಕತ್ತಲೆಯಲ್ಲಿ ಏನೇನೂ ಕಾಣಿಸಲಿಲ್ಲ. ಗಾಬರಿಯಾಗಿ ಮಳೆಗೆ ನೆನೆಯದಂತೆ ಜೋಪಾನ ಮಾಡಿದ್ದ ಮೊಬೈಲನ್ನು ಗಡಿ ಬಿಡಿಯಿಂದ ತೆಗೆದು ಕಾಲಿನತ್ತ ಬೆಳಕು ಚೆಲ್ಲಿದೆ. ಮೊಬೈಲಿನ ಕೋಲು ಬೆಳಕಿನ ಮಿತಿಯಲ್ಲಿ ತಿಳಿ ಗುಲಾಬಿ ಬಣ್ಣದ ಉದ್ದದೊಂದು ವಸ್ತು ಮಲಗಿಕೊಂಡಂತಿತ್ತು. ಅದರ ಕೊನೆಯಂಚಿಗೆ ಹಾವಿನ ಮುಖದಂಥ ಐದು ಬೆರಳುಗಳು ಬಿಚ್ಚಿಕೊಂಡಿದ್ದವು. ಇದ್ದಕ್ಕಿದ್ದಂತೆ ಭಯ ಅನ್ನೋದು ಮೈಯ್ಯಲ್ಲೆಲ್ಲಾ ಮಿಂಚಿನಂತೆ ಸಂಚರಿಸಿ, ಮೊಬೈಲನ್ನು ಹಿಡಿದಿದ್ದ ಕೈಗಳು ನಡುಗತೊಡಗಿದವು. ಅವಸರದಲ್ಲಿ ನನ್ನ ಮೊಬೈಲಿನ ಕೋಲು ಬೆಳಕು ಆ ವಸ್ತುವಿನ ಇನ್ನೊಂದು ಅಂಚಿನತ್ತ ದಾವಿಸಿತು. ನೋಡಿದರೆ ಅದರ ಇನ್ನೊಂದು ಅಂಚು ತೋಳಾಗಿ ಕಂಡು ಮನುಷ್ಯಾಕೃತಿಯ ಬುಜದಲ್ಲಿ ಸಂಗಮಗೊಂಡಿತ್ತು.

ಅತ್ಯಾವಸರದಲ್ಲಿ ನನ್ನ ಮೊಬೈಲ್ ಬೆಳಕು ಇಡಿ ಮನುಷ್ಯಾಕೃತಿಯ ತುಂಬೆಲ್ಲಾ ಓಡಾಡಿ ಅದು ಮಹಿಳೆಯ ದೇಹ ಎಂದು ದೃಢಪಡಿಸಿತು.

ಅವಳ ಮೈಯನ್ನು ತೇವದ ಪ್ಲಾಸ್ಟಿಕ್ ಕವರ್ ಸುತ್ತಿಕೊಂಡಿತ್ತು. ಕವರ್‌ನ ಅಂಚಿನಿಂದ ಮಳೆ ಹನಿಗಳು ಹರಿಯುವ ರಭಸ ಸಣ್ಣ ಹುಡುಗರ ಒಂದಕ್ಕೆ ಕುಳಿತಾಗ ಆಗುವ ಶಬ್ದವನ್ನು ನೆನಪಿಸುತ್ತಿದ್ದವು. ಮಳೆಯ ಹನಿಗಳು ಮುಖವನ್ನು ತೊಯ್ಯುತ್ತಾ ಕೆಳಗಿಳಿಯುತ್ತಿದ್ದವು. ಆಕಾಶಮುಖಿಯಾಗಿ ಮಲಗಿದ್ದ ಅ ಮುಖ ಈ ಹಿಂದೆ ಕಂಡ ಹುಚ್ಚಿಯದೆ ಎಂಬುದು ಕ್ಷಣದಲ್ಲಿ ಖಾತ್ರಿಯಾಯಿತು. ಅವಳ ಮುಖದ ಮೇಲೆ ತಟ್ಟಂತ ಬಿಳುತ್ತಿದ್ದ ಮಳೆ ಹನಿಗಳು ಕ್ಷಣ ಚಲ್ಲಾಪಿಲ್ಲಿಯಾಗಿ ಮತ್ತೆ ಒಟ್ಟುಗೂಡಿ ನೀಳ ನಾಸಿಕದ ಆಚೀಚೆಗಿನ ಸಂಧಿಯಲ್ಲಿ ಕವಲಾಗಿ ನದಿಯಂತೆ ಹರಿದು ನೆಲ ಸೇರುತ್ತಿದ್ದವು. ಮಳೆಹನಿಗೆ ತೋಯ್ದು ನೆಂದಿದ್ದ ಅವಳ ಮುಖ ಶುಭ್ರಗೊಂಡು ಎಂದಿಲ್ಲದ ಕಳೆಯಿಂದ ಕೂಡಿತ್ತು. ಅವಳ ಕಣ್ಣುಗಳು ಆ ಬಿರುಮಳೆಯಲ್ಲೂ ಮತ್ತದೆ ಆಕಾಶ ಶೂನ್ಯದಲ್ಲಿ ದೃಷ್ಟಿ ನೆಟ್ಟಿದ್ದವು. ಆ ಕಣ್ಣುಗಳಲ್ಲಿ ಜೀವವಿರುವ ಯಾವ ಲಕ್ಷಣಗಳೂ ಕಾಣದ್ದರಿಂದ ಯಾರೋ ಅತ್ಯಾಚಾರ ಮಾಡಿಯೋ, ಕೊಲೆ ಮಾಡಿಯೋ ಹೀಗೆ ಎಸೆದು ಹೋಗಿಬಿಟ್ಟಿದ್ದಾರೆ ಅನಿಸಿದ್ದೇ ತಡ, ಸುರಿವ ಮಳೆಯಲ್ಲಿ ಗುಡುಗುವ ಕೊಲ್ಮಿಂಚಿನ ಬೆಳಕಲ್ಲಿ ಮನೆಯವರೆಗೆ ಓಟ ಕಿತ್ತಿದ್ದೆ.

ನಿನ್ನೆ ಕಂಡ ಆ ಹುಚ್ಚಿಯೂ ಸಹ ಮೈಥುನದ ಆಸೆಯಿಂದ ಬಳಲುತ್ತಿರಬಹುದು ಎಂಬ ವಿಚಿತ್ರ ತರ್ಕ ತಲೆಯಲ್ಲಿ ಮಿಸುಕಾಡತೊಡಗಿತು. ಈ ಹುಚ್ಚಿ ವಿದೇಶದಲ್ಲೇನಾದರೂ ಹುಟ್ಟಿದ್ದರೆ, ಆಕೆಯ ಆಸೆಗಳಿಗೆ ಸ್ಪಂದಿಸುವ ಮೈಥುನ ಚಿಕಿತ್ಸೆಯೂ ಸಿಕ್ಕು ಆಕೆಯ ಮಾನಸಿಕ ಆರೋಗ್ಯ ಸುಧಾರಿಸುತಿತ್ತೇನೋ? ಮನದಲ್ಲೊಂದು ವಿಚಿತ್ರ ಆಸೆ ಹುಟ್ಟಿ ಅದು ಗಟ್ಟಿಗೊಳ್ಳುತ್ತ ಹೋಯಿತು.



* * *

ಮನೆ ಮುಟ್ಟುವವರೆಗೆ ನನಗೆ ಎಚ್ಚರವಿರಲಿಲ್ಲ. ಮನೆಗ ಬಂದವನೆ ತೋಯ್ದ ಬಟ್ಟೆಯನ್ನು ಬಿಚ್ಚೊಗೆದು ಊಟದ ಖಬರಿಲ್ಲದೆ ಬೆಡ್ ರೂಮಿಗೆ ಹೋಗಿ ರಗ್ಗಿನೊಳಗೆ ಹುದುಗಿ ಹೋಗಿದ್ದೆ.

ಅವತ್ಯಾಕೋ ಹೆಂಡತಿಯದೆ ನೆನಪು. ಅವಳಾದರೂ ಇದ್ದಿದ್ದರೆ ಈ ಘಟನೆಯನ್ನು ಹಂಚಿಕೊಂಡು ಹಗುರಾಗಬಹುದಿತ್ತು. ಮನೆಯ ಪಕ್ಕದ ಆಂಟಿಯನ್ನು ನಾನು ಮಾತನಾಡಿಸಿದೆನು ಎಂಬ ಕ್ಷುಲ್ಲಕ ನೆಪ ಮಾಡಿಕೊಂಡು ನನ್ನೊಂದಿಗೆ ಉಗ್ರ ಜಗಳ ಮಾಡಿ ಹಟ ತೊಟ್ಟು ತವರಿಗೆ ಹೋಗಿದ್ದ ಹೆಂಡತಿ ಒಂದೂ ಕಾಲು ವರ್ಷ ಗತಿಸಿದ್ದರೂ ಮನೆಗೆ ಮರಳಿರಲಿಲ್ಲ. ಮರಳುವ ಲಕ್ಷಣವೂ ಇರಲಿಲ್ಲ. ಅವಳಿಲ್ಲದ ಈ ಹೊತ್ತಿನಲ್ಲಿ ಇದೀಗ ಕಂಡ ತೋಯ್ದ ಮೈಯ್ಯದೆ ರೂಪ. ರಾತ್ರಿಯೆಲ್ಲ ಕಾಡಿದ ನಿದಿರೆ ಕಣ್ರೆಪ್ಪೆಯ ಬಂಧಿಯಾಗಲೊಲ್ಲದು.

ಕೋಳಿ ಕೂಗುವ ಮುನ್ನ ಆ ಹುಚ್ಚಿಯನ್ನು ನಾನೇಯಾದರೂ ಸರಿ ಯಾವುದಾದರೂ ಅನಾಥಾಶ್ರಮಕ್ಕೆ ಸೇರಿಸಬೇಕು, ಇಲ್ಲದಿದ್ದರೆ ನನಗೆ ಹುಚ್ಚು ಹಿಡಿದೀತು ಎಂಬ ಗಟ್ಟಿ ನಿರ್ಧಾರಕ್ಕೆ ಬಂದ ಕಾರಣದಿಂದ ಬೆಳಗಿನ ಜಾವ ನಿದ್ರೆ ನಿಧಾನವಾಗಿ ಹತ್ತಿರ ಸುಳಿದಿತ್ತು. ಅಂದು ನಿದ್ರೆಯಿಲ್ಲದೆ ದಿಮಿಗುಡುವ ತಲೆ ಹೊತ್ತು ಕಚೇರಿ ತಲುಪಿ ಒತ್ತಾಯಪೂರ್ವಕವಾಗಿ ಕೆಲಸದಲ್ಲಿ ತೊಡಗಿಸಿಕೊಂಡೆ. ಮಧ್ಯಾಹ್ನ ಊಟದ ಸಮಯದಲ್ಲಿ ಪತ್ರಿಕೆಗಳ ಮೇಲೆ ಕಣ್ಣಾಡಿಸುವುದು ನನ್ನ ಚಟ. ಅಂದಿನ ಆಂಗ್ಲ ಪತ್ರಿಕೆಯಲ್ಲಿ ಹೊರದೇಶಗಳಲ್ಲಿ ಬುದ್ಧಿಮಾಂದ್ಯರನ್ನು ಪಾಲಿಸುವ ಎನ್ಜಿಓಗಳ ಕಾರ್ಯವೈಖರಿಯ ಬಗೆಗಿನ ಲೇಖನವೊಂದು ಕಣ್ಣು ಸೆಳೆಯಬೇಕೆ?

ಹಾಗೆ ಕಣ್ಣಾಡಿಸುತ್ತಿರಬೇಕಾದರೆ, ಬುದ್ದಿಮಾಂದ್ಯರ, ಶಿಕ್ಷಣದ ಅಗತ್ಯತೆ. ಅವರಿಗೆ ಬೇಕಾದ ಪ್ರತ್ಯೇಕ ತರಬೇತಿ ಮುಂತಾದವುಗಳೆನ್ನಲ್ಲಾ ಓದಿಯಾದ ಮೇಲೆ ಕೊನೆಯ ಬಾಕ್ಸ್ ಐಟಂನಲ್ಲಿ "ಬುದ್ದಿಮಾಂದ್ಯರ ಲೈಂಗಿಕ ಬದುಕು" ಎಂಬಲ್ಲಿಗೆ ಬಂದು ಮುಟ್ಟಿದ ನನ್ನ ಕಣ್ಣುಗಳು ಅಲ್ಲಿಯೆ ನೆಲೆಗೊಂಡುಬಿಟ್ಟವು. "ಸಾಮಾನ್ಯರಿಗೆ ಊಟ–ನೀರಡಿಕೆಯಂತೆ ಮೈಥುನವು ಹೇಗೆ ಸಹಜ ಮತ್ತು ಅನಿವಾರ್ಯವೋ ಹಾಗೆಯೆ ಬುದ್ದಿಮಾಂದ್ಯರಿಗೂ ಸಹ. ಅವರೂ ಕೂಡ ಮನುಷ್ಯರೆ. ಮೈಥುನವು ಒಂದು ಚಿಕಿತ್ಸೆಯ ವಿಧಾನ. ಈ ಚಿಕಿತ್ಸೆಯಿಂದಾಗಿ ಬುದ್ದಿಮಾಂದ್ಯ ಯುವಕ–ಯುವತಿಯರಲ್ಲಿ ದೈಹಿಕ, ಮಾನಸಿಕ, ಸಾಮಾಜಿಕ ಆರೋಗ್ಯ ಸುಧಾರಿಸುವ ಬಗೆಗೆ ಚೆತೋಹಾರಿಯಾಗಿ ವಿವರಿಸಲಾಗಿತ್ತು. ಕೊನೆಯಲ್ಲಿ ಈ ಚಿಕಿತ್ಸೆಯನ್ನು ನೀಡುವುದಕ್ಕಾಗಿ ಆ ಎನ್‌ಜಿಓಗಳು ಲೈಂಗಿಕ ಕಾರ್ಯಕರ್ತರನ್ನು ಕೆಲಸಕ್ಕಾಗಿ ಇಟ್ಟುಕೊಂಡಿವೆ ಎಂದು ಹೇಳಿ ಲೇಖನವನ್ನು ಕೊನೆಗೊಳಿಸಲಾಗಿತ್ತು.

ಲೇಖನ ಓದಿ ಮುಗಿಸುತ್ತಿದ್ದಂತೆ ನನ್ನಲ್ಲಿ ವಿಚಿತ್ರ ತಳಮಳ ಸುರುವಾಯಿತು. ನೀತಿ–ಅನೀತಿಗಳ ನಡುವಿನ ಸಂಘರ್ಷ ಶುರುವಿಟ್ಟುಕೊಂಡಿತು. ನನ್ನೂರಲ್ಲಿ ಮಧ್ಯವಯಸ್ಕ ಹುಚ್ಚನೊಬ್ಬ ನನಗೂ ಮದುವೆ ಮಾಡ್ರಿ ಎಂದು ಊರ ಹಿರಿಯರಿಗೆ ಗಂಟು ಬಿಳುತ್ತಿದ್ದ ಘಟನೆ ನೆನಪಾಗತೊಡಗಿತು. ನಿನ್ನೆ ಕಂಡ ಆ ಹುಚ್ಚಿಯೂ ಸಹ ಮೈಥುನದ ಆಸೆಯಿಂದ ಬಳಲುತ್ತಿರಬಹುದು ಎಂಬ ವಿಚಿತ್ರ ತರ್ಕ ತಲೆಯಲ್ಲಿ ಮಿಸುಕಾಡತೊಡಗಿತು. ಈ ಹುಚಿ ವಿದೇಶದಲ್ಲೇನಾದರೂ ಹುಟ್ಟಿದ್ದರೆ, ಆಕೆಯ ಆಸೆಗಳಿಗೆ ಸ್ಪಂದಿಸುವ ಮೈಥುನ ಚಿಕಿತ್ಸೆಯೂ ಸಿಕ್ಕು ಆಕೆಯ ಮಾನಸಿಕ ಆರೋಗ್ಯ ಸುಧಾರಿಸುತಿತ್ತೇನೋ.? ಮನದಲ್ಲೊಂದು ವಿಚಿತ್ರ ಆಸೆ ಹುಟ್ಟಿ ಅದು ಗಟ್ಟಿಗೊಳ್ಳುತ್ತ ಹೋಯಿತು.

* * *

ಆಫೀಸ್ ಬಿಡುವವರೆಗೆ ತಲೆಯಲ್ಲಿ ಅದೇ ಯೋಚನೆ. ಹೇಗ್ಹೇಗೋ ಆಫೀಸ್ನಲಿ ಕೆಲಸ ಮುಗಿಸಿ ಮನೆಯ ದಾರಿ ಹಿಡಿದೆ. ಮನೆಗೆ ಹೋಗಲು ಮನಸ್ಸಾಗದೆ ಅವಳಿರುವ ಬಸ್ ನಿಲ್ದಾಣದ ಹತ್ತಿರ ಅತ್ತಿಂದಿತ್ತ ಇತ್ತಿಂದತ್ತ ಸುತ್ತತೊಡಗಿದೆ. ಆಗೊಬ್ಬರು ಈಗೊಬ್ಬರು ರಸ್ತೆಯ ಮೇಲಿಂದ ಅವಸರವಾಗಿ ನಡೆದು ಹೋಗುತ್ತಿದ್ದರು. ಇನ್ನೂ ಬೀದಿ ದೀಪಗಳು ಉರಿಯುತ್ತಿದ್ದವು. ಜನರು ಉಂಡು ಮಲಗುವ ಸಮಯ. ಹೆದರಿಕೊಂಡೆ ರಸ್ತೆಯ ಆ ಕಡೆ ನೋಡಿದರೆ ಆ ರಾತ್ರಿಯಲ್ಲಿ ಕಂಡ ಅದೆ ಮುಖ ಶೂನ್ಯವನ್ನೆ ದಿಟ್ಟಿಸುತ್ತಾ ಕೂತಿತ್ತು. ಆಕಡೆ ಹೋಗಲು ಧೈರ್ಯ ಸಾಲದೆ ಇನ್ನಷ್ಟು ರಾತ್ರಿ ಘಟಿಸಲಿ ಎಂದುಕೊಂಡು ಒಳಗಡೆ ವಿಚಿತ್ರ ತಳಮಳಗಳನ್ನು ನಿಬಾಯಿಸಲಾಗದೆ ಸುಮ್ಮನೆ ಅಲೆದಾಡುತ್ತಿದ್ದೆ.

ದಾರಿ ಹೋಕನೊಬ್ಬ ವಿಚಿತ್ರ ಮುಖದಲ್ಲಿ ವ್ಯಂಗ್ಯ ನಗೆ ತಂದುಕೊಂಡು ತನ್ನ ಮುಂದಿನ ದಾರಿ ಸವೆಸುವುದನ್ನು ಮರೆತು ಅನುಮಾನದಿಂದ ನನ್ನತ್ತ ಸರಿದು ಬಂದ. ಅನತಿ ದೂರದಲ್ಲಿ ನಿಂತು ಮೊದಲಿನ ವ್ಯಂಗ್ಯ ನಗೆಯಲ್ಲಿಯೆ 'ಯಾಕ್ಸಾರ್, ಈ ಹೊತ್ತಲ್ಲಿ ಇಲ್ಲಿ' ಎಂದು ಕಣ್ಣು ಕುಣಿಸಿದ.

ನನಗೆ ತಕ್ಷಣಕ್ಕೆ ಭಯ, ನಾಚಿಕೆ, ಕೀಳರಿಮೆ ಕಾಡಿಸಿದರೂ ಅಳಿದುಳಿದ ಧೈರ್ಯ ತಂದುಕೊಂಡು "ನಾನು ಪತ್ರಿಕೆ ರಿಪೋರ್ಟರ್. ಆ ಹುಚ್ಚಿಯ ಬಗ್ಗೆ ಒಂದು ವರದಿ ಮಾಡಬೇಕಾಗಿದೆ. ಅದಕ್ಕಾಗಿ ಪೋಟೋಗ್ರಾಫರ್‌ನನ್ನು ಬರ ಹೇಳಿದ್ದಿನಿ. ಅದಕ್ಕಾಗಿ ಕಾಯ್ಕೊತ ನಿಂತಿನಿ" ಎಂದೆ.

ನನ್ನ ತಡವರಿಸುವ ಧ್ವನಿ ಕೇಳಿ ಆತ ನಕ್ಕು ಅನುಮಾನಿಸಿ ವಿಚಿತ್ರವಾಗಿ ನನ್ನೆಡೆಗೆ ನೋಡಿದ. ನಾನು ಕೂಡಲೆ ನನ್ನ ಪತ್ರಿಕೆಯ ಗುರುತಿನ ಕಾರ್ಡು ತೋರಿಸಿದೆ. "ಇಲ್ಲಿ ಬಿಡ್ರಿ ಸರ್" ಸುಮ್ಮನೆ ಕೇಳಿದೆ ಅನಕೊತ ಆತ ತನ್ನ ದಾರಿ ಹಿಡಿದ. ಅಂವ ದೂರವಾಗುವವರೆಗೆ ನನ್ನ ಜೀವ ಕುಕುಕುಕು ಎನ್ನುತ್ತಿದ್ದ. ದಾರಿ ನಿರ್ಜನವಾಗುತ್ತಿದ್ದಂತೆ ನನ್ನೊಳಗಿನ ಆಸೆಗೆ ಹರೆಯ ಬಂದು ಜೋರಾಗಿಯೆ ಮಿಸುಕಾಡತೊಡಗಿತು.

ನಾನು ನಿಧಾನಕ್ಕೆ ರಸ್ತೆ ದಾಟಿ ಆಕಡೆ ನಡೆದೆ. ಅವಳ ಹತ್ತಿರ ಹೋಗಿ ಯಾವ ಊರು, ಯಾಕೆ ಇಲ್ಲಿದ್ದೀಯ, ಅಂತ ಸುಮಾರು ಪ್ರಶ್ನೆಗಳನ್ನು ಕೇಳಿದೆ. ಅವಳು ನನ್ನ ಪ್ರಶ್ನೆಗಳಿಗೆ ಉತ್ತರಿಸುವುದಿರಲಿ, ನನ್ನ ಕಡೆ ತಿರುಗಿ ಕೂಡಾ ನೋಡಲಿಲ್ಲ. ಬಹುಶಃ ಇವಳಿಗೆ ನನ್ನ ಭಾಷೆ ಅರ್ಥವಾಗಿಲ್ಲವೋ, ಅಥವಾ ಉತ್ತರಿಸಲು ಮನಸಿಲ್ಲವೋ ಏನೋ ಎಂದು ಸುಧಾರಿಸಿಕೊಂಡೆ. ಸ್ವಲ್ಪ ಹೊತ್ತು ನನ್ನತ್ತ ನೋಡಿದ ಆಕೆ, ಆ ಹಳೆಯ ಬಿಲ್ಡಿಂಗ್‌ನ ಗೋಡೆಯ ಒಳಗಡೆ ಸರಿದಳು. ಗೋಡೆಯ ಹರಿದ ಪ್ಲಾಸ್ಟಿಕ್ ಚೀಲಗಳ ತಾಟುಗಳನ್ನೆಲ್ಲಾ ಸೇರಿಸಿ ಹೊಲಿದುಕೊಂಡು ಹಳೆಯ ಇಟ್ಟಿಗೆಗಳನ್ನು ಪೇರಿಸಿ ಕಟ್ಟಿಕೊಂಡ ಗೂಡು ಅದಾಗಿತ್ತು. ಹತ್ತಿರಕ್ಕೆ ಹೋಗಿ ಆ ತಾಟುಗಳ ಸಂಧಿನಿಂದ ಇಣುಕಿದೆ. ಒಳಗಡೆ ಹೊಳೆಯುವ ಕಣ್ಣುಗಳೆರಡೂ ಕಂಡು ನನ್ನನ್ನು ಆಹ್ವಾನಿಸಿದಂತಾಯಿತು. ನಾನು ವಿಚಿತ್ರ ತಳಮಳದಲ್ಲಿ, ಅರ್ಧ ಧೈರ್ಯ ಇನ್ನರ್ಧ ಹೆದರಿಕೆಯಿಂದ ಆ ತಾಟಿನೊಳಗೆ ನನ್ನ ದೇಹವನ್ನು ತುರುಕಿದೆ. ■

ವ್ಯಂಗ್ಯವಿರುವುದು ಇಂದಿನ ಸಂದರ್ಭದಲ್ಲಿ...

(19ನೇ ಪುಟದಿಂದ)

ಮತ್ತು ಅವಕಾಶವಾದಿ ಜಾತಿ ರಾಜಕಾರಣದ ಕ್ರಮಗಳಾಗಿವೆ. ಈ ಕ್ರಮಗಳು ದೇಶದಲ್ಲಿ ಹೆಚ್ಚುತ್ತಿರುವ ಅಸಹನೆ ಮತ್ತು ದ್ವೇಷದ ರಾಜಕಾರಣವನ್ನು ಮತ್ತು ಸಂಕುಚಿತ ತಾತ್ವಿಕತೆಯನ್ನು ಗಟ್ಟಿಗೊಳಿಸುತ್ತದೆ.

ಸಂದರ್ಭದ ವ್ಯಂಗ್ಯವೇನೆಂದರೆ ವಿದ್ಯಾರ್ಥಿಗಳನ್ನು ಪಠ್ಯ ಪುಸ್ತಕದ ಆಚೆ ಮತ್ತು ಅವು ನೀಡುತ್ತಿದ್ದ "ಅಧಿಕೃತ ಸತ್ಯ"ಗಳನ್ನು ವಿಮರ್ಶೆ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಮಾನಸಿಕತೆಯನ್ನು ಬುದ್ಧಿಮತ್ತೆಯನ್ನು ತಯಾರು ಮಾಡಬೇಕೆಂಬ ಅತ್ಯಂತ ಪ್ರಗತಿಪರ ದೃಷ್ಟಿಯಿಂದ ಈಗ NCERT ಮಾರ್ಗದರ್ಶನದಂತೆ ಪಠ್ಯಗಳು ತಯಾರಾಗುತ್ತಿವೆ. ಹಾಗೂ ಪಠ್ಯದಲ್ಲಿ ಏಕತಾನತೆಯನ್ನು ಕಡಿಮೆ ಆಡುವ ದೃಷ್ಟಿಯಿಂದ ಮತ್ತು ವಿದ್ಯಾರ್ಥಿಗಳಲ್ಲಿ ಟಿಕಾತ್ಮಕ ಮತ್ತು ವಿಮರ್ಶಾತ್ಮಕ ಸಂವೇದನೆಯನ್ನು ಬೆಳಸುವ ದೃಷ್ಟಿಯಲ್ಲಿ ವ್ಯಂಗ್ಯಚಿತ್ರಗಳನ್ನು ಬಳಸಿಕೊಳ್ಳಲಾಗಿದೆ. ಸದರಿ ವ್ಯಂಗ್ಯಚಿತ್ರವೂ ಆ ದೃಷ್ಟಿಕೋನದ ಭಾಗ. ಪ್ರಾಯಶಃ ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ ಕೊಟ್ಟಿದ್ದನ್ನು ತುಂಬಿಕೊಳ್ಳುವ ಗೋಣಿಚೀಲದಂಥ ವಿದ್ಯಾರ್ಥಿಗಳನ್ನು ಸೃಷ್ಟಿಸುವ ಬದಲಿಗೆ ವಿಮರ್ಶೆ ಮತ್ತು ಸ್ವಂತ ಚಿಂತನೆಯುಳ್ಳ ಪ್ರಬುದ್ಧ ವಿದ್ಯಾರ್ಥಿಗಳನ್ನು ನಾಗರಿಕರನ್ನು ಸೃಷ್ಟಿಸುವ ಉದ್ದೇಶದಿಂದ ವಿದ್ಯಾರ್ಥಿ ಕೇಂದ್ರಿತ ಮತ್ತು ಪ್ರಜಾತಾಂತ್ರಿಕ ಪ್ರಜ್ಞೆ ಪಠ್ಯರಚನೆಯಲ್ಲಿ ಬರುತ್ತಿದೆ. ಇದು ಸ್ವಾಗತಾರ್ಹ. ಹೀಗಾಗಿ ಈ ಪ್ರಕರಣದಲ್ಲಿ ಈ ವ್ಯಂಗ್ಯಚಿತ್ರದ ಜೊತೆಗೆ ಸಂವಿಧಾನ ರಚನೆಯ ಬಹುಮುಖಿ ಓದನ್ನು ಸಾಧ್ಯವಾಗಿಸಬಲ್ಲ ಮತ್ತಷ್ಟು ಚಿತ್ರವೋ. ಪಠ್ಯವೋ, ಹೇಳಿಕೆಗಳೊ ಸೇರ್ಪಡೆಯಾಗಿ ವಿದ್ಯಾರ್ಥಿಗೆ ಸಂವಿಧಾನ ರಚನೆಯ ಬೇರೆ ಮುಖಗಳು ಮತ್ತು ಅದರಲ್ಲಡಗಿದ್ದ ಸಂಕೀರ್ಣತೆಯನ್ನು ಪರಿಚಯಿಸುವಂತಾಗಬೇಕೆ ಹೊರತು ಈ ವ್ಯಂಗ್ಯಚಿತ್ರವನ್ನಾಗಲೀ, ಪಠ್ಯವನ್ನಾಗಲೀ ಹಿಂತೆಗೆದುಕೊಳ್ಳಬಾರದು. ಹಾಗಾದಲ್ಲಿ ಅದು ಯಥಾಸ್ಥಿತಿವಾದದ ವಿಜಯವಾಗುತ್ತದೆ.

ಅದೇರೀತಿ ಅಂಬೇಡ್ಕರ್ ಅವರು ದಮನಿತ ಸಮುದಾಯದ ಐಕಾನ್ ಆದ್ದರಿಂದ ಅವರನ್ನು ಟೀಕಿಸುವುದು ತಪ್ಪು ಎಂಬ ಅಭಿಪ್ರಾಯವೂ ಸಹ ಸ್ವತಃ ಅಂಬೇಡ್ಕರ್ ಅವರೇ ವಿರೋಧಿಸುತ್ತಿದ್ದ ಮೂರ್ತಿಪೂಜೆಗೆ ಇಂಬುಕೊಟ್ಟಂತಾಗುತ್ತದೆ. ಅಂಬೇಡ್ಕರ್ ಆಗಲೀ, ಮಾರ್ಕ್ಸ್ ಆಗಲೀ, ಪ್ರತಿಮೆಗಳಾದ ತಕ್ಷಣ ವರ್ತಮಾನದಲ್ಲಿ ಅವರ ಸಿದ್ಧಾಂತದ ಬಳಕೆ ಸಾಯುತ್ತದೆ. ಆಯಾ ಕಾಲಘಟ್ಟದ ಉತ್ಪನ್ನಗಳಾದ ಮಾರ್ಕ್ಸ್ , ಅಂಬೇಡ್ಕರ್ ಅವರಂಥ ದಾರ್ಶನಿಕರು ಪ್ರತಿಪಾದಿಸಿದ ದರ್ಶನ ಮತ್ತು ವಿಮೋಚನಾ ಮಾರ್ಗಗಳಲ್ಲಿ ಕಾಲಾತೀತ ಸತ್ಯಗಳು ಇದ್ದಂತೆಯೇ ಕಾಲಬಾಹಿರವಾದ ಸಂಗತಿಗಳೂ ಇವೆ. ಅದರಲ್ಲಿನ ಸಾರ್ವತ್ರಿಕತೆಯನ್ನು ಮುಂದುವರೆಸಿ ವರ್ತಮಾನ ಬೇಡುವಂತೆ ಆಯಾ ಸಿದ್ಧಾಂತಗಳನ್ನು ಪುನರುಜ್ಜೀವೀಕರಿಸುವ ಮೂಲಕ ಮಾತ್ರ ಅಂಬೇಡ್ಕರ್ ಆಗಲೀ ಮಾರ್ಕ್ಸ್ ಆಗಲಿ ಮರುಜೀವ ಪಡೆಯುತ್ತಾರೆ. ಅದರ ಬದಲಿಗೆ ಅವರನ್ನು ಪ್ರತಿಮೆಗಳನ್ನಾಗಿಸುವವರು ಮತ್ತು ಅವರ ದರ್ಶನಗಳನ್ನು ಚಲನರಹಿತ ಶಾಸ್ತ್ರಗಳನ್ನಾಗಿಸುವವರು ಈ ದಾರ್ಶನಿಕರನ್ನು ಪ್ರತಿನಿತ್ಯ ಸಾಯಿಸುತ್ತಾರೆ. ಹಾಗೆ ನೋಡಿದರೆ ಇಂದಿನ ದಮನಿತ ಸಮುದಾಯಗಳ ರಾಜಕಾರಣ ಎದುರಿಸುತ್ತಿರುವ ಅತಿ ದೊಡ್ಡ ಸಮಸ್ಯೆ ಈ ಜೀವಂತ ಸಿದ್ಧಾಂತಗಳ ಪ್ರಾಣವನ್ನು ತೆಗೆದು ಸ್ಥಾವರ ಮಾಡುವ ಪ್ರತಿಮಾ ರಾಜಕಾರಣವೇ.....

ಹೀಗಾಗಿ ವ್ಯಂಗ್ಯ ಇರುವುದು ನಮ್ಮ ಇಂದಿನ ಸಂಕೀರ್ಣ ಸಂದರ್ಭದಲ್ಲಿ. ಒಂದು ಸಂಕೀರ್ಣ ಸಂದರ್ಭವನ್ನು ವಿಶ್ಲೇಷಿಸುವಾಗ ಕಪ್ಪು ಬಿಳುಪಿನ ತೀರ್ಮಾನಗಳಿಗೆ ಬರುವುದು ಕಷ್ಟ. ಹೀಗಾಗಿ ಇಂಥ ಸಂದರ್ಭಗಳಲ್ಲಿ ಅಂತಿಮವಾಗಿ ನಿಲುವಿನ ನೆಲೆ ಮತ್ತು ಔಚಿತ್ಯವನ್ನು ಮನುರುಚ್ಚರಿಸುವ ಅಗತ್ಯ ಬೀಳುತ್ತದೆ. ಆದ್ದರಿಂದ ಒಟ್ಟು ಸಾರಾಂಶದಲ್ಲಿ ಹೇಳುವುದಾದರೆ:..

ಸುಭಾಷ್ ಪಾಲ್ಷೀಕರ್ ಮತ್ತು ಯೋಗೇಂದ್ರ ಯಾದವ್ ಮೇಲೆ ಹಾಕಿರುವ ಪ್ರಕರಣವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು. ಇಡೀ ಪಠ್ಯವನ್ನು ಹಿಂತೆಗೆದುಕೊಳ್ಳುವ ಸರ್ಕಾರದ ನಿರ್ಧಾರ ಖಂಡನಾರ್ಹ. ಕೂಡಲೇ ಆ ನಿರ್ಧಾರವನ್ನು ವಾಪಸ್ ಪಡೆಯಬೇಕು.

ವ್ಯಂಗ್ಯಚಿತ್ರಕ್ಕೆ ಬರುತ್ತಿರುವ ಒಟ್ಟಾರೆ ಪ್ರತಿರೋಧವನ್ನು ಅವಕಾಶವಾದಿ ರಾಜಕಾರಣ ಎಂದು ತಿರಸ್ಕರಿಸಲು ಸಾಧ್ಯವಿಲ್ಲ. ಬದಲಾದ ಸಂದರ್ಭ ಮತ್ತು ಎಚ್ಚೆತ್ತ ದಮನಿತ ಪ್ರಜ್ಞೆಗಳು ಇತಿಹಾಸಕ್ಕೆ ಸಂಬಂಧ ಪಟ್ಟಂತ ಎಲ್ಲಾ ಓದನ್ನು ಮರುನಿರ್ವಚನಕ್ಕೆ ಒಳಪಡಿಸುವುದು ಪ್ರಜಾತಂತ್ರಕ್ಕೆ ಪೂರಕವಾದದ್ದೇ. ಹೀಗಾಗಿ ಈ ವಿರೋಧವನ್ನು ಸಹಾನುಭೂತಿಯಿಂದಲೇ ನೋಡಬೇಕು ಮತ್ತು ಆ ವಿರೋಧದ ಧ್ವನಿಗೂ ಅವಕಾಶವಿರುವಂತೆ ನಮ್ಮ ಇತಿಹಾಸದ ಓದನ್ನು ಬಹುಮುಖೀ ನಿರ್ವಚನಕ್ಕೆ ಒಳಪಡಿಸಬೇಕು.

ಹೀಗಾಗಿ ಇಂದಿನ ಸಂದರ್ಭ ಹೆಚ್ಚೆಚ್ಚು ಓದಿನ ಸಾಧ್ಯತೆಗಳನ್ನು ಆಗಮಾಡುವ ಪಠ್ಯ ಸಾಮಗ್ರಿಗಳ ಸೇರ್ಪಡೆಯನ್ನು ಕೇಳುತ್ತವೆಯೇ ವಿನಃ ವಿಮರ್ಶೆ ಮತ್ತು ಟೀಕೆಯನ್ನೇ ತೆಗೆದುಹಾಕುವಂತ ಅವಿಮರ್ಶಾತ್ಮಕ ಓದನ್ನಲ್ಲ. ಅಂಥ ಕ್ರಮ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಜ್ಞಾನವನ್ನು ಹುಟ್ಟಿಸುವ ಬದಲಿಗೆ ಯಂತ್ರಗಳನ್ನು ಸೃಷ್ಟಿಸುತ್ತದೆ.

ನಮ್ಮ ಐಕಾನ್‌ಗಳನ್ನು ಪದೇಪದೇ ಪುನರ್ ವಿಮರ್ಶೆಗೊಳಪಡಿಸುವ ಮತ್ತು ಅವರ ಸಾಧನೆಯ ಶಕ್ತಿಯನ್ನು ಪಡೆದುಕೊಂಡು ಅವರ ಮಿತಿಯನ್ನು ಮೀರಿ ಬೆಳೆಯುವ ರಾಜಕೀಯ ಸಂಸ್ಕೃತಿ ಬೆಳೆಸಬೇಕೆ ವಿನಃ ನಾಯಕರನ್ನು ಪ್ರಶ್ನಾತೀತ ಪ್ರತಿಮೆಗಳನ್ನಾಗಿಸುವುದು ತಪ್ಪು.

ನಮ್ಮ ಪಾರ್ಲಿಮೆಂಟಿನಲ್ಲಿ ದಲಿತರ ಮೇಲೆ ಮಾರಣಾಂತಿಕ ಹಲ್ಲೆಗಳು ದಿನನಿತ್ಯ ನಡೆಯುತ್ತಿರುವಾಗಲೂ ಎಂದು ಅದರ ವಿರುದ್ಧ ಇಷ್ಟು ದೊಡ್ಡ ಧ್ವನಿ ಎದ್ದಿರಲಿಲ್ಲ. ಆದರೆ ಈ ವ್ಯಂಗ್ಯಚಿತ್ರವನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ಧ್ವನಿ ಮಾತ್ರ ಪಾರ್ಲಿಮೆಂಟಿನಲ್ಲಿ ಅತಿ ಗಟ್ಟಿಯಾಗಿ ಕೇಳಿಸಿದ್ದು ಮಾತ್ರವಲ್ಲದೆ ದಲಿತ ವಿರೋಧಿಗಳು. ಅವಕಾಶವಾದಿಗಳು ಮತ್ತು ಪಕ್ಷಾತೀತವಾಗಿ ಎಲ್ಲಾ ರಾಜಕಾರಣಿಗಳು ಒಂದಾಗಿ ದುಯಿಲೆಬ್ಬಿಸಿ ಇಡೀ ಪಠ್ಯ ಪುಸ್ತಕವನ್ನೇ ಹಿಂತೆಗೆದುಕೊಳ್ಳುವಂತೆ ಮಾಡಿಬಿಟ್ಟರು. ಪ್ರಾಯಶಃ ಇದು ನಮ್ಮ ಸಂದರ್ಭದ ಅತಿ ದೊಡ್ಡ ವ್ಯಂಗ್ಯಚಿತ್ರವಲ್ಲವೇ? ■

ಸಂವಾದ



ಲೇಖಕರದಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ–ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ. ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು. ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

–ಸಂಪಾದಕ

ವಿಳಾಸ: ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ,
ಮಾಗಡಿ ಮುಖ್ಯ ರಸ್ತೆ, ವಿಶ್ವನೀಡಂ ಅಂಚೆ,
ಪಿ.ಬಿ. ನಂ.: ೯೧೪೩
ಬೆಂಗಳೂರು – ೫೬೦ ೦೯೧



ಬದುಕಿನ ಒಳಗುಟ್ಟುಗಳು ಹೀಗೂ ಇರುತ್ತವಲ್ಲ!

ಸಮಾಜ ಜಾಗತೀಕರಣದ ಅನುಭವಗಳನ್ನು ನಿಧಾನವಾಗಿ ಒಳಗೆಳೆದುಕೊಂಡು ಸಂವೇದನೆಗಳನ್ನು ಸೃಷ್ಟಿಸುತ್ತಿದೆ. ಅಧಿಕಾರ ಕೇಂದ್ರ ಬೆಂಗಳೂರಿನಿಂದ ದೂರವಿರುವ ಉತ್ತರ ಕರ್ನಾಟಕದ ಹೆಚ್ಚಿನ ಮನಸ್ಸುಗಳು ಈ ವಿಷಯಗಳನ್ನಿಟ್ಟುಕೊಂಡೇ ಸೃಜನಶೀಲ ಸಾಹಿತ್ಯ ರಚಿಸುತ್ತಿದ್ದಾರೆ. ಕನ್ನಡದ ಮಟ್ಟಿಗೆ ಬಹಳಷ್ಟು ಯುವ ಮನಸ್ಸುಗಳು ಈ ಅನುಭವಕ್ಕೆ ಒಡ್ಡಿಕೊಂಡು ಬರೆಯುತ್ತಿದ್ದು ಶ್ರೀನಿವಾಸ್ ಅಂಥವರಲ್ಲೊಬ್ಬರು.

'ಉರಿವ ಒಲೆಯ ಮುಂದೆ' (ಕಾವ್ಯ)
ಲೇ: ಬಿ. ಶ್ರೀನಿವಾಸ್
ಪ್ರ: ಲಡಾಯಿ ಪ್ರಕಾಶನ,
ಬೆಲೆ: 60 ರೂ.

'ಮನುಷ್ಯನಿಗೆ ಬರೆಯುವುದು ಸಹಜ ಕ್ರಿಯೆಯಲ್ಲ. ನಮ್ಮನ್ನು ಸೃಷ್ಟಿಸಿರುವುದು ಓಡುವುದಕ್ಕೆ, ಶಿಕಾರಿ ಮಾಡುವುದಕ್ಕೆ, ಈಜುವುದಕ್ಕೆ, ಪ್ರೀತಿಸುವುದಕ್ಕೆ; ಮೇಜಿನ ಎದುರು ಕಾಗದದ ಚೂರೊಂದನ್ನು ಇಟ್ಟುಕೊಂಡು ಬಗ್ಗಿ ಕುಳಿತು ಇಂಕ್ ಬಾಟಲಿನಲ್ಲಿ ಲೇಖನಿ ಅದ್ದಿ ಅಕ್ಷರ ಮೂಡಿಸುವುದಕ್ಕೆ ಅಲ್ಲ. ಆದರೆ ಬರೆಯುವುದೆಂದರೆ ಸೃಷ್ಟಿಸಿದ ದೇವರ ವಿರುದ್ಧ ಬಂಡೇಳುವ ಕ್ರಿಯೆ. ಅದಕ್ಕೇ ನಾನು ಲೇಖನವನ್ನು ದೇವರ ವಿರುದ್ಧದ ದೆವ್ವಕ್ಕೆ ಹೋಲಿಸುತ್ತೇನೆ. ಆತ ಬಂಡುಕೋರ, ಸ್ವಪ್ರತಿಷ್ಠ ಮತ್ತು ಪತಿತ. ಆತ ಇಟ್ಟ ಬೆಂಕಿ ಜ್ವಾಲೆಯಾಗಿ ಉರಿಯುವವರೆಗೆ ಬರೆಯುವುದರಲ್ಲಿ ಖುಷಿ ಸಿಗುತ್ತದೆ.'

– ಕಾರ್ಲೋಸ್ ಫಿಯೋಂಟೇಸ್

ಅಷ್ಟಕ್ಕೂ ನಾವೇಕೆ ಬರೆಯುತ್ತೇವೆ? ಎಲ್ಲ ಕಾಲದಲ್ಲೂ ಬರಹಗಾರರಿಗೆ ಒಂದಲ್ಲ ಒಂದು ಸಲ ಕಾಡಿರಬಹುದಾದ ಪ್ರಶ್ನೆ ಇದು. ಉತ್ತರ ಅಷ್ಟು ಸರಳವಿಲ್ಲ.

ನಾವು ಬದುಕುತ್ತಿರುವ ಕಾಲದಲ್ಲೇ, ಬದುಕುತ್ತಿರುವ ಸ್ಥಳದಲ್ಲೇ ಇನ್ನೂ ಎಷ್ಟೋ ಜನ ಬದುಕುತ್ತಿದ್ದಾರೆ. ಜೊತೆಗೆ ಬದುಕುತ್ತಿರುವವರ ಭೌತಿಕ ಅಸ್ತಿತ್ವವೊಂದನ್ನು ತಿಳಿದುಕೊಂಡರೆ ಸಾಲದು, ಅವರ ವರ್ತನೆ-ಸಂಕಟ-ಅಭಿಪ್ರಾಯಗಳನ್ನೂ ತಿಳಿದುಕೊಳ್ಳಬೇಕು. ಅವರ ನೋವುಗಳನ್ನೂ ಹಂಚಿಕೊಳ್ಳಬೇಕು. ಹಂಚಿಕೊಳ್ಳುವುದು ಭೌತಿಕವಾಗಿ ಸಾಧ್ಯವಿಲ್ಲವಾದರೆ ಭಾವನಾತ್ಮಕವಾಗಿಯಾದರೂ ಹಂಚಿಕೊಳ್ಳಬೇಕು. ಇಂತಹ ಭಾವನೆಗಳು ಸಂಕೇತಗಳಲ್ಲಿ ವ್ಯಕ್ತವಾಗುತ್ತವೆ. ಭಾಷೆ ಅಂತಹ ಒಂದು ಸಂಕೇತ. ಕಾವ್ಯ-ಕಥೆ ಈ ಸಂಕೇತದೊಳಗಣ ಸಂಕೇತಗಳು. ಮನುಷ್ಯ ವರ್ತನೆಯನ್ನು ಸಮಾಜದ ವರ್ತನೆಯನ್ನಾಗಿ ಅರ್ಥ ಮಾಡಿಕೊಳ್ಳಲು, ಸಮಾಜದ ಬಿಕ್ಕಟ್ಟುಗಳಿಗೆ ಕಾರಣ ಪರಿಹಾರಗಳನ್ನು ಹುಡುಕಲು ಸಂಕೇತಗಳ ಪರಿಶೀಲನೆ ಅಗತ್ಯವಾಗಿದೆ. ಅಷ್ಟೇ ಅಲ್ಲ, ಪ್ರತಿಯೊಬ್ಬರ, ಪ್ರತಿಯೊಂದು ಸಾಮಾಜಿಕ ಚಿಂತನೆಯೂ ಸುತ್ತಮುತ್ತಲ ಸಾಮಾಜಿಕ ಪರಿಸರಕ್ಕೆ ಬೌದ್ಧಿಕ ಪ್ರತಿಕ್ರಿಯೆಯಾಗಿರುತ್ತದೆ. ಕಾಲ ದೇಶ ಇವೆರಡೂ ಪ್ರಭಾವಿಸುವ ಸಾಮಾಜಿಕ ಚಿಂತನೆಯ ಸಂಕೇತ ಭಾಷೆಯಾಗಿ ಬರವಣಿಗೆ ಹೊರಬರಲು ಬರೆಯುವವರು ಮಾಧ್ಯಮಗಳಷ್ಟೇ. ಅದರಿಂದಲೇ 'ಮತ್ತೇನಿದೆ ಹೊಸತು? ಜೋಡಣೆಯ ಹೊರತು?' ಎಂದುಕೊಂಡರೂ ಬರೆಯುವ ಒತ್ತಡ ತಲೆಮಾರುಗಳಲ್ಲಿ ಮತ್ತೆಮತ್ತೆ ಕಾಣಿಸಿಕೊಳ್ಳುತ್ತಲೇ ಹೋಗುತ್ತದೆ.

ಇತ್ತೀಚೆಗೆ ಹಾವೇರಿಯಲ್ಲಿ ಬಿಡುಗಡೆಯಾದ ಪ್ರಗತಿಪರ ಯುವ ಬರಹಗಾರ ಬಿ. ಶ್ರೀನಿವಾಸ್ ಅವರ ಕವಿತಾ ಹಾಗೂ ಕಥಾ ಸಂಕಲನಗಳು ಈ ವಿಚಾರಗಳನ್ನು ಮತ್ತೆ ಮುನ್ನೆಲೆಗೆ ತಂದವು. ಬರೆಯಲೇಬೇಕಾದ ಒತ್ತಡಕ್ಕೊಳಗಾಗಿ ಬರವಣಿಗೆ ಮಾಡುತ್ತಿರುವ, ಬರೆಯಲು ಇರುವ ಕಾರಣಗಳನ್ನು ಸ್ಪಷ್ಟಪಡಿಸಿಕೊಂಡಿರುವ ಲೇಖಕ ಶ್ರೀನಿವಾಸ್. ಲಡಾಯಿ ಪ್ರಕಾಶನ ಹೊರತಂದಿರುವ 'ಕಾಣದಾಯಿತೋ ಊರುಕೇರಿ' ಎಂಬ ಕಥಾ ಸಂಕಲನ, 'ಉರಿವ ಒಲೆಯ ಮುಂದೆ' ಎಂಬ ಕವನ ಸಂಕಲನಗಳು ತಮ್ಮ ಶೀರ್ಷಿಕೆಯೇ ಸೂಚಿಸುವಂತೆ ಒಡಲ ಸಂಕಟವನ್ನು ಸ್ಥಾಯಿಯಾಗಿಟ್ಟುಕೊಂಡು ಶ್ರೀನಿವಾಸ್ ಬರೆದಂಥವು. ರಾಜ್ಯದ ಮತ್ತಿನ್ನೆಲ್ಲೂ ಕಾಣದ ನೀರಾವರಿ, ಅಭಿವೃದ್ಧಿ ಕಾಮಗಾರಿ ಮತ್ತು ಗಣಿ ಹೆಸರಿನ ರಾಜಕೀಯ ಹಾಗೂ ಸಾಮಾಜಿಕ ಪಲ್ಲಟಗಳು ಹೈದ್ರಾಬಾದ್ ಕರ್ನಾಟಕ ಮತ್ತು ಉತ್ತರ ಕರ್ನಾಟಕದಲ್ಲಿ ತೀವ್ರಗತಿಯಲ್ಲಿ ಸಂಭವಿಸುತ್ತಿವೆ. ಆರ್ಥಿಕವಾಗಿ ಅತಿ ಹಿಂದುಳಿದ ಪ್ರದೇಶವಾಗಿದ್ದರೂ ಇಡೀ ರಾಜ್ಯವನ್ನೇ ಕೊಳ್ಳಬಲ್ಲ ತಾಕತ್ತಿನ ಬಿಲಿಯನೇರ್ ರಾಜಕಾರಣಿಗಳನ್ನು ಸೃಷ್ಟಿಸಿದ ನೆಲ ಅದು. ಏಕಾಏಕಿ ಸೃಷ್ಟಿಯಾದ ಸಿರಿವಂತ ಗಣಿಕುಳಗಳ ನಡುವೆಯೇ ದಾರುಣ ಬಡತನ, ಹಸಿವೆ, ಅನಕ್ಷರತೆ, ಆರೋಗ್ಯ

ಸಮಸ್ಯೆಗಳೂ ಜನರ ಜೀವ ಹಿಂಡುವಷ್ಟು ಇವೆ. ಅಂಥಲ್ಲೇ ಜಾಗೃತ ಪ್ರಜ್ಞೆಗಳೂ ಹೆಚ್ಚಿನ ಸಂಖ್ಯೆಯಲ್ಲಿ ರೂಪುಗೊಂಡಿರುವುದು ಅಚ್ಚರಿಯೇನಲ್ಲ. ಅಲ್ಲಿ ಹುಟ್ಟಿ ಬೆಳೆದ ಶ್ರೀನಿವಾಸ್ ತೆರೆದ ಕಣ್ಣುಗಳಿಂದ ಆಗುಹೋಗುಗಳನ್ನು ಗಮನಿಸುತ್ತ ಆರೋಗ್ಯಕರ ದೃಷ್ಟಿಕೋನ ಬೆಳೆಸಿಕೊಂಡಿರುವವರು. ಅವರ ಸೂಕ್ಷ್ಮ ಮನಸ್ಸು ವರ್ತಮಾನದ ಸಂಕಟಗಳಿಂದ ಹುಟ್ಟುವ ಹತಾಶೆ, ಸಿಟ್ಟು, ಕಟಕಿ, ದುಃಖಗಳನ್ನು ಹಾಡಾಗಿಸಿ ಕತೆಯಾಗಿಸಿದೆ. ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಅವರ ಕಾವ್ಯದ ಬಗೆಗೆ ಹಂಚಿಕೊಂಡಿದ್ದು ಇಲ್ಲಿದೆ.

* * *

ಸುತ್ತಮುತ್ತ ಪಲ್ಲಟಗಳೇ ಸಂಭವಿಸುತ್ತಿರುವ ಕಾಲ ಇದು. ಅದಕ್ಕೆ ಜಾಗತೀಕರಣ, ಆಧುನೀಕರಣವೆಂಬ ಮಾಡ್ ಹೆಸರು ಕೊಡಲಾಗಿದೆ. ಎಲ್ಲರ ಬಾಯಿ ಮುಚ್ಚಿಸಲು ಅದು ಅನಿವಾರ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಜಾಗತೀಕರಣದ ಈ ದಿನಗಳಲ್ಲಿ ನೆಲ–ಜಲ–ಸಂಸ್ಕೃತಿಗಳ ಒತ್ತುವರಿಯಷ್ಟೇ ಅಲ್ಲ, ಆಡುವ ಭಾಷೆಯೂ ಸಂಕಷ್ಟವನ್ನೆದುರಿಸುತ್ತಿದೆ. ಜಗತ್ತಿನ ಹಲವಾರು ದೇಶಗಳು ಇಂತಹ ಪಲ್ಲಟವನ್ನೆದುರಿಸುತ್ತಿದ್ದರೂ ಪರಿಣಾಮ ವಿಭಿನ್ನವಾಗಿದೆ. ಭಾರತದಂತಹ ಭಿನ್ನ ಜಾತಿ, ವರ್ಗಗಳಿರುವ ವಿಶಾಲ ಭೌಗೋಳಿಕ ಪ್ರದೇಶದಲ್ಲಿ ಜಾಗತೀಕರಣ ಮತ್ತು ಆಧುನೀಕರಣಕ್ಕೆ ಎರಡು ಬಗೆಯ ಮಿಶ್ರ ಪ್ರತಿಕ್ರಿಯೆಗಳನ್ನು ನೋಡಬಹುದು. ಇಂಗ್ಲಿಷ್ ಬಲ್ಲ ಮಧ್ಯಮ ವರ್ಗ ಜಾಗತೀಕರಣದ ಫಲಾನುಭವಿ ವರ್ಗವಾಗಿದ್ದು ಅದನ್ನೊಂದು ಕ್ರಾಂತಿಕಾರಿ ಬದಲಾವಣೆಯೆಂಬಂತೆ, ಅವಕಾಶಗಳ ಹೆಬ್ಬಾಗಿಲು ತೆರೆಯುವ ದಾರಿಯೆಂಬಂತೆ, ಸರಳರೇಖಾತ್ಮಕ ಮಾದರಿಯ ಅಭಿವೃದ್ಧಿಯನ್ನು ತಮಗೆ ದಯಪಾಲಿಸಿದ ಘಟನೆಯೆಂಬಂತೆ ಸ್ವಾಗತಿಸುತ್ತಿದ್ದರೆ; ಅದರಿಂದ ನಷ್ಟವನ್ನೆದುರಿಸುತ್ತಿರುವ ದುರ್ಬಲ ಸಮುದಾಯಗಳು, ಅಥವಾ ಬದಲಾವಣೆಯನ್ನು ವ್ಯಕ್ತಿಗತ ನೆಲೆಯಲ್ಲದೆ ವಿಶಾಲ ಸಮುದಾಯದ ಅರ್ಥದಲ್ಲಿ ನೋಡುತ್ತಿರುವ ಮನಸ್ಸುಗಳು ಬಡತನ–ಸಿರಿತನಗಳ ನಡುವಿನ ಅಂತರ ಮತ್ತು ತಾರತಮ್ಯ ಹೆಚ್ಚುತ್ತಿದೆಯೆಂದು ದೂರುತ್ತಿದ್ದಾರೆ.

ಜಾಗತೀಕರಣ ಪ್ರಕ್ರಿಯೆ ಬದುಕಿಗೆ ನಾಗಾಲೋಟವನ್ನು ತಂದಿತ್ತಿದೆ. ಯುದ್ಧ, ಸಾವುನೋವು, ಬಡತನ ಅಂದೂ ಇದ್ದವು, ಇಂದೂ ಇವೆ. ಆದರೆ ಈಗ ಎಲ್ಲವೂ ವೇಗವಾಗಿ ಸಂಭವಿಸುತ್ತಿವೆ. ಬಡತನ ಒಂದು ಸಾಪೇಕ್ಷ ಸ್ಥಿತಿಯಾಗಿ ಹೊಟ್ಟೆಬಟ್ಟೆಗಿದ್ದೂ ಆಧುನಿಕ ಐಷಾರಾಮಗಳಿಲ್ಲದೆ ಹೋದಲ್ಲಿ ತನ್ನನ್ನು ಬಡವನೆಂದು ಪರಿಗಣಿಸಿಕೊಳ್ಳುವುದು ಕಂಡುಬರುತ್ತಿದೆ. ಈ ಧೋರಣೆ ಬಡವನಲ್ಲಿ ದೈನ್ಯತೆಯನ್ನು ತುಂಬಿದೆ. ಸಾಹಿತ್ಯವು ಭಿನ್ನ ಸಮುದಾಯಗಳ ಮೇಲೆ ಜಾಗತೀಕರಣದಿಂದ ಆದ ಭಿನ್ನ ಪರಿಣಾಮ, ಅನುಭವ ಮತ್ತು ಪ್ರಭಾವವನ್ನು ಗುರುತಿಸುತ್ತ ದನಿಯಿರದ ಸಮುದಾಯಗಳ ಸಂಕಟಗಳಿಗೆ ದನಿಯಾಗಹೊರಟಿದೆ. ಸಮಾಜ ಜಾಗತೀಕರಣದ ಅನುಭವಗಳನ್ನು ನಿಧಾನವಾಗಿ ಒಳಗೆಳೆದುಕೊಂಡು ಸಂವೇದನೆಗಳನ್ನು ಸೃಷ್ಟಿಸುತ್ತಿದೆ. ಅಧಿಕಾರ ಕೇಂದ್ರ ಬೆಂಗಳೂರಿನಿಂದ ದೂರವಿರುವ ಉತ್ತರ ಕರ್ನಾಟಕದ ಹೆಚ್ಚಿನ ಮನಸ್ಸುಗಳು ಈ ವಿಷಯಗಳನ್ನಿಟ್ಟುಕೊಂಡೇ ಸೃಜನಶೀಲ ಸಾಹಿತ್ಯ ರಚಿಸುತ್ತಿದ್ದಾರೆ. ಕನ್ನಡದ ಮಟ್ಟಿಗೆ ಬಹಳಷ್ಟು ಯುವ ಮನಸ್ಸುಗಳು ಈ ಅನುಭವಕ್ಕೆ ಒಡ್ಡಿಕೊಂಡು ಬರೆಯುತ್ತಿದ್ದು ಶ್ರೀನಿವಾಸ್ ಅಂಥವರಲ್ಲೊಬ್ಬರು.

ಶ್ರೀನಿವಾಸ್ ಕಾವ್ಯದ ಕುರಿತು ಮಾತನಾಡಲು ಇಷ್ಟೆಲ್ಲ ಹಿನ್ನೆಲೆಯ ನೆಲೆಗಟ್ಟು ಅವಶ್ಯ ಎನಿಸುತ್ತದೆ. ಏಕೆಂದರೆ ತಮ್ಮ ನಲವತ್ತಾರೂ ಕವಿತೆಗಳಲ್ಲಿ ಅವರು ವಸ್ತುವಾಗಿಸಿಕೊಂಡಿರುವುದು ಸುತ್ತಲ ಬಿಕ್ಕಟ್ಟುಗಳು ತಂದೊಡ್ಡಿದ ಸಂಕಟಗಳನ್ನೇ. ಅವೆಲ್ಲವೂ ಒಂದೇ ಭಾವವನ್ನು ಪ್ರತಿನಿಧಿಸುತ್ತಿರುವ ಕವಿತಾಗುಚ್ಛದ ಬೇರೆಬೇರೆ ಪದ್ಯಗಳು ಅಷ್ಟೇ. ಮೂಲತಃ ಸಂಡೂರಿನ ಬಳಿಯ ಹಳ್ಳಿಯವರಾದ ಶ್ರೀನಿವಾಸ್ ನ್ಯೂಕ್ಲಿಯರ್ ಫಿಸಿಕ್ಸ್ ಎಂಎಸ್ಸಿ ಮುಗಿಸಿ, ಹಲವು ಜನಪರ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಈಗ ಹಾವೇರಿ ಸೆಷನ್ಸ್ ಕೋರ್ಟಿನಲ್ಲಿ ಶಿರಸ್ತೇದಾರರಾಗಿದ್ದಾರೆ. ವೈಯಕ್ತಿಕವಾಗಿ ನೆಮ್ಮದಿಗೊಂಡುಬಿಡಬಹುದಾದ ಮಧ್ಯಮವರ್ಗದ ಜೀವನ. ಆದರೆ ಹಾವೇರಿಯ ರೈತ ಗೋಲಿಬಾರ್, ಮುಳುಗಡೆ–ವಲಸೆಗಳು ತಂದಿಟ್ಟ ಸ್ಥಳಾಂತರ, ಅಭಿವೃದ್ಧಿ ಕಾರ್ಯಗಳಿಗಾಗಿ ನೆಲ ಕಳೆದುಕೊಂಡ ಜನರು, ಗೊಬ್ಬರ–ಬೀಜ–ಮಳೆಯ ಅಭಾವದ ವಿಷವರ್ತುಲಕ್ಕೆ ಸಿಕ್ಕು ಹುತಾತ್ಮರಾಗುತ್ತಿರುವ ರೈತರು, ಹಸಿವು – ಈ ಎಲ್ಲದರಿಂದ ತಳಮಳಗೊಂಡಿರುವ ಕವಿ ನೇರ್ಪಟ್ಟ ತನ್ನ ಬದುಕಿನಿಂದ ನೆಮ್ಮದಿಗೊಳ್ಳದೆ ಬರವಣಿಗೆ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

ಆವೇಶಗಳಿಲ್ಲದೆ, ಘೋಷವಾಕ್ಯಗಳಿಲ್ಲದೆ, ಕಣ್ಣೆದುರು ಅನಾವರಣಗೊಂಡ ಬದುಕಿನ ಬಗೆಗೆ ಹೇಳುವ ಶ್ರೀನಿವಾಸರ ಕಾವ್ಯದ ಶಕ್ತಿ ವಸ್ತುಸ್ಥಿತಿಯ, ಸತ್ಯದ ಸರಳ ಗ್ರಹಿಕೆ ಮತ್ತು ನಿರೂಪಣೆಯಲ್ಲಿದೆ. ಆ ಮನಸ್ಸು ಬಂಡೆದ್ದಿದೆ, ಆದರೂ ಘೋಷಣೆಗಳ ಬೆನ್ನತ್ತಿ ಪರಿಹಾರ ಹುಡುಕಹೊರಡುವುದಿಲ್ಲ. ಗಾಯಗೊಂಡು ದುಗುಡಗೊಂಡ ಮನಸ್ಸು ಮುಂದೆಂದೋ ಬರಲಿರುವ ಚೈತ್ರಕ್ಕೆ, ಸುಖದ ದಿನಗಳಿಗೆ ಒಳಗೊಳಗೇ ಹಾರೈಸುತ್ತಿದ್ದರೂ ಹಾಗೆ ಹೇಳಲಾರದಷ್ಟು ಕಳವಳಗೊಂಡು ಬರೆದ ಕವಿತೆಗಳು ಅವು. ಹೀಗಾಗಿಯೇ ಕೆಲವೊಮ್ಮೆ ಸ್ವಗತ ಲಹರಿಯಂತೆ, ಸೂಕ್ಷ್ಮ ವ್ಯಕ್ತಿಯೊಬ್ಬನ ಗೊಣಗಾಟದಂತೆ ಕೇಳಿಸಿ ಏಕತಾನತೆ ತಂದಿರುವುದೂ ಇದೆ. ಅವರ ಕವನಗಳ ಭಾಷೆ ಎಲ್ಲವನ್ನೂ ದೂರದಲ್ಲೆಲ್ಲೋ ನಿಂತು ಗಮನಿಸಿ ಹೇಳುವ ಹಕ್ಕಿಯ ಭಾಷೆಯಲ್ಲ, ನೆಲದೊಳಗೂ ಹೊರಗೂ ತೆವಳುವ ಹುಳು ಕರಗುತ್ತಿರುವ ಭೂಮಿ, ಬೆಟ್ಟ, ಬಂಡೆಗಳ ಕುರಿತು ಸಂಕಟಗೊಳ್ಳುವ ಒಡಲ ಭಾಷೆ ಅದು. ತನ್ನ ಆನಂದವನ್ನು ಹಂಚಿಕೊಳ್ಳಬಯಸುವ ಸಂಭ್ರಮದ ಕಾವ್ಯ ಇದಲ್ಲ. ಬದಲಾಗಿ ತನಗೆ, ತನ್ನ ಸುತ್ತಮುತ್ತಲಿನವರಿಗೆ ಆಗುವುದನ್ನು ಗ್ರಹಿಸಿ ಎಚ್ಚರಿಸುವಂಥದ್ದು.

'ಮಾತಾಡು ಇಂಡಿಯಾ ಮಾತಾಡು' ಎಂಬ ಕವಿತೆಯನ್ನೇ ನೋಡಬಹುದು. ಭಾರತ ಪ್ರಕಾಶಿಸುತ್ತಿದೆ ಎಂಬ ಜಾಹೀರಾತು ಒಂದು ಕಡೆಯಾದರೆ, ಪ್ರಕಾಶಿಸುತ್ತಿರುವ ಭಾರತದ ಕೆಳಗೇ ಇರುವ ಜೋಪಡಿಗಳ ಕಡೆಗೆ ಕವಿ ಗಮನ ಸೆಳೆಯುತ್ತಾರೆ.

'ಆಕಾಶಕ್ಕೆ ಜೋಪಡಿಗಳ ಜಾಣ ಮರೆವಿದೆ..
ಭೂಮಿ ಆಗಸ ಕೂಡಿ ನಿಂತ ಕಟ್ಟಡಗಳಿಗೆ
ಜೋಪಡಿಗಳ ಮರೆವಿದೆ
ಮಾತಾಡು ಇಂಡಿಯಾ ಮಾತಾಡು
ಜೋಪಡಿಗಳ ಖಾಲಿ ಡಬರಿಗಳೊಂದಿಗೆ..'

ಎಂದು ಮಾತನಾಡಿ ಆಡಿಯೇ ಎಲ್ಲ ಮುಗಿಸುವ ಉಮೇದಿಗೆ ಸವಾಲು ಹಾಕುತ್ತಾರೆ.

ನೋವಿನ ಕಡಲು, ಅನುದಿನ ಮೂಡುವ ಚುಕ್ಕಿಚಂದ್ರಮ, ಜಗವ ಬೆಳಗುವ ಸೂರ್ಯ ಈ ಪದಪುಂಜಗಳನ್ನು ಸಿದ್ಧಮಾದರಿಯಲ್ಲಿ ಬಳಸಿದ ಕವನಗಳನ್ನು ನಾವು ಓದಿದ್ದೇವೆ. ಶ್ರೀನಿವಾಸ್ ಈ ಮಾದರಿಗಳನ್ನೆಲ್ಲ ತಿರುವು ಮುರುವು ಮಾಡಿ ಇಡಿಯ ಕಡಲ ನೀರನ್ನೇ ತಂದರೂ ನನ್ನವರ ಒಡಲ ನೋವಿಗೆ ಕಣ್ಣೀರಾಗಲು ಸಾಧ್ಯವಾಗದು; ರಾತ್ರಿ ಕಪ್ಪನ್ನು ಮೈಗೆ ಮೆತ್ತಿಕೊಂಡು ಬುಡ್ಡಿ ದೀಪ ಹಚ್ಚಿಟ್ಟು ಜಗವ ಬೆಳಗುವ ನನ್ನವರಿಗೆ ಸೂರ್ಯ ಸಮ ಆಗುವುದಾದರೂ ಹೇಗೆ ಎಂದು ತನ್ನವರ ನೋವು ಸಂಕಟಗಳ ಪರಿಮಾಣ ಬಣ್ಣಿಸಲು ಪ್ರಕೃತಿಯ ಮಾಪನ ಬಳಸುತ್ತಾರೆ.

ಪರೀಕ್ಷೆ ಮುಗಿಯುವವರೆಗೆ ಕೋಣೆಯ ಹೊರಗೆ ಕಾಯುತ್ತಾ ನಿಂತು, ಹೊರಬಂದ ಕೂಡಲೇ ಹೇಗಾಯ್ತು ಮಗಾ ಎಂದು ಕೇಳುತ್ತಿದ್ದ ಅಪ್ಪನಿಗೆ ಶ್ರೀನಿವಾಸ್ ಪುಸ್ತಕ ಅರ್ಪಿಸಿದ್ದಾರೆ. ಅಪ್ಪನ ಕುರಿತು ಒಂದು ಕವನವೇ ಇದೆ. ಬಹಳ ಕಡೆ ಅಪ್ಪನ ಚಿತ್ರ ನುಡಿರೂಪ ತಾಳಿದೆ. ಮಳೆಯಾಧಾರಿತ ಬೇಸಾಯ ನೆಚ್ಚಿ, ಭೂಮಾಲೀಕರ ಹಂಗಿನಲ್ಲಿ ಬದುಕಿದ ಅವರಪ್ಪನನ್ನು ಎದೆಗೆ ಹತ್ತಿರವಾದ ಮಾತುಗಳಲ್ಲಿ 'ಕಳ್ಳನಲ್ಲ–ಸುಳ್ಳನಲ್ಲ–ನಮ್ಮಪ್ಪ/ಹೆಗಲ ಮೇಲಿಂದ ಜಗದ ಜಾತ್ರೆಗಳ ತೋರಿದವನು' ಎಂದು ಒಳಗಿಟ್ಟುಕೊಂಡಿದ್ದಾರೆ. ಅಪ್ಪನ ಬೀಡಿ ಹೊಗೆಯಲ್ಲಿ ಕನಸುಗಳು ತೇಲಿ ಹೋಗಿದ್ದು ನೆನಪಿಸಿಕೊಂಡಿರುವ ಕವಿಗೆ ಈಗ ಅಪ್ಪ ನೆನಪಾಗುವುದು, 'ಮೇಷ್ಟ್ರೇ ನಮ್ಮುಡ್ಗ ಹೆಂಗ್ ಓದ್ತಾನ್ರೀ?/ಎಂದು ಕೇಳುತ್ತಿದ್ದ ಅಪ್ಪನ ಚಿತ್ರ/ಮೂಡುತಿದೆ ನನ್ನೆದುರಿಗೆ ಆಫೀಸಿನ ಫೈಲುಗಳಲ್ಲಿ'. ಮಳೆ–ರಟ್ಟೆ ಕಸುವನ್ನೇ ನೆಚ್ಚಿ ಕುಳಿತ ಅಪ್ಪ ಅವ್ವರ ರೈತ ಕುಟುಂಬದ ಕಷ್ಟಗಳನ್ನು 'ಅಕ್ಕಡಿ ಕಾಳಿನ ಗಂಟು' ಹೃದಯಂಗಮವಾಗಿ ಚಿತ್ರಿಸಿದೆ. ಎಲ್ಲ ರೈತ ಕುಟುಂಬಗಳ ಕತೆಯಾಗಿರಬಹುದಾದ ಅದು ಸಂಕಲನದ ಸಾರ್ಥಕ ಪದ್ಯಗಳಲ್ಲೊಂದು. ಅದರಲ್ಲಿ ಪೋಷಿತವಾದ ಅಪ್ಪ, ಅವ್ವರ ಪಾತ್ರಗಳು ಕುತೂಹಲಕಾರಿಯಾಗಿವೆ.

ಹಸಿಮೆಣಸಿನಕಾಯಿ–ಬೆಳ್ಳುಳ್ಳಿ–ಉಪ್ಪಿಗೆ
ಎದುರಾಗಿ ಗುಮ್ಮನೆ ಕುಂತ ರಾಗಿಮುದ್ದೆ
ಅವ್ವನೆದುರಿಗೆ ಅಪ್ಪ ಕುಂತಂತೆ'

ಎಂದು ಅವರಿಬ್ಬರ ಪರಸ್ಪರಾವಲಂಬನೆ, ಗುಣಸ್ವಭಾವಗಳ ಬಗೆಗೆ ಬರೆಯುತ್ತಾರೆ.

ಅಲ್ಲಿಲ್ಲಿ ಹೀಗೆ ಬರುವ ಅಪ್ಪ ಅವ್ವರ ಚಿತ್ರಗಳನ್ನು ಬಿಟ್ಟರೆ ಅವರ ಕಾವ್ಯದಲ್ಲಿ ವೈಯಕ್ತಿಕ ವಿವರಗಳು ಕಡಿಮೆ. ವ್ಯಕ್ತವಾಗುವ ನೋವೂ ವೈಯಕ್ತಿಕವಲ್ಲ, ಸಮುದಾಯದ ನೋವು ಅದು. ಮುಂಚಿನಂತಿಲ್ಲದ ಹಳ್ಳಿ, ಜನ, ಸುತ್ತಲ ಪರಿಸರಗಳ ಕುರಿತು, ಸುತ್ತಲ ಬದುಕಿನ ಪಲ್ಲಟವನ್ನು ಬಹುಸೂಕ್ಷ್ಮವಾಗಿ ಗುರುತಿಸಿರುವ ಶ್ರೀನಿವಾಸರು ನೋವಿನ ಮಟ್ಟಿಗೆ ಜಾಗತೀಕರಣಗೊಂಡ ಕವಿ. ಅವರ ಕೆಲವು ಸಾಲುಗಳು ಗಾಜಾ ಪಟ್ಟಿಯಿರಲಿ, ಸಂಡೂರಿನ ಕರಗುವ ಬೆಟ್ಟವಿರಲಿ, ಪಾಕ್ ಸೋದರಿಯ ಮನೆಯಲ್ಲಿರಲಿ – ಮಾನವ ಸಮುದಾಯದ ನೋವನ್ನು ವ್ಯಕ್ತಿಯೊಬ್ಬ ಆವಾಹಿಸಿಕೊಂಡಂತೆ ಭಾಸ ಹುಟ್ಟಿಸುತ್ತವೆ.

'ನಮಗ ಇಮಾನ ಬ್ಯಾಡ್ರಿ
ತಿನ್ನಾಕ ಏನಾರ ಉಳಿದಿದ್ರ ಕೊಡ್ರಿ
ಮಕ್ಕಳು ಹಸ್ವಾವ..'
(ಪೇಪರಿನಾಗ ಬಂದ ಸುದ್ದಿ)

ಎಸೆವ ರೊಟ್ಟಿಗಳಲಿ
ಯಾರ ಹೆಸರಿದೆಯೋ
ಬಲ್ಲವರಾರು?
ಬಂದೂಕಿನ ಗುಂಡುಗಳ ಮೇಲಂತೂ
ನಮ್ಮ ಹೆಸರುಗಳಿವೆ.
ತಪ್ಪಿಸಿಕೊಂಡು ಓಡಬೇಕಿದೆ
ರೊಟ್ಟಿ ಚೂರುಗಳಿಗಾಗಿ..
(ಬಂದೂಕಿನ ಗುಂಡುಗಳ ಮೇಲೆ ನಮ್ಮ ಹೆಸರಿದೆ)

ಬದುಕು
ಕೃಷ್ಣೆಯಲ್ಲಿ ತುಂಗೆಯಲ್ಲಿ
ಭದ್ರೆಯಲ್ಲಿ ಭೀಮೆಯಲ್ಲಿ
ಹೀಗೆ ಮುಳುಗಿ ಹೋಗುವುದೆಂದು
ಗೊತ್ತಿದ್ದಿದ್ದರೆ
ಅವ್ವ ಜಲ್ಲಿಕಲ್ಲು ಹೊರುತ್ತಿರಲಿಲ್ಲ
ಅಪ್ಪ ಸೈಜುಕಲ್ಲು ಹೊಡೆಯುತ್ತಿರಲಿಲ್ಲ...
ಬದಲಾಗಿ
ಕಾಲ ಕಾಲಕ್ಕೆ
ನನ್ನವರು ಹರಿಸಿದ ಬೆವರಿಗೆ
ಕಟ್ಟೆ ಕಟ್ಟಿ ಹಸಿರು ಬೆಳೆಯುತ್ತಿದ್ದರು.
(ಮುಳುಗಡೆಯ ಚಿತ್ರಗಳು)

ಬೇರೆ ಬೇರೆ ಕವಿತೆಗಳಿಂದಾಯ್ದ ಈ ಸಾಲುಗಳನ್ನು ಓದಿ ಆಹಾ! ಚೆನ್ನಾಗಿದೆ ಎಂದರೆ ಅದು ಕ್ರೌರ್ಯ. ಏಕೆಂದರೆ ಅವು ಬಣ್ಣಿಸುವುದು ವಾಸ್ತವ ಬದುಕಿನ ದಾರುಣ ಕಷ್ಟಗಳನ್ನು.

ಹಳ್ಳಿ ಊರುಗಳಲ್ಲಿ ಕಲಿತವರಿಗೆ ನೆಲ ಕಾಣುವುದಿಲ್ಲ ಎಂಬ ಮಾತು ಚಾಲ್ತಿಯಲ್ಲಿದೆ. ಆದರೆ ಶ್ರೀನಿವಾಸ್ ತಾವು ಕಲಿತಿದ್ದ ಮರೆತು 'ನಾನು ಸಾಲಿ ಕಲಿತಿಲ್ಲ' ಎನ್ನುತ್ತಾ, ಅಪ್ಪನ ಎದೆ ಗೂಡೊಳಗಿನ ಮೂಳೆಗಳನ್ನು; ಅವ್ವ ಹಾಕಿದ ರೊಟ್ಟಿಯ ಚೂರುಗಳನ್ನು, ನಮ್ಮ ಕಾಡುವ ನಕ್ಷತ್ರಿಕರನ್ನು ಎಣಿಸಿ ತೋರಿಸಬಲ್ಲೆ ಎಂದು ಲೆಕ್ಕ ಒಪ್ಪಿಸುತ್ತಾರೆ. ಶರವೇಗದಲ್ಲಿ ಬೆಳೆಯುತ್ತಿರುವ ಬೆಂಗಳೂರೆಂಬ ಮಾಯಾ ನಗರಿ ಎಲ್ಲೆಲ್ಲಿಯದೋ ಜನರನ್ನು ಕನಸುಗಳೊಂದಿಗೆ ಸ್ವಾಗತಿಸುತ್ತಿದೆ. ಬೆಂಗಳೂರು ಹಳ್ಳಿಗಳನ್ನು ಖಾಲಿಗೊಳಿಸಿ ಅಲ್ಲಿಯ ಬದುಕನ್ನು ಪಲ್ಲಟಗೊಳಿಸಿದೆ. ದುಡಿಯುವ ಕೈಗಳನ್ನು ನಗರಗಳಿಗೆ ಬಿಟ್ಟುಕೊಡುತ್ತಿರುವ ಹಳ್ಳಿಗಳು ಈಗ ವೃದ್ಧಾಶ್ರಮಗಳಾಗುತ್ತಿರುವ ಚಿತ್ರ ನಮ್ಮ ಮುಂದಿದೆ. ಈ ವಲಸೆ ಊರುಕೇರಿ ತೊರೆದು ನಗರ ಸೇರಿದವರಿಗೆ ನೀಡಿದ್ದೇನು ಎನ್ನುವುದು ಪ್ರಶ್ನಾರ್ಹವೇ ಆಗಿದೆ. ಆದರೂ,

ನೆಲ ಹಗಲು ರಾತ್ರಿಗಳನ್ನು ಕದ್ದವರು
ಊರ ಗರ್ಭದೊಳಿದ್ದರೂ
ಉಳಿಸಬೇಕಿದೆ ಕೆಂಪೇಗೌಡನ ಗತ್ತಿನ ಊರನ್ನು
ಯಾಕೆಂದರೆ ಅಲ್ಲಿ ನನ್ನವರಿದ್ದಾರೆ
ಗೂಡು ಬಿಟ್ಟುಬಂದ ನನ್ನವರಿದ್ದಾರೆ...

ಎಂದು ಆರ್ದ್ರವಾಗುತ್ತಾರೆ ಕವಿ. ಎಲ್ಲದಕ್ಕೂ ತೆತ್ತ ಬೆಲೆ ನೆನಪಿಸಿಕೊಳ್ಳದೆ ಸಂಭ್ರಮಿಸುವ ಜಾಯಮಾನ ಅವರದಲ್ಲ. ಈ ಗುಣವೇ ದೇವರ ಜನವಿರೋಧಿ ಮುಖವನ್ನು ಗೇಲಿ ಮಾಡುವ, ದೇವರನ್ನೂ ಎಳೆತಂದು ಪ್ರಶ್ನಿಸುವ ಕವನಗಳಿಗೆ ಕಾರಣವಾಗಿದೆ. ಸಂಡೂರಿನ ಗಂಡಿ ನರಸಿಂಹ, ಕುಮಾರ, ಉಡುಪಿಯ ಕೃಷ್ಣ, ತಿರುಪತಿಯ ತಿಮ್ಮಪ್ಪ, ಗೋಕರ್ಣದ ಮಹಾಬಲೇಶ್ವರರ ಬಳಿ ವಾದ ಹೂಡುತ್ತಾ, ಕೊನೆಗೆ 'ಕಣ್ಣು–ಮೂಗು–ಕಿವಿ–ಬಾಯಿಗೆಲ್ಲ ರೊಕ್ಕ ತುಂಬಿ/ ಮಾತು ಹೋಗಿ ಮೌನವಾಗಿ/ ದೇವಾನುದೇವತೆಗಳೆಲ್ಲ ಕಲ್ಲಾದವೋ/ ಕಾಣದಾಯಿತೋ ಊರುಕೇರಿ' ಎಂದು ಪರಿತಪಿಸುತ್ತಾರೆ. ಜನಾರ್ದನ ರೆಡ್ಡಿಯ ಗಣಿ ಲೂಟಿ ದುಡ್ಡನ್ನು ಕಿರೀಟವಾಗಿಸಿ ಕುಳಿತ ತಿಮ್ಮಪ್ಪನಿಗೆ, 'ಅನ್ನದ ಡಬರಿಗಳ ತುಂಬುವ ಅದೆಷ್ಟು/ ಹೊಲ–ಗದ್ದೆಗಳ ಹೊಟ್ಟೆ ಬಗೆದರೋ/ ಮುತ್ತು ರತ್ನವಿದೆಯೆಂದು/ ಅವ್ವನ ಹೊಟ್ಟೆಯನ್ನೇ/ ಗಬಕ್ಕನೆ ಹಿಡಿದು ಬಗೆದು ಹಾಕಿದ ಟೋಪಿ/ ಬರಿ ನಲವತ್ತೈದು ಕೋಟಿಯದೆ?' ಎಂದು ವ್ಯಂಗ್ಯವಾಡುತ್ತಾ, 'ಸಾಕು ಮಾಡಿನ್ನು ಶ್ರೀನಿವಾಸ/ ಕಳ್ಳಕಾಕರ ಸಹವಾಸ' ಎಂದು ಕೊನೆಗೊಳಿಸುತ್ತಾರೆ.

ತನ್ನ ಶತ್ರು ಯಾರೆಂದೇ ತಿಳಿಯದೇ, ಶತ್ರುವಿನ ಉದ್ದಗಲ ಆಳ ಅರಿಯದೇ, ಪರಿಣಾಮಗಳನ್ನಷ್ಟೇ ಎದುರಿಸುತ್ತಿರುವ ಸಮುದಾಯ; ನಾಕಾಣೆ–ಎಂಟಾಣೆ–ರೂಪಾಯಿಗೆ ಚಪ್ಪಲಿ–ಬೀಗ–ವಾಚು ರಿಪೇರಿ ಮಾಡುತ್ತಿದ್ದ, ಈಗ ಥಳಥಳಿಸುವ ಮಾಲುಗಳೆದುರು ಕೆಲಸ ಕಳೆದುಕೊಂಡು ಕುಳಿತ ಜನರ ನೋಡುತ್ತಾ 'ನಮ್ಮವರು ಎಲ್ಲಿ ಹೋದರು?' ಎಂದು ಪ್ರಶ್ನಿಸುತ್ತದೆ ಒಂದು ಕವಿತೆ. ಇಲ್ಲಿ ನಮ್ಮವರೆಂದರೆ ಇಂಗ್ಲಿಷ್ ಕಲಿತು ವಿಧಾನಸೌಧಕ್ಕೆ ಹೋದವರು, ಗೂಟದ ಕಾರಲ್ಲಿ ಕುಳಿತು ಕಣ್ಮರೆಯಾದವರು. ಅಪ್ಪನ ಮೋಟು ಬೀಡಿಯ ಹೊಗೆಯಲ್ಲಿ ಕನಸು ತುಂಬಿದ ಅವರು ಎಲ್ಲಿ ಹೋದರು ಎಂದು ಪ್ರಶ್ನಿಸುವ ಕವಿತೆ ಸಂಘಟನೆಗಳೂ, ಅದರ ಮುಖಂಡರೂ ಶಕ್ತಿ ರಾಜಕಾರಣದ ಕಾರಿಡಾರುಗಳಲ್ಲಿ ಕಳೆದುಹೋದ ಬಗೆಗೆ ಆಕ್ರೋಶ ವ್ಯಕ್ತಪಡಿಸುತ್ತದೆ.

ಹೀಗೆ ಜಗದಗಲ ಮಿಗೆಯಗಲ ಕಾಣುವ ಸಂಕಟಗಳನ್ನೆಲ್ಲ ಸೆರಗಲ್ಲಿ ಕಟ್ಟಿಕೊಂಡು ಕೆಂಡ ಮುಚ್ಚಿಕೊಂಡವರಂತೆ ತಹತಹಿಸುವ ಶ್ರೀನಿವಾಸರ ಕವಿತೆ, ವಸ್ತು, ಶೈಲಿ ಎಲ್ಲವೂ ತಾಜಾ ಆಗಿವೆ. ಆಗುಹೋಗುಗಳಿಗೆ ತಕ್ಷಣ ತುಡಿಯುವ ಸೂಕ್ಷ್ಮ ಮನಸಿನ ಕುರುಹು ಪ್ರತಿ ಸಾಲಿನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ಸಮಕಾಲೀನ ಕಥಾ ಸಾಹಿತ್ಯ ಸಂವಾದಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿರುವ ಖ್ಯಾತ ಸಾಹಿತಿ ಡಾ॥ ಮೊಗಳ್ಳಿ ಗಣೇಶ್

* * *

ಇಷ್ಟೆಲ್ಲ ಆದಮೇಲೆ ಶ್ರೀನಿವಾಸ್ ಕವನ ಸಂಕಲನವನ್ನು ನೆಪವಾಗಿಟ್ಟುಕೊಂಡು ಒಂದೆರಡು ವಿಚಾರಗಳ ಬಗೆಗೆ ಚರ್ಚಿಸಬೇಕು. ಇಂದಿನ ಕಾವ್ಯ ಕಟ್ಟುವ ಮನಸ್ಸುಗಳ ಕುರಿತ ತಕರಾರು ಇದಲ್ಲವಾದರೂ, ಈ ಬರಹದ 'ಮತ್ತೊಂದು' ಉದ್ದೇಶ ಅದೇ.

ಕಲೆಗೆ ಭಾಷೆಯ ಹಂಗಿಲ್ಲ. ಆದರೆ ಸಾಹಿತ್ಯಕ್ಕಿದೆ. ಬರವಣಿಗೆಯಲ್ಲಿ ನಮ್ಮ ಮಟ್ಟ ಶಬ್ದಕೋಶದಲ್ಲಿರುವ ಎಲ್ಲ ಪದಗಳನ್ನು ಬಳಸಿದರೆ ಭಾಷೆ ಉಳಿದೀತು. ಕೆಲವು ನೂರು ಪದಗಳ 'ಪಾನ್ ಅಂಗಡಿ' ಇಟ್ಟುಕೊಂಡ ವ್ಯಾಪಾರಿಗಳು ನಾವು. (ಈ ಫ್ರೇಸ್ ಬಳಸಿದವರು ಪ್ರಕಾಶಕ ಲಡಾಯಿ ಬಸೂ.) ಬಳಿ ಇರುವುದನ್ನೇ ಪ್ರಮಾಣದಲ್ಲಿ ಕೊಂಚ ಹೆಚ್ಚುಕಮ್ಮಿ ಮಾಡಿ ಸಿಹಿ, ಗರಂ, ಖಾರ ಎಲ್ಲವನ್ನೂ ಅದರಲ್ಲೇ ಕಟ್ಟಿಕೊಡಲೆತ್ನಿಸುತ್ತೇವೆ. ಆದರೆ ಭಾಷೆಯ ಕೋಶದಲ್ಲಾದರೋ ಮುಟ್ಟಿಸಿಕೊಳ್ಳಲು ಕಾತರಿಸಿರುವ ಸಾವಿರಾರು ಪದಗಳಿವೆ. ಕೆಲವು ಪದಗಳು ಮರೆತೇಹೋಗಿವೆ. ಕವಿತೆಗಳಲ್ಲಿ ಮತ್ತೆಮತ್ತೆ ಒಂದೇ ಪದ ಬಳಸುವ ಬದಲು, ಉದಾಹರಣೆಗೆ ಖಾಲಿ ಡಬರಿ, ಮೋಟು ಬೀಡಿಯ ಹೊಗೆ, ಸಿಲೇಟು ಬುಕ್ಕ ಪೇಣಿ ಇತ್ಯಾದಿ, ಇದಕ್ಕೆ ತತ್ಸಮಾನವಾದ ಬೇರೆ ಎಷ್ಟೋ ಪದ–ರೂಪಕಗಳನ್ನು ಬಳಸಬಹುದಲ್ಲವೆ? ಗ್ರಾಮೀಣ ಪದಗಳ ಮೇವಿನ ಕಟ್ಟನ್ನು ಕಾವ್ಯ ಬಳಸಿಕೊಳ್ಳಬೇಕು.

ಹೆಣ್ಣು–ಗಂಡುಗಳ ಸಂಬಂಧಕ್ಕೆ ನೀಡುವ ಕಡಿಮೆ ಸ್ಪೇಸ್ ಆಧುನಿಕ ಕಾಲದ ಕೌಟುಂಬಿಕ ಬಿಕ್ಕಟ್ಟುಗಳ ಸೂಚಿಯಾಗಿ ಕಾಣಿಸುತ್ತದೆ. ಇದು ಪ್ರೇಮಕ್ಕಷ್ಟೇ ಅಲ್ಲ, ಸಂಭ್ರಮಕ್ಕೂ ಅನ್ವಯಿಸುತ್ತದೆ. 'ಉರಿವ ಒಲೆಯ ಮುಂದೆ' ಇಡೀ ಸಂಕಲನದಲ್ಲಿ ಒಂದೂ ಪ್ರೇಮಕವಿತೆ ಇಲ್ಲ. ಮುನ್ನುಡಿಯಲ್ಲಿ ಚಂಪಾ ಕೂಡಾ ಇದನ್ನು ಗುರುತಿಸಿದ್ದಾರೆ. ಶ್ರೀನಿವಾಸ್ ಅಷ್ಟೇ ಅಲ್ಲ, ಈ ಪ್ರಶ್ನೆ ಇತ್ತೀಚಿನ ಹಲವು ಯುವಕವಿಗಳನ್ನು ಓದುವಾಗ ಕಾಡಿದೆ. ಪ್ರೀತಿ ಪ್ರೇಮದ ಬಗ್ಗೆ,

ಸ್ತ್ರೀಲೋಕವನ್ನು, ತನ್ನ ಸುತ್ತಮುತ್ತಲ ಜೀವಲೋಕವನ್ನು ಕಡೆಗಣಿಸುತ್ತ ಬರೀ ಮನುಷ್ಯ ಸಮಸ್ಯೆಗಳನ್ನೇ ಕೇಂದ್ರವಾಗಿರಿಸಿಕೊಂಡು ನಡೆಸುವ ಒಣ ತಾತ್ವಿಕ ವಾಗ್ವಾದಗಳು ಈ ದೃಷ್ಟಿಯಿಂದ ಸಮಗ್ರವಾಗುವುದಿಲ್ಲ, ಇತ್ಯಾತ್ಮಕವೂ ಆಗುವುದಿಲ್ಲ. ಆದ್ದರಿಂದ ಕ್ರಾಂತಿ–ಬಂಡಾಯವನ್ನು ಕನಸುವ ಮನಸ್ಸುಗಳು ವೈಯಕ್ತಿಕ ಸಂಭ್ರಮ–ಸಂಬಂಧಗಳ ಬಗೆಗೆ ಮಡಿವಂತಿಕೆ ಬಿಟ್ಟು ಮಾತನಾಡುವುದು ಒಳ್ಳೆಯದು.

ಪ್ರಕೃತಿ ಸೌಂದರ್ಯದ ಬಗ್ಗೆ ಪುಟಗಟ್ಟಲೆ ಶುದ್ಧ ಸಾಹಿತ್ಯ ಒಂದುಕಡೆ ಸೃಷ್ಟಿಯಾಗುತ್ತಿದ್ದರೆ; ಹೋರಾಟ–ಕ್ರಾಂತಿ–ಚಳವಳಿಯನ್ನು ಉಸಿರಾಡುವ ಮನಸುಗಳು ಪ್ರೇಮಕಾಮದ ವಸ್ತುಗಳನ್ನು ಮುಟ್ಟಲು ಹಿಂಜರಿಯುತ್ತಿವೆ. ಕಾರ್ಲ್‌ಮಾರ್ಕ್ಸ್ ದಾಸ್ ಕ್ಯಾಪಿಟಲ್ ಬರೆಯುವ ವಯಸ್ಸಿನಲ್ಲೇ ಅತ್ಯುತ್ತಮ ಪ್ರೇಮ ಕವನಗಳನ್ನು ಬರೆದ. ನೆರೂಡಾ ಪ್ರೀತಿ–ಕ್ರಾಂತಿ ಎರಡರ ಬಗೆಗೂ ಬರೆದ. ಕನ್ನಡದಲ್ಲೂ, ಬೇರೆ ಭಾಷೆಗಳಲ್ಲೂ ಇಂಥ ಇನ್ನೆಷ್ಟೋ ಉದಾಹರಣೆಗಳು ಸಿಗಬಹುದು. ಬದುಕಿನ ಸಣ್ಣಪುಟ್ಟ ಸಂಭ್ರಮಗಳು ಸಂವೇದನಾಶೀಲ ಮನಸ್ಸಿಗೆ ಹೋರಾಟದ ಕೆಚ್ಚಿನೊಳಗೂ ಒಂದು ಜೀವನ ಪ್ರೀತಿಯನ್ನೂ, ಮಾನವೀಯ ಸ್ಪರ್ಶವನ್ನೂ ಕೊಡಬಲ್ಲವು. ಯಾವುದೇ ಪದ್ಯವನ್ನು 'ಪ್ರಿಯ ಗೆಳತಿ/ಗೆಳೆಯಾ' ಎಂದು ಶುರುಮಾಡಿದರೆ ಸಿಗುವ ಉತ್ತರ ಬೇರೆಯೇ ಆಗಿರುತ್ತದೆ. ಹಂಚಿಕೊಳ್ಳುವಿಕೆ ನೀಡುವ ಅನನ್ಯ ಆಶಾವಾದ ಸಾಲುಗಳಿಗೆ ದಕ್ಕುತ್ತದೆ. ಜೊತೆಗಿರುವ ಪ್ರೀತಿಸುವ ಜೀವ ಜೀವನದೃಷ್ಟಿಯನ್ನೇ ಬದಲಾಯಿಸುವ ಸಾಧ್ಯತೆಗಳಿವೆ.

ಮಹಿಳೆಯರ ಸಂಘಟನಾ ಶಕ್ತಿ ಹಾಗೂ ಚಿಂತನಶೀಲತೆಯ ಕುರಿತು ಸಮಾಜಕ್ಕೆ ಅನುಮಾನಗಳಿವೆ. ಸಮಾಜಕ್ಕಷ್ಟೇ ಅಲ್ಲ, ಬದಲಾವಣೆ–ಸಮಸಮಾಜಕ್ಕಾಗಿ ಹೋರಾಡುವ ಸಂಘಟನೆಗಳಲ್ಲೂ ಮಹಿಳಾ ಸಹಭಾಗಿತ್ವ, ನಾಯಕತ್ವ ಕಡಿಮೆಯಿದೆ. ಬಹುಪಾಲು ಸಂಘಟನೆಗಳ ಮಹಿಳೆಯರ ಸಂಖ್ಯೆ, ಸ್ಥಿತಿ ಇದಕ್ಕೆ ಪುರಾವೆ ಒದಗಿಸುತ್ತವೆ. ಅಂಗೈ ಅಗಲ ಜಾಗದ ಮನೆಯಲ್ಲಿ ಸಂಸಾರ ನಿಭಾಯಿಸುತ್ತ, ಅದನ್ನೇ ಅಗತ್ಯಕ್ಕೆ ತಕ್ಕಂತೆ ಅಡಿಗೆಮನೆ–ಡೈನಿಂಗ್ ಹಾಲ್–ಬೆಡ್ ರೂಂ ಎಲ್ಲವನ್ನಾಗಿ ಪರಿವರ್ತಿಸುತ್ತ, ಕೊನೆಗುಳಿವ ಅರ್ಧಸೌಟು ಗಸಿಯನ್ನುಂಡೇ ನಾಳೆಗೆ, ಬರುವ ತಿಂಗಳಿಗೆ, ಬರುವ ವರ್ಷಗಳಿಗೆಲ್ಲ ಕನಸು ಕಟ್ಟಿಟ್ಟುಕೊಂಡಿರುವ ಕೋಟ್ಯಂತರ ಮಹಿಳೆಯರದು ಯಾವ ಘೋಷಣೆಗಳಿಲ್ಲದ ಚಳವಳಿ. ಕೊಟ್ಟಿಗೆಯಲ್ಲಿ ಈಯಲಿರುವ ಪ್ರಾಣಿಯೊಂದು ತಮ್ಮ ಸಮಸ್ಯೆಗಳಿಗೆಲ್ಲ ಪರಿಹಾರವೆಂಬಂತೆ ಭಾವಿಸಿ ಮುದಗೊಳ್ಳುವ ಜೀವಗಳದ್ದು ನೆಮ್ಮದಿಗಾಗಿನ ಬದಲಾವಣೆಯ ತುಡಿತ. ಮೆಟ್ಟಿಲ ಪಕ್ಕದ ಇಂಚು ಜಾಗದಲ್ಲಿ ಗಿಡ ನೆಟ್ಟು, ಅದು ಚಿಗುರಿದಾಗ, ಹೂತಾಗ ಸಂಭ್ರಮಿಸುವ ಜೀವಗಳದು ಎಣೆಯಿಲ್ಲದ ಆಶಾವಾದ. ಸ್ತ್ರೀಲೋಕವನ್ನು, ತನ್ನ ಸುತ್ತಮುತ್ತಲ ಜೀವಲೋಕವನ್ನು ಕಡೆಗಣಿಸುತ್ತ ಬರೀ ಮನುಷ್ಯ ಸಮಸ್ಯೆಗಳನ್ನೇ ಕೇಂದ್ರವಾಗಿರಿಸಿಕೊಂಡು ನಡೆಸುವ ಒಣ ತಾತ್ವಿಕ ವಾಗ್ವಾದಗಳು ಈ ದೃಷ್ಟಿಯಿಂದ ಸಮಗ್ರವಾಗುವುದಿಲ್ಲ, ಇತ್ಯಾತ್ಮಕವೂ ಆಗುವುದಿಲ್ಲ. ಆದ್ದರಿಂದ ಕ್ರಾಂತಿ–ಬಂಡಾಯವನ್ನು ಕನಸುವ ಮನಸ್ಸುಗಳು ವೈಯಕ್ತಿಕ ಸಂಭ್ರಮ–ಸಂಬಂಧಗಳ ಬಗೆಗೆ ಮಡಿವಂತಿಕೆ ಬಿಟ್ಟು ಮಾತನಾಡುವುದು ಒಳ್ಳೆಯದು.

ಸಮುದಾಯಕ್ಕೆ ತೆರೆದುಕೊಳ್ಳುವ ಮನಸ್ಸು ಏಕಕಾಲಕ್ಕೆ ತನ್ನೊಳಗೂ ಅರಳಬೇಕು. ವೈಯಕ್ತಿಕ ಶೋಧನೆ ಜೀವನ್ಮುಖಿ ದೃಷ್ಟಿಕೋನವನ್ನೊದಗಿಸುತ್ತದೆ. ವರ್ತಮಾನಕ್ಕೆ ಸ್ಪಂದಿಸುತ್ತಲೇ ಭೂತವನ್ನು ಮರೆಯದೇ, ಭವಿಷ್ಯತ್ತಿನ ಬಗೆಗೆ ಆಶಾಭಾವನೆ ಬಿಡದೇ ಪರಿಹಾರದ ದಾರಿಯಲ್ಲಿ ನಡೆಯುತ್ತದೆ. ಯಾವುದೇ ರಾಜಕೀಯ, ಸಾಮಾಜಿಕ ಹೋರಾಟವಿರಲಿ – ಅದರ ಪ್ರಾಥಮಿಕ ಉದ್ದೇಶ ಜನರ ಬದುಕಿನಲ್ಲಿ ಕನಿಷ್ಠ ನೆಮ್ಮದಿ ಗಳಿಸಿಕೊಡುವುದು. ಇದೇ ತಾತ್ವಿಕತೆಯ ಮೇಲೆ ಎಲ್ಲ ಹೋರಾಟಗಳೂ ಕಟ್ಟಲ್ಪಟ್ಟವು. ಅದನ್ನೇ ಸಾರಸಂಗ್ರಹವಾಗಿ ಬದುಕೆಂಬ ಹೋರಾಟಕ್ಕೂ ಅನ್ವಯಿಸಿಕೊಳ್ಳದಿದ್ದರೆ ಲವಲವಿಕೆಯಿಲ್ಲದ ಜೀವನ ಬದುಕು ಬೇಗ ಸವೆದುಹೋಗುವಂತೆ ಮಾಡಿಬಿಡುತ್ತದೆ.

ಅಪ್ಪ ಚೌರ ಮಾಡಿಸಿಕೊಂಡ ದಿನ
ಮಾರಜಾತ್ರೆ ಹಬ್ಬದ ಸಡಗರ
ನಾನು ಚೌರ ಮಾಡಿಸಿಕೊಂಡ ದಿನ
ಊರ ಹೊರಗೆ ಮಲಗಿದವರ
ಸುಡುಗಾಡು ಮೌನ
ನನ್ನೊಳಗೆ!

ಎಂಥ ಸಾಲುಗಳು ಹುಟ್ಟುವುದಾದರೂ ಹೇಗೆ? ನನ್ನನ್ನು ಸತತ ಕಾಡುವ ವಿಷಯ ಒಂದಿದೆ. ಸಾವಿರಾರು ವರ್ಷಗಳಿಂದ ಬಹುಸಂಖ್ಯಾತ ಜನರು ಪ್ರತಿಭಟನೆಗೂ ಅವಕಾಶವಿಲ್ಲದ ವಾತಾವರಣದಲ್ಲಿ ಕೀಳರಿಮೆ, ನೋವು, ಆಕ್ರೋಶಗಳನ್ನೆಲ್ಲ ಹತ್ತಿಕ್ಕಿಕೊಂಡು ಬದುಕಿದರಾದರೂ ಹೇಗೆ? ಎಲ್ಲ ಅವಮಾನಗಳನ್ನೂ ಮೀರಿ ಅವರನ್ನು ಇಲ್ಲಿಯವರೆಗೆ ಎಳೆತಂದ ಶಕ್ತಿ ಯಾವುದು? ಅವರು ಯಾವುದೋ ಹೊರದಾರಿ ಕಂಡುಕೊಂಡಿರಲೇಬೇಕು. ಇಲ್ಲದಿದ್ದರೆ ಎಂದೋ ಸಾಮೂಹಿಕ ಆತ್ಮಹತ್ಯೆಗೆ ಶರಣಾಗಿರುತ್ತಿದ್ದರು. ಎಂಥ ಹಸಿವು, ನೋವು, ಬೇಗುದಿಯ ಕಾಲದಲ್ಲೂ ನಮ್ಮ ಜನ ಹಾಡು–ಹಬ್ಬ ಮರೆಯಲಿಲ್ಲ. ಅಕ್ಷರಕ್ಕೆ ಆಸ್ಪದ ಇಲ್ಲದ ಕಾಲದಲ್ಲೂ ಮೌಖಿಕವಾಗಿ, ಕಲೆ ಸಂಸ್ಕೃತಿಯ ಆಚರಣೆಗಳಾಗಿ ಪರಂಪರೆಯ ಅಸ್ಮಿತೆಯ ಗುರುತುಗಳನ್ನು ಮುಂದಿನ ಪೀಳಿಗೆಗೆ ದಾಟಿಸಲು ಮರೆಯಲಿಲ್ಲ. ಮಳೆ ಕೈಕೊಟ್ಟು 'ಪೈರ ಹೆಣದ ಮುಂದೆ ನಾಲ್ಕು ಹನಿ ಕಣ್ಣೀರು ಸುರಿಸುವ' ನೋವಿನ ಜೊತೆಗೇ ಅವರ ಜೀವನಪ್ರೀತಿಯ ಮೂಲ ಸೆಲೆ ಯಾವುದೆಂದು ಹುಡುಕಲೂ ನಾವು ಮರೆಯಬಾರದು. ಹಾಗಲ್ಲದಿದ್ದರೆ ದೈನ್ಯತೆ, ಆತ್ಮಮರುಕಗಳು ಬದುಕನ್ನು ಅಸಹನೀಯಗೊಳಿಸುವುದಷ್ಟೇ ಅಲ್ಲ, ಆತ್ಮಹತ್ಯೆಯಂತಹ ಕೃತ್ಯಕ್ಕೂ ಪ್ರೇರೇಪಿಸುತ್ತವೆ. ಹಿಂದೆಲ್ಲ ರೈತರು ಮಳೆ ಕೈಕೊಟ್ಟಾಗಲೂ, ಡವಗಿ ಬರದಲ್ಲೂ, ಸಾಲ ಕೊಡುವ ಬ್ಯಾಂಕುಗಳಿಲ್ಲದಾಗಲೂ, ಬಡ್ಡಿಮನ್ನಾ ಮಾಡುವ ಸರ್ಕಾರಗಳಿಲ್ಲದಾಗಲೂ ಆತ್ಮಹತ್ಯೆಗೆ ಶರಣಾಗಲಿಲ್ಲ. ಅದು ಈಗ ಏಕಾಗುತ್ತಿದೆ? ಆರ್ಥಿಕ, ಸಾಮಾಜಿಕ ಕಾರಣಗಳ ಜೊತೆಗೇ ಬದುಕಿನ ಹೋರಾಟದ ಕೆಚ್ಚು ಕಳೆದುಕೊಂಡ ಗುರುತೂ ರೈತರ ಆತ್ಮಹತ್ಯೆಯಲ್ಲಿದೆ ಎನ್ನುವುದನ್ನು ಮರೆಯುವಂತಿಲ್ಲ.

ಹಿಂದಿನ ತಲೆಮಾರು ದುರಂತಗಳ ನಡುವೆಯೂ ಸಣ್ಣಪುಟ್ಟ ಸಂಭ್ರಮ, ರೋಮಾಂಚನ ಅನುಭವಿಸಿದ್ದು; ವರ್ತಮಾನದ ಬಿಕ್ಕಟ್ಟುಗಳ ನಡುವೆಯೂ ಬದುಕುತ್ತಿರುವ ಕೋಟ್ಯಂತರ ಜನರ ಜೀವನಪ್ರೇಮ ಇವೆಲ್ಲ ಆಯಿತು. ಭವಿಷ್ಯದ ಪೀಳಿಗೆಗೆ ನಾವು ಕಟ್ಟಿಕೊಡಬೇಕಾಗಿರುವುದು ಏನು? ನಾವು ಬಹಳಷ್ಟು ಜನ ಈ ವಿಷಯದ ಬಗ್ಗೆ ಯೋಚಿಸುವುದೇ ಇಲ್ಲ. ಶ್ರೀನಿವಾಸ್ ಕೂಡಾ ಕ್ಷಮಿಸು ಮಗೂ ಎಂಬ ಪದ್ಯವೊಂದರಲ್ಲಿ, 'ಅಪ್ಪನಂತೆ ಹೆಗಲ ಮೇಲೆ ಕುಳ್ಳಿರಿಸಿಕೊಂಡು ಜಗದ ಜಾತ್ರೆಗಳನ್ನು ತೋರಿಸಲಾರೆ, ಮನೆಯಂಗಳದಲ್ಲಿ ಮಲಗಿ ಚುಕ್ಕಿ ಚಂದಮಾಮರನ್ನು ತೋರಿಸಲಾರೆ, ಕಾಗೆಗೂಗೆಗುಬ್ಬಚ್ಚಿಗಳ ಹೊರದಬ್ಬಿದ್ದೇವೆ ಏಕೆಂದು ಹೇಳಲಾರೆ, ನಮ್ಮ ಬದುಕೇ ಜೀತಕ್ಕಿರಲು ಹೇಗೆ ತೋರಿಸಲಿ ಅವರ ಹಾಗೆ?' ಎಂದು ಮಗುವನ್ನೇ ಪ್ರಶ್ನಿಸಿದ್ದಾರೆ. ಜೀತಗಾರನಾಗಿದ್ದ ಅಪ್ಪ ತೋರಿಸುತ್ತಿದ್ದಿದ್ದನ್ನು ಜೀತದ ಹಂಗಿನಲ್ಲಿಲ್ಲದ ಮಗ ತನ್ನ ಮಗುವಿಗೆ ತೋರಿಸಲಾಗದೆ? 'ನಿನ್ನೆಯ ಗೋರಿಗಳ ಮೇಲೆ/ನಾಳೆಗಳು ಬೆತ್ತಲಾಗಿ ನಿಂತಿರುವಾಗ/ಮಾಡಲಿ ಹೇಗೆ ನನ್ನ ಕಂದಮ್ಮಗಳಿಗೆ/ನಾಳೆಯ ವಿಮೆ?' ಎಂದು ಭಾವಿಸಬಹುದೆ? ವಾಸ್ತವದ ಅರಿವುಂಟಾದ ದಿನ ನಮ್ಮ ಬಾಲ್ಯ ಕಳೆದುಕೊಳ್ಳುತ್ತೇವೆ ಎಂದು ಅವತ್ತು ಪ್ರೊ. ಚಂದ್ರಶೇಖರ ನಂಗಲಿಯವರು ಹೇಳಿದರು. ವಾಸ್ತವವನ್ನರಿತ ನಾವು ನಮ್ಮ ಬಾಲ್ಯ ಕಳೆದುಕೊಂಡಿದ್ದೇವೆ. ಆದರೆ ನಾವು ಕಳೆದಂಥದೇ ಸುಂದರ ಬಾಲ್ಯ ಮಕ್ಕಳ ಕಣ್ಣೆದುರಿಗೂ ಇದೆ. ಅದನ್ನು ಸಾರ್ಥಕಗೊಳಿಸಬೇಕಾದರೆ, ಅರ್ಥಪೂರ್ಣವಾಗಬೇಕಾದರೆ ನಾವೂ ಆ ಮುಗ್ಧಲೋಕದೊಳಗೊಮ್ಮೆ ಆಗಾಗ ಹೋಗಿಬರಬೇಕು. ವಾಸ್ತವ ಕಟುವೇ ಆಗಿದ್ದರೂ ಬದಲಾವಣೆಯ ಸಾಧ್ಯತೆಗಳ ಬಗೆಗೆ ಆಶಾವಾದಿಯಾಗಿರಬೇಕು. ನನ್ನೊಬ್ಬನಿಂದ ಬಂಡೆ ಸರಿಸಲಾಗದು, ಆದರೆ ಬಂಡೆಗಾಧಾರವಾಗಿ ನಿಂತಿರುವ ಸಣ್ಣಪುಟ್ಟ ಕಲ್ಲುಗಳನ್ನಾದರೂ ಸರಿಸಿ ಅದನ್ನು ಅಭದ್ರಗೊಳಿಸಬಹುದು. ಮಗುವಿನೆದುರು ಇಂಥ ಆಶಾವಾದದ ಮಾತುಗಳು ಬಂದಲ್ಲಿ ಅದು ವಿಷಾದದ ನಡುವೆಯೂ ಮನಸ್ಸು ಅರಳಿಸೀತು.

ಸಾಮಾಜಿಕ ಚಿಂತನೆಯ ಸಂಕೇತ ಭಾಷೆಯಾದ ಕಾವ್ಯಕತೆಗಳಲ್ಲಿ ಇವನ್ನೆಲ್ಲ ಗಮನಿಸದೇ ಇರಲಾಗದು. ಅಲ್ಲದೇ ಇದೇ ಕಾರಣಕ್ಕೆ, ಸಂಪೂರ್ಣ ಪುರುಷಮಯವಾಗುವ ಅಪಾಯದಿಂದ ತಪ್ಪಿಸಿಕೊಳ್ಳಲು ಕಾವ್ಯವು ಕನ್ನಿಕೆಯಾಗಲು ಯತ್ನಿಸಬೇಕು..

ಶ್ರೀನಿವಾಸರಂಥ ಹೊಸಕವಿಗಳ ದುಗುಡಕ್ಕೆ ಹೆಚ್ಚೇ ಕಿವಿಗೊಡಬೇಕು. ■

ಮಲೆನಾಡು: ಒಂದಿಷ್ಟು ಟಿಪ್ಪಣಿಗಳು...

ಭಾಗ-1

ಮಲೆನಾಡೆಂದರೆ ಅಚ್ಚಹಸಿರು, ಸೊಂಪಾದ ಮರಗಿಡ ಬಳ್ಳಿಗಳು, ಪ್ರಾಣಿ ಪಕ್ಷಿಗಳು, ನದಿ ಹಳ್ಳ ಹೊಳೆಗಳು, ಧುಮುಕುವ ಝರಿಗಳು, ಹಸಿರು ಗದ್ದೆಗಳು, ದಟ್ಟವಾದ ಕಾಡುಗಳು, ಕಾಫಿ ತೋಟಗಳು ಹೀಗೆ ಆ ಸೌಂದರ್ಯದ ರೋಮಾಂಚನಕಾರಿ ವಿವರಣೆ ಮುಂದುವರಿಯುತ್ತದೆ. ಮಲೆನಾಡಿನಿಂದ ಹೊರಗಿರುವವರಿಗೆ ಒಮ್ಮೆ ಮಲೆನಾಡಿಗೆ ಹೋಗಿ ಬರೋಣ ಎನಿಸುತ್ತದೆ. ಸುಂದರವಾದ ಪ್ರವಾಸಿ ತಾಣಗಳು, ಆಕರ್ಷಕ ಯಾತ್ರಾ ಸ್ಥಳಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಒಮ್ಮೆ ಮಲೆನಾಡಿಗೆ ಹೋದರೆ ಮತ್ತೊಮ್ಮೆ, ಮಗದೊಮ್ಮೆ ಹೋಗಬೇಕು ಎನಿಸುತ್ತದೆ. ಪಟ್ಟಣ ಪ್ರದೇಶಗಳಲ್ಲಿ ತರಾವರಿ ಲಾಡ್ಜ್‌ಗಳಿವೆ; ಜೊತೆಗೆ ಇತ್ತೀಚಿಗೆ ಭಾರೀ ಪ್ರಮಾಣದಲ್ಲಿ ಹೋಮ್ ಸ್ಟೇಗಳು ತಲೆ ಎತ್ತಿವೆ. ದುಡ್ಡಿದ್ದವರಿಗೆ ಅಲ್ಲಿಗೆ ಹೋಗಿ ಉಳಿದು, ಉಂಡು, ತಿಂದು ಬರುವುದು ವಿವರಿಸಲಾಗದ ಅನುಭವ; ಅವರು ಮರೆಯಲಾಗದ ಅನುಭವ.

ಮೇಲಿನದು ಮಲೆನಾಡಿನ ಹೊರನೋಟ. ಆದರೆ ಅದರ ಒಳಮರ್ಮ ಏನಾಗಿದೆ ಹಾಗೂ ಏನಾಗುತ್ತಿದೆ ಎಂಬುದು ಹೊರಜಗತ್ತಿಗೆ ಅಷ್ಟಾಗಿ ಗೊತ್ತಾಗುವುದಿಲ್ಲ. ಮಲೆನಾಡನ್ನು ಕುರಿತು ಪ್ರಕಟವಾಗಿರುವ ಸಾಹಿತ್ಯವನ್ನು ಆಧರಿಸಿ ಮಲೆನಾಡು ಎಂದರೆ ಹಾಗೆ, ಹೀಗೆ ಎಂದು ನಮಗೆ ನಾವೇ ವಿವರಿಸಿಕೊಂಡು ಖುಷಿಪಡಬಹುದು; ರೋಮಾಂಚನಗೊಳ್ಳಬಹುದು. ಅದು ಮಲೆನಾಡನ್ನು ಹೊರಗಿನಿಂದ ಮತ್ತು ಮುಗ್ಧ ಬೆರಗಿನಿಂದ ನೋಡುವ ಕ್ರಮ. ಮಲೆನಾಡನ್ನು ಆಹಾ!, ಓಹೋ! ಎಂದು ನೋಡುವವರಿಗೂ ಅವರದ್ದೇ ಆದ ಆಯ್ಕೆಗಳಿವೆ; ಉದ್ದೇಶಗಳಿವೆ. ಅವರ ಆಯ್ಕೆಗಳು, ಉದ್ದೇಶಗಳು ಅವರಿಗಿರಲಿ. ಅದು ಒಂದು ಬಗೆ. ಆದರೆ ಮಲೆನಾಡಿಗೆ ಅದಷ್ಟೆ ಅಲ್ಲದೆ ಇನ್ನೊಂದು ಮುಖ ಕೂಡ ಇದೆ. ಅದು ಮೇಲ್ನೋಟಕ್ಕೆ ಕಾಣುವ ಗಿಡ, ಮರ, ಬಳ್ಳಿ, ಹಳ್ಳಕೊಳ್ಳ, ಪಶು, ಪಕ್ಷಿ, ಕ್ರಿಮಿಕೀಟಗಳಿಗೆ ಮಾತ್ರ ಸಂಬಂಧಿಸಿದ್ದಲ್ಲ. ಹೊರಗೆ ಸುಂದರವಾಗಿ ಕಾಣುವ ಹಸಿರು ಗದ್ದೆಗಳಲ್ಲಿ, ಕಾಫಿ ತೋಟಗಳಲ್ಲಿ ಮನುಷ್ಯರ ಪರಿಸ್ಥಿತಿ ಏನಿದೆ ಹಾಗೂ ಅದು ಏನಾಗುತ್ತಿದೆ ಎಂಬುದರ ಒಳಮರ್ಮಕ್ಕೆ ಸಂಬಂಧಿಸಿದ್ದು. ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳು, ಆ ಕೆಲಸದಿಂದ ಉತ್ಪಾದನೆಯಾಗುವ ಸಂಪತ್ತು, ಆ ಸಂಪತ್ತು ವಿತರಣೆಯಾಗುವ ಬಗೆ, ಸರಕಾರಿ ಯೋಜನೆಗಳು, ಜನರ ಒಳಹೊರಗಿನ ಸಂಬಂಧಗಳು, ಭಾವನೆಗಳು ಮುಂತಾದುವುಗಳಿಗೆ ಸಂಬಂಧಿಸಿದ್ದು.

ಜಮೀನ್ದಾರಿ ಸರಕಾರದ ಯೋಜನೆಗಳು

ಸರಕಾರವನ್ನು ಪ್ರಜಾಪ್ರಭುತ್ವದ ಸರಕಾರ ಎನ್ನುವುದು ಒಂದು ವಾಡಿಕೆ ಹಾಗೂ ಒಂದು ನಂಬಿಕೆ ಅಷ್ಟೆ ಆದರೆ ಅದು ಪೂರ್ಣಪ್ರಮಾಣದಲ್ಲಿ ಸರಿಯಲ್ಲ. ಸರಕಾರ ಯಾರಿಗಾಗಿ ಇದೆ, ಯಾರಿಗಾಗಿ ಕೆಲಸ ಮಾಡುತ್ತಿದೆ ಎಂದು ನೋಡಿದರೆ ಅದು ಯಾವತ್ತೂ ಉಳ್ಳವರ ಪರವಾಗಿಯೇ ಕೆಲಸ ಮಾಡುತ್ತಿದೆ. ಇದು ಅನೇಕ ಸಲ ಕೇಳಿಸಿಕೊಳ್ಳಲು ಕರ್ಕಷ ಎನಿಸಿಬಿಡಬಹುದು. ಇಲ್ಲವೆ ಒಂದು ಅಭಿಪ್ರಾಯವಾಗಿಯೊ, ಒಂದು ಹೇಳಿಕೆಯಾಗಿಯೊ ಕಾಣಬಹುದು.\

ಮಲೆನಾಡಿನಲ್ಲಿ ಸರಕಾರಿ, ಕಂದಾಯ, ಗೋಮಾಳ ಇತ್ಯಾದಿ ಎಲ್ಲಾ ರೀತಿಯ ಬೇನಾಮಿ ಆಸ್ತಿಗಳನ್ನು ಕಾಫಿ ಪ್ಲಾಂಟರ್‌ಗಳು ಆಕ್ರಮಿಸಿಕೊಂಡಿದ್ದಾರೆ. ಅದೆಲ್ಲವೂ ಕಾಫಿ ತೋಟವಾಗಿದೆ. ಅದಕ್ಕೆ ರೆವಿನ್ಯೂ ಇಲಾಖೆಯ ಯಾವ ಅಡೆತಡೆಯೂ ಇಲ್ಲ. ಆ ಜಮೀನಿಗೆ ದಾಖಲಾತಿಗಳು ಇರಬಹುದು; ಇಲ್ಲದೆಯೂ ಇರಬಹುದು. ಆದರೆ ಜಮೀನು ಮಾತ್ರ ಕಾಫಿ ಪ್ಲಾಂಟರ್ಸ್‌ರದ್ದು. ಇದರ ಜೊತೆಗೆ ಮಾಲೀಕರು ತಮ್ಮ ಕಾಫಿ ತೋಟಗಳನ್ನು ಭಾರೀ ಪ್ರಮಾಣದಲ್ಲಿ ಒತ್ತುವರಿ ಮಾಡುತ್ತಲೆ ಬರುತ್ತಿದ್ದಾರೆ. ಇದನ್ನು ಸರಕಾರ ಮೇಲ್ನೋಟಕ್ಕೆ ಅಕ್ರಮ ಎಂದು ಹೇಳುತ್ತದೆ. ಆದರೆ ಇದುವರೆಗೂ ಇಂತಹ ಅಕ್ರಮ ಜಮೀನುಗಳನ್ನು ಬಿಡಿಸಿರುವ ಒಂದೇ ಒಂದು ಉದಾಹರಣೆಯೂ ಇಲ್ಲ. ಹಾಗಾಗಿ ವರ್ಷದಿಂದ ವರ್ಷಕ್ಕೆ ಕಾಫಿ ಪ್ಲಾಂಟರ್‌ಗಳ ತೋಟಗಳು ವಿಸ್ತಾರವಾಗುತ್ತಲೇ ಸಾಗಿವೆ. ಪರಿಣಾಮವಾಗಿ ಈಗ ಮಲೆನಾಡಿನಲ್ಲಿ ಕಾಡು ಎಂಬುದು ಬಹುತೇಕ ಕಡಿಮೆಯಾಗಿದೆ. ಮತ್ತೆ ಕೆಲವು ಕಡೆಗಳಲ್ಲಿ ಅದು ಸಂಪೂರ್ಣ ನಾಶವಾಗಿದೆ. ವಿವಿಧ ಬಳಕೆಗಾಗಿ ಮರಗಳನ್ನು ಭಾರೀ ಪ್ರಮಾಣದಲ್ಲಿ ಕಳ್ಳತನದಲ್ಲಿ ಕಡಿದು ಸಾಗಿಸಲಾಗುತ್ತಿದೆ. ಹಾಗಾಗಿ ಒಂದು ಕಾಲದಲ್ಲಿ ಇದ್ದಂತಹ ಸಾವಿರಾರು ಮರಗಳು ಕ್ರಮೇಣ ಕಡಿಮೆಯಾಗುತ್ತಿವೆ. ಒತ್ತೊತ್ತಾಗಿ ಬೆಳೆಯುತ್ತಿದ್ದ ಮರಗಳು ಈಗ ಅತ್ಯಂತ ವಿರಳವಾಗುತ್ತಿವೆ. ಮನೆ ಕಟ್ಟಲು ಮತ್ತು ದನ ಮೇಯಿಸಲು ಜಾಗ ಇಲ್ಲದಂತಾಗಿದೆ.

ಜಾಗತೀಕರಣದ ನಂತರ ಕಾಫಿಗೆ ಓಪನ್ ಮಾರ್ಕೆಟ್ ಆಯಿತು. ನಂತರ ಅದರ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಅವಲಂಬಿಸಿ ಏರುಪೇರು ಆಗುತ್ತಿದೆ. ಕೆಲವು ವರ್ಷಗಳ ಹಿಂದೆ ರೋಬಸ್ಟ ಕಾಫಿ ತಳಿಯನ್ನು ಬೆಳೆಯುತ್ತಿದ್ದರು. ಬೇರೆ ತಳಿಗಳಿಗೆ ಹೋಲಿಸಿದರೆ, ಮಾರುಕಟ್ಟೆಯಲ್ಲಿ ಈಗ ಅದಕ್ಕೆ ಕಡಿಮೆ ದರವಿದೆ. ಅದರ ಸಸಿಯನ್ನು ನೆಟ್ಟು ಏಳೆಂಟು ವರ್ಷಗಳ ನಂತರ ಫಸಲು ಕೊಡುತ್ತವೆ. ಈ ರೋಬಸ್ಟ ಗಿಡಗಳ ಆಯಸ್ಸು 70–80 ವರ್ಷಗಳಿಗೂ ಜಾಸ್ತಿ. ಇಷ್ಟು ದೀರ್ಘ ಆಯಸ್ಸುಳ್ಳ ರೋಬಸ್ಟಾ ತಳಿಯನ್ನು ಇವತ್ತು ಯಾರೂ ಬೆಳೆಯುತ್ತಿಲ್ಲ. ಅದರ ಜಾಗದಲ್ಲಿ ಹಳೆಯ ತಳಿಯಾದ ಅರೇಬಿಕಾ, ಹೊಸ ತಳಿಗಳಾದ ಕಾವೇರಿ, ನಂಬರ್ 9, ಕಾಟೇಮಾರ್ ಹಾಗೂ ಚಂದ್ರಗಿರಿ



ತಳಿಗಳನ್ನು ಬೆಳೆಯುತ್ತಿದ್ದಾರೆ. ಈ ತಳಿಯ ಸಸಿಗಳು ನೆಟ್ಟು 2 ವರ್ಷಕ್ಕೇ ಫಸಲು ಕೊಡುತ್ತವೆ. ಆದರೆ ಈ ಗಿಡಗಳ ಆಯಸ್ಸು ಮಾತ್ರ 10ರಿಂದ 15 ವರ್ಷ ಇರಬಹುದು. ಆದರೂ ಇದೇ ತಳಿಗಳನ್ನು ಬೆಳೆಯುತ್ತಿದ್ದಾರೆ. ಇದಕ್ಕೆ ಎರಡು ಕಾರಣಗಳಿವೆ. ಸಸಿ ನೆಟ್ಟ ನಂತರ ಬೇಗ ಫಸಲು ಕೊಡುತ್ತವೆ ಎಂಬುದು ಒಂದು. ಮಾರುಕಟ್ಟೆಯಲ್ಲಿ ಈ ತಳಿಯ ಕಾಫಿಗೆ ರೇಟು ಜಾಸ್ತಿ ಇದೆ ಎಂಬುದು ಮತ್ತೊಂದು.

ಸಾಲ ಅಲ್ಲ : ಎ.ಟಿ.ಎಂ.

ಕಾಫಿ ಪ್ಲಾಂಟರ್ಸ್‌ನ್ನು ಉದ್ಧಾರ ಮಾಡುವ ಹಲವು ಯೋಜನೆಗಳನ್ನು ಅವರದೇ ಸರಕಾರ ಜಾರಿಗೆ ತಂದಿದೆ. ಸೊಸೈಟಿ ಮತ್ತು ಬ್ಯಾಂಕುಗಳಲ್ಲಿ ಪ್ಲಾಂಟರ್‌ಗಳು ವಿವಿಧ ಹೆಸರಿನಲ್ಲಿ ಬೆಳೆ ಸಾಲಗಳನ್ನು ಎ.ಟಿ.ಎಂ.ನಲ್ಲಿ ದುಡ್ಡು ತೆಗೆದಷ್ಟು ಸುಲಭವಾಗಿ ತೆಗೆಯುತ್ತಾರೆ. ಇದರಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಎಂಬ ಎರಡು ಬಗೆಯ ಸಾಲಗಳಿವೆ. ಅಲ್ಪಾವಧಿ ಸಾಲವು ಎಕರೆಗೆ 30 ಸಾವಿರ ಹಾಗೂ ದೀರ್ಘಾವಧಿ ಸಾಲ ಎಕರೆಗೆ 50 ಸಾವಿರ ಸಿಗುತ್ತದೆ. ಇದರಲ್ಲಿ ಮತ್ತೊಂದು ಒಳತಂತ್ರವಿದೆ. ತೋಟದಲ್ಲಿ ಎಷ್ಟು ಬಗೆಯ ಬೆಳೆಗಳಿವೆ ಎಂಬುದನ್ನು ಅವಲಂಬಿಸಿ ಸಾಲ ಪಡೆಯುವ ಸೌಲಭ್ಯ ಜಾಸ್ತಿಯಾಗುತ್ತಾ, ವಿಸ್ತಾರವಾಗುತ್ತಾ ಹೋಗುತ್ತದೆ. ಒಂದು ತೋಟದಲ್ಲಿ (ಅದು ಎಷ್ಟೇ ಎಕರೆ ಇರಲಿ) ರೋಬಸ್ಟಾ, ಅರೇಬಿಕಾ, ಮೆಣಸು, ಶುಂಠಿ, ಬಾಳೆ, ಏಲಕ್ಕಿ, ಕಿತ್ತಳೆ, ನಿಂಬೆ ಮುಂತಾದ ಬೆಳೆಗಳನ್ನು ಬೆಳೆದಿದ್ದರೆ ಪ್ರತಿ ಎಕರೆಗೂ, ಪ್ರತಿ ಬೆಳೆಗೂ 30 ಸಾವಿರದಂತೆ ಸಾಲ ತೆಗೆದುಕೊಳ್ಳುತ್ತಾರೆ. ಆಗ ಪ್ರತಿ ಎಕರೆಗೂ ಲಕ್ಷಗಟ್ಟಲೆ ಸಾಲ ಸಿಗುತ್ತದೆ. ಒಂದೇ ಜಮೀನಿಗೆ ಬೇರೆ ಬೇರೆ ಬ್ಯಾಂಕುಗಳಲ್ಲಿ ಸಾಲ ಪಡೆಯುತ್ತಾರೆ. ಇದರಲ್ಲಿ ಪ್ರತಿ ವರ್ಷ 10ರಿಂದ 15 ಸಾವಿರ ಸಾಲವನ್ನು ಮಾತ್ರ ಕಟ್ಟಿ, ಸಾಲವನ್ನು ರಿನೀವಲ್ ಮಾಡಿಕೊಳ್ಳುತ್ತಾರೆ. ಕೃಷಿ ಸಾಲಕ್ಕೆ ಬಡ್ಡಿ ಕಡಿಮೆ ಇದೆ. ಹಾಗಾಗಿ ಕೃಷಿ ಸಾಲದ ಹೆಸರಿನಲ್ಲಿ ವಿವಿಧ ಬಗೆಯ ವಾಹನಗಳನ್ನು ಕೊಳ್ಳುತ್ತಾರೆ.

ಸಹಾಯ ಧನದ ಹೆಸರಿನಲ್ಲಿ ...

ತೋಟದಲ್ಲಿ ಕಾಫಿ ಗಿಡಗಳು ನಾನಾ ಕಾರಣಗಳಿಗಾಗಿ ನಾಶವಾಗುತ್ತವೆ. ಇದಕ್ಕೆ ಕಾಫಿ ತಳಿ ಅಭಿವೃದ್ಧಿ ಹೆಸರಿನಲ್ಲಿ ಕಾಫಿ ಬೋರ್ಡಿನಿಂದ ಸಹಾಯ ಧನ ಪಡೆಯುತ್ತಾರೆ. ಕೇಂದ್ರ ಸರಕಾರದಿಂದ ಇದಕ್ಕೆ ಕೋಟ್ಯಂತರ ರೂಪಾಯಿ ಸಹಾಯ ಧನ ಹರಿದುಬರುತ್ತದೆ. ಪ್ಲಾಂಟರ್‌ಗಳಿಗೆ ವಿದೇಶಿ ಪ್ರವಾಸ ಮಾಡಲು ಕಾಫಿ ಬೋರ್ಡ್ ಸಹಾಯ ಧನ ನೀಡುತ್ತದೆ. ಕಾಫಿ ತೋಟದಲ್ಲಿ ಏಲಕ್ಕಿ, ಕಿತ್ತಳೆ, ದಾಳಿಂಬೆ, ನಿಂಬೆ ಮುಂತಾದ ಬೆಳೆಗಳನ್ನು ಬೆಳೆಯಲು ಕಾಫಿ ಬೋರ್ಡಿನಿಂದ ಸಹಾಯ ಧನ ಪಡೆಯುತ್ತಾರೆ. ವಿದರ್ಭ ಪ್ಯಾಕೇಜಿನಲ್ಲಿ ಪಶು ಸಂಗೋಪನ ಇಲಾಖೆಯ ಮೂಲಕ ದನ, ಕೋಳಿ, ಹಂದಿ ಮುಂತಾದುವನ್ನು ಸಾಕುವ ಹೆಸರಿನಲ್ಲಿ ಸಹಾಯ ಧನ ಪಡೆಯುತ್ತಾರೆ. ಕೃಷಿ ಇಲಾಖೆಯಿಂದ ಮತ್ತು ಜಲನಯನ ಇಲಾಖೆಯಿಂದ ಕೆರೆ ನಿರ್ಮಾಣ ಹಾಗೂ ಕೆರೆ ದುರಸ್ತಿಗೆ ಒಂದು ವರ್ಷಕ್ಕೆ ಕನಿಷ್ಠ 3 ಲಕ್ಷದಷ್ಟು ಸಹಾಯ ಧನ ಪಡೆಯುತ್ತಾರೆ. ಒಂದು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಇದನ್ನು ಎಷ್ಟು ಜನರಿಗಾದರೂ ಕೊಡಬಹುದು. ನೀರು ಗುಂಡಿ ನಿರ್ಮಾಣಕ್ಕೆ ಜಲನಯನ ಇಲಾಖೆ ಮತ್ತು ಕೃಷಿ ಇಲಾಖೆಯಿಂದ 1 ಲಕ್ಷ ಸಹಾಯ ಧನ ಪಡೆಯುತ್ತಾರೆ. ಪಂಪ್‌ಸೆಟ್‌ನ ಎಕ್ಯುಪ್‌ಮೆಂಟ್ ಕೊಳ್ಳಲು ಕಾಫಿ ಬೋರ್ಡ್ ಹಾಗೂ ಕೃಷಿ ಇಲಾಖೆಯಿಂದ 1 ಲಕ್ಷ ಪಡೆಯುತ್ತಾರೆ. ಅದರಲ್ಲಿ 25 ಸಾವಿರವನ್ನು ಮಾತ್ರ ಕಟ್ಟಬೇಕು.

ಎಲ್ಲವೂ ಫ್ರೀ

ತೋಟಗಾರಿಕೆ ಇಲಾಖೆಯಿಂದ ಮೆಣಸಿನ ಬಳ್ಳಿ, ತೆಂಗಿನ ಗಿಡ, ಸಪೋಟ ಮತ್ತು ಬಾಳೆ ಗಿಡಗಳನ್ನು 1 ಎಕರೆಗೆ 50ರಿಂದ 100 ಗಿಡಗಳನ್ನು ಫ್ರೀಯಾಗಿ ಕೊಡುತ್ತಾರೆ. ಇವುಗಳ ಅಭಿವೃದ್ಧಿಗೆ ತೋಟಗಾರಿಕೆ ಇಲಾಖೆಯು 1 ಎಕರೆಗೆ 10 ಸಾವಿರ ಸಹಾಯ ಧನ ಕೊಡುತ್ತದೆ. ಕೃಷಿ ಇಲಾಖೆಯ ಮೂಲಕ ಕೇಂದ್ರ ಸರಕಾರವು ಬೇಸಿಗೆಯಲ್ಲಿ ಕಾಫಿ ತೋಟಕ್ಕೆ ಹಾಕಲು ಸುಣ್ಣವನ್ನು ತೋಟದ ಒಂದು ಸರ್ವೆ ನಂಬರ್‌ಗೆ 10ರಿಂದ 50 ಚೀಲದಂತೆ ಫ್ರೀಯಾಗಿ ಕೊಡುತ್ತದೆ. ವರ್ಷಕ್ಕೆ ಒಂದು ಸಲ ತೋಟಗಾರಿಕೆ ಇಲಾಖೆಯು ಬಾಂಡ್ಲಿ, ಪಿಕಾಸಿ, ಹಾರೆ, ಸಬ್ಬಲು, ಸ್ಪ್ರೆ ಮಿಶಿನ್ ಮುಂತಾದುವನ್ನು ಫ್ರೀಯಾಗಿ ಕೊಡುತ್ತದೆ. ಮೆಣಸಿಗೆ ರೋಗ ಬಂದರೆ ತೋಟಗಾರಿಕೆ ಇಲಾಖೆಯು ಫ್ರೀಯಾಗಿ ಮೆಡಿಸಿನ್ ಕಿಟ್ಟನ್ನು ಕೊಡುತ್ತದೆ. ಅತಿವೃಷ್ಟಿ, ಅನಾವೃಷ್ಟಿ ಆದಾಗ 1 ಎಕರೆಗೆ 10 ಸಾವಿರದಷ್ಟು ಕೇಂದ್ರ ಸರಕಾರದಿಂದ ಸಹಾಯ ಧನ ಪಡೆಯುತ್ತಾರೆ. ಗದ್ದೆ ಕೊಯ್ಯುವ ಸಮಯದಲ್ಲಿ ಮಳೆ ಬಂದರೆ, ಕಂದಾಯ ಇಲಾಖೆಯಿಂದ 1 ಎಕರೆಗೆ 3 ಸಾವಿರದಷ್ಟು ಸಹಾಯ ಧನ ಪಡೆಯುತ್ತಾರೆ. ಕಾಫಿ ಒಣಗಿಸುವ ಟಾರ್ಪಾಲ್ ಕೊಳ್ಳಲು ಕಾಫಿ ಬೋರ್ಡಿನಿಂದ 3 ಸಾವಿರದಿಂದ 10 ಸಾವಿರದಷ್ಟು ಸಹಾಯ ಧನ ಪಡೆಯುತ್ತಾರೆ. ಕಾಫಿ ಕಣ ಮಾಡಲು, ಶೆಡ್ ಮಾಡಲು, ಎತ್ತರ ತಗ್ಗು ಲವೆಲ್ ಮಾಡಲು ಕಾಫಿ ಬೋರ್ಡಿನಿಂದ ಸಹಾಯ ಧನ ಪಡೆಯುತ್ತಾರೆ. ಪ್ರತಿ ವರ್ಷ ಕಾಫಿ ಪ್ಲಾಂಟರ್‌ಗಳು ಲಕ್ಷಾಂತರ ರೂಪಾಯಿಗಳ ಸಹಾಯ ಧನ ಪಡೆಯುತ್ತಾರೆ.

ಬೆಳೆಗಳಲ್ಲಿ ಬದಲಾವಣೆ

ಮಲೆನಾಡಿನಲ್ಲಿ ಪ್ರಧಾನ ಬೆಳೆ ಕಾಫಿ. ಕೆಲವು ವರ್ಷಗಳ ಹಿಂದೆ ಭತ್ತವನ್ನು ಎರಡನೆ ಮುಖ್ಯ ಬೆಳೆಯಾಗಿ ಬೆಳೆಯುತ್ತಿದ್ದರು. ಈಚಿನ ಕೆಲವು ವರ್ಷಗಳಲ್ಲಿ ಆಹಾರದ ಬೆಳೆಯಾದ ಭತ್ತ ಬೆಳೆಯುವುದು ಕಡಿಮೆಯಾಗಿದೆ. ಅದರ ಬದಲು ಅಡಿಕೆ, ಬಾಳೆ, ಮೆಣಸು, ಶುಂಠಿ, ರಬ್ಬರ್ ಮುಂತಾದ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆ ವೆನ್ನಿಲಾವನ್ನು ಬೆಳೆಯುತ್ತಿದ್ದರು. ಮಾರುಕಟ್ಟೆಯಲ್ಲಿ ಅದರ ರೇಟು ಕಡಿಮೆಯಾಯಿತು; ಈಗ ಅದನ್ನು ಬೆಳೆಯುತ್ತಿಲ್ಲ. ಮಾರುಕಟ್ಟೆಯ ಅಗತ್ಯವು ಮಲೆನಾಡಿನಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು ಮತ್ತು ಯಾವ ಬೆಳೆಯನ್ನು ಬೆಳೆಯಬಾರದು ಎಂಬುದನ್ನು ನಿರ್ಧರಿಸುತ್ತಿದೆ. ಭತ್ತದ ಬೆಳೆಯು ಪ್ರಮಾಣದಲ್ಲಿ ತೀವ್ರಗತಿಯಲ್ಲಿ ಕಡಿಮೆಯಾಗುತ್ತಿದೆ. ಹಳೆಯ ಸಾಂಪ್ರದಾಯಿಕ ತಳಿಗಳು ಕಡಿಮೆಯಾಗುತ್ತಿವೆ. ಹತ್ತಾರು ತಳಿಗಳು ಸಂಪೂರ್ಣ ಇಲ್ಲವಾಗಿವೆ. ಈಗ ಹೊಸ ತಳಿಗಳು ಬಂದಿವೆ.

ಕಾರ್ಮಿಕರು

ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ದಾಖಲಾತಿಯನ್ನು ಪ್ಲಾಂಟರ್‌ಗಳು ಕಾರ್ಮಿಕ ಇಲಾಖೆಗೆ ಕೊಡುವುದಿಲ್ಲ. ಕೆಲವು ವರ್ಷಗಳ ಹಿಂದೆ ಕಾರ್ಮಿಕರು ವರ್ಷಗಟ್ಟಲೆ ಒಂದೇ ತೋಟದಲ್ಲಿ ಅಥವಾ ಒಬ್ಬನೇ ಪ್ಲಾಂಟರ್ ಮನೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ಆ ಪರಿಸ್ಥಿತಿ ಬದಲಾಗಿದೆ. ಕಾರ್ಮಿಕರು ತಮಗೆ ಎಲ್ಲಿ ಅನುಕೂಲವೋ ಅಲ್ಲಿ ಕೆಲಸ ಮಾಡಲು ಹೋಗುತ್ತಾರೆ. ಇದಕ್ಕೆ ಚೆಂಗೂಲಿ ಎಂದು ಕರೆಯುತ್ತಾರೆ. ವರ್ಷಗಟ್ಟಲೆ ಒಬ್ಬನೇ ಪ್ಲಾಂಟರ್ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಕಾರ್ಮಿಕರನ್ನು ಪ್ಲಾಂಟರ್‌ಗಳು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದರು. ಕಾರ್ಮಿಕರ ಕಷ್ಟ, ಮದುವೆ ಮುಂತಾದುವುಗಳಿಗೆ ಸಾಲ ಕೊಟ್ಟು, ಒಂದಕ್ಕೆ ಹತ್ತು ಬರೆದು, ಹತ್ತಾರು ವರ್ಷ ದುಡಿದರೂ ಸಾಲ ತೀರಿಲ್ಲ ಎಂದು ತಲೆಮಾರುಗಳವರೆಗೆ ದುಡಿಸಿಕೊಳ್ಳುತ್ತಿದ್ದರು. ಈಗ ಹೊಸ ತಲೆಮಾರಿನ ಕಾರ್ಮಿಕರು ಅದಕ್ಕೆ ಸೊಪ್ಪು ಹಾಕುತ್ತಿಲ್ಲ. ಒಂದು ಊರಿನಿಂದ ಬೇರೆ ಊರುಗಳಿಗೆ, ದೂರದ ಊರುಗಳಿಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಪರ್ಮನೆಂಟ್ ಕೆಲಸಗಾರರು ಇಲ್ಲ. ಇದರಿಂದ ಪ್ಲಾಂಟರ್‌ಗಳಿಗೆ ಕೆಲಸಗಾರರನ್ನು ಹಳೆಯ ಮಾದರಿಯಲ್ಲಿ ತಮ್ಮ ನೇರ

ಮಲೆನಾಡಿನಲ್ಲಿ ಸರಕಾರಿ, ಕಂದಾಯ, ಗೋಮಾಳ ಇತ್ಯಾದಿ ಎಲ್ಲಾ ರೀತಿಯ ಬೇನಾಮಿ ಆಸ್ತಿಗಳನ್ನು ಕಾಫಿ ಪ್ಲಾಂಟರ್‌ಗಳು ಆಕ್ರಮಿಸಿಕೊಂಡಿದ್ದಾರೆ. ಅದೆಲ್ಲವೂ ಕಾಫಿ ತೋಟವಾಗಿದೆ. ಅದಕ್ಕೆ ರೆವಿನ್ಯೂ ಇಲಾಖೆಯ ಯಾವ ಅಡೆತಡೆಯೂ ಇಲ್ಲ. ಆ ಜಮೀನಿಗೆ ದಾಖಲಾತಿಗಳು ಇರಬಹುದು; ಇಲ್ಲದೆಯೂ ಇರಬಹುದು. ಆದರೆ ಜಮೀನು ಮಾತ್ರ ಕಾಫಿ ಪ್ಲಾಂಟರ್ಸ್‌ರದ್ದು. ಇದರ ಜೊತೆಗೆ ಮಾಲೀಕರು ತಮ್ಮ ಕಾಫಿ ತೋಟಗಳನ್ನು ಭಾರೀ ಪ್ರಮಾಣದಲ್ಲಿ ಒತ್ತುವರಿ ಮಾಡುತ್ತಲೆ ಬರುತ್ತಿದ್ದಾರೆ. ಇದನ್ನು ಸರಕಾರ ಮೇಲ್ನೋಟಕ್ಕೆ ಅಕ್ರಮ ಎಂದು ಹೇಳುತ್ತದೆ. ಆದರೆ ಇದುವರೆಗೂ ಇಂತಹ ಅಕ್ರಮ ಜಮೀನುಗಳನ್ನು ಬಿಡಿಸಿರುವ ಒಂದೇ ಒಂದು ಉದಾಹರಣೆಯೂ ಇಲ್ಲ.

ಹಿಡಿತದಲ್ಲಿಟ್ಟುಕೊಳ್ಳಲು ಆಗುತ್ತಿಲ್ಲ. ಆದರೆ ಇದರ ಪರಿಣಾಮವಾಗಿ ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ಸಿಗಬೇಕಿದ್ದ ಕನಿಷ್ಠ ಸೌಲಭ್ಯಗಳೂ ಕೂಡ ಸಿಗುತ್ತಿಲ್ಲ.

ಸ್ಥಳೀಯ ಕೆಲಸಗಾರರು ಎಲ್ಲೆಂದರಲ್ಲಿ ದಿನಗೂಲಿ ಮಾಡುತ್ತಾರೆ. ಇವರಿಗೆ ಯಾವ ಭದ್ರತೆಯೂ ಇಲ್ಲ. ಇವರು ಬೆಳಿಗ್ಗೆ ಸುಮಾರು 8.30ರಿಂದ 9.00 ಗಂಟೆ ಹೊತ್ತಿಗೆ ಕೆಲಸ ಶುರುಮಾಡಿ, 3.30ರಿಂದ 4.00 ಗಂಟೆ ಹೊತ್ತಿಗೆ ಕೆಲಸ ಮುಗಿಸುತ್ತಾರೆ. ಇನ್ನು ಕಾಫಿ ತೋಟಗಳಲ್ಲಿ ಹೆಚ್ಚು ಪ್ರಮಾಣದಲ್ಲಿರುವುದು ವಲಸೆ ಕಾರ್ಮಿಕರು. ಇವರು ಮಧ್ಯ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗಗಳಿಂದ ವಲಸೆ ಬರುತ್ತಾರೆ. ಇವರು ಬೆಳಿಗ್ಗೆ 8.00ರಿಂದ 8.30ರ ಹೊತ್ತಿಗೆ ಕೆಲಸ ಶುರುಮಾಡಿ, ಸಂಜೆ 5.00ರಿಂದ 6.00 ಗಂಟೆಯವರೆಗೂ ಕೆಲಸ ಮಾಡುತ್ತಾರೆ. ಸ್ಥಳೀಯ ಕಾರ್ಮಿಕರಿಗೆ ಒಂದು ದಿನಕ್ಕೆ 200 ರೂ.ನಿಂದ 250 ರೂ.ವರೆಗೆ ಸಂಬಳ ಸಿಗುತ್ತದೆ. ವಲಸೆ ಕಾರ್ಮಿಕರಿಗೆ ಒಂದು ದಿನಕ್ಕೆ 120, 130 ಮತ್ತು 150 ರೂಪಾಯಿ ಸಂಬಳ ಸಿಗುತ್ತದೆ.

ಬಹುತೇಕ ಕಡೆಗಳಲ್ಲಿ ಕಾರ್ಮಿಕರ ರೇಶನ್ ಕಾರ್ಡುಗಳನ್ನು ಪ್ಲಾಂಟರ್‌ಗಳು

ತಗೊಂಡು, ಅವುಗಳಿಂದ ಸೊಸೈಟಿಯಲ್ಲಿ ಪಡಿತರ ಸಾಮಗ್ರಿಗಳನ್ನು ಕೊಂಡುಕೊಂಡು, ತಮ್ಮ ತೋಟಗಳಲ್ಲಿ ಸೊಸೈಟಿ ಮಾಡಿ, ಅವನ್ನು ಅಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ.

ಭಟ್ಟಿ ಸಾರಾಯಿ ಮತ್ತು ಬ್ರಾಂಡಿ

ಭಟ್ಟಿ ಸಾರಾಯಿ ಮತ್ತು ಬ್ರಾಂಡಿ ಇಲ್ಲದ ಊರುಗಳು ಹಾಗು ತೋಟಗಳು ಇಲ್ಲವೆಂದೇ ಹೇಳಬೇಕು. ಪ್ರತಿ ಊರಿನಲ್ಲಿ ಭಟ್ಟಿ ಸಾರಾಯಿ ಮಾರಾಟ ನಡೆಯುತ್ತದೆ. ಪ್ರತಿ ಊರಿನಲ್ಲಿ ಸಣ್ಣಪುಟ್ಟ ದಿನಸಿ ಅಂಗಡಿಗಳಿದ್ದು, ಆ ಅಂಗಡಿಗಳಲ್ಲಿ ಅತ್ಯಂತ ಕಳಪೆ ಗುಣಮಟ್ಟದ ಬ್ರಾಂಡಿಯನ್ನು ಮಾರಾಟ ಮಾಡುತ್ತಾರೆ. ಭಟ್ಟಿ ಸಾರಾಯಿಗಿಂತ ಈ ಬ್ರಾಂಡಿ ಕುಡಿಯುವುದು ಪ್ರತಿಷ್ಠೆ ಎಂಬ ಭಾವನೆ ಇದೆ. ಕಾರ್ಮಿಕರು ಪಡೆಯುವ ಸಂಬಳದಲ್ಲಿ ಅರ್ಧದಷ್ಟು ದುಡ್ಡು ಈ ಕುಡಿತಕ್ಕೆ ಹೋಗುತ್ತದೆ. ಕೆಲವು ಭಾಗಗಳಲ್ಲಿ ಕಾರ್ಮಿಕರು ಬೆಳಿಗ್ಗೆಯಿಂದಲೆ ಕುಡಿಯಲು ಶುರುಮಾಡುತ್ತಾರೆ.

ಮೇಸ್ತ್ರಿಗಳು

ಕಾಫಿ ತೋಟದ ವಿವಿಧ ಕೆಲಸಗಳಿಗೆ ಸಂಬಂಧಿಸಿದಂತೆ ಮೇಸ್ತ್ರಿಗಳದ್ದು ಬಹಳ ಪ್ರಮುಖ ಪಾತ್ರ. ಒಂದು ಕಾಲದಲ್ಲಿ ಕಾಫಿ ತೋಟದಲ್ಲಿ ಪ್ಲಾಂಟರ್ ಕೆಳಗೆ ಮ್ಯಾನೇಜರ್, ಮ್ಯಾನೇಜರ್ ಕೆಳಗೆ ರೈಟರ್, ರೈಟರ್ ಕೆಳಗೆ ಮೇಸ್ತ್ರಿ ಇರುತ್ತಿದ್ದರು. ಕೊನೆಗೆ ಇವರೆಲ್ಲರ ಕೆಳಗೆ ಕೆಲಸಗಾರರು ಇರುತ್ತಿದ್ದರು. ಕೆಲಸವನ್ನು ಮತ್ತು ಕೆಲಸ ಮಾಡುವವರನ್ನು ಮೇಸ್ತ್ರಿಗಳು ನೋಡಿಕೊಳ್ಳುತ್ತಿದ್ದರು; ನಿಯಂತ್ರಿಸುತ್ತಿದ್ದರು. ಕೆಲಸಗಾರರ ಮೇಲೆ ಯಜಮಾನಿಕೆ, ದಬ್ಬಾಳಿಕೆ ಎಲ್ಲಾ ಮಾಡುತ್ತಿದ್ದರು. ಒಂದು ದಿನಕ್ಕೆ ಎಷ್ಟು ಜನ ಕೆಲಸಗಾರರು, ಯಾವ ಕೆಲಸವನ್ನು, ಹೇಗೆ ಮಾಡಿದರು ಎಂಬ ವರದಿಯನ್ನು ಇವರು ರೈಟರ್‌ಗೆ ಕೊಡುತ್ತಿದ್ದರು. ಅದು ರೈಟರ್ ಮೂಲಕ ಪ್ಲಾಂಟರ್‌ಗೆ ತಲುಪುತ್ತಿತ್ತು.

ಈ ಮೇಸ್ತ್ರಿಗಳನ್ನು ರೈಟರ್ ನೋಡಿಕೊಳ್ಳುತ್ತಿದ್ದರು. ರೈಟರ್‌ಗಳನ್ನು ಮ್ಯಾನೇಜರ್ ನೋಡಿಕೊಳ್ಳುತ್ತಿದ್ದರು. ಈ ಸರಪಳಿ ಹೀಗಿದ್ದರೂ ಪ್ಲಾಂಟರ್‌ಗೂ ಮತ್ತು ಕೆಲಸಗಾರರಿಗೂ ನೇರನೇರ ಸಂಬಂಧವಿತ್ತು. ಕೆಲಸ ಮಾಡುವ ಜಾಗಕ್ಕೇ ಪ್ಲಾಂಟರ್ ಬಂದು ತನ್ನ ಜಮೀನ್ದಾರಿಕೆ ದಬ್ಬಾಳಿಕೆಯ ಎಲ್ಲಾ ಪಾತ್ರವನ್ನೂ ಮಾಡುತ್ತಿದ್ದ. ಅಪಮಾನ, ಹಿಂಸೆ, ದಬ್ಬಾಳಿಕೆ ಮುಂತಾದುವನ್ನು ಕೆಲಸಗಾರರು ನುಂಗಿಕೊಂಡು ಕೆಲಸ ಮಾಡುತ್ತಿದ್ದರು. ಇದರೊಳಗೇ ಕೆಲವು ಕೆಲಸಗಾರರು ಪ್ಲಾಂಟರ್‌ಗಳೊಂದಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ಬೇರೆ ಕೆಲಸಗಾರರ ಬಗ್ಗೆ ಮಾಲೀಕನಲ್ಲಿ ಚಾಡಿ ಹೇಳುತ್ತಿದ್ದರು. ಆ ಮೂಲಕ ಪ್ಲಾಂಟರ್‌ನ ವಿಶ್ವಾಸಕ್ಕೆ ಪಾತ್ರರಾಗಲು ಸಂಚು ಮಾಡುತ್ತಿದ್ದರು. ಅದರಿಂದ ಕೆಲಸಗಾರರ ನಡುವೆ ನಿರಂತರ ದ್ವೇಷ, ಅಸೂಯೆ, ಶತ್ರುತ್ವ, ಜಗಳ, ಹೊಡೆದಾಟ ಬಡಿದಾಟಗಳೂ ನಡೆಯುತ್ತಿದ್ದವು. ಕೆಲವು ಮಹಿಳಾ ಕೆಲಸಗಾರರನ್ನು, ಕೆಲವು ಪ್ಲಾಂಟರ್‌ಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದರು. ಆಗ ಕಾರ್ಮಿಕರಿಗೂ ಮತ್ತು ಪ್ಲಾಂಟರ್‌ಗಳಿಗೂ ನೇರನೇರ ಅಥವಾ ಮುಖಾಮುಖಿ ಸಂಬಂಧವಿತ್ತು.

ಆದರೆ ಈಚಿನ ಕೆಲವು ವರ್ಷಗಳಲ್ಲಿ ಈ ಸಂಬಂಧ ಕೆಲವು ಮಟ್ಟಿಗೆ ಸಡಿಲಗೊಂಡಿದೆ. ಕೆಲವು ತೋಟಗಳಲ್ಲಿ ಆಯಾ ಪ್ಲಾಂಟರ್‌ಗಳೇ ನೇಮಿಸಿಕೊಂಡಿರುವ ಮೇಸ್ತ್ರಿಗಳು ಕೆಲವರು ಇದ್ದಾರೆ. ಒಂದು ಊರಿನ ಕೆಲಸಗಾರರನ್ನು ನಿರ್ದಿಷ್ಟ ಪ್ರಮಾಣದಲ್ಲಿ ಒಟ್ಟುಗೂಡಿಸಿಕೊಂಡು, ಮತ್ತೊಂದು ಊರಿನ ಪ್ಲಾಂಟರ್ ತೋಟಕ್ಕೆ ಕರೆದುಕೊಂಡು ಹೋಗಿ ಕೆಲಸ ಮಾಡಿಸಲು ಈಗ ಹೊಸ ಬಗೆಯ ಸ್ಥಳೀಯ ಮೇಸ್ತ್ರಿಗಳು ಸೃಷ್ಟಿಯಾಗಿದ್ದಾರೆ. ಈ ಮೇಸ್ತ್ರಿಗಳು ಸ್ವತಂತ್ರರು. ಇವರನ್ನು ಯಾವ ಪ್ಲಾಂಟರೂ ನೇಮಿಸುವುದಿಲ್ಲ. ಇಂತಹ ಬಹಳ ಸಂಖ್ಯೆಯ ಮೇಸ್ತ್ರಿಗಳು ಈಗ ಇದ್ದಾರೆ. ಪ್ಲಾಂಟರ್‌ಗಳಿಗೆ ಕೆಲಸಗಾರರು ಬೇಕಾದಾಗ, ನೇರವಾಗಿ ಕೆಲಸಗಾರರನ್ನೇ ಪ್ಲಾಂಟರ್ ಸಂಪರ್ಕ ಮಾಡುವುದಿಲ್ಲ. ಬದಲಿಗೆ ತನಗೆ ಪರಿಚಯವಿರುವ ಮೇಸ್ತ್ರಿಯನ್ನು ಸಂಪರ್ಕ ಮಾಡಿ, ತನಗೆ ಬೇಕಾದ ಕೆಲಸಗಾರರನ್ನು ಕರೆದುಕೊಂಡು ಬರುವಂತೆ ಹೇಳುತ್ತಾನೆ. ಅದರ ಪ್ರಕಾರ ಮೇಸ್ತ್ರಿ ತನ್ನ ಸಂಪರ್ಕದ ಹಾಗೂ ತನ್ನ ವ್ಯಾಪ್ತಿಯ ಕೆಲಸಗಾರರನ್ನು ಪ್ಲಾಂಟರ್ ತೋಟಕ್ಕೆ ಕರೆದುಕೊಂಡು ಹೋಗುತ್ತಾನೆ. ಈ ಮೇಸ್ತ್ರಿಗಳಿಗೆ ಒಂದು ಕಡೆ ಪ್ರತಿಯೊಬ್ಬ ಕೆಲಸಗಾರರಿಂದ 10 ರೂಪಾಯಿ, ಮತ್ತೊಂದು ಕಡೆ ಮಾಲೀಕನ ಕಡೆಯಿಂದ 10 ರೂಪಾಯಿ ಕಮಿಶನ್ ಸಿಗುತ್ತದೆ. ಇದು ಈ ಮೂರೂ ಜನರಿಗೂ ಗೊತ್ತು. ಹಾಗಾಗಿ ಈ ಮೇಸ್ತ್ರಿಗಳ ಮೇಲೆ ಹೊಟ್ಟೆಕಿಚ್ಚು, ದ್ವೇಷ ಮುಂತಾದುವೆಲ್ಲ ಕೆಲಸ ಮಾಡುತ್ತಿವೆ.

ಸ್ಥಳೀಯ ಮೇಸ್ತ್ರಿಗಳಲ್ಲದೆ ವಲಸೆ ಕೆಲಸಗಾರರನ್ನು ಬಹಳ ದೂರದ ಊರುಗಳಿಂದ ಕರೆದುಕೊಂಡು ಬರುವ ವಲಸೆ ಮೇಸ್ತ್ರಿಗಳೂ ಈಗ ಸೃಷ್ಟಿಯಾಗಿದ್ದಾರೆ. ಇವರು ಮಧ್ಯಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭಾಗಗಳಿಂದ ಕೆಲಸಗಾರರನ್ನು ಮಲೆನಾಡಿನ ಕಾಫಿ ತೋಟಗಳಿಗೆ ಕರೆದುಕೊಂಡು ಬರುತ್ತಾರೆ. ಇವರಿಗೂ ಕೂಡ ಒಂದು ಕಡೆ ಪ್ರತಿಯೊಬ್ಬ ಕೆಲಸಗಾರರಿಂದ 10 ರೂಪಾಯಿ, ಮತ್ತೊಂದು ಕಡೆ ಮಾಲೀಕನ ಕಡೆಯಿಂದ 10 ರೂಪಾಯಿ ಕಮಿಶನ್ ಸಿಗುತ್ತದೆ. ಈ ಬೆಳವಣಿಗೆಯಿಂದಾಗಿ ಕೆಲಸಗಾರರಿಗೂ ಮತ್ತು ಪ್ಲಾಂಟರ್‌ಗಳಿಗೂ ಮುಖಾಮುಖಿ ಸಂಬಂಧ ಕಡಿಮೆಯಾಗಿದೆ. ಅಥವಾ ಅನೇಕ ಕಡೆಗಳಲ್ಲಿ ಈ ಸಂಬಂಧವೇ ಇಲ್ಲದಂತಾಗಿದೆ. ಕೆಲಸಗಾರರನ್ನು ಸಂಪೂರ್ಣವಾಗಿ ಈ ಮೇಸ್ತ್ರಿಗಳೇ ನಿಯಂತ್ರಿಸುತ್ತಾರೆ. ಈಗ ಪ್ಲಾಂಟರ್ ಗಮನದಲ್ಲಿ ಮೇಸ್ತ್ರಿಗಳು ಇದ್ದಾರೆ. ಮೇಸ್ತ್ರಿಗಳನ್ನು ಸಂಪರ್ಕ ಮಾಡಿದರೆ, ಅವರ ಮೂಲಕ ಕೆಲಸಗಾರರು ಸಿಗುತ್ತಾರೆ. ಹಾಗಾಗಿ ಕಾಫಿ ತೋಟಧ ಕೆಲಸಗಳು ಮೇಸ್ತ್ರಿಗಳ ಸಂಪರ್ಕವನ್ನು ಅವಲಂಬಿಸಿದೆ.

ಮೇಸ್ತ್ರಿಗಳನ್ನು ಒಂದು ಕಡೆ ಕೆಲಸಗಾರರೂ ಮತ್ತೊಂದು ಕಡೆ ಪ್ಲಾಂಟರ್‌ಗಳೂ ಅವಲಂಬಿಸಿದ್ದಾರೆ. ಈ ಇಬ್ಬರೊಂದಿಗೂ ಮೇಸ್ತ್ರಿಗಳಿಗೆ ನೇರ ಸಂಪರ್ಕವಿದೆ. ಹಾಗಾಗಿ ಕಾಫಿ ತೋಟದ ಕೆಲಸಗಳಿಗೆ ಈಗ ಮೇಸ್ತ್ರಿಗಳು ಅಗತ್ಯವಾಗಿದ್ದಾರೆ; ಅನಿವಾರ್ಯವಾಗಿದ್ದಾರೆ. ಮೇಸ್ತ್ರಿಗಳು ಇಲ್ಲದಿದ್ದರೆ ಪ್ಲಾಂಟರ್‌ಗಳಿಗೆ ಕೆಲಸಗಾರರು ಸಿಗುವುದಿಲ್ಲ. ಮೇಸ್ತ್ರಿಗಳು ಇಲ್ಲದಿದ್ದರೆ ಕೆಲಸಗಾರರಿಗೆ ತೋಟದ ಕೆಲಸ ಸಿಗುವುದಿಲ್ಲ. ಕೆಲಸಗಾರರಿಗೂ ಪ್ಲಾಂಟರ್‌ಗಳಿಗೂ ಮುಖಾಮುಖಿ ಸಂಪರ್ಕ ಇದ್ದಾಗ, ಕೆಲಸಗಾರರು ಪ್ಲಾಂಟರ್ ಕೈಯಿಂದಲೇ ನೇರವಾಗಿ ಸಂಬಳ ಪಡೆಯುತ್ತಿದ್ದರು. ಈಗ ಪ್ಲಾಂಟರ್ ಕೈಯಿಂದ ನೇರವಾಗಿ ಸಂಬಳ ಪಡೆಯುತ್ತಿಲ್ಲ. ಕೆಲಸಗಾರರು ಈಗ ಮೇಸ್ತ್ರಿಯ ಕೈಯಿಂದ ಸಂಬಳ ಪಡೆಯುತ್ತಿದ್ದಾರೆ. ಮೇಸ್ತ್ರಿ ಪ್ಲಾಂಟರ್ ಕೈಯಿಂದ ಸಂಬಳ ಪಡೆದು, ಅದನ್ನು ತನ್ನ ಸಂಪರ್ಕದ ಕೆಲಸಗಾರರಿಗೆ ಕೊಡುತ್ತಾನೆ. ಹಾಗಾಗಿ ಮೇಸ್ತ್ರಿಗಳಿಗೆ ಸ್ವಲ್ಪಮಟ್ಟಿನ ಕಿಮ್ಮತ್ತು ಬಂದಿದೆ. ಆದರೆ ಇಂತಹ ಮೇಸ್ತ್ರಿಗಳು ಆರ್ಥಿಕವಾಗಿ ಏಳಿಗೆ ಹೊಂದಿರುವ ಉದಾಹರಣೆಗಳು ಕಾಣುವುದಿಲ್ಲ. ವಲಸೆ ಮೇಸ್ತ್ರಿಗಳು ತಮ್ಮ ಸಂಪರ್ಕದ ಕೆಲಸಗಾರರನ್ನು

ವರ್ಷಗಟ್ಟಲೆ ಒಬ್ಬನೇ ಪ್ಲಾಂಟರ್ ಮನೆಯಲ್ಲಿ ಕೆಲಸ ಮಾಡುತ್ತಿದ್ದಾಗ, ಕಾರ್ಮಿಕರನ್ನು ಪ್ಲಾಂಟರ್‌ಗಳು ಅತ್ಯಂತ ಹೀನಾಯವಾಗಿ ನಡೆಸಿಕೊಳ್ಳುತ್ತಿದ್ದರು. ಕಾರ್ಮಿಕರ ಕಷ್ಟ, ಮದುವೆ ಮುಂತಾದುವುಗಳಿಗೆ ಸಾಲ ಕೊಟ್ಟು, ಒಂದಕ್ಕೆ ಹತ್ತು ಬರೆದು, ಹತ್ತಾರು ವರ್ಷ ದುಡಿದರೂ ಸಾಲ ತೀರಿಲ್ಲ ಎಂದು ತಲೆಮಾರುಗಳವರೆಗೆ ದುಡಿಸಿಕೊಳ್ಳುತ್ತಿದ್ದರು. ಈಗ ಹೊಸ ತಲೆಮಾರಿನ ಕಾರ್ಮಿಕರು ಅದಕ್ಕೆ ಸೊಪ್ಪು ಹಾಕುತ್ತಿಲ್ಲ. ಒಂದು ಊರಿನಿಂದ ಬೇರೆ ಊರುಗಳಿಗೆ, ದೂರದ ಊರುಗಳಿಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ ಪರ್ಮನೆಂಟ್ ಕೆಲಸಗಾರರು ಇಲ್ಲ. ಇದರಿಂದ ಪ್ಲಾಂಟರ್‌ಗಳಿಗೆ ಕೆಲಸಗಾರರನ್ನು ಹಳೆಯ ಮಾದರಿಯಲ್ಲಿ ತಮ್ಮ ನೇರ ಹಿಡಿತದಲ್ಲಿಟ್ಟುಕೊಳ್ಳಲು ಆಗುತ್ತಿಲ್ಲ. ಆದರೆ ಇದರ ಪರಿಣಾಮವಾಗಿ ಕಾರ್ಮಿಕ ಇಲಾಖೆಯಿಂದ ಕಾರ್ಮಿಕರಿಗೆ ಸಿಗಬೇಕಿದ್ದ ಕನಿಷ್ಠ ಸೌಲಭ್ಯಗಳೂ ಕೂಡ ಸಿಗುತ್ತಿಲ್ಲ.

ದುರುಪಯೋಗ ಮಾಡಿಕೊಳ್ಳುತ್ತಿರುವ ಉದಾಹರಣೆಗಳೂ ಇವೆ.

ಲೈನುಗಳು

ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಕೆಲಸಗಾರರು ಸಾಂದರ್ಭಿಕವಾಗಿ ಮತ್ತು ವರ್ಷಗಟ್ಟಲೆ ವಾಸ ಮಾಡಲು ಮಾಲಿಕರು ತಮ್ಮ ತೋಟಗಳಲ್ಲೆ ಸಾಮಾನ್ಯ ಹೆಂಚಿನ ಮನೆಗಳನ್ನು ಕಟ್ಟಿಸಿರುತ್ತಾರೆ. ಇವನ್ನು ಲೈನು ಎಂದು ಕರೆಯುತ್ತಾರೆ. ಒಂದು ಕಾಲದಲ್ಲಿ ಕರಾವಳಿ ಪ್ರದೇಶದಿಂದ ಮಲೆನಾಡಿಗೆ ಕಾಫಿ ತೋಟದ ಕೆಲಸಕ್ಕೆ ಬರುವ ಕೆಲಸಗಾರರು ಮಾತ್ರ ಈ ಲೈನುಗಳಲ್ಲಿ ವಾಸ ಮಾಡುತ್ತಿದ್ದರು. ಈಗ ಅವರೂ ಇದ್ದಾರೆ. ಜೊತೆಗೆ ಮಧ್ಯಕರ್ನಾಟಕ ಮತ್ತು ಉತ್ತರ ಕರ್ನಾಟಕದಿಂದ ಮಲೆನಾಡಿನ ಕಾಫಿ ತೋಟಗಳಿಗೆ ವಲಸೆ ಬರುವ ಕಾರ್ಮಿಕರು ಈ ಲೈನುಗಳಲ್ಲಿ ಉಳಿದುಕೊಳ್ಳುತ್ತಾರೆ. ಪ್ಲಾಂಟರ್‌ಗಳು ತಮ್ಮ ಅಗತ್ಯದ ಕೆಲಸಗಾರರ ಪ್ರಮಾಣವನ್ನು ಅವಲಂಬಿಸಿ ಈ ಲೈನುಗಳನ್ನು ಕಟ್ಟಿಸಿರುತ್ತಾರೆ. ಒಂದು ಲೈನಿನಲ್ಲಿ ಇಂತಿಷ್ಟೇ ರೂಮುಗಳು ಇರಬೇಕೆಂದಿಲ್ಲ. ಲೈನಿನ ಉದ್ದವನ್ನು ಅವಲಂಬಿಸಿ ಆ ಲೈನಿನ ರೂಮುಗಳ ಸಂಖ್ಯೆ ಬದಲಾಗುತ್ತಾ ಹೋಗುತ್ತದೆ. ಅದೇ ರೀತಿಯಲ್ಲಿ ಪ್ಲಾಂಟರ್‌ಗಳಿಗೆ ಎಷ್ಟು ಎಕರೆ ಕಾಫಿ ತೋಟವಿದೆ ಮತ್ತು ಅವರಿಗೆ ಎಷ್ಟು ಜನ ಕೆಲಸಗಾರರು ಬೇಕು ಎಂಬುದನ್ನು ಅವಲಂಬಿಸಿ ಲೈನುಗಳ ಸಂಖ್ಯೆ ಬದಲಾಗುತ್ತಾ ಹೋಗುತ್ತದೆ. ಕೆಲವು ತೋಟಗಳಲ್ಲಿ ಒಂದು ಲೈನು ಇರಬಹುದು, ಮತ್ತೆ ಕೆಲವು ತೋಟಗಳಲ್ಲಿ ಎರಡು ಮೂರು ಲೈನುಗಳು ಇರಬಹುದು. ಇನ್ನೂ ಕೆಲವು ದೊಡ್ಡ ತೋಟಗಳಲ್ಲಿ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗಿರಬಹುದು.

ನಾಡಿನ ಸಾಮಾಜಿಕ ವಸ್ತುಸ್ಥಿತಿಯನ್ನು ಪರಿಶೀಲನೆ ಮತ್ತು ಮೌಲ್ಯಮಾಪನ ಮಾಡುವಾಗ ಕೇರಿಗಳ, ಓಣಿಗಳ ಮತ್ತು ಕೊಳಗೇರಿಗಳ ಸ್ಥಿತಿಯನ್ನು ಎಲ್ಲರೂ ರೆಫರ್ ಮಾಡುತ್ತಾರೆ. ಅದನ್ನು ಕುರಿತು ಬಂದಿರುವ ವಿವಿಧ ಪ್ರಕಾರದ ಸಾಹಿತ್ಯವನ್ನು ಮತ್ತು ಅಂತಹ ಸಾಹಿತಿಗಳನ್ನು ಮನಸೋ ಇಚ್ಛೆ ಹೊಗಳಿ ವೈಭವೀಕರಿಸುತ್ತಾರೆ. ನಾಡಿನ ಅಧೋಲೋಕ ಇರುವುದೇ ಅಲ್ಲಿ ಮಾತ್ರ ಎಂಬ ಸೀಮಿತ ಭ್ರಮೆಯೂ ಈ ಮೂಲಕ ನಿರ್ಮಾಣವಾಗಿದೆ. ಈ ಸೀಮಿತ ಭ್ರಮೆಯ ಸಂಕುಚಿತ ದೃಷ್ಟಿಕೋನವು ಕಾಫಿ ತೋಟಗಳ ಲೈನುಗಳನ್ನು ನೋಡದಂತೆ ಮಾಡಿದೆ. ನಾಡಿನ ಕರಾಳ ಹಾಗೂ ವಿಕೃತ ವಸ್ತುಸ್ಥಿತಿಯು ಅದೆಷ್ಟೋ ವರ್ಷಗಳಿಂದ ಕಾಫಿ ತೋಟದ ಲೈನುಗಳಲ್ಲಿ ನಿರಂತರವಾಗಿ ಸುಸ್ತಾಗಿ ಬಸವಳಿದು ತೆವಳುತ್ತಿದೆ. ಕೇರಿಗಳ ಒಳಗೆ ಮತ್ತು ಕೊಳಗೇರಿಗಳ ಒಳಗೆ ಎಚ್ಚೆತ್ತುಕೊಂಡ ಕೆಲವರಾದರೂ ತಮ್ಮ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಸಂಘಟನೆಗಳನ್ನು ಕಟ್ಟಿಕೊಂಡಿದ್ದಾರೆ. ತಮ್ಮ ವ್ಯಾಪ್ತಿಯ ಹೋರಾಟಗಳನ್ನು ಮಾಡುತ್ತಿದ್ದಾರೆ. ಹಾಗಾಗಿ ಇದು ಕನಿಷ್ಠ ಪಕ್ಷ ಹೊರಜಗತ್ತಿಗೆ ಪರಿಚಯವಾಗಿದೆ. ಆದರೆ ಈ ಯಾವ ಬೆಳವಣಿಗೆಗಳೂ ಕಾಫಿ ತೋಟದ ಲೈನುಗಳಲ್ಲಿ ನಡೆದಿಲ್ಲ.

ಈ ಲೈನುಗಳಲ್ಲಿ ಬಹುತೇಕ ಬೇರೆ ಊರುಗಳಿಂದ ಬರುವ ಕೆಲಸಗಾರರೇ ವಾಸ ಮಾಡುತ್ತಾರೆ. ಸ್ಥಳೀಯ ಕೆಲಸಗಾರರು ಈ ಲೈನುಗಳಲ್ಲಿ ವಾಸ ಮಾಡಲು ಬಯಸುವುದಿಲ್ಲ ಅಥವಾ ವಾಸ ಮಾಡುವುದಿಲ್ಲ. ಸಾಮಾಜಿಕ ಶ್ರೇಣೀಕರಣದಲ್ಲಿ ಹೊಲಗೇರಿಗಳು ಮತ್ತು ಮಾದಿಗ ಕೇರಿಗಳು 'ಅತ್ಯಂತ ಕೀಳು' ಎಂಬ ಭಾವನೆ ಇದೆ. ಆದರೆ ಸ್ಥಳೀಯ ಹೊಲಗೇರಿಗಳ ಜನರ ಭಾವನೆಯ ಪ್ರಕಾರ 'ಆ ಲೈನುಗಳು ಈ ಹೊಲಗೇರಿಗಿಂತಲೂ ಕೀಳು'. ಸ್ಥಳೀಯ ಕೆಲಸಗಾರರು ಆಕಸ್ಮಿಕವಾಗಿ ಆ ಲೈನುಗಳಲ್ಲಿ ವಾಸಮಾಡುವ ಪರಿಸ್ಥಿತಿ ಬಂದರೆ, ಆ ಲೈನುಗಳಿಗೆ ಅವರ ಬಂಧುಬಳಗದವರು ಹಾಗೂ ನೆಂಟರಿಷ್ಟರು ಅಷ್ಟಾಗಿ ಹೋಗುವುದಿಲ್ಲ. ಮದುವೆ ಮುಂತಾದ ಕಾರ್ಯಕ್ರಮಗಳನ್ನು ಅಲ್ಲಿ ಮಾಡುವುದಿಲ್ಲ. ವಿಚಿತ್ರವೆಂದರೆ ಅದೇ ಲೈನುಗಳಲ್ಲಿ ಕರ್ನಾಟಕದ ಬೇರೆ ಭಾಗಗಳಿಂದ ವಲಸೆ ಬರುವ ಬೇರೆ ಜಾತಿಯ ಕೆಲಸಗಾರರು ವಾಸ ಮಾಡುತ್ತಾರೆ.

ಈ ಲೈನುಗಳು ಸಂಪೂರ್ಣವಾಗಿ ಪ್ಲಾಂಟರ್‌ಗಳ ಜಮೀನಿನ ಒಳಗೇ ಇರುತ್ತವೆ. ಪ್ರತಿಯೊಂದು ಲೈನಿನಲ್ಲಿ ಹಲವು ರೂಮುಗಳು ಇರುತ್ತವೆ. ಅವು ಸಾಮಾನ್ಯವಾಗಿ 10ಥ10 ಚದರ ಅಡಿಯಷ್ಟು ಅಳತೆಯವಾಗಿರುತ್ತವೆ. ಲೈನುಗಳಲ್ಲಿ ನೀರಿನ ವ್ಯವಸ್ಥೆ ಇರಬಹುದು; ಇಲ್ಲದೆ ಇರಬಹುದು. ಕರೆಂಟ್ ಇರಬಹುದು ಇಲ್ಲದೆ ಇರಬಹುದು. ಯಾವುದೇ ಕಾರಣಕ್ಕೂ ಪ್ರತಿ ವರ್ಷ ಲೈನುಗಳಿಗೆ ಸುಣ್ಣಬಣ್ಣ ಬಳಿಯುವುದಿಲ್ಲ. ರೂಮುಗಳಿಗೆ ಕಿಟಕಿಗಳು ಇರುವುದಿಲ್ಲ. ಬಾಗಿಲುಗಳು ತುಕ್ಕುಹಿಡಿದು ಹೋಗಿರುತ್ತವೆ. ಬಚ್ಚಲು ಮತ್ತು ಟಾಯ್‌ಲೆಟ್ ಇರುವುದಿಲ್ಲ. ಮಹಿಳಾ ಕೆಲಸಗಾರರು ಸ್ನಾನ ಮಾಡಲು ಮತ್ತು ಟಾಯ್‌ಲೆಟ್ಟಿಗೆ ಹೋಗಲು ಎಂತಹ ಸ್ಥಿತಿ ಇರಬಹುದು ಎಂಬುದನ್ನು ಊಹಿಸಿಕೊಳ್ಳಬೇಕು.

ಒಲೆಯ ಬೆಂಕಿಯ ಹೊಗೆ ಹೊರಗೆ ಹೋಗಲು ಯಾವುದೇ ವ್ಯವಸ್ಥೆ ಇರುವುದಿಲ್ಲ. ಒಲೆಗೆ ಬೆಂಕಿ ಹಾಕಿದಾಗ ಇಡೀ ರೂಮಿಗೆ ಹೊಗೆ ತುಂಬಿಕೊಳ್ಳುತ್ತದೆ. ಕೆಲವು ಲೈನುಗಳಲ್ಲಿ ಅಲ್ಲಲ್ಲಿ ಮೇಲ್ಛಾವಣಿಯ ಹೆಂಚುಗಳು ಒಡೆದುಹೋಗಿರುತ್ತವೆ. ಮಳೆಗಾಲದಲ್ಲಿ ನಿರಂತರವಾಗಿ ಲೈನುಗಳ ರೂಮುಗಳು ಸೋರುತ್ತವೆ. ಅದರ ಪಡಿಪಾಟಲು ಅಲ್ಲಿ ವಾಸ ಮಾಡುವ ಕೆಲಸಗಾರರಿಗೇ ಗೊತ್ತು. ಅವನ್ನು ಸರಿಮಾಡಿಸಿಕೊಡಿ ಎಂದು ಕೆಲಸಗಾರರು ಕೇಳುವಂತಿಲ್ಲ. ಪರಿಸ್ಥಿತಿಯನ್ನು ಅನುಭವಿಸುವಂತೆಯೂ ಇಲ್ಲ. ಇಷ್ಟೊಂದು ನಿಕೃಷ್ಟವಾದ ಈ ಲೈನುಗಳ ಸಮೀಪದಲ್ಲೆ ಪ್ಲಾಂಟರ್‌ಗಳ ಭವ್ಯ ಬಂಗಲೆಗಳು ಇವನ್ನು ಅಣಕಿಸುತ್ತಿರುತ್ತವೆ. ಆ ಭವ್ಯ ಬಂಗಲೆಗಳಲ್ಲಿ ಏನಿದೆ, ಏನಿಲ್ಲ! ಎಲ್ಲವೂ ಇದೆ. ಬೆಂಗಳೂರು ಅಲ್ಲ, ಕೆಲವು ಬಂಗಲೆಗಳು ಅಮೇರಿಕಾದಲ್ಲೊ, ಸಿಂಗಾಪುರದಲ್ಲೊ ಇವೆ ಏನೊ ಎಂಬಂತೆಯೂ ಭಾಸವಾಗುತ್ತವೆ. ಅಲ್ಲಿ ಆಧುನಿಕವಾಗಿರುವ ಎಲ್ಲಾ ಸೌಲಭ್ಯಗಳೂ ಇರುತ್ತವೆ. ಇರಲೇಬೇಕು ತಾನೆ? ಅವು ಅಲ್ಲಿಲ್ಲದೆ ಇನ್ನೆಲ್ಲಿ ಇರಬೇಕು ಹೇಳಿ? ಏನೆಲ್ಲವನ್ನೂ ಬೇಕೆಂದಾಗ ಸವಿಯುವ ಪ್ಲಾಂಟರ್‌ಗಳ ವೈಭವೋಪೇತ ಜೀವನಕ್ಕೂ; ಕೇವಲ ತುತ್ತು ಅನ್ನವನ್ನು ಬೇಯಿಸಿ ತಿನ್ನಲು ಕನಿಷ್ಠ ಸೌಲಭ್ಯ ಇಲ್ಲದ ಜೀವನಕ್ಕೂ ಇರುವ ತಾರತಮ್ಯವನ್ನು ಕುರಿತದ್ದು; ಅಸಮಾನತೆಯನ್ನು ಕುರಿತದ್ದು; ಅನ್ಯಾಯವನ್ನು ಕುರಿತದ್ದು. ಅದಕ್ಕಿಂತಲೂ ಹೆಚ್ಚಾಗಿ ಕನಿಷ್ಠ ಮಾನವೀಯತೆ ಮಣ್ಣಾಗಿ ಹೋಗಿರುವ ದುಃಸ್ಥಿತಿಗೆ ಸಂಬಂಧಿಸಿದ್ದು.

ಮಲೆನಾಡಿನ ಕೆಲವು ಭಾಗಗಳಲ್ಲಿ ಬೇರೆಯವರು ಈ ಲೈನುಗಳಿಗೆ ಪ್ರವೇಶ ಮಾಡಬೇಕಾದರೆ, ಮಾಲೀಕರ ಅನುಮತಿಯನ್ನು ಪಡೆಯಬೇಕು. ನಿಜ. ಅಂತಹ ವಿಕೃತ ಲೋಕವನ್ನು ನೋಡಲು ಇನ್ನ್ಯಾರ ಅನುಮತಿ ಬೇಕು ಹೇಳಿ. ಆ ಲೈನುಗಳಲ್ಲಿ ಎಂತಹ ಕನಸುಗಳಿರಬಹುದು, ಎಂತಹ ನೆನಪುಗಳಿರಬಹುದು. ತಮ್ಮ ರಕ್ತ ಬೆವರು ಸುರಿಸಿ ಕಾಫಿ ಬೆಳೆದು, ಅದನ್ನು ಜಗತ್ತಿನ ಜನರಿಗೆ ಒದಗಿಸುವ ಕೆಲಸಗಾರರು ವಾಸ ಮಾಡುವ ಲೈನುಗಳನ್ನು ಒಮ್ಮೆಯಾದರೂ ನೋಡಬೇಕು.

(ಮುಂದುವರಿಯುವುದು)

ಮಾಧ್ಯಮ ತನ್ನನ್ನು ಪುನರ್ ಸೃಷ್ಟಿಸಿಕೊಳ್ಳಬಲ್ಲದೆ?

ದೃಶ್ಯ ವಾರ್ತಾ ಮಾಧ್ಯಮಗಳ ಬರುವಿಕೆಯೊಡನೆ ಒಂದು ಹೊಸ ಪೀಳಿಗೆಯ ವರದಿಗಾರರು ಅಸ್ತಿತ್ವಕ್ಕೆ ಬಂದರು. ವಾರ್ತಾ ನಿರೂಪಕರು ಎಂದು ಕರೆದುಕೊಳ್ಳುವ ಈ ಗುಂಪಿನ ವರದಿಗಾರರು ತಮ್ಮನ್ನು ತಾವು ಕಲ್ಪಿಸಿಕೊಂಡಂತೆ ದೇವಾನು ದೇವತೆಗಳ ಪ್ರತಿನಿಧಿಗಳು. ಸತ್ಯ ಅವರೊಬ್ಬರಿಗೆ ಸೇರಿರುವಂತದ್ದು. ಸತ್ಯ ಮತ್ತು ವಿವೇಕದ ವಾಹಕರಾಗಿ ಅವರು ಅಣ್ಣಾ ಹಜಾರೆ ಆಂದೋಲನಕ್ಕೆ ಬಲವಾದ ಬೆಂಬಲ ನೀಡಿದರು. ಅಣ್ಣಾ ಆಂದೋಲನವನ್ನು ವಿಮರ್ಶಾತ್ಮಕವಾಗಿ ನೋಡಿ ವರದಿ ಮಾಡುವ ಬದಲಾಗಿ ಅವರು ಅದರ ಪ್ರತಿನಿಧಿಯಾಗಿ ವರದಿ ಮಾಡಿದರು.

ಉತ್ತರ ಪ್ರದೇಶದ ಚುನಾವಣೆಗಳಲ್ಲಿ ಇಂದು ಹಿಂದೆಂದಿಗಿಂತ ಹೆಚ್ಚು ಮತದಾರರು ಮತ ಚಲಾಯಿಸುತ್ತಿದ್ದಾರೆ. ನಾನು ರಾಜ್ಯದ ನನ್ನ ಪರಿಚಿತರನ್ನು ಎರಡು ಪ್ರಶ್ನೆ ಕೇಳುತ್ತೇನೆ. ಹೀಗೆ ಹೆಚ್ಚು ಜನರು ಮತ ಚಲಾಯಿಸುತ್ತಿರುವುದಕ್ಕೆ ಕಾರಣವೇನು? ಹೊಸದಾಗಿ ಮತ ಚಲಾಯಿಸುತ್ತಿರುವವರು ಯಾರು?

ಹೊಸದಾಗಿ ಮತ ಚಲಾಯಿಸುತ್ತಿರುವವರಲ್ಲಿ ಹೆಚ್ಚು ಮಂದಿ ಮೇಲ್ಜಾತಿಯವರು ಮತ್ತು ಇತರೆ ಹಿಂದುಳಿದ ವರ್ಗದವರು ಎನ್ನುತ್ತಾರೆ ಅವರು. ದಲಿತರು, ಯಾದವರು ಮತ್ತು ಮುಸ್ಲಿಮರು 1990ರ ನಂತರ ಪೂರ್ಣ ಪ್ರಮಾಣದಲ್ಲಿ ಮತ ಚಲಾಯಿಸುತ್ತಿದ್ದಾರೆ ಎನ್ನುತ್ತಾರೆ ಒಬ್ಬರು.

ರಾಜ್ಯವನ್ನು ಚೆನ್ನಾಗಿ ಬಲ್ಲ ಉತ್ತರ ಪ್ರದೇಶದಿಂದಲೇ ಬಂದ ಮತ್ತು ದೆಹಲಿಯಲ್ಲಿರುವ ಅನುಭವಿ ಪತ್ರಕರ್ತರೊಬ್ಬರ ಉತ್ತರದಿಂದ ನನಗೆ ಆಶ್ಚರ್ಯವಾಯಿತು. ಅವರ ಪ್ರಕಾರ ಈ ಚುನಾವಣೆಯಲ್ಲಿ ಚುನಾವಣಾ ಆಯೋಗ ಎರಡು ಮುಖ್ಯ ಕ್ರಮಗಳನ್ನು ತೆಗೆದುಕೊಂಡಿದೆ. ಮೊದಲನೆಯದು ಚುನಾವಣಾ ಚೀಟಿಗಳನ್ನು ಚುನಾವಣಾ ಆಯೋಗದ ಅಧಿಕಾರಿಗಳು ಮತದಾರರ ಮನೆಗಳಿಗೆ ಒಂದು ದಿನ ಮೊದಲೆ ತಲುಪಿಸುತ್ತಾರೆ ಮತ್ತು ರಾಜಕೀಯ ಪಕ್ಷಗಳು ಮತಗಟ್ಟೆಗಳ ಸಮೀಪ ಮತದಾರರಿಗೆ ಸಹಾಯ ಮಾಡಲು ಬೂತ್‌ಗಳನ್ನು ನಿರ್ಮಿಸುವುದನ್ನು ತಡೆಯಲಾಗಿದೆ.

ಚುನಾವಣಾ ಆಯೋಗ ತೆಗೆದುಕೊಂಡಿರುವ ಮತ್ತೊಂದು ಕ್ರಮವೆಂದರೆ ಸರಣಿಯಾಗಿ ಮತ ಚಲಾಯಿಸದೆ ಇರುವ ಮತದಾರರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ಅಳಿಸುವುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಮತದಾರರೊಬ್ಬರು ಸರಣಿಯಾಗಿ ಮೂರು ಚುನಾವಣೆಗಳಲ್ಲಿ ಮತ ಚಲಾಯಿಸದಿದ್ದಲ್ಲಿ ಚುನಾವಣಾ ಆಯೋಗ ಬೇರಾವುದೋ ಸ್ಥಳಕ್ಕೆ ಅವರು ಸ್ಥಳಾಂತರಗೊಂಡಿದ್ದಾರೆ ಎಂದು ತಿಳಿದು ಅವರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕುತ್ತದೆ. ಕೇಜರಿವಾಲ್ ಅವರ ಹೆಸರು ಏಕೆ ಮತದಾರರ ಪಟ್ಟಿಯಲ್ಲಿರಲಿಲ್ಲ ಎಂಬುದನ್ನು ಇದು ವಿವರಿಸುತ್ತದೆ. ಕೇಜರಿವಾಲ್ ಕಡಿಮೆ ಎಂದರೆ ಹಿಂದಿನ ಮೂರು ಚುನಾವಣೆಗಳಲ್ಲಿ ಮತ ಚಲಾಯಿಸಿರುವುದಿಲ್ಲ.

ಈಗ ಮಾಧ್ಯಮ, ಅದರಲ್ಲೂ ದೃಶ್ಯ ಮಾಧ್ಯಮದವರು ತಾವು ಎಂತಹ ಕೆಟ್ಟ ಜನರನ್ನು ದೊಡ್ಡ ನಾಯಕರಾಗಿ ಬಿಂಬಿಸುತ್ತಿದ್ದೇವೆ ಎಂಬುದನ್ನು ವಿವರಿಸಬಲ್ಲರೇ? ಮತದಾರರು ಚುನಾವಣೆಗಳಲ್ಲಿ ಮತ ಚಲಾಯಿಸಬೇಕು ಎಂಬ ಅರಿವನ್ನು ಮೂಡಿಸಲು ಕೇಜರಿವಾಲ್ ಸರಿಯಾದವರೆ? ಅವರ ಸಹಪಾಠಿ ಬದೋರಿಯ ಸಹ ಮತ ಹಾಕಲಿಲ್ಲ. ಅಣ್ಣಾ ಹಜಾರೆ ಸಹ ಮತ ಚಲಾಯಿಸುವುದಿಲ್ಲ.

ಇದು ಅಣ್ಣಾ ಹಜಾರೆಯವರ ಆಂದೋಲನ ಮತ್ತು ಅದಕ್ಕೆ ಮಾಧ್ಯಮಗಳು ನೀಡಿದ ಬೆಂಬಲದಂತಹ ದೊಡ್ಡ ವಿಷಯಗಳತ್ತ ಕೊಂಡೊಯ್ಯುತ್ತದೆ.

ಅಣ್ಣಾ ಚಳವಳಿ ಮುಖ್ಯವಾಗಿ ರಾಜಕೀಯ ವಿರೋಧಿ, ರಾಜಕಾರಣಿ ವಿರೋಧಿ ಮತ್ತು ರಾಜಕೀಯ ಸಂಸ್ಥೆಗಳ ವಿರೋಧಿ ನೆಲೆಯದು. ರಾಜಕಾರಣಿಗಳು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದಾರೆ ಎಂಬುದು ನಿಜ. ರಾಜಕೀಯ ಸಂಸ್ಥೆಗಳು ಜನರ ಅಪೇಕ್ಷೆಯನ್ನು ತುಂಬುತ್ತಿಲ್ಲ ಎಂಬುದೂ ನಿಜ. ಚುನಾವಣೆಯಲ್ಲಿ ಎಂದೂ ಗೆಲ್ಲಬಾರದಂತ ಅನೇಕ ವ್ಯಕ್ತಿಗಳು ಸಹ ಭಾರತದ ಪ್ರಜಾಪ್ರಭುತ್ವದ ನ್ಯೂನ್ಯತೆಗಳನ್ನು ಉಪಯೋಗಿಸಿಕೊಂಡು ಶಾಸನ ಸಭೆಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ ಎಂಬುದೂ ನಿಜ. ಆದರೆ ಭಾರತದ ಪ್ರಜಾಪ್ರಭುತ್ವ ಒಂದು ಶತಮಾನಕ್ಕಿಂತ ಈಚಿನದು. ಬ್ರಿಟಿಷ್ ಪ್ರಜಾಪ್ರಭುತ್ವ ಸಹ ಇಂಥದ್ದೆ ಆಘಾತಕಾರಕ ದಾರಿಯ ಮೂಲಕ ಹಾದುಬಂದಿದೆ.

ಆದರೆ ನಾವು ಈ ಪ್ರಾತಿನಿಧಿಕ ಪ್ರಜಾಪ್ರಭುತ್ವವನ್ನು ಕಿತ್ತೊಗೆದು ಅದರ ಸ್ಥಳದಲ್ಲಿ ಬೇರೆ ರೀತಿಯ ಆಡಳಿತ ವ್ಯವಸ್ಥೆಯನ್ನು ತರಬೇಕೆ?

ದೃಶ್ಯ ವಾರ್ತಾ ಮಾಧ್ಯಮಗಳ ಬರುವಿಕೆಯೊಡನೆ ಒಂದು ಹೊಸ ಪೀಳಿಗೆಯ ವರದಿಗಾರರು ಅಸ್ತಿತ್ವಕ್ಕೆ ಬಂದರು. ವಾರ್ತಾ ನಿರೂಪಕರು ಎಂದು ಕರೆದುಕೊಳ್ಳುವ ಈ ಗುಂಪಿನ ವರದಿಗಾರರು ತಮ್ಮನ್ನು ತಾವು ಕಲ್ಪಿಸಿಕೊಂಡಂತೆ ದೇವಾನು ದೇವತೆಗಳ ಪ್ರತಿನಿಧಿಗಳು. ಸತ್ಯ ಅವರೊಬ್ಬರಿಗೆ ಸೇರಿರುವಂತದ್ದು. ಸತ್ಯ ಮತ್ತು ವಿವೇಕದ ವಾಹಕರಾಗಿ ಅವರು ಅಣ್ಣಾ ಹಜಾರೆ ಆಂದೋಲನಕ್ಕೆ ಬಲವಾದ ಬೆಂಬಲ ನೀಡಿದರು. ಅಣ್ಣಾ ಆಂದೋಲನವನ್ನು ವಿಮರ್ಶಾತ್ಮಕವಾಗಿ ನೋಡಿ ವರದಿ ಮಾಡುವ ಬದಲಾಗಿ ಅವರು ಅದರ ಪ್ರತಿನಿಧಿಯಾಗಿ ವರದಿ ಮಾಡಿದರು.

ವರದಿಗಾರರಿಂದ ನಿರೂಪಕರು ಮತ್ತು ಸುದ್ದಿ ಸಂಪಾದಕರವರೆಗೆ ಎಲ್ಲರೂ ತಮ್ಮ ಚಿಂತನಾಶಕ್ತಿಯನ್ನು ಬದಿಗಿಟ್ಟು ಅಣ್ಣಾ ಆಂದೋಲನದ ಪರವಾಗಿ ವರದಿ ಮಾಡಿದರಲ್ಲದೆ ಭಿನ್ನ ಧ್ವನಿಗಳನ್ನು ಹಿಚುಕಿ ಹಾಕಿದರು.

ಮೂರು ವರ್ಷಗಳ ಹಿಂದೆ ನಾನು ಪುಣೆಗೆ ಭೇಟಿ ನೀಡಿದ್ದೆ. ಆಗ ಅಣ್ಣಾರ ಹಳ್ಳಿ ರಾಲೆಗಾನ್ ಸಿದ್ಧಿಗೆ ಭೇಟಿ ನೀಡುವ ಇಚ್ಛೆ ವ್ಯಕ್ತಪಡಿಸಿದೆ. ನನ್ನ ಅತಿಥೇಯರು ನನ್ನನ್ನು ರಾಲೆಗಾನ್ ಸಿದ್ಧಿಗೆ ಕರೆದುಕೊಂಡು ಹೋದರು. ಅಣ್ಣಾ ಹಜಾರೆಯವರ ಬಗ್ಗೆ ನನಗೆ ತಂಬಾ ಗೌರವವಿತ್ತು. ಒಂದೆರಡು ಗಂಟೆಗಳಲ್ಲಿ ಈ ಸ್ವಘೋಷಿತ ಗಾಂಧಿವಾದಿ ನನ್ನ ಕಣ್ಣುಗಳಲ್ಲಿ ರಾಕ್ಷಸನಾಗಿ ಮಾರ್ಪಾಡುಗೊಂಡರು. ವ್ಯಕ್ತಿಗತ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವಲ್ಲಿ ಅಣ್ಣಾರಿಗೆ ಗೊತ್ತಿರುವುದು ಹಿಂಸೆಯೊಂದೆ ಎಂದು ರಾಲೆಗಾನ್ ಸಿದ್ಧಿಯ ದಲಿತರು ನನಗೆ ಹೇಳಿದರು. ಅವರ ಸಾಮಾಜಿಕ ನೀತಿ ನಿಯಮಗಳು ಮತು ಅವನ್ನು ಜಾರಿಗೊಳಿಸಲು ಅವರು ನೀಡುವ ಚಾಟಿಏಟು ತಾಲಿಬಾನಿಗಳನ್ನೂ ನಾಚಿಸುವಂತಿದೆ. ತಾಲಿಬಾನಿಗಳು ಮಾಂಸಾಹಾರಿ ಆಹಾರವನ್ನು ವರ್ಜಿಸುವುದಿಲ್ಲವಲ್ಲ ಆದ್ದರಿಂದ ಅವರೆ ಸ್ವಲ್ಪ



ಮೇಲು.

ಅಣ್ಣಾ ಆಂದೋಲನದ ಬಗ್ಗೆ ಭಿನ್ನವಾದ ಅಭಿಪ್ರಾಯ ಹೊಂದಿರುವುದಕ್ಕಾಗಿ ಎನ್.ಡಿ.ಟಿ.ವಿ. ಜಾಲ ಬಿಟ್ಟರೆ ಉಳಿದ ವಾರ್ತಾ ವಾಹಿನಿಗಳು ದೂರ ಇಡುವುದಕ್ಕೆ ಮೊದಲು ರಾಳೆಗಾನ್ ಸಿದ್ದಿಯಲ್ಲಿ ಅಣ್ಣಾ ತಂದಿರುವ ಹಿಂಸಾತ್ಮಕ ಪದ್ಧತಿಗಳ ಬಗ್ಗೆ ವರದಿ ಮಾಡಲು ನಾನು ವಾರ್ತಾ ನಿರೂಪಕರುಗಳನ್ನು ಕೋರಿಕೊಂಡಿದ್ದೆ. ಇತರ ವಾಹಿನಿಗಳಿಗಿಂತ ಸ್ವಲ್ಪ ಉದಾರವಾದ ಎನ್.ಡಿ.ಟಿ.ವಿ ಸಹ ಅವರ ಹಳ್ಳಿಯಲ್ಲಿ ಅಣ್ಣಾ ಸೃಷ್ಟಿಸಿರುವ ನರಕದ ಬಗ್ಗೆ ವರದಿ ಮಾಡುವ ಧೈರ್ಯ ತೆಗೆದುಕೊಳ್ಳಲಿಲ್ಲ.

ಈಗ ಅಣ್ಣಾ ಬಗೆಗಿನ ವಿಜೃಂಭಣೆ ಕಡಿಮೆಯಾಗಿದ್ದು, ಅವರ ತಂಡದ ಮೇಲೆ ಹೆಚ್ಚು ಬೆಳಕು ಬೀಳುತ್ತಿರುವಾಗ ದೃಶ್ಯ ಮಾಧ್ಯಮ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡಬಲ್ಲದೆ?

1) ಸತ್ಯವನ್ನು ಬೆಂಬಲಿಸುವುದಕ್ಕಾಗಿ ದೃಶ್ಯ ಮಾಧ್ಯಮಗಳು ಭ್ರಷ್ಟಾಚಾರ ವಿರೋಧಿ ಹೋರಾಟಗಾರರಾದ ಭೂಷಣ್ ತಂದೆ-ಮಕ್ಕಳ ಅನೈತಿಕ ಕಾರ್ಯಗಳ ಬಗ್ಗೆ ತನಿಖೆ ನಡೆಸಬಲ್ಲುವೆ?
2) ಸತ್ಯವನ್ನು ಎತ್ತಿಹಿಡಿಯುವುದಕ್ಕೋಸ್ಕರ ದೃಶ್ಯ ಮಾಧ್ಯಮಗಳು ಭ್ರಷ್ಟಾಚಾರ ವಿರೋಧಿ ಹೋರಾಟಗಾರ್ತಿ ಶ್ರೀಮತಿ ಬೇಡಿ ಅವರ ವಿಮಾನ ಪ್ರಯಾಣಕ್ಕೆ ಸಂಬಂಧಿಸಿದ ಅನೈತಿಕ ಕೆಲಸವನ್ನು ತನಿಖೆ ಮಾಡಬಲ್ಲುವೆ?
3) ಸತ್ಯವನ್ನು ಎತಿಹಿಡಿಯುವುದಕ್ಕೊಸ್ಕರ ದೃಶ್ಯ ಮಾಧ್ಯಮಗಳು ಭ್ರಷ್ಟಾಚಾರ ವಿರೋಧಿ ಕೇಜರಿವಾಲ್ ನಡೆಸುತ್ತಿರುವ ಸರ್ಕಾರೇತರ ಸಂಸ್ಥೆಗಳ ಅನೈತಿಕ ಕಾರ್ಯಗಳನ್ನು ತನಿಖೆ ಮಾಡಬಲ್ಲುವೆ?
4) ಸತ್ಯವನ್ನು ಎತ್ತಿಹಿಡಿಯುವುದಕ್ಕೋಸ್ಕರ ದೃಶ್ಯ ಮಾಧ್ಯಮಗಳು ಅಣ್ಣಾ ತನ್ನ ಹಳ್ಳಿಯಲ್ಲಿ ಹೇರಿರುವ ಸಾಮಾಜಿಕ ನೀತಿ ನಿಯಮಗಳನ್ನು ಮತ್ತು ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು ಸರಿಪಡಿಸುವ ಹಿಂಸಾತ್ಮಕ ಮಾರ್ಗಗಳನ್ನು ತನಿಖೆ ಮಾಡಬಲ್ಲುವೆ?
5) ಸತ್ಯವನ್ನು ಎತ್ತಿಹಿಡಿಯುವುದಕ್ಕೋಸ್ಕರ ದೃಶ್ಯ ಮಾಧ್ಯಮಗಳು ಮತ್ತೊಬ್ಬ ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಬಿಸ್ವಾಸ್ ಉತ್ತರ ಪ್ರದೇಶದ ಕಾಲೇಜೊಂದರಿಂದ ಕ್ಲಾಸ್‌ಗಳನ್ನೇ ತೆಗೆದುಕೊಳ್ಳದೆ ಸಂಬಳ ಪಡೆಯುತ್ತಿರುವ ಅನೈತಿಕತೆಯ ಬಗ್ಗೆ ತನಿಖೆ ಮಾಡಬಲ್ಲುವೆ?

ಚಂದ್ರಭಾನ್ ಪ್ರಸಾದ್
ದಲಿತ್ ಡೈರಿ

ಅನು: ಎಸ್. ಮರಿಸ್ವಾಮಿ

ಭಾರತ ಅನೇಕ ಜಾತಿಗಳ, ಅನೇಕ ಜನಾಂಗಗಳ, ಅನೇಕ ಧರ್ಮಗಳ ಒಂದು ಸಮಾಜ. ರಾಜ್ಯ ವಿಧಾನ ಸಭೆ ಮತ್ತು ಸಂಸತ್ತು ಇದನ್ನು ಪ್ರತಿಬಿಂಬಿಸುತ್ತವೆ. ದೃಶ್ಯ ಮಾಧ್ಯಮ ತನ್ನ ನೌಕರ ವರ್ಗದಲ್ಲಿ ಶಾಸನ ಸಭೆಗಳಲ್ಲಿನ ವೈವಿಧ್ಯತೆಯನ್ನು ಪ್ರತಿಫಲಿಸಬಲ್ಲುದೆ?

ಉತ್ತಮ, ಚಲನ ಶೀಲ ಮತ್ತು ವೈವಿಧ್ಯ ಭಾರತಕ್ಕಾಗಿ ಮಾಧ್ಯಮ ತನ್ನನ್ನು ಪುನರ್ ರಚಿಸಿಕೊಳ್ಳಬಲ್ಲುದೆ?

* * *

ಎಲ್ಲಾ ವಿಧದ ತೀವ್ರಗಾಮಿತನ ಹೆಚ್ಚು ವೇಳೆ ತನ್ನನ್ನು ತಾನೆ ವಿಫಲಗೊಳಿಸಿಕೊಳ್ಳುವಂತದ್ದು. ದಲಿತ ತೀವ್ರಗಾಮಿತನ ಇದಕ್ಕೆ ಅಪವಾದವಾಗಲಾರದು.

ಭಾರತದಲ್ಲಿ ಮಾವೋತ್ಸೇ ತುಂಗ್ ಎಂದು ಕರೆಯಲ್ಪಡುವ ಮಾವೊ ಜೆಡಾಂಗ್ ಅವರನ್ನೆ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಮಾವೊ ಇಪ್ಪತ್ತನೇ ಶತಮಾನದ ಅತ್ಯಂತ ದೊಡ್ಡ ನಾಯಕರಲ್ಲಿ ಒಬ್ಬರು. ಅವರು 1949ರಲ್ಲಿ ನಡೆಸಿದ ಚೈನಾ ಕ್ರಾಂತಿ ಆಧುನಿಕ ಕಾಲದ ಅತಿ ಮುಖ್ಯವಾದ ಘಟನೆಗಳಲ್ಲಿ ಒಂದು. ರಷ್ಯಾದಲ್ಲಿ ಲೆನಿನ್ ನಡೆಸಿದ ಬೋಲ್‌ಶೆವಿಕ್ ಕ್ರಾಂತಿಗಿಂತ ಚೈನಾಕ್ರಾಂತಿ ದೊಡ್ಡದು ಎಂದು ನಾನು ಪರಿಗಣಿಸುತ್ತೇನೆ.

ಮಾವೋ ಒಬ್ಬ ದೊಡ್ಡ ಮಾರ್ಕ್ಸ್‌ವಾದಿ. ಅವರೊಬ್ಬ ಅಸಾಧಾರಣ ಕಮ್ಯುನಿಸ್ಟರಾಗಿದ್ದು ದುಡಿಯುವ ವರ್ಗಗಳ, ಅದರಲ್ಲೂ ರೈತಾಪಿ ಜನರ ಶಕ್ತಿ ಮತ್ತು ವಿವೇಕದಲ್ಲಿ ಸಂಪೂರ್ಣವಾಗಿ ನಂಬಿಕೆ ಇರಿಸಿದ್ದರು. ಮಾವೊ ಅವರ ಚಾರಿತ್ರಿಕ ಕ್ರಾಂತಿ ಊಳಿಗಮಾನ್ಯ ಪದ್ಧತಿಯನ್ನು ಚೈನಾದಿಂದ ಶಾಶ್ವತವಾಗಿ ಕಿತ್ತೊಗೆಯಿತು.

ಕ್ರಾಂತಿಯನಂತರ ಮಾವೊ ಚೈನಾವನ್ನು ಪ್ರಪಂಚದ ಭೂಪಟದಲ್ಲಿ ಎದ್ದು ಕಾಣುವಂತೆ ಮಾಡಬೇಕಿತ್ತು. ಅದಕ್ಕಾಗಿ ಚೈನಾ ತನ್ನ ಕೈಗಾರಿಕಾ ಮತ್ತು ಕೃಷಿ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳಬೇಕಿತ್ತು. ಯು.ಎಸ್.ಎಸ್.ಆರ್. ಎಂದು ಕರೆಯಲ್ಪಡುತ್ತಿದ್ದ ಚೈನಾದ ಬೆಂಬಲಿಗ ಕಮ್ಯುನಿಸ್ಟ್ ರಷ್ಯಾ ಕೂಡ ಎರಡನೇ ಮಹಾಯುದ್ಧದ ನಂತರ ಬಹಳ ದುಸ್ಥಿತಿಯಲ್ಲಿತ್ತು. ಪಶ್ಚಿಮದಿಂದ ದೂರವಾಗಿದ್ದ ಚೈನಾ ಕೈಗಾರೀಕರಣವನ್ನು ತನ್ನದೇ ನೆಲೆಯಲ್ಲಿ ಮಾಡಬೇಕಿತ್ತು.

ಕೈಗಾರೀಕರಣದ ಬೆನ್ನೆಲುಬು ಉಕ್ಕು. ಆದುದರಿಂದ ಚೈನಾಕ್ಕೆ ಉಕ್ಕಿನ ಅವಶ್ಯಕತೆ ಬಹಳವಿತ್ತು. ಬೇರೆ ದೇಶಗಳಲ್ಲಿ ಉಪಯೋಗಿಸುತ್ತಿದ್ದ ತಂತ್ರಜ್ಞಾನವನ್ನು ಉಪಯೋಗಿಸಿ ಉಕ್ಕು ತಯಾರಿಸುವುದನ್ನು ಬಿಟ್ಟು ಅವರು ಸಂಕೇತಗಳನ್ನು ಆರಿಸಿಕೊಂಡರು. ಕಮ್ಯುನಿಸ್ಟರಾಗಿ ಅವರು ಜನರ ಶಕ್ತಿಯಲ್ಲಿ ನಂಬಿಕೆವುಳ್ಳವರಾಗಿದ್ದರು. ಅವರು 1958ರಲ್ಲಿ ಒಂದು ಮಹಾ ಜಿಗಿತ. (ಗ್ರೇಟ್ ಲೀಪ್ ಫಾರ್ವರ್ಡ್) ಎಂಬ ಆಂದೋಲನವನ್ನು ಆರಂಭಿಸಿದರು. ಅದು 1961 ರವರೆಗೆ ನಡೆಯಿತು.

ಅನೇಕ ಕುಟುಂಬಗಳ ಸಮೂಹಗಳಾದ ಕಮ್ಯೂನ್‌ಗಳನ್ನು ಉಕ್ಕು ಉತ್ಪಾದಕ ಘಟಕಗಳನ್ನು ತಮ್ಮ ಮನೆಗಳ ಹಿತ್ತಲಲ್ಲಿ ಸ್ಥಾಪಿಸುವಂತೆ ಅವರು ಕೋರಿದರು. ಮಾಧ್ಯಮಗಳ ವಿಜೃಂಭಣೆಯೊಡನೆ ಮಾವೋ ತಮ್ಮ ಉಕ್ಕು ಉತ್ಪಾದಕ ಚಳವಳಿಯನ್ನು ಪ್ರಾರಂಭಿಸಿದರು. ಅವರ ಗುರಿ ಬ್ರಿಟನ್ನಿನ ಉಕ್ಕು ಉತ್ಪಾದನೆಯಷ್ಟನ್ನು ಚೀನಾದಲ್ಲಿ ಉತ್ಪಾದಿಸುವುದಾಗಿತ್ತು. ಅಂದರೆ 1957ರ 5.35 ಮಿಲಿಯನ್‌ಟನ್‌ನಿಂದ 10.7 ಮಿಲಿಯನ್ ಟನ್‌ಗಳಿಗೆ ಹೆಚ್ಚಿಸುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಆರು ದಶಲಕ್ಷಗಳಿಗಿಂತಲೂ ಹೆಚ್ಚು ಉಕ್ಕು ಉತ್ಪಾದನಾ ಘಟಕನಗಳನ್ನು ಸ್ಥಾಪಿಸಲಾಯಿತು. ಲೋಹ ಶಾಸ್ತ್ರದ ಯಾವುದೇ ಜ್ಞಾನವಿಲ್ಲದೆ ರೈತಾಪಿ ಕೆಲಸಗಳನ್ನು ಮಾಡಿಕೊಂಡಿದ್ದ ಸಾಮಾನ್ಯ ರೈತರನ್ನು ಉಕ್ಕು ಉತ್ಪಾದನಾ ಚಟುವಟಿಕೆಗೆ ತೊಡಗಿಸಲಾಯಿತು.

ಮಹಾ ಜಿಗಿತ ((ಗ್ರೇಟ್ ಲೀಪ್ ಫಾರ್ವರ್ಡ್) ಒಂದು ದೊಡ್ಡ ದುರಂತದಲ್ಲಿ ಕೊನೆಗೊಂಡಿತು. ರೈತರಿಂದ ಉತ್ಪದನೆಯಾದ ಈ ಉಕ್ಕು ಎಷ್ಟು ಕಳಪೆಯದಾಗಿತ್ತೆಂದರೆ ಅದನ್ನು ಉಪಯೋಗಿಸಿದಲ್ಲೆಲ್ಲಾ ಕಟ್ಟಡಗಳು ನೆಲಕ್ಕುರುಳಿದುವು. ಎಷ್ಟೋ ದಶಲಕ್ಷ ಚೀನಿಯರು ಉಪವಾಸದಿಂದ ಮರಣಹೊಂದಿದರು. ಮಾವೊ ಅವರ ಈ ಸಾಹಸ ಅವರು ಮಾಡಿದ್ದ ಚಾರಿತ್ರಿಕ ಕೆಲಸದ ಒಳಪನ್ನು ನಾಶಮಾಡಿತು. ಮಾವೊ ಕ್ರಾಂತಿ ನಡೆಸಲು ಮಾತ್ರ ಉತ್ತಮವಾದ ನಾಯಕ, ಆಡಳಿತ ನಡೆಸಲಲ್ಲ ಎಂದು ಜನರು ತಿಳಿದರು.

ಉತ್ತರ ಪ್ರದೇಶದಲ್ಲಿ ಕೂಡ ಇಂತದ್ದೇ ಒಂದು ನಡೆದುಹೋಯಿತು. ಕೇವಲ 5 ವರ್ಷಗಳ ಹಿಂದೆ ಮಾಯಾವತಿಜೀ ಅವರನ್ನು ಚುನಾವಣೆಯಲ್ಲಿ ಗೆಲ್ಲಿಸಲಾಯಿತು. ಸಾಂಪ್ರದಾಯ ಬದ್ಧ ಉತ್ತರ ಪ್ರದೇಶದ ಸಮಾಜ ಮಾಯಾವತಿಯವರಿಗೆ ಸಂಪೂರ್ಣ ಬಹುಮತ ನೀಡಿತ್ತು. ಈಗ ಅದೇ ಸಮಾಜ ಮಾಯಾವತಿಯವರ ಬಹುಜನ ಸಮಾಜ ಪಕ್ಷವನ್ನು ಸುಟ್ಟು ಬೂದಿ ಮಾಡಿದೆ.

ನಿಜ. ಅದ್ಭುತವಾದ ಕಾನೂನು ಪುಸ್ತಕವಿದ್ದರೂ ಭಾರತ ಸಮಾಜ ದಲಿತರ ಜತೆ ನ್ಯಾಯವಾಗಿ ವರ್ತಿಸುತ್ತಿಲ್ಲ. ಸಾಮಾಜಿಕ ರಂಗದಲ್ಲಿ ದಲಿತ ಮೇರು ಪುರುಷರ ಪ್ರತಿನಿಧಿತ್ವ ಬಹಳ ಕಡಿಮೆ ಇದೆ. ಲಕ್ನೋ ಮತ್ತು ನೋಯ್ಡಾದಲ್ಲಿ ಸ್ಥಾಪಿಸಲಾದ ಸ್ಮಾರಕಗಳು ಈ ಒಂದು ಶೂನ್ಯವನ್ನು ತುಂಬಿದುವು.

ಆದರೆ ಉತ್ತರ ಪ್ರದೇಶದ ಸಮಾಜ ಮಾಯಾವತಿಯವರನ್ನು ಚುನಾಯಿಸಿದ್ದು ಅಷ್ಟು ಸ್ಮಾರಕಗಳನ್ನು ಸ್ಥಾಪಿಸಲೆಂದೇ? ಉತ್ತರ ಪ್ರದೇಶ ಸಮಾಜದಲ್ಲಿ ದಲಿತರು ಶೇ.21%ರಷ್ಟಿದ್ದಾರೆ. 2007ರ ಚುನಾವಣೆಯಲ್ಲಿ ಶೇ 46%ರಷ್ಟು ಮತದಾರರು ಮಾತ್ರ ಮತ ಚಲಾಯಿಸಿದರು. ಚಲಾಯಿಸಿದ ಶೇ 30% ಮತಗಳನ್ನು ಬಿ.ಎಸ್.ಪಿ ಪಡೆಯಿತು.

ದಲಿತ ತೀವ್ರಗಾಮಿತನಕ್ಕೆ ತೆರಬೇಕಾದ ಬೆಲೆ

ನಿಶ್ಚಯವಾಗಿ ಬಿ.ಎಸ್.ಪಿಗೆ ಸಮಾಜದ ಎಲ್ಲಾ ವರ್ಗಗಳ ಜನರೂ ಮತ ಹಾಕಿದ್ದರು. ಸ್ಮಾರಕಗಳು ದಲಿತರಿಗೆ ಖುಷಿ ನೀಡಿರಬಹುದು. ಆದರೆ ಮುಲಾಯಂ ಸಿಂಗ್ ಗೂಂಡಾ ರಾಜ್ಯವನ್ನು ಮುಗಿಸಲು ಮಾಯಾವತಿಗೆ ಮತ ನೀಡಿದ ದಲಿತರಲ್ಲದವರ ಗತಿ ಏನು? 2002ರ ಚುನಾವಣಾ ಪ್ರಚಾರದಲ್ಲಿ ನೀಡಿದ ಮುಲಾಯಂ ಸಿಂಗ್ ಅವರನ್ನು ಜೈಲಿಗೆ ಕಳಿಸುವ ಭರವಸೆ ಈಡೇರಿತೆ? ಅದಕ್ಕೆ ಬದಲಾಗಿ ಮುಲಾಯಮ್ ಸಿಂಗ್‌ನ ಗೂಂಡಾಗಳು ತಮ್ಮ ಬಾವುಟಗಳನ್ನು ಬದಲಿಸಿ ಆನೆ ಸವಾರಿ ಮಾಡಿದರು ಎನ್ನುತ್ತಾರೆ ಅನೇಕ ವಿರೋಧ ಪಕ್ಷಗಳ ನಾಯಕರು.

ನಿಜ, ಮಾಯಾವತಿಯವರ ಸ್ಮಾರಕಗಳು ದಲಿತರ ಹೆಮ್ಮೆಯ ಸೂಚಕಗಳು. ಲಕ್ನೋ ಮತ್ತು ನೋಯ್ಡಾದಲ್ಲಿ ಈ ಸ್ಮಾರಕಗಳನ್ನು ಕಟ್ಟಲು ಮಾಯಾವತಿ ಮತ್ತು ಅವರ ಹತ್ತಿರದ ತಂಡ ಸರ್ಕಾರದ ಹಣ ಮತ್ತು ಶಕ್ತಿಯನ್ನು ವ್ಯಯಮಾಡಿತು. ಉತ್ತರ ಪ್ರದೇಶದ ಸಮಾಜ ಅಸಹಾಯಕರಾಗಿ ಅದನ್ನು ನೋಡುತ್ತಿತ್ತು. ಮತ ಚಲಾವಣೆಯ ಕಾಲ ಬಂದಾಗ ಕೋಪಾವಿಷ್ಟ ದಲಿತೇತರರು ಮಾಯಾ ಅವರನ್ನು ಕಿತ್ತೊಗೆಯುವುದಕ್ಕಾಗಿಯೆ ಮತಗಟ್ಟಗಳಿಗೆ ದೌಡಾಯಿಸಿದರು.



ಮಾಯಾವತಿ ಮತ್ತು ಬಿ.ಎಸ್.ಪಿಯ ಸಾವಿರಾರು ಬೆಂಬಲಿಗರು ಘೀಳಿಡಬೇಕಾದ್ದಿಲ್ಲ. ಮನುವಾದಿಗಳು ದಲಿತ ಮೇರು ವ್ಯಕ್ತಿಯನ್ನು ಕಿತ್ತೊಗೆಯಲು ಸಂಚು ನಡೆಸಿದ್ದರು ಎಂದು ವಾದಿಸುವುದರಲ್ಲಿ ಅರ್ಥವಿಲ್ಲ. ಮಾಯಾವತಿ ಹಿಂದೆ ಮೂರು ಬಾರಿ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದರು. ಉತ್ತರ ಪ್ರದೇಶದ ಪ್ರಜೆಗಳು ಅವರನ್ನು ಉಕ್ಕಿನ ವ್ಯಕ್ತಿತ್ವದ ನಾಯಕ ಎಂದು ನೋಡಿದ್ದರು. ಆದರೆ ಮಾಯಾವತಿಯವರು ತಮಗೆ ಶಾಸಕಾಂಗದಲ್ಲಿ ಸಾಕಷ್ಟು ಬಹುಮತವಿಲ್ಲ ಎಂದು ಯಾವಾಗಲು ಹೇಳುತ್ತಿದ್ದರು. ಉತ್ತರ ಪ್ರದೇಶದ ಸಮಾಜ ಅವರ ಈ ಹೇಳಿಕೆಯಲ್ಲಿ ಸತ್ಯವಿದೆ ಎಂದು ಮನಗಂಡಿತು. ಮತ್ತು ಅವರ ಪಕ್ಷಕ್ಕೆ ಬಹುಮತವನ್ನು ನೀಡಿತು. ಅದೇ ಉತ್ತರ ಪ್ರದೇಶದ ಸಮಾಜ ಈಗ ಮಾಯಾವತಿಯವರನ್ನು ಕಠಿಣವಾಗಿ ಶಿಕ್ಷಿಸಿದೆ.

ಪ್ರತಿಯೊಂದಕ್ಕೂ ನಾವು ಕೊಡಬೇಕಾದ ಬೆಲೆ ಇರುತ್ತದೆ. ಸಂಕೇತಗಳು ಕೂಡ ಬೆಲೆಯನ್ನು ಹೊಂದಿರುತ್ತವೆ. ಚೈನಾದ ಪ್ರತಿ ರೈತನಲ್ಲಿಯೂ ಇಂಜಿನಿಯರನೊಬ್ಬನಿರುತ್ತಾನೆ ಎಂಬ ಸಂಕೇತವನ್ನು ಮಹಾ ಜಿಗಿತದ ಮೂಲಕ ಎತ್ತಿ ಹಿಡಿಯ ಹೊರಟ ಮಾವೊ ಕೂಡ ಬೆಲೆ ತೆತ್ತರು. ಬಿ.ಎಸ್.ಪಿ ಕೂಡ ಬೆಲೆ ತೆತ್ತಿದೆ. ಹಿಂದಿನ ದಶಕದಲ್ಲಿ ಅನೇಕ ಸರ್ಕಾರಗಳನ್ನು ಜನರು ಮತ್ತೆ ಚುನಾಯಿಸಿ ಕಳಿಸಿದ್ದಾರೆ. ಅಧಿಕಾರ ಕಳೆದುಕೊಳ್ಳುವಿಕೆ ಸ್ಮಾರಕಗಳಿಗೆ ತೆತ್ತಬೆಲೆ.

* * *

ದೊಡ್ಡ ನಾಯಕರೂ ಸಹ ತಪ್ಪುಗಳನ್ನು ಮಾಡುತ್ತಾರೆ ಎಂದು ನಾನು ಹೇಳುತ್ತಿರುತ್ತೇನೆ. ದೊಡ್ಡ ನಾಯಕರು ಮಾಡುವ ತಪ್ಪುಗಳು ಯಾವಾಗಲೂ ದೊಡ್ಡವಿರುತ್ತವೆ.

ಬಹುಜನ ಸಮಾಜ ಪಕ್ಷದ ಹೀನಾಯ ಸೋಲು ಅನೇಕರನ್ನು ದಿಗ್ಭ್ರಮೆಗೊಳಿಸಿತು. ಬಿ.ಎಸ್.ಪಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದಿದ್ದ 206 ಸ್ಥಾನಗಳಲ್ಲಿ 126 ಸ್ಥಾನಗಳನ್ನು ಕಳೆದುಕೊಂಡಿದ್ದಲ್ಲದೆ, ಬಿ.ಎಸ್.ಪಿಯ 52 ಸ್ಪರ್ಧಿಗಳು ಠೇವಣಿ ಕಳೆದುಕೊಂಡರು. ಇದು ಬಿ.ಎಸ್.ಪಿಯ ಮುಖ್ಯಸ್ಥೆ ಮಾಯಾವತಿಯವರಿಗೆ ಒಂದು ಎಚ್ಚರಿಕೆಯ ಗಂಟೆ.

ಮತದಾರರು ಆಳುವ ಸರ್ಕಾರಗಳನ್ನು ಮತ್ತೆ ಅಧಿಕಾರಕ್ಕೆ ಹಿಂತಿರುಗಿಸುತ್ತಿರುವ ಈ ಸಂದರ್ಭದಲ್ಲಿಯೇ ಬಿ.ಎಸ್.ಪಿಯ ಸೋಲು ಬಂದಿದೆ. ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಬಿಹಾರ, ದೆಹಲಿ ಮತ್ತು ಪಂಜಾಬ್‌ಗಳ ಮತದಾರರು ಆಳುವ ಸರ್ಕಾರಗಳನ್ನೇ ಮತ್ತೆ ಚುನಾಯಿಸಿದರು. ಉತ್ತರಕಾಂಡದಲ್ಲಿ ಎರಡು ಮುಖ್ಯ ಪಕ್ಷಗಳೂ ಸಮಸಮವಾಗಿವೆ. ಆದರೆ ಉತ್ತರ ಪ್ರದೇಶದಲ್ಲಿ ಬಿ.ಎಸ್.ಪಿಯನ್ನು ಸಂಪೂರ್ಣವಾಗಿ ತೊಡೆದು ಹಾಕಿದ್ದು ಏಕೆ? ಬಿ.ಎಸ್.ಪಿಯ ಅನೇಕ ಹಿತೈಷಿಗಳು ಈ ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಇಂತಹ ಕ್ಲಿಷ್ಟ ಪ್ರಶ್ನೆಗಳು ಎದುರಾದಾಗ ನಾನು ಬಹಳವಾಗಿ ಡಾ॥ ಆರ್.ಕೆ ಭಾರತಿಯವರ ಮೊರೆ ಹೋಗುತ್ತೇನೆ. ದಲಿತರಾದ ಡಾ॥ ಆರ್.ಕೆ ಭಾರತಿಯವರು ಆಗ್ರಾದ ಡಾ॥ ಬಿ.ಆರ್.ಅಂಬೇಡ್ಕರ್ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾರೆ.

ಉತ್ತರ ಪ್ರದೇಶದ ಚುನಾವಣಾ ಪ್ರಕ್ರಿಯೆಯುದ್ದಕ್ಕೂ ಅವರು ಬಿ.ಎಸ್.ಪಿ ಚುನಾವಣೆಯಲ್ಲಿ ನೂರು ಸ್ಥಾನಗಳನ್ನೂ ದಾಟುವುದಿಲ್ಲ ಎಂದು ನನಗೆ ಆಗಾಗ ಹೇಳುತ್ತಿದ್ದರು. ಅದು ಡಾ॥ ಭಾರತಿಯವರ ಆಶಯವಲ್ಲ. ಅವರ ಸ್ಥಳೀಯ ಪರಿಸ್ಥಿತಿಯ ಗ್ರಹಿಕೆ ಅದಾಗಿತ್ತು.

ಚುನಾವಣಾ ಫಲಿತಾಂಶ ಬಂದ ಮೇಲೆ ಬಿ.ಎಸ್.ಪಿಯ ಸೋಲಿಗೆ ಕಾರಣಗಳನ್ನು ತಿಳಿದುಕೊಳ್ಳಲು ನಾನು ಮತ್ತೆ ಭಾರತಿಯವರಲ್ಲಿ ಹೋದೆ. ಅವರು ಅವರ ವಿಶ್ಲೇಷಣೆಯನ್ನು ಒಂದು ಕಥೆಯ ಮೂಲಕ ವಿವರಿಸಿದರು.

ಒಬ್ಬ ರಾಜನಿದ್ದ. ಅವನು ತನ್ನ ಪ್ರಜೆಗಳ ಯೋಗಕ್ಷೇಮವನ್ನು ತಿಳಿಯಲು ಇಚ್ಛಿಸಿದ. ಅವನು ಸಾಮಾನ್ಯನೊಬ್ಬನಂತೆ ಮಾರುವೇಷ ಧರಿಸಿ ನಿಶ್ಶಬ್ಧವಾಗಿ ಯಾರಿಗೂ ತಿಳಿಯದಂತೆ ಅರಮನೆಯಿಂದ ಹೊರಟ. ಒಂದು ಹಳ್ಳಿಯ ಸಣ್ಣ ರಸ್ತೆಯೊಂದನ್ನು ದಾಟುತ್ತಿದ್ದಾಗ ಒಂದು ಗುಡಿಸಲಿನಿಂದ ಮಕ್ಕಳು ಅಳುವುದು ಅವನಿಗೆ ಕೇಳಿಸಿತು. ಅವನು ಆ ಗುಡಿಸಲಿನೊಳಗೆ ಇಣುಕಿ ನೋಡಿದ. ಅಲ್ಲಿ ಒಬ್ಬ ಹೆಂಗಸು ಅಡುಗೆ ಮಾಡುತ್ತಿರುವುದನ್ನೂ, ಅವಳ ಎರಡು ಮಕ್ಕಳು ಅಳುತ್ತಿರುವುದನ್ನೂ ಕಂಡ. ಅಡುಗೆ ಮಾಡುವುದು ಬಹಳ ಸಮಯ ತೆಗೆದುಕೊಳ್ಳುತ್ತಿರುವುದಾಗಿ ರಾಜನಿಗೆ ಅನ್ನಿಸಿತು. ಅವನು ಗುಡಿಸಲಿನ ಒಳಹೊಕ್ಕು ಮಕ್ಕಳು ಹೀಗೆ ಅಳುತ್ತಿರುವಾಗ ಅಡುಗೆ ಮಾಡುವುದೇಕೆ ಇಷ್ಟು ಸಮಯ ತೆಗೆದುಕೊಳ್ಳುತ್ತಿದೆ ಎಂದು ಕೇಳಿದ. ಅವಳು ಈ ರೀತಿ ವಿವರಿಸಿದಳು.

ನೀನು ಅಡುಗೆ ಮಾಡುತ್ತಿರುವುದಾಗಿ ನೋಡುತ್ತಿರುವುದು ನೀರಲ್ಲದೆ ಮತ್ತೇನೂ ಅಲ್ಲ. ಆದರೆ ನೀರನ್ನೇಕೆ ಕುದಿಸುತ್ತಿರುವುದು, ಅವನು ಕೇಳಿದ. ಅಡುಗೆ ಮಾಡಲು ಮನೆಯಲ್ಲೇನೂ ಇಲ್ಲ. ಆದರೆ ನಾನು ನೀರನ್ನು ಕುದಿಸುತ್ತಿರುವುದು ಮಕ್ಕಳಿಗೆ ಅಡುಗೆಯಾಗುತ್ತಿದೆ ಎಂಬ ಕಲ್ಪನೆ ನೀಡುವುದಕ್ಕೋಸ್ಕರ. ಹಸುವೆಯಾಗಿದ್ದರೂ ಅವರು ಹೀಗೆಯೇ ಬಹಳ ಹೊತ್ತು ಅಳುತ್ತಿರಲಾರರು. ಕೊನೆಗೆ ಅವರು ಹಾಗೆಯೇ ನಿದ್ರೆ ಹೋಗುತ್ತಾರೆ. ನಾಳೆ ನನ್ನ ಸಂಸಾರಕ್ಕೆ ಏನು ಸಾಧ್ಯವೊ ಅದನ್ನು ಮಾಡುತ್ತೇನೆ.

ರಾಜ ಬಡವರಿಗಾಗಿ ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಅನೇಕ ಯೋಜನೆಗಳ ಬಗ್ಗೆ ಆ ಹೆಂಗಸಿಗೆ ಹೇಳಿದ. ಅವಳು ರಾಜನನ್ನು ದೂಷಿಸತೊಡಗಿದಳು. ಅವಳಿಗೆ ತಾನು ರಾಜನ ಜೊತೆಗೆ ಮಾತನಾಡುತ್ತಿರುವ ಅರಿವಿರಲಿಲ್ಲ. ಸಾಮಾನ್ಯನ ವೇಷದಲ್ಲಿದ್ದ ರಾಜ, "ರಾಜನಿಗೆ ನಿನ್ನ ಸಮಸ್ಯೆಯ ಅರಿವಿಲ್ಲದಿರುವಾಗ ಅವನನ್ನೇಕೆ ದೂಷಿಸುವುದು", ಎಂದು ಆ ಕೋಪಾವಿಷ್ಟ ಹೆಂಗಸನ್ನು ಕೇಳಿದ. 'ರಾಜನಿಗೆ ನನ್ನ ದುಃಖದ ಕಲ್ಪನೆಯಿಲ್ಲದಿದ್ದಲ್ಲಿ ಅವನು ರಾಜನಾಗಲೇ ಲಾಯಕ್ಕಿಲ್ಲ' ಎಂದಳು ಆ ಹೆಂಗಸು. ದೇವರು ಇದನ್ನೆಲ್ಲಾ ನೋಡುತ್ತಿರುತ್ತಾನೆ ಎಂದೂ ಸೇರಿಸಿದಳು.

ಬಿ.ಎಸ್.ಪಿಯ ರಾಜಕೀಯ ಸಂಸ್ಕೃತಿಯಲ್ಲಿ ನಾಯಕರು ತಮ್ಮದಲ್ಲದ್ದ ವೇದಿಕೆಯಲ್ಲಿ ಭಾಗವಹಿಸುವುದು ಅಪರೂಪ. ಹೆಚ್ಚು ವೇಳೆ ರಾಜಕೀಯ ತರಾತುರಿಗಲ್ಲದೆ ಮೇಲ್ದರ್ಜೆಯ ಬಿ.ಎಸ್.ಪಿಯೇತರ ಸದಸ್ಯರನ್ನು ಸಂಧಿಸುವುದಿಲ್ಲ. ಅದು ಪರವಾಗಿಲ್ಲ. ಆದರೆ ಒಂದು ಸಾರಿ ಮುಖ್ಯಮಂತ್ರಿಯಾದ ಮೇಲೆ ಮುಖ್ಯಮಂತ್ರಿಯು ಸಮಾಜದ ಎಲ್ಲ ವರ್ಗಗಳಿಗೆ ಸಿಗುವಂತಿರಬೇಕು. ಅನೇಕ ಸಾರಿ ಮುಖ್ಯಮಂತ್ರಿಗಳು ತಮ್ಮ ಪಕ್ಷದವರಲ್ಲದವರ ಸಮಾರಂಭಗಳನ್ನು ಉದ್ಘಾಟನೆ ಮಾಡುವುದನ್ನು ನಾವು ಕಾಣುತ್ತೇವೆ. ಉದಾಹರಣೆಗೆ ಮುಖ್ಯಮಂತ್ರಿಗಳು ರೋಟರಿ ಕ್ಲಬ್‌ನ ವಾರ್ಷಿಕ

ತನ್ನ ಸುತ್ತ ಕೋಟೆ ಕಟ್ಟಿಕೊಂಡದ್ದು ಕೂಡ ಮಾಯಾರ ದುಃಖವನ್ನು ಹೆಚ್ಚಿಸಿತು

ಸಮಾರಂಭವನ್ನು ಉದ್ಘಾಟಿಸುವುದನ್ನು ನಾವು ನೋಡುತ್ತೇವೆ. ಮುಖ್ಯಮಂತ್ರಿಗಳು ಅನೇಕ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಭೇಟಿ ಮಾಡುವುದನ್ನು ನಾವು ಕಾಣುತ್ತೇವೆ.

ವ್ಯಕ್ತಿಗಳೂ ಸಹ ಅನೇಕ ಬಾರಿ ಮುಖ್ಯಮಂತ್ರಿಗಳನ್ನು ಬೇರೆ ಬೇರೆ ಕಾರಣಕ್ಕೆ ಸಂಧಿಸುತ್ತಾರೆ. ಆದರೆ ಇದಕ್ಕೆ ತದ್ವಿರುದ್ಧವಾದುದ್ದು ಉತ್ತರ ಪ್ರದೇಶದಲ್ಲಿ ನಡೆಯಿತು. ಕೆಲವು ಅಧಿಕಾರಿಗಳು ಮತ್ತು ಕೆಲವು ಮಂತ್ರಿಗಳನ್ನು ಬಿಟ್ಟರೆ ಮಾಯಾವತಿಯವರು ತಾನು ಆಳುವ ರಾಜ್ಯದ ಯಾರನ್ನೂ, ಯಾವ ವ್ಯಕ್ತಿಯನ್ನೂ ಭೇಟಿಯಾಗಲಿಲ್ಲ. ಅವರು ಸಂಪೂರ್ಣವಾಗಿ ತಮ್ಮನ್ನು ಜನರಿಂದ ದೂರವಿರಿಸಿಕೊಂಡಿದ್ದರು. ಅವರ ಅನೇಕ ಮಂತ್ರಿಗಳು, ಶಾಸಕರು ಮತ್ತು ಸಂಸತ್ ಸದಸ್ಯರೂ ತಮ್ಮದೇ ನಾಯಕರೊಡನೆ ಭೇಟಿಯಾಗಲು ಬೇಡಬೇಕಾಗುತ್ತಿತ್ತು. ಅವರ ಪ್ರಜೆಗಳಿಗೆ ಅವರು ಇಲ್ಲದಿದ್ದ ಹಾಗೆಯೇ ಇತ್ತು.

ಒಂದು ವರ್ಷದ ಹಿಂದೆ ಅವರು ಜನ ಸಂಪರ್ಕ ಕಾರ್ಯಕ್ರಮಗಳನ್ನು ಪ್ರಾರಂಭಿಸಿದರು. ಇದು ತಡವಾಗಿ ಬಂದ ಪ್ರಜ್ಞೆ, ಇದು ಜನರಿಗೆ ಸಹಾಯವಾಗುವ ಬದಲು ಜನರಲ್ಲಿ ಭಯಭೀತಿ ಉಂಟುಮಾಡಿತು. ಹಳ್ಳಿಗಳು ಸುತ್ತುವರೆಯಲ್ಪಟ್ಟವು. ಪ್ರಜೆಗಳನ್ನು ಅವರ ಮನೆಯಿಂದ ಹೊರಗೆ ಬರದಂತೆ ಕೋರಲಾಯಿತು. ಆ ಸ್ಥಳದ ಕೆಲವು ಆರಿಸಿದ ಪದಾಧಿಕಾರಿಗಳನ್ನು ಸ್ಥಳೀಯರೆಂದು ಅವರ ಮುಂದೆ ಹಾಜರುಪಡಿಸಲಾಯಿತು. ಆ ಜನ ಮಾಯಾವತಿಯವರು ಕೇಳಲು ಇಚ್ಛೆಪಡುತ್ತಿದ್ದುದನ್ನೇ ಹೇಳುತ್ತಿದ್ದರು. ಈ ಜನ ಸಂಪರ್ಕ ಸಭೆಗಳನ್ನು ತಕ್ಷಣವೇ ನಿಲ್ಲಿಸಲಾಯಿತು. ಜನ ಮಾಯಾವತಿಯವರನ್ನು ಅವರ ಪತ್ರಿಕಾಗೋಷ್ಠಿಗಳ ಮೂಲಕ ನೋಡುತ್ತಿದ್ದರು. ಅವೂ ಕೂಡ ವರ್ಷಕ್ಕೆ ಒಂದೊ ಎರಡೊ ಬಾರಿ ನಡೆಯುತ್ತಿದ್ದವು. ಮಾಯಾವತಿಯವರು ನಮ್ಮ ಸುತ್ತ ಕೋಟೆ ಕಟ್ಟಿಕೊಂಡದ್ದು ಅವರ ತೊಂದರೆಗಳನ್ನು ಹೆಚ್ಚಿಸಿತ್ತು.

ನಾನು ನನ್ನ ಸ್ನೇಹಿತರೊಡನೆ ಮತ್ತು ಉತ್ತರ ಪ್ರದೇಶದ ಬಿ.ಎಸ್.ಪಿ ಬೆಂಬಲಿಗರೊಡನೆ ಮಾತನಾಡುವಾಗ ಅವರೆಲ್ಲರ ಒಕ್ಕೊರಲಿನ ದೂರು ಎಂದರೆ ಮಾಯಾವತಿಯವರ ಸಲಹೆಗಾರರು ಅವರಿಗೆ ಚೂರಿ ಹಾಕಿದರು ಎಂಬುದು.

ಡಾ॥ ಭಾರತಿಯವರ ರಾಜ ಮತ್ತು ಬಡ ಮಹಿಳೆಯ ಕಥೆಯಲ್ಲಿನ ದೇವರು ಇದನ್ನೆಲ್ಲಾ ನೋಡುತ್ತಿರುತ್ತಾನೆ ಎಂಬಂತೆ ಉತ್ತರ ಪ್ರದೇಶದ ಬಹಳಷ್ಟು ಜನ ಮತದಾರರು ಮಾಯಾವತಿಯವರನ್ನು ಐದು ವರ್ಷಗಳ ಕಾಲ ನೋಡುತ್ತಿದ್ದರು ಮತ್ತು ತಮ್ಮ ತೀರ್ಮಾನವನ್ನು ಪ್ರಕಟಿಸುವುದಕ್ಕಾಗಿ ಮತದಾನದ ದಿನಕ್ಕಾಗಿ ಕಾಯ್ದಿದ್ದರು. ಬಿ.ಎಸ್.ಪಿ ತನ್ನ ಅನುಭವದಿಂದ ಪಾಠ ಕಲಿಯುತ್ತದೆ ಎಂದು ಆಶಿಸೋಣ.

* * *

ಗೂಂಡಾರಾಜ್ಯ ಎಂದರೇನು?

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಗೆದ್ದು ಅಧಿಕಾರಕ್ಕೆ ಬರುತ್ತಿದ್ದಂತೆಯೆ ಗೂಂಡಾರಾಜ್ಯದ ಮಾತು ಕೇಳಿ ಬರುತ್ತಿದೆ. ಸಮಾಜವಾದಿ ಪಕ್ಷದ ಕಾರ್ಯಕರ್ತರು ಕಾನೂನನ್ನು ಉಲ್ಲಂಘಿಸಿ ಬೀದಿ ಬೀದಿಗಳಲ್ಲಿ ತಮ್ಮ ಗೆಲುವನ್ನು ಆಚರಿಸುತ್ತಿರುವುದರಿಂದ ಅವರು ತಮ್ಮ ಟೀಕಾಕಾರರನ್ನು ನಿರಾಸೆ ಗೊಳಿಸಿರುವುದಿಲ್ಲ.

ಗೂಂಡಾರಾಜ್ಯ ಪದ ಏಕೆ ಸಮಾಜವಾದಿ ಪಕ್ಷದೊಡನೆ ಮಾತ್ರ ಗಂಟು ಹಾಕಿಕೊಂಡಿದೆ ಎಂಬ ಪ್ರಶ್ನೆ ಹೆಚ್ಚಾಗಿ ಕೇಳಲ್ಪಡುತ್ತಿಲ್ಲ ಮತ್ತು ಆ ಬಗ್ಗೆ ಚರ್ಚೆಯೂ ನಡೆಯುತ್ತಿಲ್ಲ. ಗೂಂಡಾ ರಾಜ್ಯ ಎಂದರೇನು ಎಂಬುದಕ್ಕೂ ಸ್ಪಷ್ಟ ವಿವರಣೆಯಿಲ್ಲ.

1989ರಲ್ಲಿ ಕಾಂಗ್ರೆಸ್ ಪಕ್ಷವನ್ನು ಉತ್ತರ ಪ್ರದೇಶದಿಂದ ಕಿತ್ತೊಗೆದ ಮೇಲೆ 3 ವಿವಿಧ ರಾಜಕೀಯ ಪಕ್ಷಗಳು ರಾಜ್ಯವನ್ನು ಆಳಿದವು. ಮುಲಾಯಂ ಸಿಂಗ್ ಯಾದವ್ ನೇತೃತ್ವದ ಜನತಾದಳ, ಇದು ನಂತರ ಸಮಾಜವಾದಿ ಪಕ್ಷವಾಗಿ ಪರಿವರ್ತನೆಗೊಂಡಿತು. ಭಾರತೀಯ ಜನತಾ ಪಕ್ಷ ಮತ್ತು ಬಹುಜನ ಸಮಾಜ ಪಕ್ಷ. ಈ ಮೂರು ಪಕ್ಷಗಳಿಗೂ ತಮ್ಮದೇ ಆದ ಸಾಮಾಜಿಕ ತಳಹದಿ ಇದೆ. ಸಮಾಜವಾದಿ ಪಕ್ಷಕ್ಕೆ ಯಾದವರು ಗಟ್ಟಿ ಸಾಮಾಜಿಕ ತಳಹದಿಯಾದರೆ, ಭಾರತೀಯ ಜನತಾ ಪಕ್ಷಕ್ಕೆ ವೈಶ್ಯರು ಮತ್ತು ಬ್ರಾಹ್ಮಣರು ಮತ್ತು ಬಹುಜನ ಸಮಾಜ ಪಕ್ಷಕ್ಕೆ ದಲಿತರು ಗಟ್ಟಿ ತಳಹದಿಯಾಗಿದ್ದಾರೆ.

ಆದರೆ ಬಿ.ಜೆ.ಪಿ ಮತ್ತು ಬಿ.ಎಸ್.ಪಿಗಿಂತ ಸಮಾಜವಾದಿ ಪಕ್ಷವೇ ಏಕೆ ಗೂಂಡಾ ರಾಜ್ಯ ಎಂಬ ನಾಮಫಲಕವನ್ನು ಅಂಟಿಸಿಕೊಂಡಿದೆ? ಎಸ್.ಪಿ. ಬಿ.ಜೆ.ಪಿ. ಮತ್ತು ಬಿ.ಎಸ್.ಪಿಗಿಂತ ಮೊದಲು ರಾಜ್ಯವನ್ನು ಆಳಿದ ಕಾಂಗ್ರೆಸ್‌ಗೆ ಏಕೆ ಈ ಹೆಸರು ಅಂಟಿಕೊಳ್ಳಲಿಲ್ಲ? ನಮಗೇ ತಿಳಿದಿರುವಂತೆ ಕಾಂಗ್ರೆಸ್‌ನ ಅತೀ ಮುಖ್ಯ ಸಾಮಾಜಿಕ ತಳಹದಿ ಮೇಲ್ಜಾತಿಗಳು, ದಲಿತರು ಮತ್ತು ಮುಸ್ಲಿಮರಿಂದ ಕೂಡಿತ್ತು.

ಸಮಾಜವಾದಿ ಪಕ್ಷಕ್ಕೇ ಏಕೆ ಗೂಂಡಾ ರಾಜ್ಯ ಎಂಬ ಹೆಸರು ಅಂಟಿಕೊಂಡಿತು ಎಂಬುದನ್ನು ವಿವರಿಸುವುದಕ್ಕೆ ಮೊದಲು ಗೂಂಡಾ ರಾಜ್ಯ ಎಂದರೆ ಉತ್ತರ ಪ್ರದೇಶದ ಸಾಮಾಜ ಜೀವನದಲ್ಲಿ ಅರ್ಥ ಏನು ಎಂಬುದನ್ನು ನೋಡೋಣ.

ಗೂಂಡಾಗಳು ಅಪರಾಧಿಗಳಲ್ಲ, ಅಪರಾಧಿಗಳು ಅನೇಕ ವೇಳೆ ಗೂಂಡಾಗಳಾಗಬಹುದು ಅಥವಾ ಗೂಂಡಾಗಳು ಅಪರಾಧಿಗಳಾಗಬಹುದು.

ಅಪರಾಧಿಗಳು ಅಪರಾಧ ಮಾಡುವುದನ್ನು ಒಂದು ಕಸುಬಾಗಿ ಸ್ವೀಕರಿಸಿರುತ್ತಾರೆ. ಅವರಿಗೆ ಅಪರಾಧ ಮಾಡುವುದು ಒಂದು ಜೀವನ ಮಾರ್ಗ. ಆದರೆ ಗೂಂಡಾಗಳು ಗೂಂಡಾಗಿರಿಯನ್ನು ಒಂದು ಕಸುಬಾಗಿ ಆಗಲಿ, ಅಥವಾ ಜೀವನ ನಡೆಸುವುದಕ್ಕಾಗಿಯಾಗಲಿ ಕೈಗೊಳ್ಳುವುದಿಲ್ಲ. ಗೂಂಡಾಗಳಿಗೆ ಸಾಮಾನ್ಯವಾಗಿ ಬೇರೆ ರೀತಿಯ ಜೀವನ ಮಾರ್ಗಗಳಿರುತ್ತವೆ. ಅಪರಾಧಿಗಳು ಸಾಮಾನ್ಯವಾಗಿ ಯಾರ ಕಣ್ಣಿಗೂ ಬೀಳಲಿಚ್ಛಿಸುವುದಿಲ್ಲ. ಗೂಂಡಾಗಳು ರಸ್ತೆಗಳಲ್ಲಿ ನೃತ್ಯ ಮಾಡುತ್ತಾರೆ.

ಯಾವುದೇ ಅಪರಾಧಿ ತನಗೆ ಆರ್ಥಿಕವಾಗಿ ಉಪಯೋಗವಾಗದ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದಿಲ್ಲ. ಆದರೆ ಗೂಂಡಾಗಳು ಆರ್ಥಿಕವಾಗಿ ಉಪಯೋಗವಾಗದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಗೂಂಡಾಗಿರಿ ಆರ್ಥಿಕ ಲಾಭಕ್ಕಿಂತ ಸಾಮಾಜಿಕ ಅಧಿಕಾರಕ್ಕೆ ಸಂಬಂಧಪಟ್ಟದ್ದು.

ಉದಾಹರಣೆಗೆ ಒಬ್ಬ ಸಾಮಾನ್ಯ ಮನುಷ್ಯ ಅಥವಾ ದಲಿತ ಒಂದು ಸೈಕಲ್ಲಿನಲ್ಲಿ ಬಂದು ತನ್ನ ಸೈಕಲ್ಲನ್ನು ರಸ್ತೆ ಬದಿಯ ಟೀ ಅಂಗಡಿಯಲ್ಲಿ ನಿಲ್ಲಿಸುತ್ತಾನೆ ಎಂದುಕೊಳ್ಳೋಣ. ಅಪರಾಧಿಯಾದವನು ಆ ಸೈಕಲ್ಲನ್ನು ಕದ್ದು ಬಿಡಬಹುದು ಅಥವಾ ಅವನಿಂದ ಬಲಾತ್ಕಾರವಾಗಿ ತೆಗೆದುಕೊಳ್ಳಬಹುದು. ಅದು ಅಪರಾಧಿಗೆ ಒಂದು ಆರ್ಥಿಕ ಚಟುವಟಿಕೆ. ಗೂಂಡಾ ಆ ಸೈಕಲ್ಲನ್ನು ಕಳ್ಳತನ ಮಾಡುವುದಿಲ್ಲ ಅಥವಾ ಕಿತ್ತುಕೊಳ್ಳುವುದಿಲ್ಲ. ಅವನು ಆ ಸೈಕಲ್‌ನ ಗಾಳಿ ತೆಗೆದು ಅದನ್ನು ಓಡಿಸದಂತೆ ಮಾಡುತ್ತಾನೆ. ಆ ಸೈಕಲ್‌ನವನು ಹಿಂದೆ ಬಂದು ತನ್ನ ಸೈಕಲ್ಗೆ ಏನಾಯಿತು ಎಂದು ನೋಡಿ ಅದನ್ನು ಸರಿಮಾಡಲು ಪ್ರಯತ್ನಿಸಿದಾಗ ಪಕ್ಕದಲ್ಲೇ ಕುಳಿತಿರುವ ಗೂಂಡಾ ಅವನನ್ನು ನೋಡಿ ದೊಡ್ಡದಾಗಿ ನಗುತ್ತಾನೆ. ಗೂಂಡಾಗಳು ಹೀಗೆ ದೊಡ್ಡ ಕುಖ್ಯಾತಿಯನ್ನು ಸಂಪಾದಿಸಿಕೊಂಡಿದ್ದಾರೆ.

ಯಾವುದೇ ಯುವತಿ ರಸ್ತೆಯಲ್ಲಿ ನಡೆಯುತ್ತಿರುವಾಗ ಅಪರಾಧಿಯಾದವನು ಆ ಯುವತಿಯ ಆಭರಣ ಅಥವಾ ಕೈಚೀಲದ ಕಡೆ ತನ್ನ ಕಣ್ಣನ್ನು ನಾಟಿರುತ್ತಾನೆ. ಆದರೆ ಗೂಂಡಾ ಆ ಅಸಹಾಯಕ ಯುವತಿಯ ದೇಹದ ಮೇಲೆ ತನ್ನ ಕಣ್ಣನ್ನು ನಾಟಿರುತ್ತಾನೆ. ಆ ಯುವತಿ ತಪ್ಪಿಸಿಕೊಂಡು ಓಡುತ್ತಿರುವಂತೆ ಇವನಿಂದ ಶಿಳ್ಳೆ ಪ್ರಾರಂಭವಾಗುತ್ತದೆ. ಗೂಂಡಾ ತನ್ನ ಉದ್ದೇಶವನ್ನು ಮೆರೆದಿದ್ದಾನೆ.

ಉತ್ತರ ಪ್ರದೇಶದ ಗ್ರಾಮೀಣ ಭಾಗದಲ್ಲಿ ಅಥವಾ ಸಣ್ಣ ಪಟ್ಟಣದಲ್ಲಿ ಒಂದು ಪಾನ್ ಕೊಳ್ಳಲು ಒಂದೆರಡು ರೂಪಾಯಿಗಳು ಆಗಬಹುದು. ಗೂಂಡಾ ಹಣ ನೀಡದೆ ಪಾನ್ ಬೀಡಾ ಪಡೆಯುತ್ತಾನೆ. ಅಂಗಡಿಯವನು ಹಣ ಏನಾದರು ಕೇಳಿದರೆ ಅವನಿಗೆ ಬೈಗಳು ಅಥವಾ ಕಪಾಳಕ್ಕೆ ಹೊಡೆಯಲಾಗುತ್ತದೆ. ಮರು ದಿನದಿಂದ ಪಾನ್ ಅಂಗಡಿಯವನು ಈ ರೀತಿ ಅವಮಾನಿಸಿಕೊಳ್ಳಲು ಅವಕಾಶ ನೀಡುವುದಿಲ್ಲ. ತನ್ನ ಜೊತೆಗಾರರೊಡನೆ ಗೂಂಡಾ ಬರುತ್ತಿದ್ದಂತೆಯೆ ಪಾನ್ ಅಂಗಡಿಯವನು ಅವನಿಗೆ ಎರಡು ಪಾನ್‌ಗಳನ್ನು ಕೂಡಲೇ ನೀಡುತ್ತಾನೆ.

ಟೀ ಅಂಗಡಿಯವನು ಸಹ ಗೂಂಡಾನಿಗೆ ಪುಕ್ಕಟೆ ಟೀ ಮತ್ತು ತಿಂಡಿ ನೀಡಲು ಸದಾಸಿದ್ದನಿರುತ್ತಾನೆ. ನಮಗೆ ತಿಳಿದಿರುವಂತೆ ಪಾನ್, ಟೀ. ಮತ್ತು ತಿಂಡಿ ಗೂಂಡಾ ಜೀವನ ನಡೆಸಲು ಸಾಕಾಗುವುದಿಲ್ಲ. ಆದರೆ ಗೂಂಡಾಗೆ ಪ್ರಜೆಗಳು ಹೆದರುವ ಹೊಸ ಪ್ರದೇಶವೊಂದು ದೊರೆತಿರುತ್ತದೆ.

ಅಪರಾಧಿ ಇದ್ಯಾವುದನ್ನೂ ಮಾಡುವುದಿಲ್ಲ. ಅವನು ಸೂರ್ಯ ಮುಳುಗುವುದನ್ನೇ ಕಾದಿರುತ್ತಾನೆ ಮತ್ತು ಪಾನ್ ಅಂಗಡಿಯವನು ತನ್ನ ವ್ಯಾಪಾರ ಮುಗಿಸಿ ಮನೆಗೆ ಹೊರಡುವುದನ್ನು ಕಾದಿದ್ದು ಅವನನ್ನು ದೋಚುತ್ತಾನೆ.

ಆದರೆ ಇದು ಹೇಗೆ ಗೂಂಡಾ ರಾಜ್ಯವಾದೀತು?.

ಗೂಂಡಾ ರಾಜ್ಯ ಎಂದರೆ ಗೂಂಡಾಗಳ ಆಡಳಿತ. ಗೂಂಡಾನಿಂದ ನೊಂದವನು ಹತ್ತಿರದ ಪೋಲೀಸ್ ಠಾಣೆಯಲ್ಲಿ ನ್ಯಾಯ ಕೇಳಲು ಹೋಗುತ್ತಾನೆ. ಈ ನೊಂದವನು ಏನು ಮಾಡುತ್ತಾನೆ ಎಂದು ಗಮನಿಸುತ್ತಿದ್ದ ಗೂಂಡಾಗಳು ಸಹ ಪೋಲೀಸ್ ಠಾಣೆ

ತಲುಪುತ್ತಾರೆ. ಅಲ್ಲಿ ನೊಂದವನು ಪೋಲೀಸ್ ಅಧಿಕಾರಿ ಗೂಂಡಾಗಳನ್ನು ಸಂತೋಷದಿಂದ ಬರಮಾಡಿಕೊಳ್ಳುವುದನ್ನು ನೋಡುತ್ತಾನೆ. ಒಂದೆರಡು ನಿಮಿಷಗಳ ಹಿಂದೆ ಪೋಲೀಸ್ ಅಧಿಕಾರಿ ಕುಳಿತಿದ್ದ ಕುರ್ಚಿಯಲ್ಲಿ ಗೂಂಡಾಗಳ ಮುಖ್ಯಸ್ಥ ಕೂರುತ್ತಾನೆ. ಅದು ಗೂಂಡಾಗಳ ರಾಜ್ಯ.

ಸಮಾಜವಾದಿ ಪಕ್ಷ ಅಧಿಕಾರಕ್ಕೆ ಬರುವ ಸೂಚನೆ ಸಿಗುತ್ತಿದ್ದಂತೆಯೆ ಗೂಂಡಾಗಳು ಎಲ್ಲೆಲ್ಲೂ ಕಾಣತೊಡಗಿದ್ದಾರೆ. ಕೆಲವೇ ತಿಂಗಳುಗಳ ಸಮಾಜವಾದಿ ಪಕ್ಷದ ಆಡಳಿತದಲ್ಲಿ ಗೂಂಡಾಗಿರಿ ಒಂದು ಮೆಚ್ಚುಗೆಯ ಜೀವನ ಶೈಲಿ ಆಗಿ ಬಿಡುತ್ತದೆ. ಖುಷಿಗಾಗಿ ಸಮಾಜವಾದಿ ಕಾರ್ಯಕರ್ತರಲ್ಲದವರೂ, ಯಾದವರಲ್ಲದವರೂ ಸಹ ಗೂಂಡಾಗಿರಿಗಿಳಿಯುತ್ತಾರೆ.

ಬೇರೆ ಪಕ್ಷಗಳು ಗೂಂಡಾಗಿರಿಯನ್ನು ಸಂಪೂರ್ಣವಾಗಿ ನಿರ್ನಾಮ ಮಾಡಿದ್ದುವು ಎಂದೇನಲ್ಲ. ಆದರೆ ಗೂಂಡಾಗಿರಿ ಸಮಾಜವಾದಿ ಪಕ್ಷ ಅಧಿಕಾರದಲ್ಲಿದ್ದಾಗ ಮಾತ್ರ ಮೆಚ್ಚಿನ ಜೀವನ ಶೈಲಿ ಆಗುತ್ತದೆ ಏಕೆ?

ಎಲ್ಲಿ ಸಮಾಜಗಳು, ರಾಷ್ಟ್ರಗಳು ಅಥವಾ ವರ್ಗಗಳು ಮತ್ತು ಜಾತಿಗಳಿಗೆ ಸೇರಿದ ಜನ ಆರ್ಥಿಕವಾಗಿ ಅಭಿವೃದ್ದಿ ಹೊಂದಿ ರಾಜಕೀಯವಾಗಿ ಬಲಾಢ್ಯರಾಗಿರುತ್ತಿದ್ದಂತೆಯೆ ಅವರಲ್ಲಿ ಸಾಮಾಜಿಕ ಸುಧಾರಣೆ ಆಗದಿದ್ದಲ್ಲಿ ಅವರು ಸಾರ್ವಜನಿಕ ಜೀವನದಲ್ಲಿ ಹುಚ್ಚರಂತೆ ನಡೆದುಕೊಳ್ಳುವ ಪ್ರವೃತ್ತಿ ತೋರುತ್ತಾರೆ. ಮುಲಾಯಂ ಸಿಂಗ್ ಯಾದವ್‌ರ ಸಮಾಜವಾದಿ ಪಕ್ಷ ಅಂತಹ ಸಾಮಾಜಿಕ ವರ್ಗಲಕ್ಷಣಗಳನ್ನು ಹೊಂದಿದೆ. ಠಾಕೂರ್ ಯುವಕನೊಬ್ಬ ರಿಕ್ಷಾ ಓಡಿಸುವುದನ್ನು ನಾವು ಕಾಣುವುದು ಸಾಧ್ಯ. ಅದರೆ ಯಾದವ ಯುವಕನೊಬ್ಬ ಆ ಕಸುಬಿನಲ್ಲಿರುವುದನ್ನು ಕಾಣಲಾಗುವುದಿಲ್ಲ.

ಕಷ್ಟಪಟ್ಟು ದುಡಿಯುವ ಸಮುದಾಯವಾದ ಯಾದವರು ಉತ್ತರ ಪ್ರದೇಶ ಮತ್ತು ಬಿಹಾರಗಳಲ್ಲಿ ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ್ದಾರೆ ಮತ್ತು ರಾಜಕೀಯವಾಗಿ ಬಲಾಢ್ಯರಾಗಿದ್ದಾರೆ. ಅವರು ಠಾಕೂರರಂತೆ ಆರ್ಥಿಕ ಮತ್ತು ರಾಜಕೀಯ ಮೆಲುಗೈ ಸಾಧಿಸಿದ್ದಾರೆ ಎಂದೇನಿಲ್ಲ, ಆದರೆ ಅವರು ಠಾಕೂರರ ಅಭಿವೃದ್ಧಿ ಮತ್ತು ರಾಜಕೀಯ ಮೇಲುಗೈನ ಹತ್ತಿರ ಬಂದಿದ್ದಾರೆ. ಆದರೆ ಸಮಾಜ ಠಾಕೂರರನ್ನು ಒಪ್ಪಿಕೊಳ್ಳುವಂತೆ ಯಾದವರನ್ನು ಒಪ್ಪಿಕೊಳ್ಳುವುದಿಲ್ಲ.

ಠಾಕೂರರ ಮೇಲುಗೈ ಒಂದು ಸಂಪೂರ್ಣವಾಗಿ ವಿಭಿನ್ನವಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಉಂಟಾಯಿತು. ಆಗ ಭಾರತ ಹೆಚ್ಚು ಗ್ರಾಮೀಣವಾಗಿಯೂ, ಊಳಿಗಮಾನ್ಯ ಪದ್ಧತಿಯಿಂದ ಕೂಡಿದ್ದೂ ಆಗಿತ್ತು. ತಮ್ಮ ಜೀವನಕ್ಕಾಗಿ ಯಾದವರು ಮತ್ತು ಇತರ ಹಿಂದುಳಿದ ವರ್ಗಗಳೊಳಗೊಂಡಂತೆ ಕೆಳವರ್ಗಗಳು ಮತ್ತು ದಲಿತರು ಠಾಕೂರರು ಮತ್ತು ಮೇಲ್ಜಾತಿ ಭೂಮಾಲೀಕರನ್ನು ಅವಲಂಬಿಸಿದ್ದರು. ಭಾರತ ಆಗ ಹೆಚ್ಚು ಕೈಗಾರೀಕರಣಗೊಂಡಿರಲಿಲ್ಲ. ಆದುದರಿಂದ ಈ ಕೆಳವರ್ಗಗಳು ತಮ್ಮ ಜೀವನೋಪಾಯಕ್ಕಾಗಿ ಬೇರೆಲ್ಲೂ ಹೋಗುವ ಹಾಗಿರಲಿಲ್ಲ. ಅವರು ಮೌನವಾಗಿ ಎಲ್ಲಾ ಅಪಮಾನಗಳನ್ನೂ ಸಹಿಸಿಕೊಂಡಿರಬೇಕಾಗಿತ್ತು.

ಯಾದವರ ಬೆಳವಣಿಗೆ ಒಂದು ಹೊಸ ಸಾಮಾಜಿಕ ಪರಿಸ್ಥಿತಿಯಲ್ಲಿ ಆಗಿದೆ. ಠಾಕೂರರ ದಬ್ಬಾಳಿಕೆಯ ಕಾಲಕ್ಕಿಂತ ಇಂದು ಉತ್ತರ ಪ್ರದೇಶ ಕಡಿಮೆ ಊಳಿಗ ಮಾನ್ಯ, ಕಡಿಮೆ ಗ್ರಾಮೀಣವಾಗಿದೆ. ಇಂದು ಭಾರತದಲ್ಲಿ ಕೈಗಾರಿಕಾ ಕೇಂದ್ರಗಳು ಮತ್ತು ನಗರಗಳು ಹೆಚ್ಚುತ್ತಿವೆ. ಹಿಂದಿಗಿಂತ ಇಂದು ಕೆಳವರ್ಗಗಳಿಗೆ ಜೀವನ ನಡೆಸಲು ಅನೇಕ ಅವಕಾಶಗಳಿವೆ.

ಜೊತೆಗೆ ಉತ್ತರ ಪ್ರದೇಶ ಇಂದು ಹಿಂದಿಗಿಂತ ಹೆಚ್ಚು ಪ್ರಜಾಸತ್ತಾತ್ಮಕವೂ ಮತ್ತು ಆಧುನಿಕವೂ ಆಗಿದೆ. ಯಾದವರು ಮತ್ತು ಇತರೆ ಹಿಂದುಳಿದ ವರ್ಗಗಳ ಏಳಿಗೆ ಠಾಕೂರರು ಮೈಲುಗೈ ಸಾಧಿಸಿದ್ದ ಉತ್ತರ ಪ್ರದೇಶಕ್ಕಿಂತ ಬದಲಾದ ಉತ್ತರ ಪ್ರದೇಶದಲ್ಲಿ ಉಂಟಾಗಿದೆ.

ಇದು ಉತ್ತರ ಪ್ರದೇಶ ಮತ್ತು ಬಿಹಾರದ ಯಾದವರನ್ನು ದೊಡ್ಡ ಮಾನಸಿಕ ಒತ್ತಡದಲ್ಲಿ ಹಾಕಿದೆ. ಆದುದರಿಂದ ಯಾದವರಿಗೆ ಹೊಸ ಸಾಮಾಜಿಕ ಅಂತಸ್ತನ್ನು ಗಳಿಸಿಕೊಳ್ಳಲು ಬಲ ಉಪಯೋಗಿಸುವುದೊಂದೆ ದಾರಿ ಉಳಿದಿದೆ.

ಯಾದವರು ತಮ್ಮೊಳಗೆ ಒಂದು ಸಮಾಜ ಸುಧಾರಣ ಚಳವಳಿಯನ್ನು ತರುವ ಸೂಚನೆ ನೀಡದಿದ್ದಲ್ಲಿ ಗೂಂಡಾ ರಾಜ್ಯವು ಐದು ವರ್ಷಗಳ ಕಾಲ ಪೂರ್ತಿ ಮುಂದುವರಿಯಬಹುದು. ■

NOORIE EDUCATIONAL INSTITUTIONS

NOORIE SCHOOL & COLLEGE OF NURSING

[Recognised by Government of Karnataka, Affiliated to Rajiv Gandhi University of Health Sciences, Karnataka, State Nursing Council, Banglore and Indian Nursing Council, New Delhi]

ANDERSONPET, K.G.F-563 113, KOLAR DIST., KARNATAKA

COURSES OFFERED

G.N.M : General Nursing and Midwifery (Diploma in Nursing)
Duration: Three and Half Years
Eligibility: Pass in PUC / INTER / +2 with any group.

B.Sc., NURSING : Bachelor Degree in Nursing
Duration: Four Years
Eligibility: Pass in PUC / INTER / +2 with 45% in Science Subjects.

P.C. B.Sc., NURSING: Post Basic Bachelor Degree in Nursing.
Duration: Two Years
Eligibility: Pass in GNM with one year experience.

M.Sc., NURSING : Master Degree in Nursing (P.G. Degree in Nursing)
Duration: Two Years
Eligibility: Pass in B.Sc., Nursing / P.C.B.Sc., Nursing with one year Experience.
No experience is required for candidates with P.C.B.Sc., Nursing.

PHONE: 08153-274104, 274050, MOB: 9448239600, 9845280315, 344983613

ಹೊಸ ಪುಸ್ತಕ

ದೇಶವಿದೇನಹಾ! ಕಾಲವಿದೇನಹಾ!!
ಸಂ: ಮಂಜುನಾಥ್‌ಲತಾ
ಕೆ.ಎಲ್ ಚಂದ್ರಶೇಖರ್ ಐಜೂರ್
ಬೆಲೆ: ರೂ. 140/-

'ದೇಶ ಕಾಲ' ಪತ್ರಿಕೆಯ ವಿಶೇಷಾಂಕ ಹೊರಬಂದ ಸಂದರ್ಭದಲ್ಲಿ ಆರಂಭಿಸಿದ ಚರ್ಚೆಯ ಸುತ್ತ ಪ್ರಕಟಗೊಂಡ ಬರಹಗಳ ಸಂಗ್ರಹದ ಕೃತಿ ಇದು. ಒಟ್ಟು ಸಾಂಸ್ಕೃತಿಕ ರಾಜಕಾರಣದ ಸುತ್ತ ಇತ್ತೀಚಿನ ದಿನಗಳಲ್ಲಿ ನಡೆದ ಅಪರೂಪದ ಚರ್ಚೆಗಳು ಕನ್ನಡದ ಸಾಂಸ್ಕೃತಿಕ ಲೋಕವನ್ನು ಆಳುತ್ತಿದ್ದ ಕೆಲವೇ ಜನರ ವಾರಸುದಾರಿಕೆ ಹಾಗೂ ಸಂಕುಚಿತ ಮನಸ್ಥಿತಿಯನ್ನು ಅನಾವರಣ ಗೊಳಿಸಿರುವುದನ್ನು ಪ್ರತಿ ಪುಟದಲ್ಲೂ ಕಾಣಬಹುದು. ನಾಡಿನ ಅನೇಕ ಸೃಜನ ಶೀಲ ಬರಹಗಾರರು, ಚಿಂತಕರು, ಈ ಚರ್ಚೆಗೆ ವಿಸ್ತೃತ ಬುನಾದಿ ಹಾಕಿಕೊಟ್ಟಿರುವುದರಿಂದ ಇದೊಂದು ಅಪರೂಪದ ಸಂಕಲನವಾಗಿ ಗಮನ ಸೆಳೆಯುತ್ತದೆ.

ಪ್ರ: ಮೌಲ್ಯಾಗ್ರಹ ಪ್ರಕಾಶನ, ಬೆಂ.



ಕಲಾವಿದನ ಕೊಲೆ
ಲೇ: ಹರಿಯಪ್ಪ ಪೇಜಾವರ
ಬೆಲೆ: ರೂ. 100/-

ಕವಿ-ಕಥೆಗಾರ ಹರಿಯಪ್ಪ ಪೇಜಾವರ ಮೂಲತಃ ಇಂಗ್ಲೀಷ್ ಅಧ್ಯಾಪಕರಾದರೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಈಗಾಗಲೇ 2 ಕವನ ಸಂಕಲನ ಹಾಗೂ ಒಂದು ಕಥಾ ಸಂಕಲನ ಪ್ರಕಟಿಸಿರುವ ಅವರು ಇದೀಗ ತಮ್ಮ ಮೂರನೇ ಕವನ ಸಂಕಲನದಲ್ಲಿ ಸಾಮಾಜಿಕ ವ್ಯವಸ್ಥೆ ಹಾಗೂ ಗರೆ-ಕೋರೆಗ್ ಬಗ್ಗೆ ವಾಸ್ತವಾಂಶಗಳನ್ನು ನಿರ್ಭಯವಾಗಿ, ನೇರವಾಗಿ ತೆರೆದಿಟ್ಟಿದ್ದಾರೆ. ಈ ಕವನಗಳ ವಿಶಿಷ್ಟ ಶೈಲಿಯಲ್ಲಿದ್ದು, ಪೇಜಾವರರ ಬಹುಮುಖ ಪ್ರತಿಭೆಯನ್ನು ಪರಿಚಯಿಸುತ್ತದೆ. ನಾಲ್ಕು ಭಾಗಗಳಲ್ಲಿರುವ ಈ ಕವನ ಸಂಕಲನದಲ್ಲಿ 'ತ್ಸುನಾಮಿ ಕವಿತೆಗಳು' ಹಾಗೂ 'ಕೆಲವು ತಲೆಯಿಲ್ಲದ ಸಾಲುಗಳು' ಆಸಕ್ತಿ ಮೂಡಿಸುತ್ತವೆ.

ಪ್ರ: ತಿಂಗಳ ಬೆಳಕು ಪ್ರಕಾಶನ, ಕುಂದಾಪುರ.

ಮೋಡಿಗಾರ
ಲೇ: ಪ್ರೇಮಶೇಖರ
ಬೆಲೆ: ರೂ. 140/-

ಲೇಖಕ ಪ್ರೇಮಶೇಖರ ತಮ್ಮ ಮಾಂತ್ರಿಕ ಮತ್ತು ವಾಸ್ತವ ಕಥೆಗಳನ್ನು ಒಂದೆಡೆ ಸೇರಿಸಿರುವ ವಿಶಿಷ್ಟ ಕಥಾಸಂಕಲನವಿದು. ಭಾರತ-ಪಾಕಿಸ್ತಾನ, ಧರ್ಮಾಧರ್ಮ..., ನಂಬಿಕೆ, ಅಪನಂಬಿಕೆ..., ಈ ಬದುಕು- ಹೀಗೆ ಮೂರು ವಿಭಾಗಗಳಲ್ಲಿ ಕಾಲ್ಪನಿಕ ಜಗತ್ತಿನೊಂದಿಗೆ ವಾಸ್ತವಿಕ ಅಂಶಗಳನ್ನು ಸೇರಿಸಿ ಹೆಣೆದಿರುವ ಕಥೆಗಳು ಉತ್ತಮ ನಿರೂಪಣೆಯಿಂದ ಗಮನ ಸೆಳೆಯುತ್ತವೆ. ಈ ಕಥೆಗಳಲ್ಲಿ ಭಾರತ-ಪಾಕಿಸ್ತಾನ ವಿಭಜನೆ, ಕಾಶೀರ ಸಮಸ್ಯೆ, ಹಿಂದೂ-ಮುಸ್ಲಿಂ, ಕಮ್ಯುನಿಸಂ ಹೀಗೆ ಕೆಲ ಗಂಭೀರ ವಿಷಯಗಳು ಇಣುಕಿ, ಓದುಗರನ್ನು ಜಿಜ್ಞಾಸೆಗೆ ಗುರಿಪಡಿಸುತ್ತವೆ.

ಪ್ರಕಾಶಕರು: ಪುಸ್ತಕಯಾನ, ಮೈಸೂರು

ನಿಜಗುಣ
ಲೇ: ಎಸ್.ಆರ್ ವಿಜಯಶಂಕರ
ಬೆಲೆ: ರೂ. 180/-

ಕಾವ್ಯ, ಕಥನ ಮತ್ತು ವಿಮರ್ಶೆ ಈ ಮೂರು ವಿಭಾಗಗಳನ್ನೊಳಗೊಂಡ ಈ ಕೃತಿಯಲ್ಲಿ ಸಾರಸ್ವತ ಲೋಕದ ದಿಗ್ಗಜರಾದ ಗೋಪಾಲಕೃಷ್ಣ ಅಡಿಗ, ಎಚ್. ಎಸ್. ವೆಂಕಟೇಶಮೂರ್ತಿ, ಕಾರಂತ, ಜಿ.ಎಸ್.ಎಸ್, ಡಾ. ಯು.ಆರ್. ಅನಂತಮೂರ್ತಿ, ಯಶವಂತ ಚಿತ್ತಾಲ, ಕಂಬಾರ ಅವರ ಕೃತಿಗಳ ಸಮಗ್ರ ಅಧ್ಯಯನ ನಡೆಸಿ ನೀಡಿರುವ ವಿಮರ್ಶೆ ಓದುಗರ ಬೌದ್ಧಿಕ ಮಟ್ಟವನ್ನು ಎತ್ತರಿಸುವಲ್ಲಿ ಸಫಲವಾಗಿದೆ. ಅಲ್ಲದೆ, ಹಲವು ಹೆಸರಾಂತ ಬರಹಗಾರರ ಕೃತಿಗಳನ್ನು ಲೇಖಕರು ತಮ್ಮ ವಿಮರ್ಶೆಯ ಒರೆಗಲ್ಲಿಗೆ ಹಚ್ಚಿದ್ದಾರೆ. ನಿಜಕ್ಕೂ ಇದು ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶಿಷ್ಟ ಆಕರ ಗ್ರಂಥವಾಗಿದೆ.

ಪ್ರ: ಕ್ರೈಸ್ಟ್ ವಿಶ್ವವಿದ್ಯಾಲಯದ ಕನ್ನಡ ಸಂಘ, ಬೆಂಗಳೂರು.



ಲೋಹಿಯಾ ವ್ಯಕ್ತಿ ಮತ್ತು ವಿಚಾರ
ಲೇ: ಬಾಪು ಹೆದ್ದೂರಶೆಟ್ಟಿ
ಬೆಲೆ: ರೂ. 100/-

ಸಮಾಜವಾದದ ಹರಿಕಾರ ಲೋಹಿಯಾ ಅವರಲ್ಲೇ ತಮ್ಮ ಆಂದೋಲನದ ಬಗ್ಗೆ ಗೊಂದಲ ಇತ್ತೆಂಬ ಹೊಸ ಸಂಗತಿಯನ್ನು ಈ ಕೃತಿ ವಿಶದ ಪಡಿಸುತ್ತದೆ. ಮೂಲ ತತ್ವ ಸಮಾನತೆಯ ಅಂಶವನ್ನೇ ಮರೆತ ಲೋಹಿಯಾ ಅನುಯಾಯಿಗಳ ವರ್ತನೆ ಬಗ್ಗೆ ಸಾತ್ವಿಕ ಅಸಮಾಧಾನ ಲೇಖಕರದು. ಹೀಗಾಗಿ ಅವರು ಲೋಹಿಯಾ ಅನುಯಾಯಿಗಳಿಂದಲೇ ಬರಹಗಳನ್ನು ಆಹ್ವಾನಿಸಿ, ತಮ್ಮ ಅನುಮಾನ, ಅನಿಸಿಕೆಗಳಿಗೆ ಆಧಾರ ಒದಗಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ.

ಪ್ರ: ಲಡಾಯಿ ಪ್ರಕಾಶನ, ಗದಗ.





ಮುಗಿಲ ಮರೆಯ ಮಿಂಚು
ಲೇ: ವಿಶ್ವಾರಾಧ್ಯ ಸತ್ಯಂಪೇಟೆ
ಬೆಲೆ: ರೂ. 60/-

ಬರವಣಿಗೆ ಕ್ಷೇತ್ರದಲ್ಲಿ ನೇರ-ದಿಟ್ಟ, ನಿಷ್ಠುರತೆಗೆ ಹೆಸರಾದ ವಿಶ್ವಾರಾಧ್ಯ ಸತ್ಯಂಪೇಟೆ ಅವರ ವೈಚಾರಿಕ ಬರಹಗಳ/ವ್ಯಕ್ತಿ ಚಿತ್ರಗಳ ಸಂಕಲನ ಇದಾಗಿದೆ. ಕಂಡದ್ದನ್ನು ಕಂಡಂತೆ ಹೇಳುವ ಅವರ ಶೈಲಿ ಗಮನ ಸೆಳೆಯುತ್ತದೆ. ಈ ಬರಹಗಳು ಸರಳವಾಗಿದ್ದರೂ, ಸ್ಫೋಟಕ ಮಾಹಿತಿಗಳನ್ನು ಒಳಗೊಂಡಿದೆ. ವ್ಯಕ್ತಿ ಚಿತ್ರಗಳು ವಿಭಿನ್ನವಾಗಿ ಮೂಡಿಬಂದಿವೆ. ಯಾವುದನ್ನೇ ಬರೆಯಬೇಕಾದರೂ, ಆ ಬಗ್ಗೆ ಪೂರ್ಣ ಮಾಹಿತಿ ಸಂಗ್ರಹಿಸಿ ವಸ್ತುನಿಷ್ಠವಾಗಿ ನಿರೂಪಿಸಿರುವುದು ಇವರ ಅನನ್ಯ ಶೈಲಿಯಾಗಿದೆ.

ಪ್ರ: ಅಗ್ನಿ ಅಂಕುರ ಪತ್ರಿಕೆ ಪ್ರಕಾಶನ, ಶಹಾಪುರ.

ಸಿಕ್ಕಷ್ಟು ಸೀರುಂಡೆ

ಆ ದಿನ ರಾತ್ರಿ ನಿದ್ರೆಯಲ್ಲಿದ್ದ ಮುಲ್ಲಾ ನಸ್ರುದ್ದೀನನಿಗೆ ಒಂದು ಕನಸು ಬಿತ್ತು. ಕನಸಿನಲ್ಲಿ ಆತನ ಗೆಳೆಯ ಮುಲ್ಲಾನಿಗೆ ಒಂಭತ್ತು ನಾಣ್ಯಗಳನ್ನು ನೀಡುತ್ತಿದ್ದ. ಆದರೆ ಮುಲ್ಲಾ ಕನಿಷ್ಠ ಹತ್ತು ನಾಣ್ಯಗಳನ್ನಾದರೂ ಕೊಡದಿದ್ದರೆ ಅವುಗಳನ್ನು ಸ್ವೀಕರಿಸುವುದಿಲ್ಲ ಎನ್ನುತ್ತಿದ್ದ. ಆ ಗೆಳೆಯರ ನಡುವೆ ಮಾತುಕತೆ ಮುಂದುವರಿದಿತ್ತು. ಅಷ್ಟರಲ್ಲಿ ರಸ್ತೆಯಲ್ಲಿ ಏನೋ ಜೋರಾಗಿ ಸಪ್ಪಳವಾಗಿ ಮುಲ್ಲಾನಿಗೆ ಎಚ್ಚರವಾಯಿತು. ಕಣ್ಣುಬಿಟ್ಟು ನೋಡಿದ ಮುಲ್ಲಾನ ಕೈ ಚಾಚಿದಂತೆಯೇ ಇತ್ತು, ಆದರೆ ಅದರಲ್ಲಿ ಯಾವ ನಾಣ್ಯವೂ ಇರಲಿಲ್ಲ. ತಕ್ಷಣ ಕಣ್ಣು ಮುಚ್ಚಿದ ಮುಲ್ಲಾ, 'ಆಯಿತು ಗೆಳೆಯಾ, ಆ ಒಂಭತ್ತೇ ನಾಣ್ಯಗಳನ್ನು ಕೊಡು' ಎಂದ.

ವಿಧಿಯೆಂಬ ಊಹೆ

ಒಬ್ಬ ವ್ಯಕ್ತಿ ಬಂದು ವಿದ್ವಾಂಸ ಮುಲ್ಲಾ ನಸ್ರುದ್ದೀನ್‌ನನ್ನು 'ವಿಧಿಯ ಅರ್ಥವೇನು?' ಎಂದು ಕೇಳಿದ.

'ವಿಧಿಯೆನ್ನುವುದು ಒಂದು ಊಹೆ' ಎಂದ ನಸ್ರುದ್ದೀನ್ ತನ್ನ ಗಡ್ಡ ಕೆರೆದುಕೊಳ್ಳುತ್ತಾ.

'ಅದನ್ನು ವಿವರಿಸಿ ಹೇಳುತ್ತೀರಾ?' ಆತ ಅರ್ಥವಾಗದೆ ಕೇಳಿದ. ಮುಲ್ಲಾ ಆತನೆಡೆಗೆ ನೋಡುತ್ತಾ, 'ಎಲ್ಲವೂ ಸರಿಯಾಗುತ್ತದೆ ಎಂದು ನೀನು ಊಹಿಸಿಕೊಳ್ಳುತ್ತೀಯಾ– ಆದರೆ ಆ ರೀತಿ ನಡೆಯದಾದಾಗ ಅದನ್ನು ದುರಾದೃಷ್ಟ ಎನ್ನುತ್ತಾರೆ ಅಥವಾ ನೀನು ಊಹಿಸಿದಂತೆಯೇ ನಡೆದರೆ ಅದು ನಿನ್ನ ಅದೃಷ್ಟ ಎನ್ನುತ್ತಾರೆ. ಇದೇ ರೀತಿ ನಡೆಯಬಹುದೆಂದು ನೀನು ಕೆಲವು ಕೆಲಸಗಳನ್ನು ಮಾಡುತ್ತೀಯೆ. ಆ ರೀತಿ ನಡೆಯದಾದಾಗ ನಿನಗೆ ಮುಂದಾಲೋಚನೆ ಇಲ್ಲವೆನ್ನುತ್ತಾರೆ. ನಿನಗೆ ಭವಿಷ್ಯವಾಗಲಿ ಮುಂದೆ ನಡೆಯುವುದಾಗಲಿ ತಿಳಿದಿಲ್ಲವೆಂದು ಊಹಿಸಿಕೊ, ಆಗ ಅದನ್ನೇ ನಿನ್ನ ವಿಧಿಯೆನ್ನುತ್ತಾರೆ' ಎಂದ.

ವಿಮರ್ಶಕ ಮುಲ್ಲಾ

ಆ ರಾಜ್ಯದ ಸುಲ್ತಾನನಿಗೆ ತಾನು ಇದ್ದಕ್ಕಿದ್ದಂತೆ ಕವಿಯಾಗಬೇಕೆನ್ನಿಸಿತು. ಹಗಲು ರಾತ್ರಿ ಕೂತು ಪದ್ಯವೊಂದನ್ನು ರಚಿಸಿದ. ಆ ಪ್ರಾಂತ್ಯದಲ್ಲೆಲ್ಲಾ ಅತ್ಯಂತ ಖ್ಯಾತ ಕವಿಯಾಗಿದ್ದ ನಸ್ರುದ್ದೀನ್‌ನನ್ನು ತನ್ನ ಆಸ್ಥಾನಕ್ಕೆ ಕರೆಸಿ ತನ್ನ ಕಾವ್ಯ ವಾಚನ ಆಲಿಸುವಂತೆ ಕೇಳಿದ. ಅತ್ಯಂತ ತನ್ಮಯನಾಗಿ ಸುಲ್ತಾನ ಕಾವ್ಯ ವಾಚನ ಮಾಡಿದ. ಅದು ನಸ್ರುದ್ದೀನ್ ಕೇಳಿದ ಪದ್ಯಗಳಲ್ಲೇ ಅತ್ಯಂತ ಕೆಟ್ಟದ್ದಾಗಿತ್ತು. ಆದರೂ ಸಹಿಸಿಕೊಂಡು ಮೌನವಾಗಿ ಪದ್ಯವನ್ನು ಕೇಳಿ ತಲೆದೂಗಿದ.

ಅಷ್ಟಕ್ಕೇ ಬಿಟ್ಟಿದ್ದಲ್ಲಿ ಏನೂ ಸಮಸ್ಯೆ ಇರಲಿಲ್ಲ. ಆದರೆ ಸುಲ್ತಾನ ತನ್ನ ವಾಚನ ಮುಗಿಸಿ ತನ್ನ ಕಾವ್ಯ ಹೇಗಿದೆ ಎಂದು ನಸ್ರುದ್ದೀನ್‌ನನ್ನು ಕೇಳಿದ. ನಸ್ರುದ್ದೀನ್ ಪೀಕಲಾಟಕ್ಕೆ ಸಿಕ್ಕಿಕೊಂಡ. ಆದರೆ ಆತ ನಿಷ್ಠುರವಾದಿ, ಇದ್ದದ್ದು ಇದ್ದಹಾಗೇ ಹೇಳುವವನು. 'ನಿಮ್ಮ ಕಾವ್ಯದ ಬಗೆಗೆ ನನ್ನ ಅನಿಸಿಕೆಯನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ' ಎನ್ನುತ್ತಾ ಎದ್ದುನಿಂತ. ಖ್ಯಾತ ಕವಿ ನಸ್ರುದ್ದೀನ್ ತನ್ನ ಪದ್ಯವನ್ನು ಹಾಡಿ ಹೊಗಳುತ್ತಾನೆ ಎಂದು ಸುಲ್ತಾನ್ ಗರ್ವದಿಂದ ಗಡ್ಡ ನೇವರಿಸಿಕೊಳ್ಳುತ್ತಿದ್ದ.

'ನಿಜ ಹೇಳುತ್ತೇನೆ, ನಿಮ್ಮ ಪದ್ಯ ಅತ್ಯಂತ ಕೆಟ್ಟದ್ದಾಗಿದೆ......' ಎಂದ ನಸ್ರುದ್ದೀನ್.

ಅವನ ಮಾತಿನಿಂದ ಅತ್ಯಂತ ಕೋಪಗೊಂಡ ಸುಲ್ತಾನ, 'ಸೈನಿಕರೇ! ಈ ವ್ಯಕ್ತಿಯನ್ನು ಸೆರೆಮನೆಗೆ ಹಾಕಿ' ಎಂದ. ಸೈನಿಕರು ನಸ್ರುದ್ದೀನ್‌ನನ್ನು ಹಿಡಿದುಕೊಂಡು ಹೋಗುವಾಗ 'ಸೆರೆಮನೆ ವಾಸ ಮುವ್ವತ್ತು ದಿನಗಳು....' ಎನ್ನುತ್ತಾ ಎಚ್ಚರಿಕೆಯೆಂಬಂತೆ ನಸ್ರುದ್ದೀನ್ ಕಡೆಗೆ ತನ್ನ ಬೆರಳು ತೋರಿಸಿದ.

ಮುವ್ವತ್ತು ದಿನಗಳ ಸೆರೆಮನೆ ವಾಸದ ನಂತರ ನಸ್ರುದ್ದೀನ್ ತನ್ನ ಮನೆಯಲ್ಲಿದ್ದಾಗ ಮತ್ತೊಂದು ದಿನ ಸುಲ್ತಾನನಿಂದ ಕರೆಬಂದಿತು.

ಸುಲ್ತಾನ ತನ್ನ ಮತ್ತೊಂದು ಪದ್ಯದ ವಾಚನಕ್ಕೆ ನಸ್ರುದ್ದೀನ್‌ನನ್ನು ಆಹ್ವಾನಿಸಿದ್ದ. ಎಂದಿನಂತೆ ಕಾವ್ಯವಾಚನ ನಡೆಯಿತು ಹಾಗೂ ಪುನಃ ಕವಿ ನಸ್ರುದ್ದೀನ್‌ನಿಗೆ ತನ್ನ ಅಭಿಪ್ರಾಯ ತಿಳಿಸುವಂತೆ ಹೇಳಲಾಯಿತು.



ಡಾ. ಜೆ. ಬಾಲಕೃಷ್ಣ

ಈ ಬಾರಿ ನಸ್ರುದ್ದೀನ್ ಏನೂ ಹೇಳಲಿಲ್ಲ. ಎದ್ದು ನಿಂತವನೇ ಬಾಗಿಲಿನ ಕಡೆಗೆ ನಡೆಯತೊಡಗಿದ. ಅವನ ವರ್ತನೆ ಅರ್ಥವಾಗದ ಸುಲ್ತಾನ, 'ಎಲ್ಲಿಗೆ ಹೋಗುತ್ತಿದ್ದೀಯೆ?' ಎಂದು ಕೇಳಿದ.

'ಸೆರೆಮನೆಗೆ' ಎಂದ ನಸ್ರುದ್ದೀನ್.

ಸತ್ಯವನ್ನೇ ಹೇಳುವೆ...

ತನ್ನ ನಗರಕ್ಕೆ ಸುತ್ತಮುತ್ತಲ ಜನರೆಲ್ಲಾ ನಗರದ ದ್ವಾರಪಾಲಕರಿಗೆ ಅದೂ ಇದೂ ಸುಳ್ಳು ಹೇಳಿ ನಗರಕ್ಕೆ ಬಂದು ದಾಂಧಲೆ ಮಾಡುತ್ತಿದ್ದುದು ಸುಲ್ತಾನನಿಗೆ ತಲೆನೋವಾಗಿ

ಪರಿಣಮಿಸಿತ್ತು. ಇದಕ್ಕೆ ಹೇಗಾದರೂ ಮಾಡಿ ಕಡಿವಾಣ ಹಾಕಬೇಕೆಂದು ನಿರ್ಧರಿಸಿದ ಸುಲ್ತಾನ ತನ್ನ ದ್ವಾರಪಾಲಕರಿಗೆ ನಗರಕ್ಕೆ ಬರುವವರು ಹೇಳುವ ತಮ್ಮ ಪ್ರವೇಶದ ಕಾರಣ ಸುಳ್ಳಾಗಿದ್ದಲ್ಲಿ ಅವರನ್ನು ಅಲ್ಲೇ ನೇಣಿಗೆ ಹಾಕುವಂತೆ ಆಜ್ಞಾಪಿಸಿದ.

ಈ ಆಜ್ಞೆಯ ಬಗ್ಗೆ ಕೇಳಿದ್ದ ಮುಲ್ಲಾ ನಸ್ರುದ್ದೀನ್ ಅದೊಂದು ದಿನ ನಗರಕ್ಕೆ ತನ್ನ ಕತ್ತೆಯ ಮೇಲೆ ಕೂತು ಹೊರಟ. ನಗರದ ಪ್ರವೇಶದ್ವಾರದಲ್ಲಿದ್ದ ದ್ವಾರಪಾಲಕರು ನಸ್ರುದ್ದೀನ್‌ನನ್ನು ತಡೆದು ನಗರದಲ್ಲಿ ಆತನಿಗೆ ಇರುವ ಕೆಲಸವೇನು ಹಾಗೂ ಅದರ ಬಗ್ಗೆ ಸತ್ಯವನ್ನೇ ಹೇಳಬೇಕು, ಇಲ್ಲದಿದ್ದಲ್ಲಿ ಅವನನ್ನು ಅಲ್ಲೇ ನೇಣಿಗೆ ಹಾಕುವುದಾಗಿ ಎಚ್ಚರಿಕೆ ನೀಡಿದರು. ಅದಕ್ಕೆ ಮುಲ್ಲಾ ನಸ್ರುದ್ದೀನ್,

'ನಾನು ಸತ್ಯವನ್ನೇ ಹೇಳುತ್ತೇನೆ. ನನಗೆ ಬದುಕು ಸಾಕಾಗಿದೆ. ನಿಮ್ಮ ಕೈಯಲ್ಲಿ ನೇಣು ಹಾಕಿಸಿಕೊಂಡು ಸಾಯೋಣವೆಂದು ಬಂದಿದ್ದೇನೆ' ಎಂದ.

'ಸುಳ್ಳು ಹೇಳುತ್ತಿದ್ದೀಯಾ! ನಿನ್ನನ್ನು ಖಂಡಿತವಾಗಿ ನೇಣು ಹಾಕುತ್ತೇವೆ!!' ಎಂದರು ದ್ವಾರಪಾಲಕರು.

'ಹಾಗಾದರೆ, ನಾನು ಹೇಳಿದ್ದು ಸತ್ಯವಾಗುತ್ತದೆ. ಸತ್ಯ ಹೇಳುವವರನ್ನು ನೇಣಿಗೆ ಹಾಕಬಾರದಲ್ಲವೆ?' ಕೇಳಿದ ನಸ್ರುದ್ದೀನ್.

ಜ್ಞಾನೋದಯದ ಹಾದಿ

ಒಂದು ದಿನ ಮುಲ್ಲಾ ನಸ್ರುದ್ದೀನ್ ತನ್ನ ಊರಿನ ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದ. ಒಂದಷ್ಟು ಜನರ ಗುಂಪು ಆತನನ್ನು ಹಿಂಬಾಲಿಸುತ್ತಿತ್ತು ಹಾಗೂ ಅವರು ನಸ್ರುದ್ದೀನ್ ಏನು ಮಾಡುತ್ತಾನೋ ಅದನ್ನೇ ಅನುಕರಿಸುತ್ತಿದ್ದರು. ನಸ್ರುದ್ದೀನ್ ಒಂದೆರಡು ಹೆಜ್ಜೆ ಹಾಕಿ ತನ್ನ ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ಮುಂದಕ್ಕೆ ಬಾಗಿ ತಕ್ಷಣ ಮೇಲಕ್ಕೆ ಹಾರಿ 'ಹ್ಹೆ...ಹ್ಹೆ...ಹ್ಹೇ....' ಎಂದು ಜೋರಾಗಿ ಓಕೆ ಹಾಕುತ್ತಿದ್ದ. ಅವನ ಹಿಂಬಾಲಕರು ಅದನ್ನೇ ಅನುಕರಿಸುತ್ತಿದ್ದರು. ಅವರೆಲ್ಲರ ನಡತೆ ಊರಿನ ಜನರಿಗೆ ತಮಾಷೆಯಾಗಿ ಕಾಣುತ್ತಿತ್ತು.

ಆ ರಸ್ತೆಯಲ್ಲಿನ ಅಂಗಡಿಯೊಂದರ ವ್ಯಾಪಾರಿ ನಸ್ರುದ್ದೀನ್‌ನ ಗೆಳೆಯನಾಗಿದ್ದ. ಆತ ತನ್ನ ಗೆಳೆಯನ ಮಂಗಾಟ ನೋಡಿ, 'ಏನಿದು ನಸ್ರುದ್ದೀನ್, ಏನು ಮಾಡುತ್ತಿದ್ದೀಯ? ಇವರೆಲ್ಲಾ ಯಾರು? ಅವರೇಕೆ ನಿನ್ನನ್ನು ಅನುಕರಿಸುತ್ತಿದ್ದಾರೆ? ಎಂದು ಕೇಳಿದ.

'ನಾನು ಸೂಫಿ ಗುರುವಾಗಿದ್ದೇನೆ' ಹೇಳಿದ ನಸ್ರುದ್ದೀನ್, 'ಇವರೆಲ್ಲಾ ನನ್ನ ಶಿಷ್ಯರು. ಅವರಿಗೆ ನಾನು ಜ್ಞಾನೋದಯದ ಹಾದಿ ತೋರಿಸುತ್ತಿದ್ದೇನೆ.'

'ಹೌದೆ? ಆದರೆ, ಅವರಿಗೆ ಯಾವಾಗ ಜ್ಞಾನೋದಯವಾಗಿದೆಯೆಂದು ನಿನಗೆ ಹೇಗೆ ತಿಳಿಯುತ್ತದೆ?' ಎಂದ ಆ ಗೆಳೆಯ.

'ಹೋ, ಅದು ಬಹಳ ಸುಲಭ. ಪ್ರತಿದಿನ ಬೆಳಿಗ್ಗೆ ನಾನು ನನ್ನ ಶಿಷ್ಯರನ್ನು ಎಣಿಸುತ್ತೇನೆ. ಯಾರ್‍ಯಾರು ಬಿಟ್ಟುಹೋಗಿದ್ದಾರೋ, ಅವರಿಗೆಲ್ಲಾ ಜ್ಞಾನೋದಯವಾಗಿದೆಯೆಂದು ಅರ್ಥ!' ಎಂದ ಸೂಫಿ ಗುರು ನಸ್ರುದ್ದೀನ್.

ಚಂದ್ರನೇ ವಾಸಿ!

ಆ ದಿನ ತಾನು ಸದಾ ಹರಟೆ ಹೊಡೆಯಲು ಹೋಗುವಾ ಚಹಾದಂಗಡಿಗೆ ಬಂದ ಮುಲ್ಲಾ ನಸ್ರುದ್ದೀನ್, 'ಸೂರ್ಯನಿಗಿಂತ ಚಂದ್ರನೇ ಹೆಚ್ಚು ಉಪಕಾರಿ' ಎಂದ ಅಲ್ಲೇ ಗೆಳೆಯರ ಜೊತೆ ಕೂಡುತ್ತ. ಅಲ್ಲೇ ಕೂತಿದ್ದ ಒಬ್ಬ ಮುದುಕ, 'ಅದು ಹೇಗೆ ಮುಲ್ಲಾ?' ಎಂದು ಕೇಳಿದ.

'ಇನ್ನೇನು? ನಮಗೆ ರಾತ್ರಿಯ ಕತ್ತಲಲ್ಲಿ ಬೆಳಕು ಬೇಕಾಗಿರುವಾಗ ಸೂರ್ಯ ಬರುವುದಿಲ್ಲ. ಆಗ ನಮಗೆ ಬೆಳಕು ಕೊಡುವುದು ಚಂದ್ರ ತಾನೆ?' ಎಂದ ನಸ್ರುದ್ದೀನ್.

ಮುಲ್ಲಾನ ವಯಸ್ಸು

ಬಹಳ ವರ್ಷಗಳ ನಂತರ ಗೆಳೆಯನೊಬ್ಬ ಮುಲ್ಲಾನನ್ನು ಭೇಟಿಯಾದ. ಮುಲ್ಲಾನನ್ನು ಅಪ್ಪಿಕೊಳ್ಳುತ್ತಾ, 'ಹೇಗಿದ್ದೀಯ ಗೆಳೆಯಾ? ನೋಡಿ ಬಹಳ ವರ್ಷಗಳೇ ಆದವು. ಈಗ ನಿನ್ನ ವಯಸ್ಸೆಷ್ಟು?' ಎಂದು ಕೇಳಿದ.

'ನನಗೆ ನಲವತ್ತು ವರ್ಷ ವಯಸ್ಸು ಎಂದ' ಮುಲ್ಲಾ.

'ಅದ್ಹೇಗೆ ಸಾಧ್ಯ? ಕಳೆದ ಸಾರಿ ಭೇಟಿಯಾದಾಗಲೂ ನೀನು ನನ್ನ ವಯಸ್ಸು ನಲವತ್ತು ಎಂದೇ ಹೇಳಿದ್ದೆ?' ಕೇಳಿದ ಆ ಗೆಳೆಯ.

'ಹೌದಪ್ಪ. ನಾನು ದಿನಕ್ಕೊಮ್ಮೆ ಮಾತು ಬದಲಿಸುವವನಲ್ಲ. ಹೇಳಿದ ಮಾತಿಗೆ ಬದ್ಧನಾಗಿರುವವನು ನಾನು' ಎಂದ ಮುಲ್ಲಾ ನಸ್ರುದ್ದೀನ್.

ಎಷ್ಟು ವರ್ಷ ದೊಡ್ಡವನು?

'ನಿನ್ನ ವಯಸ್ಸೆಷ್ಟು?' ಗೆಳೆಯನೊಬ್ಬ ಮುಲ್ಲಾನನ್ನು ಕೇಳಿದ.

'ನಾನು ನನ್ನ ತಮ್ಮನಿಗಿಂತ ಮೂರು ವರ್ಷ ದೊಡ್ಡವನು' ಎಂದ ಮುಲ್ಲಾ.

'ನಿನಗೆ ಅಷ್ಟು ನಿಖರವಾಗಿ ಗೊತ್ತೇ?'

'ಹೌದು. ಕಳೆದ ವರ್ಷ ನನ್ನ ತಮ್ಮ ಯಾರೊಂದಿಗೋ ನನ್ನ ಅಣ್ಣ ನನಗಿಂತ ಎರಡು ವರ್ಷ ದೊಡ್ಡವನು ಎಂದು ಹೇಳುತ್ತಿದ್ದ. ಅವನು ಆ ಮಾತು ಹೇಳಿ ಒಂದು ವರ್ಷವಾಗಿದೆ. ಹಾಗಾಗಿ ಈಗ ನಾನು ಅವನಿಗಿಂತ ಮೂರು ವರ್ಷ ದೊಡ್ಡವನು' ಎಂದ ಮುಲ್ಲಾ ನಸ್ರುದ್ದೀನ್.

ಮೋಸ!

ಮುಲ್ಲಾ ನಸ್ರುದ್ದೀನ್‌ನ ಊರಿನಲ್ಲಿ ಹೊಸ ವಸ್ತ್ರ ವಿನ್ಯಾಸಗಳ ಫ್ಯಾಶನ್ ಶೋ ನಡೆಯುತ್ತಿತ್ತು. ಸುಂದರ ಯುವತಿಯರು ಆ ಹೊಸ ವಸ್ತ್ರಗಳನ್ನು ಧರಿಸಿ ಪ್ರದರ್ಶನ ನಡೆಸಿದರು. ಮುಲ್ಲಾ ಹೊರಗೆ ಬಂದಾಗ ಆ ಹೊಸ ವಸ್ತ್ರಗಳನ್ನು ಮಾರಾಟಕ್ಕೆ ಇರಿಸಿದ್ದರು. ಅದನ್ನು ನೋಡಿದ ಮುಲ್ಲಾ, 'ಇದು ಮೋಸ' ಎಂದರಚಿದ. ಆಯೋಜಕರು ಆತನ ಬಳಿ ಬಂದು 'ಯಾವುದು ಮೋಸ?' ಎಂದು ಕೇಳಿದರು.

'ಒಳಗಡೆ ಸುಂದರ ಯುವತಿಯರು ಹಾಗೂ ವಸ್ತ್ರಗಳನ್ನು ಪ್ರದರ್ಶಿಸಿದಿರಿ. ಆದರೆ ಇಲ್ಲಿ ವಸ್ತ್ರಗಳನ್ನು ಮಾತ್ರ ಮಾರಾಟಕ್ಕೆ ಇಟ್ಟಿದ್ದೀರಾ!' ಎಂದ ಮುಲ್ಲಾ ನಸ್ರುದ್ದೀನ್.



ಮೂಲಭೂತವಾದಕ್ಕೆ ಧಾರ್ಮಿಕ ಸೌಹಾರ್ದತೆಯೇ ಮದ್ದು

(21ನೇ ಪುಟದಿಂದ)

ಸುಧಾರಣಾವಾದಿ ಮಾದರಿ

ಭಾರತದಲ್ಲಿ ಧಾರ್ಮಿಕ ಸೌಹಾರ್ದತೆಗೆ ಹಲವಾರು ದೇಶೀ ಧಾರೆಗಳು ಶ್ರಮಿಸಿವೆ. ಮಧ್ಯಕಾಲದಲ್ಲಿ ಹುಟ್ಟಿದ ಭಕ್ತಿ ಚಳವಳಿ ಹಾಗೂ ಅನುಭಾವ ಪರಂಪರೆಗಳು ಅತ್ಯುತ್ತಮ ಮಾದರಿಗಳಾಗಿವೆ. ಪರಮಹಂಸ, ಸ್ವಾಮಿ ವಿವೇಕಾನಂದ, ರಮಣಮಹರ್ಷಿ, ಗಾಂಧಿ, ಠ್ಯಾಗೋರ್ ಮೊದಲಾದವರು ವಸಾಹತುಶಾಹಿ ಕಾಲ ಘಟ್ಟದಲ್ಲಿ ಸೌಹಾರ್ದತಾ ಸಂಹಿತೆಯೊಂದನ್ನು ರೂಪಿಸಲು ಯತ್ನಿಸಿದ್ದಾರೆ. ಅದು ಮೂಲತಃ ಉದಾರವಾದಿ ಮಾನವತಾವಾದಿ ಮಾದರಿ. ಲೋಹಿಯಾ ಕೂಡ ಈ ಚಿಂತನೆಗಳ ಜತೆಗಿದ್ದರು. ಸಂಪೂರ್ಣ ಆರ್ಥಿಕ ಸಮಾನತೆಯ ಹೋರಾಟದ ಕನಸಲ್ಲಿ ವರ್ತಮಾನದ ವಾಸ್ತವಗಳನ್ನು ನಿರಾಕರಿಸಲಾರದ ಈ ಚಿಂತನೆ ಬದಲಾವಣೆಗೆ ಅವಕಾಶಗಳನ್ನು ಕಲ್ಪಿಸುತ್ತಲೇ ಬದಲಾವಣೆಯುದ್ದಕ್ಕೂ ಸಮಾನತೆ ಸೌಹಾರ್ದತೆಗಳು ರೂಪ ತಾಳುವುದನ್ನು ಬಯಸುತ್ತದೆ. ಮನುಷ್ಯನನ್ನು ಪ್ರೀತಿ, ಅಂತಃಕರಣ, ಅಹಿಂಸೆ, ಶಾಂತಿಯುತ ಗುಣಗಳನ್ನೊಳಗೊಂಡ ಜೀವವಾಗಿ ಗ್ರಹಿಸಿ ಆ ಭಾವಲೋಕದ ಅನುಸಂಧಾನಕ್ಕೆ ಪ್ರೇರಣೆ ನೀಡುತ್ತದೆ.

ಇದು ಧಾರ್ಮಿಕ ಸೌಹಾರ್ದತೆಗೆ ಆತ್ಯಂತಿಕ ಪರಿಹಾರವಲ್ಲವಾದರೂ ಅನಿವಾರ್ಯ ಮಾರ್ಗವೂ ಆಗಿದೆ. ಆದರೆ ಗಾಂಧೀಜಿಯವರ ವ್ಯಕ್ತಿತ್ವವನ್ನು ಕಾಂಗ್ರೆಸ್ ಹೈಜಾಕ್ ಮಾಡಿಕೊಂಡಂತೆ ಈ ಚಿಂತನೆಗಳ ಪರಿಣಾಮವನ್ನು ಆಳುವ ವರ್ಗ ತನಗೆ ಪೂರಕವಾಗಿ ಬಳಸಿಕೊಳ್ಳುವ ಸಾಧ್ಯತೆ ಇದ್ದೇ ಇದೆ. ಕೊನೆಯಲ್ಲಿ ಇದು ಯಥಾಸ್ಥಿತಿಯನ್ನು ಕಾಪಾಡಲು ಅನುಕೂಲವಾಗುತ್ತದೆ. ವರ್ಗ ಸಮಾಜದಲ್ಲಿಯಾದರೂ ಹೊಂದಾಣಿಕೆಯ ಮೂಲಕ ಹಿಂಸೆ ನಿಲ್ಲಲಿ ಎನ್ನುವುದು ಇದರ ಆಶಯವಾಗಿದೆ.

ದೈನಂದಿನ ಬದುಕಿನ ಕೊಡುಕೊಳ್ಳು ಮಾದರಿ

ಬದುಕು ದೊಡ್ಡದು. ಅದು ಅಸಮಾನತೆಯಲ್ಲಿಯಾದರೂ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಹೋಗಲು ಬಯಸುತ್ತದೆ. ಕೋಮುವಾದ ಮೂಲಭೂತವಾದಗಳು ಎಷ್ಟೇ ಭೀಕರವಾದ ಹಿಂಸೆಯನ್ನು ಹುಟ್ಟು ಹಾಕಲಿ ಅಥವಾ ಸಮುದಾಯಗಳನ್ನು ಮತೀಕರಿಸಲಿ, ಮನುಷ್ಯರ ದೈನಿಕದ ಅವಲಂಬನೆಗಳು ಅವರನ್ನು ಮನುಷ್ಯರನ್ನಾಗಿ ಜೀವಂತ ಇಡುತ್ತದೆ. ನಿರಂತರ ಅನುಸಂಧಾನ ಕೊಡುಕೊಳೆಯ ಮೂಲಕ ಹಿಂದೂ - ಮುಸ್ಲಿಂ ಸಮುದಾಯಗಳಲ್ಲಿ ಮತಾತೀತವಾದ ಜೀವಸಂಬಂಧವೊಂದು ರೂಪ ತಾಳುತ್ತಲೇ ಇರುತ್ತದೆ. ಹಿಂಸೆ ಮಾಡಿದವರಿಗೆ ಜುಗುಪ್ಸೆ ಹುಟ್ಟಿಸುತ್ತ, ಹಿಂಸೆಗೊಳಗಾದವರಿಗೆ ಆತ್ಮ ವಿಶ್ವಾಸವನ್ನು ತುಂಬುತ್ತ ಒಂದು ದೊಡ್ಡ ತತ್ವವಾಗಿ ಬಹಿರಂಗದಲ್ಲಿ ಡಂಗುರ ಸಾರದೇ ಸಮಾಜದ ಅಂತರಂಗದಲ್ಲಿ ಮೌನಝರಿಯಾಗಿ ಹರಿಯುತ್ತಿರುತ್ತದೆ. ಇದಕ್ಕೆ ಎಡಪಂಥ, ಬಲಪಂಥ, ಸುಧಾರಣಾವಾದಗಳ ಹಂಗಿಲ್ಲ. ಇದ್ದ ಸ್ಥಿತಿಯಲ್ಲಿ ನೆಮ್ಮದಿಯ ಬದುಕನ್ನು ಅನ್ವೇಷಿಸುತ್ತದೆ. ಆದರೆ ಕೊನೆಯಲ್ಲಿ ಇದೂ ಕೂಡ ಯಥಾಸ್ಥಿತಿಯನ್ನು ಕಾಪಾಡುವ ಆಳುವ ವರ್ಗಕ್ಕೆ ಪೂರಕವಾಗುತ್ತದೆ.

ಅಡಿಟಿಪ್ಪಣಿಗಳು:

1. ಮೈಸೂರು ವಿಶ್ವವಿದ್ಯಾಲಯ, ಇಂಗ್ಲೀಷ್ ಕನ್ನಡ ನಿಘಂಟು, ಪು. 2410
2. ಕನ್ನಡ ಸಾಹಿತ್ಯ ಪರಿಷತ್ತು, ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ), ಪು. 1407
3. ಎಂ.ಎಸ್. ಗೋಲ್ವಾಲ್ಕರ್, ನಾವು ಮತ್ತು ನಮ್ಮ ರಾಷ್ಟ್ರೀಯ ನಿರ್ವಚನ, ಪು. 45-47-48

VST TILLERS TRACTORS LIMITED
Reg. Office & Factory: Post Box No.4801, Mahadevapura Post, Whitefield Road, Bangalore - 560048
Phone: 91-80-28510805/6/7 Fax: 91-80-28510221 Email: vstgen@vsttillers.com www.vsttillers.com

WITH
BEST
COMPLIMENTS

Manufacturers of :
VST Shakti / Mitsubishi Shakti Power Tillers, Tractors, Diesel Engines, Rice Transplanters & Reapers

A VST GROUP ENTERPRISE

DR. AMBEDKAR INSTITUTE OF TECHNOLOGY

An Autonomous Institution affiliated to Visvesvaraya Technological University, Belgaum and Aided by Govt. of Karnataka

The 23 acre flourishing campus is situated on the outer ring road, adjacent to Jnana Bharathi Campus of Bangalore University and just 10 Kms from the heart of the city. Its other illustrious neighboring institutions are Indian Institute of Plantation Management (IIPM), National Law School of India University (NLSIU), Institute for Social and Economic Change (ISEC), Atomic Energy Department (AED) and National Assessment and Accreditation Council (NAAC). The conveyance to the college is very cosy with the help of better transport connectivity from all the locations.

As a Grant in-Aid Institution of Government of Karnataka, 95% of the seats are filled up purely on the basis of merit through Common Entrance Test (CET) Cell. Thus The academic environment is assiduous and intellectual on the campus. The Institution is accredited by National Board of Accreditation (NBA), New Delhi.

It has a total built-up area of 39691sq.mtrs with a large number of spacious, well ventilated class rooms with e-learning facilities, laboratories, Data Center, Virtual Instrumentation laboratory, English language laboratory, Workshops, Drawing halls, Seminar halls, Library & Information centre, Sports complex and Auditorium. Besides the campus also provide hostel facilities separately to the boys and girls students of the institute.

The entire campus is a Wi-Fi campus with 1:1 symetric dedicated leased line internet connectivity with optical fiber back bone.

ADMISSION OPEN FOR 2011-2012

Computer Lab

Mechanical Lab


Digital Library

Data Centre

Gym

Auditorium

Under - Graduate Courses Offered

Sl. No	B.E. Degree Course in	Sanctioned Student Intake
1	Civil Engineering	60
2	Mechanical Engineering	120
3	Electrical & Electronics Engineering	60
4	Electronics & Communication Engineering	120
5	Industrial Engineering & Management	30
6	Instrumentation & Technology	60
7	Computer Science & Engineering	120
8	Telecommunication Engineering	60
9	Information Science & Engineering	60
10	Medical Electronics	30

Post - Graduate Courses Offered

Sl. No	Master Degree Course in	Sanctioned Student Intake
1	M.Tech. in Computer Science & Engg.	25
2	M.Tech. in VLSI Design & Embedded Systems	18
3	M.Tech. in Digital Communication & Networking	18
4	M.Tech. in Power Electronics	18
5	M.Tech. in Structrural Engineering	18
6	Master of Computer Application (MCA)	60
7	Master of Business Administration (MBA)	60

Sl. No	Ph.D. Degree through research
1	Civil Engineering
2	Mechanical Engineering
3	Electrical & Electronics Engineering
4	Electronics & Communication Engineering
5	Instrumentation Technology
6	Telecommunication Engineering
7	Master of Computer Application
8	Physics
9	Chemistry
10	Mathematics

Girls Hostel

Boys Hostel

VISION

True to the characteristics of the Panchajanya, the trust envisions eradication of illiteracy, ignorance and poverty using quality education as the means. The aim is to transform our large population in to a national asset where each individual contributes to the overall development of India.

MISSION

To create an environment for the moral, social, cultural and educational progress of the underprivileged population in the realization of an egalitarian society.

556 STUDENTS

Students Selection through campus interview

PLACED IN 2010-11

TCS | HCL TECHNOLOGIES | MINDTREE
TITAN | SOMA CONSTRUCTION CO.
ACT TV | SYNTEL | MPHASIS (HP Company)
RAMKY INFRASTRUCTURE | ROBERT BOSCH
ORACLE | SASKEN | YOKOGAWA | L&T ECC
TECH MAHINDRA | INFOTECH | EUREKA FORBES LTD

For Admission contact : Managing Trustee
Panchajanya Vidya Peetha Welfare Trust (R)
Tel : 080-23211351 / 23215070

Near Jnana Bharathi Campus, Bangalore - 560 056
Tel +91 80 23211505 / 06 / 07, 23218534
Fax +91 80 23217789, E-mail : principal@dr-ait.org
www.dr-ait.org

'SAMVADA' Kannada Monthly, June 2012 KA/BGW-706/2012-2014 RNI No. KARKAN/ 2002/ 9246
Posted at Bengaluru G.P.O on 1st & 7th of Every Month. (No of pages- 52)

When a Problem is too big to solve but too important to ignore.

Malnutrition is one of the largest problems facing our country.

40% of the world's malnutrition manifests in India.



We at Pristine Organics reach low cost nutrition products to more than a lakh of malnourished children and people living with HIV positive in collaboration with a network of 50 Non Governmental Organizations. We also help self help groups and NGO's produce affordable local nutritional solutions for vulnerable segments.

PRISTINE ORGANICS

Join hands to tackle malnutrition a national shame

Contact- Akshata 9538898016 | Email - akshatha@pristineorganics.com